ಅಗರುಬತ್ತಿ, ಜೇರ್-ಆಯಿಲ್, ಕೆರನಸ್ತೆದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಫೋನ್ : 526 1921 ಸ್ವಾಪನೆ

ಸಂಪುಟ ೪೯
ಸಂಚಿಕೆ ೬
VOL. 49
No. 6

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ
ಉಡುಪಿ, ಗುರುವಾರ ೯—೧೦—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು
ಸಂಪಾದಕರು:
ಕೆ. ಜೊನ್ನಯ್ಯ ಶೆಟ್ಟಿ

ಅಯೋಗ್ಯ ಗೂಗೆತನ

ಭಾರತದೊಂದಿಗೆ ಸ್ವತಂತ್ರವಾದ ಪಾಕಿಸ್ತಾನ ಮೊದಲಿಗೆ ಭಾರತದ ಒಂದು ಭಾಗವಾಗಿಯೇ ಇತ್ತು. ಆದೇನೋ ಕಾರಣದಿಂದ ಭಾರತೀಯ ಉಪಖಂಡ ವಿಷಗಳಿಗೆಯೊಂದರಲ್ಲಿ ಇಬ್ಭಾಗ-ಮುಬ್ಭಾಗವಾಯ್ತು. ಪಾಕಿಸ್ತಾನ ಮತ್ತು ಭಾರತಗಳು ಉತ್ಸವ ನೆರೆಹೊರೆಯನ್ನು ರೂಪಿಸಬೇಕಿತ್ತು; ಆದರೆ, ಇಪ್ಪತ್ತೆರಡು ವರ್ಷಗಳು ಕಳೆದರೂ ಸ್ನೇಹಹಸ್ತ ಚಾಚಿದಭಾರತವನ್ನು ಪಾಕ್ ನಾಯಕರು ದ್ವೇಷಿಸುತ್ತಲೇ ಬಂದಿದ್ದಾರೆ.ಕಾಶ್ಮೀರದೇಶನೀತಿ ಬದಲಾಗಬಹುದು; ವಿದೇಶನೀತಿ ಪರಿವರ್ತನೆ ಹೊಂದಬಹುದ ; ಆದರೆ ಭಾರತ ದ್ವೇಷ ನೀತಿ ಮಾತ್ರ ಆಚಂದ್ರತಾರಂಬರಂ ಅಪರಿವರ್ತನೀಯವೆಂಬ ಭಾವನೆಯನ್ನು ಪಾಕಿಸ್ತಾನ ಲೋಕಕ್ಕೆ ತೋರಿಸಿಕೊಡುತ್ತಲೇ ಬಂದಿದೆ. ಇತ್ತೀಚೆಗೆ ಪಾಕಿಸ್ತಾನದ ನಾಯಕರ್ಯಪ್ಪೊಂದು ಹೇಳಿಕೆ ಭೀಡಿ ಜಗತ್ತನ್ನೇ ವಿಸ್ಮಯಗೊಳಿಸಿತು. ಭಾರತದೊಂದಿಗೆ ಯಾವ ಹೊಸ ಶರ್ತವೂ ಇಲ್ಲದೆ ಸ್ನೇಹ ಸಂಬಂಧಗಳ ಪುನಃಸ್ಥಾಪನೆಗೆ ತಾನು ಸಿದ್ಧವೆಂದು ಘೋಷಿಸಿತ್ತು. ಇಂತಹ ಸಾಹಸಿಕೆಗಳು ಭಾರತದ ಕಡೆಯಿಂದ ಈ ಮೊದಲು ಬಹಳ ಹೋಗಿದ್ದರೂ ಅವುಗಳನ್ನು ಮನ್ನಿಸದ ಪಾಕ್ ಅಧಿಪತಿಯಕರು ಈ ಹೊಸ ವರ್ಷನೆಗೆ ಬೇರೆಯೇ ಕಾರಣವಿರಬೇಕು. ದಂಡಿನಾಳಕೆಯ ಅಧ್ಯಕ್ಷ ಯಾಹ್ಯಾಖಾನರು ಸೋವಿಯತ್ತಿನ ಸಂದರ್ಶನ ಮಾಡಲಿರುವುದರಿಂದ ಸೋವಿಯತ್ ಕಾಯಕರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸುವ ವಿಶಾಂಕ ನಾಟಕವಿದಾಗಿರಲೂ ಬಹುದು. ಅಥವಾ ಇಸ್ಲಾಂ ರಾಷ್ಟ್ರಗಳ ರಾಜತ್ವ ಶೃಂಗ ಸಭೆಯಲ್ಲಿ ಬಹಳಷ್ಟು ಪ್ರಚಾರಗೊಂಡ ತನ್ನ ಭಾರತದ್ವೇಷ ಧೋರಣೆಯ ದಪ್ಪವನ್ನು ತುಸು ಕೆತ್ತುವ ಇರಾದೆಯಿದ್ದರೂ ಇರಬಹುದು.

ಆದರೆ, ಪಾಕ್ ನಾಯಕರ ನೀತಿ ಅಚಲ ಹಿಮಾಲಯ ಮಾತ್ರವಲ್ಲ, ಅದು ಗತಿ ಕಟ್ಟಿದ್ದೂ ಹೌದು. ವಿಶ್ವಕ್ಕೆ ವಿಶ್ವವೇ ಮಹಾತ್ಮಾ ಗಾಂಧಿಯವರ ಶತಾಬ್ದಿಯನ್ನೀಗ ಆಚರಿಸುತ್ತಿದೆ; ಲಂಡನ್ನಿನಲ್ಲಿ ಮಾಜಿ ವೈಸರಾಯ್ ಮೌಂಟ್ ಬ್ಯಾಟನ್ನರೇ ಈ ಉತ್ಸವದಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಜಗತ್ತಿನ ಎಲ್ಲ ದೇಶಗಳೂ ಗಾಂಧಿ ಜನ್ಮಶತಾಬ್ದಿಯನ್ನು ಆಚರಿಸಿದೆ ಕೊನೆಗೆ ಶತಾಬ್ದಿಯ ಸುದ್ದಿಯನ್ನಾದರೂ ಪ್ರಸಾರ ಮಾಡಿವೆ. ಆದರೆ, ಪಾಕಿಸ್ತಾನ ಇದಕ್ಕೆ ಅಪವಾದ, ಮಹಾತ್ಮಾ ಗಾಂಧಿಯವರು ವಿಭಜನೆಗೊಂಡ ಭಾರತಕ್ಕಿಂತಲೂ ಉಪಖಂಡ ಭಾರತಕ್ಕೆ ಸೇವೆ ಸಲ್ಲಿಸಿಯೇ ಅಮರರಾದರು ಎಂಬಷ್ಟು ವಿಶಿಷ್ಟವಾದ ಸತ್ಯ. ಮಹಾತ್ಮರೊಡನೆ ಪಾಕಿಸ್ತಾನದ ಜನಕರಿನಿಸಿದ ಅಲಿ ಸಹೋದರರೂ ಉಪಖಂಡದ ಸ್ವಾತಂತ್ರ್ಯ ಚಳುವಳಿಯಲ್ಲಿ ಹೆಗಲಿಗೆ ಹೆಗಲ ಕೊಟ್ಟು ದುಡಿದಿದ್ದರು. ಗಾಂಧೀಜಿಯವರು ಭಾರತಕ್ಕೆ ಮೊತ್ತ ಪ್ರಾಮುಖ್ಯರಾಗಿ, ಪಾಕಿಸ್ತಾನಕ್ಕೆ ತ್ಯಾಜ್ಯರಾಗಬೇಕಾದ ಯಾವ ಪ್ರಮೇಯವೂ ಇಲ್ಲ. ಭಾರತದಲ್ಲಿ ಪ್ರಬಲ ವಿರೋಧವಿದ್ದರೂ ಪಾಕಿಸ್ತಾನದ ಪಿತಾಮಹನಿಯೇ ಉದಾರತೆಯ ನೀತಿಯನ್ನು ತಳೆದು, ಇದೇ ಉದಾರತೆಯ ನೆರವಿಂದ ಗಡಿಗಾಹುತಿಯಾಡಿದ ಮಹಾತ್ಮರಿಗಿಂತ ದೊಡ್ಡ ಪಾಕ್ ಹಿತಚಿಂತಕರು ಲೋಕದಲ್ಲಿಲ್ಲ. ಆದರೆ, ಪಾಕ್ ನಾಯಕರು ಹಗಲಿನ ಸೂರ್ಯನನ್ನು ನೋಡದೆ ಕಣ್ಣು ಮುಚ್ಚಿ ಕುಳಿತಿದ್ದಾರೆ. ಇದು ಅವರ ಗೂಗೆತನವನ್ನು ಲೋಕಕ್ಕೆ ಸಾರಿ ಹೇಳುತ್ತದೆ.

ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫ್ಫರ್ ಖಾನರು ಶತಾಬ್ದಿಯಲ್ಲಿ ಭಾಗವಹಿಸಲು ದಿಲ್ಲಿಗಾಗಮಿಸಿದರು. ಅವರು ಪಾಕಿಸ್ತಾನದ ಫಲಕ್ಕೂ ನಿಶ್ಚಾನವನ್ನು ಪಡೆಯುವ ನೀತಿಯವರು. ಭಾರತವು ಈ ಬೇಡಿಕೆಯನ್ನು ಹಿಂದಿನಿಂದಲೂ ಬೆಂಬಲಿಸುತ್ತಲೇ ಬಂದಿದೆ. ಈ ಕಾರಣದಿಂದ ಪಾಕ್ ನಾಯಕರು ತಮ್ಮ ಮುನಿಸನ್ನು ಮಹಾತ್ಮರ ಮೇಲೆ ತೋರಿದ ಹೊಟ್ಟಿದ್ದಾರೆಯೇ ಅನ್ನಿಸುತ್ತದೆ. ಮಹಾತ್ಮರೇ ಭಾರತ—ಪಾಕಿಸ್ತಾನಗಳೆರಡಕ್ಕೂ ಪರಮ ಪೂಜ್ಯರು; ವಿಶ್ವಕ್ಕೇ ಪೂಜ್ಯರು. ಜಾಗರೂಕತೆಯಿಂದ ಭಾರತ ಸರ್ಕಾರವನ್ನು ಪಾಕಿಸ್ತಾನ ಸಾಕುತ್ತಿರುವುದರ ದ್ಯೋತಕವಿದುವೇ? ಹಾಗಾದರೆ, ಸ್ನೇಹಹಸ್ತ ಚಾಚುವ ಹೊಸ ನಾಟಕದ ಹಿನ್ನೆಲೆಯೇನು?

ಅಫೆ ದಾಖಲೆಯಲ್ಲಿ ಹೋಗಲಾಗಿ ನಾಯಿಗಳು ಪಕ್ಕದಲ್ಲಿ ನಿಂತು ಬೊಗಳಬಹುದು. ಇದರಿಂದ ಅವಮಾನ ಗೌರವಗಳೇನೂ ಚ್ಯುತಿಸೂಗುವುದಿಲ್ಲ ಪಾಕಿಸ್ತಾನ ಗಾಂಧಿ ಶತಾಬ್ದಿಗೆ ಸ್ಥಾನವನ್ನೇ ಕೊಡಲಿಲ್ಲ ವೆಂಬ ಕಾರಣದಿಂದ ಮಹಾತ್ಮರಿಗೆ ಅಪಮಾನವಾಗಲಿಲ್ಲ. ಒಬ್ಬನಿಗೆ ಗೌರವ ನೀಡಬೇಕಾದರೂ ಯೋಗ್ಯತೆಯಿರಬೇಕು. ಮಹಾತ್ಮರಿಗೆ ಗೌರವ ಸೂಚಿಸುವ ನೈತಿಕ ಬಲ ಮತ್ತು ಅರ್ಹತೆ ಪಾಕಿಸ್ತಾನಕ್ಕೆ ಇಲ್ಲವೆಂಬುದೇ ಅದರ ಮೌನಕ್ಕೆ ಅರ್ಥವಾನೆ?

ಕಾರ್ಮಿಕೆ ಮನೋವೃತ್ತಿ

ಕಾರ್ಮಿಕರ ಅಶಾಂತಿಯಿಂದ ದೇಶದ ಮೇಲೆ ಎಂತಹ ದುಷ್ಪರಿಣಾಮಗಳುಂಟಾಗುತ್ತವೆ ಎಂಬುದಕ್ಕೆ ಬಿಲಿಯಾಡುಲ್ಲಿರುವ ಉಕ್ಕಿನ ಕಾರ್ಮಿಕೆಯೊಂದೊಂದು ಉದಾಹರಣೆ ಸಾಕು. ದೇಶದ ಬೃಹತ್ ಉಕ್ಕಿನ ಕಾರಖಾನೆಗಳಲ್ಲಿ ಭಿಲೈ ಅತ್ಯಂತ ಹೆಸರುವಾಸಿಯೂದದ್ದು. ಇತ್ತೀಚೆಗಿನ ವರ್ಷಗಳಲ್ಲಿ ಇದರ ವಿಸ್ತರಣೆಯ ಕಾರ್ಯವೂ ರಭಸದಿಂದ ಮುಂದುವರಿಯುತ್ತಿದೆ. ಆದರೇನು? ಒಂದಲ್ಲ ಒಂದು ನೆಪವನ್ನು ಮುಂದೊಡ್ಡಿ ಕಾರ್ಮಿಕರು ಅಶಾಂತಿಗೆ ಕಾರಣರಾಗುವುದು ಇಲ್ಲಿಯ ಪರಿಪಾಠ. ಕಾರಖಾನೆಯು ಜಪರಲ್ ಮ್ಯಾನೇಜರ್ ಶ್ರೀ ಜಗತ್ಪತಿಯವರು ಇತ್ತೀಚೆಗೊಂದು ಹೇಳಿಕೆ ನೀಡಿ, ಪ್ರತಿ ತಿಂಗಳೂ ರೂ. ೬೫೦ ಲಕ್ಷ ವಿದೇಶ ವಿನಿಮಯ ಗಳಿಸುವ ಈ ಕಾರಖಾನೆಯು ಕಳೆದ ತಿಂಗಳಲ್ಲಿ ಕೇವಲ ರೂ. ೨೪೦ ಲಕ್ಷದಷ್ಟು ಮೊತ್ತ ಸಂಪಾದಿಸಿತು ಎಂದಿದ್ದಾರೆ. ಹಾಗೆಯೇ ವಿಸ್ತರಣೆಯ ಕಾರ್ಯಕ್ರಮವೂ ವಿಳಂಬವಾಗುತ್ತಿದೆ ಎಂದು ಮರಗಿದರು. ಇತರೆಲ್ಲ ಮುಖ್ಯ ಕಾರಣ ಕಾರ್ಮಿಕ ಅಶಾಂತಿಯೆಂಬ ಸತ್ಯವನ್ನೂ ಅವರು ಹೊರಗೆಡಹಿದರು. ತಿಂಗಳಿಗೆ ೧೫೦ ಲಕ್ಷ ವಿದೇಶೀ ವಿನಿಮಯ ಗಳಿಕೆಗೆ ಕತ್ತರಿ ಬಿದ್ದುದಕ್ಕೆ ಹೊಣೆಗಾರರಾದ ಕಾರ್ಮಿಕರು ದೇಶ ಕಟ್ಟುವ ಬದಲು ದೇಶ ಬುರಿಕಿಸುವ ಪ್ರಯತ್ನ ಮಾಡುತ್ತಿದ್ದಾರೆಯೇ?

ಇದು ಒಂದು ಭಿಲೈ ಕಾರ್ಖಾನೆಯ ಕತೆಯಾಯ್ತು. ಸರಕಾರಿ-ಖಾಸಗಿ ಒಡೆತನದಲ್ಲಿರುವ ಎಲ್ಲ ಉತ್ಪಾದನೆಗಳ ಕತೆಯೂ ಇದಕ್ಕಿಂತ ಬಹಳ ಬೇರೆಯಲ್ಲ. ಜಾಗರೂಕವಾದ ಉತ್ಪಾದನೆಯನ್ನು ಹೆಚ್ಚಿಸದೆ, ಅದನ್ನು ಕುಗ್ಗಿಸುವುದೇ ಉದ್ದೇಶವುಳ್ಳ ಕಾರ್ಮಿಕ ವರ್ಗದ ಮನೋಭಾವ ಸರ್ವವ್ಯಾಪಿಶರುವುದಿಲ್ಲ; ಸರ್ವತ್ರಾಶ ಪೂರ್ಣವಿದೆ. ಇವ್ಯಾ ಕಾರ್ಮಿಕರು, ಶ್ರಮಜೀವಿಗಳ ಮನೋವೃತ್ತಿಯಲ್ಲಿ ಮೂಲಭೂತ ಬದಲಾವಣೆಯಾಗಬೇಕು; ಒಡೆಯರೂ ಉದಾರ ನೀತಿಕಾಳಬೇಕು.

ರಾಜಿಕೊಡಬೇಕೆ?

ಕೇಂದ್ರ ಆಹಾರ ಮಂತ್ರಿ ಶ್ರೀ ಜಗಜ್ಜೀವನರಾಮರು ಈಗ ಸ್ವಧಾನ ಕಾರ್ಯ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ಪ್ರಬಲ ಪ್ರತಿಸ್ಪರ್ಧಿಯಾಗಿ ಗಾಂಧಿ ಜನ್ಮ ಶತಾಬ್ದಿಯ ಪೂರ್ವ ಸಂಧ್ಯೆಯಲ್ಲಿ ರಾಷ್ಟ್ರಪತಿ ಸ್ಥಾನಕ್ಕೆ ತೆರವಾದ ಶಾಕ ತಾಳೀಯ. ಅದನ್ನು ಜಗಜ್ಜೀವನರಾಮರ ಹಂಬಲವೆಂಬ ಎಂಬುದಕ್ಕೆ ಅವರು 'ಹರಿಗನ ನಾದುಕ' ರಾಗಿದ್ದುದೇ ಕಾರಣ. ಜಾತೀಯ ತೆಯನ್ನು ನಿರ್ಮೂಲಗೊಳಿಸಲು ಜಾತ್ಯತೀತತೆಯನ್ನು ಉಪದೇಶಿಸುವ ಮಹಾತ್ಮರೆಂಥಾ ಹರಿಜನ"ರನ್ನು ಎತ್ತಿಕಟ್ಟಲು ಹೊರಟರು. ಆದರೆ, ರಾಮರ ಚೀಟಿ ಕೆಳಗೆಬಿತ್ತು; ಇಂದಿರಾಗಾಂಧಿ ತಮ್ಮ ಒಣ ರೊಟ್ಟಿಗೆ ಆಕ್ಷ್ಯಾಕ್ಸಿಯ ತುಸು ಹೆಚ್ಚಲು ಕರೆ ನೀಡಿದಾಗ, ರಾಮ-ಬಲಿ ಮಂದರು ಬೆಣ್ಣೆ ಕರಗಿಯೇ ಬಿಟ್ಟರು! ಮಾತು ಮಾಗಿರಲಿ.

ಶ್ರೀ ಜಗಜ್ಜೀವನರಾಮರು ೧೦ ವರ್ಷಗಳಿಂದಲೂ ಅದಾಯ ತೆರಿಗೆ ನೀಡಲು ಮನಿತ ಮರವುಗಾರರು ಎಂದೀಗ ಜಯಲಾಗಿದೆ. ಮರವುಗಾರರು ಎಂಬ ಪ್ರಧಾನ ಪ್ರಶಸ್ತಿ ಅವರಿಗೆ ದೊರಕಿದೆ. ಬಹು ಕಾಲದಿಂದಲೂ ಹೈನೋಗಾರಿಕೆಯ ಸ್ಥಾಪಿತ ದಲ್ಲಿದ್ದ ಮಕ್ಕಿಗಳು ಅದಾಯ ತೆರಿಗೆಯನ್ನು ತೆರಲು ಮರೆಯುವುದೆಂದರೆ, ಅದು ದೇಶಕ್ಕೂ ಅವರಿಗೂ ಬಜ್ಜಾಸ್ಪದ. ಅದಾಯ ತೆರಿಗೆಯ ವಿಭಾಗವು ಅವರಿಗೆ ನೆನಪು ಮಾಡಿಕೊಡಬೇಕಿತ್ತು ಎಂಬ ಪ್ರಧಾನಿ ಸಲಹೆ ಪ್ರಾಯ ವಂತಿ ವಾಗಧ್ವನಿ ಮೂಕ್ಕ ಅನ್ವಯವಾಗಿತ್ತಿರಬೇಕು, ಕಾನೂನಿನ ಅಜ್ಞಾನ ದಕ್ಷಣೆಗೆ ಮೂರ್ಗವಲ್ಲ ಎಂದು ಶಾಲೆಯ ಬಾಲಕನಿಗೂ ಗೊತ್ತು. ಇದನ್ನು ಪ್ರಧಾನಿಯೆ ಅರಿತಿಲ್ಲವೆಂದು ಜೀಳಬೇಕೆ? ಅಥವಾ ಜಗಜ್ಜೀವನರಾಮರ ವೇಲಿನ ಕೈಚಳ್ಳಾತಾ ಭರಿತ ಮೋಹವು ಅವರ ಬಾಯಿಂದ ಹೇಳಿಸಿತೆನ್ನಬೇಕೆ!

ಶ್ರೀ ಫಕ್ರುದ್ದೀನ್ ಅಲಿಯವರ ಮೇಲೆ ಖಂಡ ಆರೋಪ ಬೇರೆ ರೀತಿಯದು. ಇಸ್ಲಾಂ ರಾಷ್ಟ್ರಗಳ ರಾಬರ್ತ್ ಶೃಂಗ ಸಭೆಗೆ ಅನ್ಯಧರ್ಮೀಯರಿಗೆ ಹೇಗೆ ಅಲ್ಲಿ ಅವಮಾನ ಹೊತ್ತು ತಂದರು ಅವರು. ಅದುದರಿಂದ ಅವರೂ ಅವರನ್ನು ಕಳಿಸಿದ್ದ ಪ್ರಧಾನಿಯೂ ರಾಜಿನಾಮೆ ನೀಡಬೇಕು ಎಂಬ ಕರೆ ಒಂದೆಡೆ. ಅದಾಗದು ತೆರಿಗೆ ವಂಚಿಸಿದ ಜಗಜ್ಜೀವನರಾಮರೂ ರಾಜಿ ಕೊಡಲಿ ಎಂಬ ಬೇಡಿಕೆ ಮತ್ತೊಂದೆಡೆ. ರಾಜ್ಯಕೀಯದಲ್ಲಿ ಇದೆಲ್ಲ ಮಾಮೂಲು. ಬಹುವತ ಕೈಯಲ್ಲಿರುವಾಗ ಅಂಜಿಕೆನ್ಯಾತರಯ್ಯಾ! ತವರಿಗೆ ಹಾಂಗ್ರೆಸ್ಸಿಗರು ಸೂತ್ರವಲ್ಲ, ಜಗಕಂಜೆ—ಸ್ವತಂತ್ರ ಪಕ್ಷವನ್ನು ಕಳೆದು ಇತರ ಹೆಚ್ಚಿನ ರಾಜ್ಯಕೀಯ ಪಕ್ಷಗಳು ಉಳಿದಿವೆ. ಅವರು ಕಾಂಗ್ರೆಸ್ ಪಕ್ಷದ ಮಂತ್ರಿಗಳಲ್ಲ, ಶ್ರೀ ಸಾಮಾನ್ಯನ ಮಂತ್ರಿಗಳು ತಾನೆ? ರಾಜಿ ಕೊಡುವ ಕರೆ ಅವರಿಗಾವ ಕರೆ ಕರೆಯನ್ನೂ ತಾರದು.

ಒಂದು ಸಂಖ್ಯೆಯು ಎರಡು ಸಂಖ್ಯೆಗಳಿಗಿಂತ ವಿಭಾಗಿಸಲ್ಪಟ್ಟು, ಒಂದು ಗುಂಪು ಮತ್ತೊಂದರ ವಿರುದ್ಧ ಬಾಯಿಗೆ ಬಂದಂತೆ ಬಡಿಯುತ್ತ, ಹ್ಯಾಗೆಂದಿಂದಲೋ ಅನ್ಯಾಯದಿಂದಲೋ ತನ್ನ ಪಡೆ ಪಡೆದು ಪಡೆಯಬೇಕು ಎಂದು ಹಟ ತೊಟ್ಟಿರುವ ಸಂಸ್ಥೆ ಸಂಗಮವಾಗಿ ಸಾಗಲಾರದು.

ಗಾಂಧೀನಾಡಿನಲ್ಲಿ ಗಾಂಧಿಭಕ್ತರು

ಇಂದಿರಾ ಗಾಂಧಿ

ಬ್ಯಾಂಕುಗಳ ರಾಷ್ಟ್ರೀಕರಣ ನೀತಿ ಕಾಂಗ್ರೆಸ್ಸಿಗೆ ಜಯ ತಂದಿದಾದರೂ ಏಕಾ ಏಕಿಯಾಗಿ ಅದನ್ನು ಕಾರ್ಯರೂಪಕ್ಕೆ ತಂದ ತೋರಿಸುವುದಕ್ಕಾಗಿಯೇ ಪ್ರಧಾನಿ ಇಂದಿರಾ ಗಾಂಧಿಯವರು ವಿತ್ತ ಮಂತ್ರಿಯೂ ಆದರು. ತಾನು ಈ ಕಾಪೆಯನ್ನು ಬೇಗನೆ ಬಿಟ್ಟು ಬಿಡುವುದಿಲ್ಲವೆಂದೂ ಉದ್ದೇಶಿತ ನೀತಿಗಳನ್ನು ಕಾರ್ಯಾಚರಣೆಗೂ ಳಿಸಿದ ಕೂಡಲೇ ಇದನ್ನು ಬೇರೊಬ್ಬರಿಗೆ ವಹಿಸಿಕೊಡುವುದಾಗಿಯೂ ಅವರು ಇಂದು ಹೇಳುತ್ತಾರೆ. ಕುಲಕ ನಾಲಿಗೆ ನುಡಿಯಿತೆಂಬಂತೆ ಮಂರಾರ್ಜಿಭಾಯಿಯನ್ನು ಯೂ ಹೊರಗಿಟ್ಟಿದ್ದು ಎಂಬುದೀಗ... ಜಗತ್ತಿಗೇ ತಿಳಿದ ವಿಷಯ. ಸಂಚ್ಚರಿಯಿಲ್ಲದೆ ತನ್ನ ಹೃದ್ಗತವನ್ನು ಹೇಳಿಬಿಡುವ ಸ್ವಭಾವದವಾದಿಗಳಿಗೆ ರಾಜ್ಯಕೀಯದಲ್ಲಿ ಸ್ಥಾನಮಾನಗಳಿಲ್ಲವೆಂದು ಶ್ರೀಮತಿಯವರು ಬಾಯಿಂದ ಹೇಳಲಿಲ್ಲ ನಿಜ; ಆದರ ಧೋರಣೆಯೂ ಮಾತ್ರ ಇದಕ್ಕಿಂತ ಬೇರೆಯಲ್ಲವೆಂಬುದೂ ಅಷ್ಟೇ ನಿಜ.

ರಾಷ್ಟ್ರೀಕೃತ ಬ್ಯಾಂಕುಗಳ ಪಾಲಕ ಕರ್ತೃ ಅವರು ಮೊತ್ತ ಮೊದಲಬಾರಿಗೆ ದಿಹಲಿಗೆ ಕರೆಸಿಕೊಂಡರು. ರಾಷ್ಟ್ರೀಕರಣದ ಉದ್ದೇಶ, ಈ ಉದ್ದೇಶಗಳನ್ನು ಯಶಸ್ವಿಗೊಳಿಸುವ ಕಾರ್ಯ ವಿಧಾನಗಳನ್ನು ಅವರು ಪಾಲಕರಿಗೆ ವಿವರಿಸಿ ಹೇಳಿದರು. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ವಾಣಿಜ್ಯ ಬ್ಯಾಂಕುಗಳು ಇಂದು ಎಂದಿಗಿಂತಲೂ ಮಹತ್ವಪೂರ್ಣ ಪಾತ್ರ ವಹಿಸುವುದು ಅತ್ಯಗತ್ಯವೆಂಬುದನ್ನು ಮನಂಬುಗಿಸಿದರು. ಕೃಷಿ, ಸಣ್ಣ ಪಟ್ಟ ವ್ಯಾಪಾರ ಮತ್ತು ಕೈಗಾರಿಕೆಗಳಲ್ಲಿ ತೊಡಗಿದವರಿಗೆ ಹೆಚ್ಚಿನ ಉತ್ತೇಜನ, ರೈತರಿಗೆ ಸಾಲ ಸೌಕರ್ಯ, ಇದುವರೆಗೂ ಕಡೆಗಣಿಸಲಾಗಿದ್ದ ಕ್ಷೇತ್ರಗಳಿಗೆ ಸಾಲಭಪತ್ತಿ ಸಾಲ ಸೌಕರ್ಯವಿಸ್ತರಣೆ ಒದಗಿಸುವುದು, ವಿದ್ಯಾರ್ಥಿಗಳ ಅವಶ್ಯಕತೆಗಳನ್ನು ಪೂರೈಸುವುದು— ಈ ಎಲ್ಲ ಧೀಯನ್ನು ಅವರು ರಂಗುರಂಗಾಗಿ ವಿವರಿಸಿದರು. ಶ್ರೀಮತಿ ಗಾಂಧಿಯವರು ಎಲ್ಲಕ್ಕಿಂತ ಹೆಚ್ಚಾಗಿ ಹೇಳಿದ ಪೂರಕಂದರೆ "ಕಾರ್ಯ ನಿರ್ವಹಣೆಯಲ್ಲಿ ರಾಜ್ಯಕೀಯ ತಲೆ ಹಾಕುವುದಿಲ್ಲ" ಎಂದು. ಇದು ಎಷ್ಟರ ಮಟ್ಟಿಗೆ ಸತ್ಯವೆಂಬ ದನ್ನು, ಅನುಭವದಿಂದಲೇ ನೋಡಬೇಕು.

ನಿಜಲಿಂಗಪ್ಪ

ಪ್ರಧಾನಿ ಇಂದಿರಾಗಾಂಧಿಯವರು ಶ್ರೀ ನಿಜಲಿಂಗಪ್ಪನವರನ್ನು ಡೆಲ್ಲಿಗೆ ಕರೆದಾಗ, ಅವರನ್ನು ಅಷ್ಟಾಲೆ ತಿಪ್ಪಾಲೆ ಮಾಡುವರೆಂದು ಯಾರೂ ಊಹಿಸಿರಲಿಲ್ಲ. ಇತ್ತೀಚೆಗೆ ತೆರವಾದ ರಾಷ್ಟ್ರಪತಿ ಸ್ಥಾನವನ್ನು ತುಂಬಿದಾಗ ಕಾಂಗ್ರೆಸ್ ಅಧ್ಯಕ್ಷರಿಗೆ ತಾವು ಬೆಂಬಲಿಗರಾಗಿ ದಿಲ್ಲಿಗೆ ಬಂದೆನೋ ಎಂದು ನೊಂದುಕೊಂಡಿರಲೂ ಬಹುದು. ಇಂದು ಕಾಂಗ್ರೆಸ್‌ನ ಒಂದು ಗುಂಪು ಅವರ ರಾಜಿನಾಮೆಯನ್ನು ಬೇಡುತ್ತಿದೆ. ಶ್ರೀ ನಿಜಲಿಂಗಪ್ಪನವರು ರಾಜಿನಾಮೆ ಕೊಡಲು ಹಿಂದೆ ಮುಂದೆ ನೋಡುವುದಿಲ್ಲ. ರಾಜ್ಯಕೀಯದಿಂದ, ಅದು ಪ್ರತ್ಯಕ್ಷವಿರಲಿ, ಅಪ್ರತ್ಯಕ್ಷವಿರಲಿ ಸದ್ಯದಲ್ಲಿಯೇ ಅವರು ದೂರ ಸರಿಯುವ ದೃಢನಿರ್ಧಾರ ಮಾಡಿದ್ದಾರೆ. ಆದರೂ ಸದ್ಯ ಯಾವುದಕ್ಕಾಗಿ ರಾಜಿನಾಮೆ ಕೊಡಬೇಕು? ಆತ್ಮ ಸಾಕ್ಷಿಯ ನಿರ್ಣಯದಲ್ಲಿ ಪಕ್ಷದಲ್ಲಿ ಅಶಿಸ್ತನ್ನು ಎಬ್ಬಿಸಿದವರ ಅನ್ಯಾಯದ ನಡೆಂದೆ ತಲೆಬಾಗಿ ಅವರಿಗೆ ಹೆದರಿ ರಾಜಿನಾಮೆ ಕೊಡಬೇಕೆ? ಇದು ಆಗಬಾರದು; ಹೇಡಿಯು ನಡವಳಿಕೆ. ಕನ್ನ ದಾರಿ ಸರಿಯಿರುವಾಗ, ಶಕ್ತಿ ಬದ್ಧವಿರುವಾಗ, ನ್ಯಾಯವಿರುವಾಗ ತಪ್ಪುದಾರಿಗೆ, ಅಶಿಸ್ತಿಗೆ, ಅನ್ಯಾಯಕ್ಕೆ ತಲೆಬಾಗಿಸುವುದು ಸಹ್ಯವಲ್ಲ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ನೇತೃತ್ವಕ್ಕೆ ಕಾಂಗ್ರೆಸ್ ಅಧ್ಯಕ್ಷರು ಪೀಠ ತೆರವು ಮಾಡುವುದು ಅರ್ಥವಿಲ್ಲದ ಕ್ಷಣ. ಶ್ರೀ ರೆಡ್ಡಿಯವರು ಸೋತಿರುವುದಾದರೆ ಪಕ್ಷದ ಶಿಸ್ತು ಭಂಗದಿಂದ. ಇದಕ್ಕಾಗಿ ತಲೆತಗ್ಗಿಸಬೇಕಾದವರು; ಶಿಸ್ತು ಭಂಜಕರು. ಆದರೂ ಶ್ರೀ ನಿಜಲಿಂಗಪ್ಪನವರು ಹೇಳಿತ್ತಾರೆ: ಪಕ್ಷದಲ್ಲಿ ತೋರಿದ ಅಶಿಸ್ತು ವೈಲೋತ್ಪಾಟನೆಯಾಗುವುದಾದರೆ, ತಾನು ರಾಜಿನಾಮೆ ನೀಡಲು ಸದಾ ಸಿದ್ಧನೆಂದು. ರಾಜಿನಾಮೆ ಮಾತ್ರದಿಂದಲೇ ಅಶಿಸ್ತು ದೂರವಾಗುವುದಿಂದರೆ, ಗೊತ್ತುವಳಿ ಮಾತ್ರದಿಂದಲೇ ಕಾರ್ಯ ನಿರ್ವಹಿತವಾದಂತೆ. ಇದು ಎಂದಿಗಾದರೂ ಆದೀತೆ?

ಗಾಂಧೀ ರಜ

ಮಹಾತ್ಮಾ ಗಾಂಧಿಯವರ ಜನ್ಮ ಶತಾಬ್ದಿಯನ್ನು ದೇಶದಲ್ಲಿ ಆಡ್ಡಾದಿಯಿಂದ ನಾವು ಆಚರಿಸಿದೆವು. ಸರಕಾರಿ ಕಛೇರಿಗಳೆಲ್ಲವೂ ಎರಡು ದಿನ ಶ್ಚಿತಗೊಂಡುವು. ಬೇಂಕುಗಳೂ ಬಂದಾಗಿ ಲೆಕ್ಕದಾರರು ತುಸು ನಡಿನಿಡಿಸಿದರು. ಅಂಚೆ ತಂತಿ ಇಲಾಖೆಯೂ ಮುಚ್ಚಿದ್ದರಿಂದ ಕಾಗದ—ಪತ್ರಗಳ ನಿರೀಕ್ಷೆಗೂ ರಜಾ ಆಯಿತು. ಈ ಎರಡೂ ದಿನ ಜಾಗ್ರತರಿದ್ದವರಿಂದಲೆ, ಶಾಲೆ ಕಾಲೇಜುಗಳು ಹಾಗೂ ಅಂಗಡಿಗಳು, ಸಿನಿಮಾ ಥಿಯೇಟರುಗಳು.

ನಾವು ಗಾಂಧಿಯನ್ನು ಪೆಸಕೊಂಡೆವು. ಗಾಂಧಿ ತತ್ವಗಳಾದ ಅಹಿಂಸೆ, ಸತ್ಯ ಮೊದಲಾದುವುಗಳ ಮೇಲೆ ನೇದಿಕೆಗಳು ವೇಲೆ ಮೈಕೆನ ಮುಂದೆ ಗಂಟಲೊಡೆಯುವಂತೆ ಬೊಗಳಿದೆವು, ಕೈಯೊಡೆಯುವಂತೆ ಕರತಾಡನ ಮಾಡಿದೆವು. ಗಾಂಧಿ ಚಿತ್ರಗಳನ್ನು ಕಾಡ್ ಕವರ್, ಮುದ್ರೆ ಎಲ್ಲಕ್ಕೂ ಹಚ್ಚಿದೆವು; ರೂಪಾಯಿನ್ನಾಣ್ಯ, ನೋಟುಗಳಿಗೂ ಗಾಂಧಿಯನ್ನು ಎಳೆದು ಬಿಸಿದೆವು. ಪುಟಾಣಿ ಮಕ್ಕಳಿಗೆ ಪ್ರಭಾತಫೇರಿ ಮೂಡಲೇಬೇಕೆಂದ ಆಜ್ಞೆ ನೀಡಿದೆವು. ಶಾಂತಿ ಮತ್ತು ನ್ಯಾಯಗಳಿಗೆ ಅದ್ದಾಗಿ ಎದ್ದ ಪ್ರಶ್ನೆಗಳನ್ನು ತೀರ್ಮಾನಿಸುವ ರಾಷ್ಟ್ರೀಯ ಐಕ್ಯ ವಿತ್ತ ಸಂಘಟನೆಗಳಿಗಾಗಿ ನುಡಿಯುವ ಪ್ರತಿಜ್ಞೆ ಮಾಡಿಸಿದೆವು. ಗಾಂಧಿ ಶತಾಬ್ದಿ ಮಗಿಯಿತೆಂದು ತೃಪ್ತಿ ಹೊಂದಿದೆವು.

ಈ ಬಗೆಯ ನಮ್ಮ ಆಚರಣೆಯನ್ನು ಕಂಡು ಗಾಂಧಿ ಪರಲೋಕದಲ್ಲಿ ನಗುತಲಿ ಬಹುದು. ನಿಜಕ್ಕೂ ಆಚರಣೆಯೆಲ್ಲವೂ ಕೊನೆಗೆ ಕಂಬಳಕಾಯಿಯೆ ನ್ಮತ್ತಿರಬಹುದು. ಆಚರಣೆಯಿಲ್ಲದ ಉಪದೇಶವೇಕೆ ಎಂದು ಪ್ರಶ್ನಿಸಿಬಹುದು. ಒಂದ ಪಕ್ಷ ದೊಳಗಾದ ಘನಾಘನ ವ್ಯಾಘಾತಗಳನ್ನು ಶಾಂತಿಯಿಂದ ಬಗೆಹರಿಸಲಾಗದ ಕಾಯಕರು ದೇಶದ ಸಮಸ್ಯೆಗಳನ್ನು ಶಾಂತಿಯಿಂದ ತೀರ್ಮಾನಿಸುವುದು ಸಾಧ್ಯವೇ? ಗಾಂಧಿ ಶತಾಬ್ದಿಯು ಆಚರಣೆಯ ನೋಮನಿಯಿತು. ವರ್ಷಕ್ಕೊಂದು ಬಾರಿ ಪಿಸ್ತೂಲುಗಳನ್ನು ನೆಪದು ಗಡದ್ದಾಗಿ

ಕ್ಷಯರೋಗದ ಚಿಹ್ನೆಗಳು

ಕ್ಷಯರೋಗದ ಚಿಹ್ನೆಗಳು ತೋರಿದಾಗ ದೇಹದಲ್ಲಿ ಆಯಾಸ, ಹಸಿವು ಕಡಿಮೆಯಾಗುವುದು. ದೇಹದ ತೂಕ ಇಳಿಯುವುದು, ಅಲ್ಪಸ್ವಲ್ಪ ಜ್ವರ, ವಿಶೇಷತಃ ಬೆಳಗಿನ ಹೊತ್ತಿನಲ್ಲಿ ಕೆಮ್ಮು, ಎದೆಯಲ್ಲಿ ನೋವು ಮತ್ತು ಕೆಲವೊಮ್ಮೆ ರಕ್ತ ಕಾರುವುದು ಉಂಟಾಗುವುದು. ಇಂತಹ ಚಿಹ್ನೆಗಳಲ್ಲಿ ಯಾವುದಾದರೂ ಕಾಣಿಸಿಕೊಂಡಾಗ ಅವನ್ನು ಅಲಕ್ಷ್ಯ ಮಾಡ ಬಾರದು. ಆತಿ ಸಮೀಪದಲ್ಲಿ ಇರುವ ಕ್ಷಯರೋಗ ಕ್ಲಿನಿಕ್‌ಗೆ ಹೋಗಿ ಪರೀಕ್ಷಿಸಿಕೊಳ್ಳಬೇಕು.



ನಿಮ್ಮ ರಾಜ್ಯದಲ್ಲಿರುವ ಕ್ಷಯರೋಗ ಸಂಘಕ್ಕೆ ಬಡ ಕ್ಷಯರೋಗಿಗಳ ಚಿಕಿತ್ಸೆ ಹಾಗೂ ಆರೈಕೆಗಾಗಿ ನಿಧಿ ಬೇಕಾಗಿದೆ. ಕ್ಷಯರೋಗ ಮೊಹರುಗಳನ್ನು ಪಡೆದುಕೊಂಡು ನೀವು ಸಹಾಯವನ್ನು ಮಾಡಬಹುದು. ಈ ದಿನಗಳಲ್ಲಿ ಅವುಗಳು ಮಾರಲ್ಪಡುತ್ತವೆ.

ಬರೆ ಹತ್ತು ಪೈಸೆಗೆ ೮ ಬಿ ಸೀಲುಗಳನ್ನು ಇಂದೇ ಪಡಕೊಳ್ಳಿರಿ.

ಈ ಮುದ್ರೆಗಳು ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಕ್ಷಯರೋಗ ಸಂಘ ಮತ್ತು ಅವರ ಬೇರೆ ಬೇರೆ ಶಾಖೆಗಳಲ್ಲಿ ದೊರಕುವುವು.

Space donated by
Thio-Calcium Co., Madras and
Hindusthan Potteries, Calcutta.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ
O. S. No 270/1967.

ಅರಿಕಟ್ಟೆ ಗಣಪತಿ ಭಟ್ಟ— ವಾದಿ
ವರ್ಸಸ್
ಬಾಲಕೃಷ್ಣ ಗೋಪಿಲೆ ಕೊಡಾಜೆ—ಪ್ರತಿವಾದಿ
ಸಕ್ರಿ ವ್ಯಾಜ್ಯದ 57ನೇ ಪ್ರತಿವಾದಿ—

ರಾವು ಮಾಧವ ಚಿಪ್ಪಳಿಗಾರ್, ಮುಡದೇವ ಭಟ್ಟರ ಮಗ, ಬೆಳ್ಳಂಗಡಿ ತಾಲ್ಲೂ ಮುಂಡಾಜೆ ಗ್ರಾಮದವನ್ನಿ. ಇವರಿಗೆ ಕೋರ್ಟ್ F ಹ್ಯುಂ ಸ್ರಕಾರ ತಿಳಿಸುವುದೇನೆಂದರೆ—

ವಾದಿಯು ಪ್ರತಿವಾದಿಯರ ಮೇಲೆ ಯಿಂಜಂಕ್ಷನ್ ಪ್ರಾಪ್ತಿಗಾಗಿ ಕೇಳಿ ಮಾಡಿದ ಮೇಲ್ಕಂಡ ದಾವೆಯು ತಾ. 30-10-1969 ಕ್ಕೆ ಅಪ್ಪಿರುವುದರಿಂದ ಆದ್ದೆ ನಿಮಾದೇನಾ ಪರೂ ಆಕ್ಷೇಪಣೆಗಳಿದ್ದಲ್ಲಿ ಸದ್ರಿ ದಿನ್ನ ಮೇಲ್ಕಂಡ ಕೋರ್ಟಿಗೆ ಮುಂದೆ ಹಾಜರಾಗಿ ಸಿದ ಪರಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮಾದ ಗೈರು ಹಾಜರಿಯಿಂದ ತೀರ್ಮಾನಗಳಾದೀತು ಎಂತ ಈ ಮೂಲಕ ತಿಳಿಸೋಡಾಗಿಯದೆ.

(Sd) B. ISUWARA BHAT.
Advocate for Plff.

ಪುತ್ತೂರು, 1.10.69.

ಪುಟ ೫

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ
I. A. 1 in O. S. 95/1968.

ತಿಮ್ಮಣ್ಣ ಭಟ್ಟ —ಅರ್ಜಿದಾರ
ಅಬ್ದುಲ್ ಖಾದರ್ ಬ್ಯಾರಿ —ಎದ್ರಿ
ಅಬ್ದುಲ್ ಖಾದ್ರಿ ಬ್ಯಾರಿ ಮತ್ತು ಬ್ಯಾರಿಗಳ ಮಗ್ಗೆ ಬೆಳ್ತಂಗಡಿ ತಾಲ್ಲು ಬಜ್ರಿ ಗ್ರಾಮದ ಬಜ್ರಿ ಎಂಬಲ್ಲರುವವರು. ಪೋಸ್ಟು: ವೇಣೂರು, ದ. ಕ. ಇವರಿಗೆ

ಅರ್ಜಿದಾರರು ಎದ್ರಿಯ ಮೇಲೆ ಪಡೆದ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನ O. S. 95/1968ರ ದಿಕ್ಕೆ ತಿಳಿ ಮೇರೆಗೆ ಪ್ರಾಮನರಿ ದಿಕ್ಕೆ ಕೊಡ್ಡಿ ಕೊಡಬೇಕೆಂತ ದಾಳ್ಲಿ ಮಾಡಿದ ಮೇಲ್ಕಾಣಿಸಿದ ಅರ್ಜಿಯು 4.11.1969 ಕ್ಕೆ ನಮ್ಮ ಹಾಜ್ರಾತಿ ಬ್ಗೆ ಇರುತ್ತದೆ. 4.11.69ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಉದ್ದರಣಕ್ಕೆ ಮ್ಮ. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು ಎಂತ ಈ ಮೂಲಕ ತಿಳಿಸೋಡಾಗಿಯದೆ.

(By order of Court)
PULU NARAYANA BHAT
Advocate for Petitioner.

Belthangady,
1—10—1969.

ವಿಷಯಾದ ೯—೧೦—೧೯೬೯

ವಿಶ್ವಾನ್ನ ಉಣ್ಣುವಂತೆ ಗಾಂಧಿ ಶತಾಬ್ದಿಯು ಹೆಸರಲ್ಲಿ ಎರಡು ದಿವಸ ಕಡೆಯಾದರೂ ಭಕ್ತಿಯು ಎಂದರೆ ಆಚರಣೆಯಲ್ಲಿ ಅವಿಶ್ವಾಸವಲ್ಲ; ಕ್ರಿಯಾಶೀಲತೆಯ ಪರಿಣಾಮದ ಬಗ್ಗೆ ಅತಿ ಶೋಕ ಮಾತ್ರ.

ಅಬ್ದುಲ್ ಗಫಾರ್ ಖಾನ್

ಶ್ರೀ ಖಾನ್ ಅಬ್ದುಲ್ ಗಫಾರ್ ಖಾನ್ ಗಾಂಧಿ ಶತಾಬ್ದಿಯ ಆಚರಣೆಯಲ್ಲಿ ಭಾಗವಹಿಸಲು ನವದೆಹಲಿಗೆ ಬಂದರು. ಗಡಿನಾಡ ಗಾಂಧಿಯೆಂದೇ ಹೆಸರಾದ ಇವರು ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಇದೇ ಮೊತ್ತ ಮೊದಲು ಭಾರಿಗೆ ಇಲ್ಲಿ ಆಗಮಿಸುತ್ತಿರುವುದು. ತಮ್ಮ ಬದುಕನ್ನು ದೇಶ ಸೇವೆಗಾಗಿ ಮುಡಿಪಿಟ್ಟು ಸೆರೆಮನೆಯ ವಾಸವನ್ನು ಅನುಭವಿಸಿದ ಈ ಗಡಿನಾಡ ಗಾಂಧಿ ಗಾಂಧೀ ತತ್ವಗಳ ಕಟ್ಟಾ ಅನುಚರರು.

ದಕ್ಷಿಣಾತ್ಯ ಗಾಂಧಿಯವರ ದೇಶ ಭಾರತದಲ್ಲಿ ಕತ್ತಲೆಯಿನ ದಿನಗಳಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಹಿಂಸಾವೃತ್ತಿ–ಅಶಾಂತಿ ಬೆಳೆಯುತ್ತಿರುವುದು ಅವರಿಗೆ ಕಳವಳ ತಂದಿದೆ. ಇದಕ್ಕಾಗಿಯೇ ಅವರು ಮೂರು ದಿನಗಳ ಉಪವಾಸ ಮಾಡಿದರು. ಗಫಾರ್ ಖಾನ್ ಪ್ರತ್ಯೇಕ ಫಕ್ತೂನಿಸ್ತಾನವನ್ನು ಪುರಸ್ಕರಿಸುವವರು. ಪಾಕಿಸ್ತಾನದ ಕಡು ಮುಸ್ಲಿಮರಿಂದ ಬಿಡುಗಡೆ ಹೊಂದುವ ತಮ್ಮ ಅಭಿಲಾಷೆಯು ಪೂರೈಕೆಗೆ ಶಾಂತಿ ಮತ್ತು ಅಹಿಂಸಾ ಮಾರ್ಗಗಳನ್ನೇ ಅವರು ಅನುಸರಿಸುತ್ತಿದ್ದಾರೆ.

ಹಿಂಸೆ ಮತ್ತು ದ್ವೇಷಭಾವಗಳ ದೂರ ರಾಷ್ಟ್ರದಿಂದ ರಾಷ್ಟ್ರದ ಪ್ರಗತಿ ಸಾಧ್ಯ. ಭೌಷ್ಟಾಚಾರ ಅಪ್ರಾಮಾಣಿಕತೆ, ಉದ್ದಾಮ ವರ್ತನೆಗಳು ಸಮೂಹವಿರೋಧಿಗಳು. ಇಂತಹ ಪ್ರಜೆಗಳ ದೇಶವು ಪ್ರಗತಿ ಹೊಂದದ; ಕೀರ್ತಿ ಗಳಿಸದು. ದೇಶಕ್ಕೆ ಸಂಕೃತಿಗೆ ಮಿತ್ರ ನಾಗರಿಕತೆಗಳಿಗೆ ಇವು ಕೇಡು ಕರ.ತ್ತಾರೆ—ಇದು ಗಡಿನಾಡ ಗಾಂಧಿಯ ಖಚಿತಾಭಿಪ್ರಾಯ. ಇದಕ್ಕೇ ಮಹಾತ್ಮಾಗಾಂಧಿಯವರೂ ಅಂದು ಹೇಳಿದ್ದರು. ಅಂದು ಗಾಂಧಿಯವರ ಬಾಯಿಂದ ಕೇಳಿಸಿಕೊಂಡವರೇ ಇಂದು ದೇಶದಲ್ಲಿ ಹೀಗೆಯೆ ಸ್ವಾತಂತ್ರ್ಯಕ್ಕೆ ಮೂಲ ಕಾರಣರಾಗಿರುವುದು, ದೇಶದ ದುರ್ದೈವ್ಯ. ಗಡಿನಾಡ ಗಾಂಧಿಯವರ ಸಂದರ್ಶನದಿಂದಲಾದರೂ ಗಾಂಧಿ ತತ್ವಗಳ ಅಪಚಾರಕ್ಕೊದು ಕೊನೆಯಾದರೆ ದೇಶ ಎಷ್ಟೋ ಮಂದಿಯಾಗುತ್ತದೆ.

ವಿ. ವಿ. ಗಿರಿ

ಶ್ರೀ ವರಾಹ ಗಿರಿ ವೆಂಕಟ ಗಿರಿಯವರು ಗಾಂಧಿ ಶತಾಬ್ದಿಯ ಪೂರ್ವ ಸಂಧ್ಯೆಯಲ್ಲಿ ಪ್ರಸಾರ ಭಾಷಣ ಮಾಡಿದರು. ವೃತ್ತಾತ್ಮರೊಡನೆ ಕೂಡಿ ದುಡಿದವರಿಬ್ಬರು, ಇವರು ಕಾರ್ಮಿಕ ಸಂಘಟನೆಯ ಮೂಲಕ ಅಖಿಲ ಭಾರತೀಯ ವ್ಯಕ್ತಿಯೆನಿಸಿದ ಇವರದ್ದು ವಿಶಾಲ ಮನೋವೃತ್ತಿ. ಗಾಂಧಿ ತತ್ವಗಳಲ್ಲಿ ಇವರಿಗೆ ಎಲ್ಲಿಲ್ಲದ ಆಸಕ್ತಿ. ರಾಷ್ಟ್ರಪತಿಯೆ ನಿಸಿದ ಮೇಲೆಯೂ ಅವರು ಕೆಲವು ರಾಜ್ಯಗಳನ್ನು ಸಂದರ್ಶಿಸಿ ಬಂದರು. ಇತ್ತೀಚೆಗೆ ದೇಶದಲ್ಲಿ ನಡೆದ ಹಿಂಸಾಚಾರ ವಾತ್ಸಲ್ಯದಿಂದ ಅಪಾಂತಿ ಅವಮಾನಕಾರಕವೆಂದು ತಿಳಿದರು. ರಾಷ್ಟ್ರೀಯ ಐಕ್ಯಕ್ಕಿಂತ ಪ್ರಾದೇಶಿಕ ಹಿತ ಮತ್ತು ಸಾಮಾಜಿಕ ಹಿತಕ್ಕೆಂಥ ಗುಂಪು ಹಿತಕ್ಕೆ ಜನತೆ ಆದ್ಯತೆ ಕೊಡುತ್ತಿರುವುದನ್ನು ಅವರು ಮನಗಂಡರು. ಅದುಗುರಿಂದಲೇ ಅವರು ಕರೆಕೊಟ್ಟರು: "ಸತ್ಯದ ದೇವಿಯ ಹೊದ್ದವೇಷವನ್ನು ಕೊರತೆಯಾಡಲು, ಆಶುದ್ಧ ಭಾವನೆಗಳನ್ನು ತೊಡೆದುಹಾಕಲು ಒಂದಾಗಿ ದುಡಿಯೋಣ."

ಶ್ರೀ ವಿ. ವಿ. ಗಿರಿಯವರು ಹಿಂದಿನಿಂದಲೂ ಕ್ರಿಯಾಶೀಲರು, ರಾಜಕೀಯ ಕಾರ್ಯಕ್ಷೇತ್ರಗಳಲ್ಲಿ ಅವಕಾಶ. ರಾಷ್ಟ್ರಪತಿಯಾಗಿರುವಾಗ, ಉಪ ರಾಷ್ಟ್ರಪತಿಯಾಗಿರುವಾಗ ವಿತ್ತ ರಾಷ್ಟ್ರಪತಿಯೇ ಆದಾಗ ಅವರ ಕಾರ್ಯಗಳಿಗೆ ಹೆಚ್ಚು ಪ್ರಾಧಾನ್ಯ ತೀಡಿದ್ದಾರೆ, ನೀಡುತ್ತಿದ್ದಾರೆ. ವ್ಯಕ್ತಿಗಿಂತ ಸಮಷ್ಟಿ ಹೆಚ್ಚಿನದು ಎಂಬ ಅವರ ನಿಲುವು ಗಾಂಧೀ ಪ್ರೇರಿತವಾದದ್ದೇ. ಉತ್ಕಟ ಚರಿತ್ರೆಯ ಒನ್ನೆಲೆಯಿರುವ ಶ್ರೀ ಗಿರಿಯವರು ಪ್ರಚಲಿತ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ಅದನ್ನು ಸರಿಪಡಿಸಿ ಸಲು ಕರೆನೀಡಿದ್ದು ಸ್ವಾಭಾವಿಕವೇ.

ಸಬ್ರಹ್ಮಣ್ಯಂ

ತಮಿಳುನಾಡು ಕಾಂಗ್ರೆಸ್ ಪಕ್ಷಗಳಲ್ಲಿ ಅಧ್ಯಕ್ಷ ಸುಬ್ರಹ್ಮಣ್ಯಂ ಮತ್ತು ಕಾಮರಾಜರ ನಡುವಣ ವಿರಸವೀಗ ಒಂದು ಘಟ್ಟ ತಲಪಿತೆ. ಸುಬ್ರಹ್ಮಣ್ಯಂ ರಾಜೀನಾಮೆ ನೀಡಿ ಅಧಿಕಾರ ಬಿಟ್ಟ ಬಡಬೇಕಾಯಿತು. ಮದ್ಯಾಹ್ನದಲ್ಲಿ ಮತ್ತು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ಅತ್ಯಂತ ಸಮರ್ಥ ಉಡಳತೆದಾರೆಂದು ಹೆಸರು ಗಳಿಸಿದ್ದ. ಸಿ. ಸುಬ್ರಮಣ್ಯರವರು ಪಕ್ಷಸಂಘಟನೆಗೆ ಸಾಲಾಸುಕ್ಕಾದದ್ದು ಆಶ್ಚರ್ಯವಲ್ಲ. ಆದರೆ, ರಾಜೀನಾಮೆ ಯಿಂದ ಪರಿಸ್ಥಿತಿ ಸುಧಾರಿಸುವುದಿಲ್ಲ. ಕಾಮರಾಜರು ಚಿಂತನರಿಗೆ ಪ್ರಧಾನಿ ಪದವಿ ಅಮಿತ ತೊರೆದಿದ್ದಾರೆ ಎಂಬ "ಹೊಸ ಸತ್ಯ" ಪ್ರೊಂದನ್ನೆವರು ಜಯಲಗೊಳಿಸಿದ್ದಾರೆ.ಇದನ್ನು ಹೊರೂ ನಿರಾಕರಿಸಿಲ್ಲಿ; ಸಧ್ಯಕ್ಕಾ ಪರಿಸ್ಥಿರಿಸಲೂ ಇಲ್ಲ. ಇದರಲ್ಲಿ ಸತ್ಯಾಂಶವಿದ್ದರೂ ಇರಬಹುದು; ಇಲ್ಲದಿದೆಯೂ ಹೋಗಬಹುದು. ಆದರೆ, ಸುಬ್ರಹ್ಮಣ್ಯಂರಿಗೆ ತಮಿಳ್ನಾಡಿನಲ್ಲಿ ಇನ್ನು ತಲೆಯೆತ್ತಲಾಗದೇಕಾದರೆ, ಅಲ್ಲಿ ರಾಜಕೀಯ ಪಲಾಯನವೊಂದು ನಡೆಯಬೇಕು ಎಂಬುದರಲ್ಲಿ ಬಹಳ ಸತ್ಯವಿದೆ.

20ನೆ ಟಿ.ಬಿ. ಮುದ್ರೆಗಳ ಮಾರಾಟ ಚಳವಳಿ

ಕೇಂದ್ರ ಸರಕಾರದ ಆರೋಗ್ಯ, ಕುಟುಂಬ ಯೋಜನೆ ಹಾಗೂ ನಗರಾಭಿವೃದ್ಧಿ ಸಚಿವ ಶ್ರೀ ಚಂದ್ರಶೇಖರರವರ ಸಂದೇಶ

ಭಾರತ ಸ್ವಾಸ್ಥ್ಯರೋಗ ನಿವಾರಣಾ ಸಂಘವು ಟಿ. ಬಿ. ಮುದ್ರೆಗಳನ್ನು ಮಾರಾಟ ಮಾಡುವ ಚಳವಳಿಯನ್ನು ಮಹಾತ್ಮಾ ಗಾಂಧಿಯವರ ಹುಟ್ಟುದಿವಸವಾದ ಅಕ್ಟೋಬರ ೭ರಲ್ಲು ಉದ್ಘಾಟಿಸುವುದು. ಈ ಸಂಘದ ಅಧ್ಯಕ್ಷಸ್ಥಾನವನ್ನು ಈ ಸಂಘಕ್ಕೆ ಆದರ ಕಾರ್ಯಕರ್ತರಿಗೆ ಮತ್ತು ಭಾರತದ ಜನತೆಗೆ ನನ್ನ ಶುಭಸಂದೇಶಗಳನ್ನು ಕಳುಹಿಸಲು ಸಂತೋಷ ಪಡುತ್ತೇನೆ.

ಸ್ವಯಂರೋಗ ನಿವಾರಣ ಚಳವಳಿಗೆ ಪ್ರತಿಯೊಬ್ಬರೂ ಸಕ್ರಿಯರಾಗಿ ರೋಗಪೀಡಿತರಿಗೆ ಸಹಾಯವನ್ನೀಯಬೇಕೆಂದು ವಿನಂತಿಸುತ್ತೇನೆ. ಈ ರೋಗಕ್ಕೆ ಬಲಿಬಿದ್ದವರ ಆಶ್ರಿತರಿಗೂ ಜವಾಬ್ದಾರಿಯು ಸಮೂಹದ್ದಾಗಿದೆ.ಸ್ವಯಂ ರೋಗ ನಿಯಂತ್ರಣಾ ಕಾರ್ಯಕ್ರಮವು ಯಶಸ್ವಿಯಾಗಬೇಕಾದರೆ ಜನಸಾಮಾನ್ಯರ ಸಹಕಾರ ಅಗತ್ಯ. ಈ ಪ್ರಯತ್ನವು ಟಿ.ಬಿ.ಎಸೋಸಿಯನ್‌ನ ಮೂಲಕವೇ ಸಾಧ್ಯ. ಸೀಲ್ ವಿತರಣೆಯ ಈ ಚಳವಳಿಯ ಕೇಂದ್ರದ ಕಾರ್ಯಕ್ರಮ ವಾದ್ದರಿಂದ ಅದು ಸಮೂಹದ ದೇರೆ ದೇರೆ ಅಂಗಗಳನ್ನೂ ತನ್ನ ಕಡೆಗೆ ಆಕರ್ಷಿಸಿ ಈ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರಲು ಸರಕಾರಕ್ಕೆ ಬಲವನ್ನೀಯುವುದಲ್ಲದೆ ಸ್ವಯಂಪ್ರೇರಿತ ಸೇವೆಗೆ ಬೇಕಾದ ನಿಧಿಯನ್ನೂ ಒದಗಿಸುವುದು. ದೇಶದ ಪೆಚ್ಚಿನ ಸಂಸ್ಥೆಗಳು ಸರಕಾರದ ಈ ಕಾರ್ಯಕ್ರಮಕ್ಕೆ ಪರಿಪೂರ್ಣ ಸಹಕಾರ ನೀಡಲಿದೆ. ಜೀವನದ ಯಾವುದೇ ಕ್ಷೇತ್ರದಲ್ಲಿರುವ ಸಹೋದರ ಸಹೋದರಿಯರೇ ನಿಮಗೆ ಈ ಟಿ. ಬಿ. ಸೀಲ್ ಮಾರಾಟದ ಚಳವಳಿಯ ಕ್ಷಯರೋಗ ನಿರೋಧದ ಈ ಚಳವಳಿದಲ್ಲಿ ಜತೆಕೊಡಲು ಮತ್ತು ಈ ರೋಗಕ್ಕೆ ಕುತ್ತಾದ ಜನರ ಸೇವೆಯನ್ನು ಮಾಡಲು ಸಂಪರ್ಣ ಸಂಪರ್ಧವನ್ನು ಒದಗಿಸುವುದೆ. ಈ ಚಳವಳಿದ ಸಂಘಟನೆಯಲ್ಲಿ ನೀವು ಆಚರಿಸುವ ಸಮೂಹಂಭ, ಉತ್ಸವಗಳಲ್ಲಿ ಈ ಸೀಲುಗಳನ್ನು ಹಡೆದು, ಆಪ್ತರಿಗಳನ್ನು ನಿಮ್ಮ ವರ್ಷ, ಶುಭ ಸಂದೇಶದ ಕಾರ್ಡು ಮತ್ತು ಪೆಕೆಟ್‌ಗಳಿಗೆ ಅಂಟಿಸಿರಿ. ತಾ. 2ನಿಂದ ಆರಂಭವಾಗಲಿರುವ ಈ ಚಳವಳಿವು ಇಡೆ ಶ್ರದ್ಧವಾಗುವಂತೆ ನೆರವು ಕೊಡಿ ಈ ಸಂಸ್ಥೆಯನ್ನು ಬಲಗೊಳಿಸಿರಿ.

ರಾಷ್ಟ್ರಪತಿ ಶ್ರೀ ಗಿರಿಯವರ ಸಂದೇಶ

ಗಾಂಧೀ ಜಯಂತಿಯ ದಿವಸವಾದ ಅಕ್ಟೋಬರ್ ೭ರಂದು ಪ್ರಾರಂಭವಾದ 20ನೆಯ ಕ್ಷಯ ರೋಗ ಮುದ್ರೆಗಳನ್ನು ಭಾರತದ ಎಲ್ಲಾ ಪ್ರಜೆಗಳೂ ಬಹಳ ಉದಾರ ಭಾವದಿಂದ ಮಹಾತ್ಮಾ ಗಾಂಧಿಯವರ ಹೆಸರಲ್ಲಿ ಮಾರಾಟ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂಬುದಾಗಿ ರಾಷ್ಟ್ರಪತಿ ಶ್ರೀ ವಿ.ವಿ ಗಿರಿಯವರು ಮನವಿ ಮಾಡಿದ್ದಾರೆ.

ಭಾರತದ ಸ್ವಯಂರೋಗದ ನಿರ್ಮೂಲನೆಯ ಈ ಕಾರ್ಯಕ್ರಮವನ್ನು ನಡೆಸುವುದರಿಂದ ಮಹಾತ್ಮಾಗಾಂಧಿಯವರ ಶತಮಾನೋತ್ಸವನ್ನು ಇಸ್ಮಲ್ಲಿ ಸೇರಿಸುವುದರಿಂದ ಈ ಕಾರ್ಯಕ್ರಮಕ್ಕೆ ಒಂದು ಪ್ರಾಮುಖ್ಯತೆ ಇದೆ. ಎಂದೂ ಅವರು ತಮ್ಮ ಸಂದೇಶದಲ್ಲಿ ತಿಳಿಸಿರುವರು.

ಅವರು ತಮ್ಮ ಪ್ರೋತ್ಸಾಹವನ್ನು ಈ ಸಂಘದ ಕಾರ್ಯಕ್ರಮಗಳಿಗೆ ನೀಡುತ್ತಾ, ಪ್ರತಿಯೊಬ್ಬರಿಂದಲೂ ಮತ್ತು ಪ್ರತಿಯೊಂದು ಸಂಸ್ಥೆಗಳ ಸ್ವಯಂರೋಗಕ್ಕೆ ಪೂರ್ಣತರವಾಗಿ ಸಹಕಾರವನ್ನು ಒದಗಿಸಲು ಪ್ರಯತ್ನಪಡಬೇಕು.ಆಗಾಗ್ಗೆ ಸರ್ವಸ್ವ ಪ್ರೋತ್ಸಾಹ ಅಗತ್ಯವೆಂದೂ ಅವರು ತಿಳಿಸಿರುವರು.

ಕಾಮರಾಜ

ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಕಾಮರಾಜರು ಸುಬ್ರಹ್ಮಣ್ಯಂ ಶಸ್ತ್ರ ವೇಲೆ ಹೊರಿಸಿದ ಗುರುತರ ಅಪವಾದವನ್ನು ಕೆಲವೇ ವಾರಗಳಲ್ಲಿ ಟೀಕಿಸಿದ್ದಾರೆ: ಅವರಿಗೆ ಕತ್ತಿ.ರಿಗಿದ್ದಾರೆ' ಕಿರಿದರಲ್ಲಿ ಹಿರಿದರ್ಥವನ್ನು ತುಂಬಿ ಹೇಳುವ ಕಲೆಗೆ ಕಾಮರಾಜರು ಹೆಸರುವಾಸಿ. "ಸುಬ್ರಹ್ಮಣ್ಯಂ ಪಕ್ಷದಪಕ್ಷಗಳಿಗಾಗಲೀ ವ್ಯಕ್ತಿಗಳಿಗಾಗಲೀ ಪ್ರಾಮಾಣಿಕವಾಗಿ ನಡೆದುಕೊಂಡವರೇ ಅಲ್ಲ" ಎಂಬ ಕಾಮರಾಜರ ಉಕ್ತಿ ಸಿ.ಸುಬ್ರಮಣ್ಯರವರನ್ನು ಅನಾಥ ಶಿಶುವನ್ನಾಗಿಯೇ ಮಾಡಿದೆ. ರಾಜ್ಯಕೀಯ ಧುರೀಣರ ದಶ ವತಾರಗಳಲ್ಲಿ ಸಿ.ಸುಬ್ರಮಣ್ಯರವರದ್ದು ಇನ್ನೂ ಎಷ್ಟನೆಯ ವತಾರವೋ ಎಂದು ಸಧ್ಯದಲ್ಲೇ ಗೊತ್ತಾಗಲಿದೆ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service

ಅಮೃತಾಂಜನ

● ತಲೆ ನಿಡಿತ ● ಹೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಧರ್ಮದೇವನ ಸಂಸಾರ

ಸಂಗ್ರಾಹಕರು: ಶ್ರೀ ದಿವಾಕರ ಪ್ರಸನ್ನ.

ಜಗತ್ತಿನಲ್ಲಿ ಬಳಕೆಯಲ್ಲಿರುವ 'ಧರ್ಮ' ಹೆಸರಿನಿಂದವುಗಳಲ್ಲದರ ಅಧಿಪತಿಯಾದ ಧರ್ಮದೇವನಿಗೆ ಇರುವ ಪತ್ನಿಯರೆಷ್ಟು, ಎಂದು ಜನಸಾಮಾನ್ಯರೊಬ್ಬನ ಬಳಿ ಕೇಳಿದರೆ, 'ಒಬ್ಬಳೇ ಇರಬೇಕು' ಅಥವಾ 'ಪತ್ನಿಯರಿಲ್ಲ' ಎಂಬ ಉತ್ತರ ಬರಬಹುದು. ಆದರೆ ಆತನಿಗೆ ಹತ್ತು ಹೆಂಡಂದಿರು ಇದ್ದರೆಂಬುದನ್ನು ನಾನೂ ನಂಬಲಾರೆ ನಾವಿದರೂ, ಆತ ಒಪ್ಪಲೇಬೇಕು.

ಆರನೇ ಮನ್ವಂತರದಲ್ಲಿ ಜನಿಸಿದನೆನ್ನಲಾದ ಪ್ರಜೇತನ ಪುತ್ರ ದಕ್ಷನು ತನ್ನ ಪತ್ನಿ ಪ್ರಸೂತಿಯಲ್ಲಿ ಅರುವತ್ತು ಕುವರಿಯರನ್ನು ಪಡೆದಿದ್ದ. ಇವರಲ್ಲಿ ಹದಿನಾರು ಕುವರಿಯರನ್ನು ಕಾಶ್ಯಪನಿಗೂ, ಇಪ್ಪತ್ತೇಳು ಮಕ್ಕಳನ್ನು ಚಂದ್ರನಿಗೂ ಕೊಟ್ಟು ಉಳಿದುದರಲ್ಲಿ ಹತ್ತು ಕುವರಿಯರನ್ನು ಧರ್ಮದೇವನಿಗೆ ಕೊಟ್ಟು ಮದುವೆ ಮಾಡಿದನು.

ಈ ಹತ್ತು ಧರ್ಮನ ಪತ್ನಿಯರ ಹೆಸರುಗಳು, ಭಾನು, ಲಂಬಾ, ಔವಿ, ಕಕುಭೆ, ವಿಶ್ವ, ಸಾಧ್ಯಾ, ಮರುತ್ವತಿ, ವಸು, ಮುಹೂರ್ತ ಮತ್ತು ಸಂಕಲ್ಪ—ಎಂದು.

ಭಾನುವಿನಲ್ಲಿ ಹುಟ್ಟಿದವನು ದೇವರ್ಷಭ. ಈ ದೇವರ್ಷಭನ ಮಗನ ಹೆಸರು ಇಂದ್ರಸೇನ.

ಲಂಬಾಳಲ್ಲಿ ಹುಟ್ಟಿದ ಧರ್ಮನ ಮಗನ ಹೆಸರು ವಿದ್ಯೋತ. ಮೋಡಗಳು ಇವನ ವಂಶಜರೆಂದು ಹೇಳಲಾಗುತ್ತಿದೆ.

ಕಾಕುಭೆಯ ಮೊಮ್ಮಗ ಕೀರ್ತಿಮಂತ. ಇವನ ಹೆಂಡತಿ ಸಂಕಟಿ ಅಂದರೆ ಸಂಕಟಿ. ಕಾಕುಭೆಯ ಮಗ,

ಸ್ವರ್ಗನೆಂಬವನು ಔವಿಯ ಮಗನಾಗಿದ್ದ. ಸ್ವರ್ಗನ ಮಗನ ಹೆಸರು ನಂದಿಯಂತೆ.

ವಿಶ್ವದೇವರುಗಳು (ಹತ್ತು) ಧರ್ಮನ ಹೆಂಡತಿಯರಲ್ಲಿ ಎರ್ವಳಾದ ವಿಶ್ವೆಯಲ್ಲಿ ಹುಟ್ಟಿದವರಂತೆ. ಈ ವಿಶ್ವದೇವರು ಅಳಿಯಿಲ್ಲದೆಂದೂ ಹೇಳಲಾಗುತ್ತಿದೆ.

ಸಾಧ್ಯರೆಂಬ ದೇವತೆಗಳ ತಂದೆಯೂ ಧರ್ಮದೇವನೇ. ಈ ಮಕ್ಕಳ ತಾಯಿ ಸಾಧ್ಯೆ. ಸಾಧ್ಯೆಯ ಮೊಮ್ಮಗನ ಹೆಸರು ಅರ್ಥಸಿದ್ಧಿ.

ಮರುತ್ವತಿಯಲ್ಲಿ ಜನಿಸಿದವರು ಜಯಂತ ಮತ್ತು ಮರುತ್ವಾನ. ವಾಸುದೇವನ ಕೃಪೆಯಿಂದ ಜನಿಸಿದನೆನ್ನಲಾದ ಮರುತ್ವಾನನ ನಂತೊಂದು ಹೆಸರು ಉಪೇಂದ್ರ.

ಮೂಹೂರ್ತನು ಮುಹೂರ್ತಗಳ ಅಧಿಪತಿಗಳಾದ ಮುಹೂರ್ತಿಕೆಯರು ಧರ್ಮನ ದಶಪತ್ನಿಯರಲ್ಲಿ ಓರ್ವಳಾದ ಮೂಹೂರ್ತೆಯಲ್ಲಿ ಜನಿಸಿದವರು. ಜಗತ್ತಿನ ಪ್ರತಿ ಜೀವಕೋಟಿಯ ಮೇಲೂ ಇವರು ತಮ್ಮ ಪ್ರಭಾವವನ್ನ ಬೀರುತ್ತಾರೆಂತೆ.

ಕಾಮನೆಂಬವನು ಸಂಕಲ್ಪನ ಮಗ. ಸಂಕಲ್ಪನ ತಂದೆ ಧರ್ಮದೇವ ಮತ್ತು ತಾಯಿ ಸಂಕಲ್ಪೆ. 'ವಸು'ವೆಂಬನಳಲ್ಲಿ ಹುಟ್ಟಿದವರು ಅಷ್ಟವಸುಗಳಾದ, ಪ್ರಾಣ, ಧ್ರುವ, ದ್ರೋಣಿ, ಅರ್ಕ, ಅಗ್ನಿ, ದೋಷ, ವಾಸು ಹಾಗೂ ವಿಭಾವಸು.— ಎಂಬವರು. ಇವರ ಮಕ್ಕಳ ಸಂಖ್ಯೆ ಬಹು ದೊಡ್ಡದು.

ಈ ಧರ್ಮದೇವನ ವಂಶವೃಕ್ಷ ಬೆಳೆದಂತೆಲ್ಲ, ಅಧರ್ಮನ ಮಕ್ಕಳ ಹೆಚ್ಚುವುದು ಆಸ್ವಾಭಾವಿಕವಲ್ಲ. ಆತನೆಷ್ಟು ವಿವಾಹವಾಗಿ (ಅಥರ್ಮಿಂದಿಂದಲೇ!) ಕನ್ಯಾ ಸಂತಾನ ವೃದ್ಧಿ ಮಾಡಿದ್ದಾನೆಂಬುದು, ಋಷಿಗಳ ಅಥವಿಗಳಿಗೆ ಮಾತ್ರ ತಿಳಿಯುವ ವಂಶಾವುದರಿಂದಲೇ, ಆತನ ಬಗ್ಗೆ ವಿಶೇಷ ತಿಳಿಯುವುದು ನಮಗೆ ಅಸಾಧ್ಯವಾಗಿದೆ.

ಗಾಂಧೀಜಿ ಜನ್ಮ ಶತಾಬ್ದಿ ಆಚರಣೆ

ಉಡುಪಿ ನಗರ ಸಭೆಯು ವತಿಯಿಂದ ಸಂಕೇಶ್ವರ್ಯಲ್ಲಿ ದಿ। ಆರೂರು ವೆಂಕಟ್ರಾಯರ ಪತ್ನಿ ಶ್ರೀಮತಿ ಕಲ್ಯಾಣಮ್ಮನವರು ಅವರ ಮಾವ ಆರೂರು ಕಿಟ್ಟಿ ಶೇಷಗಿರಿರಾಯರ ಸ್ಮಾರಕಾರ್ಥ ನಿರ್ಮಿಸಿದ "ಉದ್ಯಾನ" ಮತ್ತು "ಗಾಂಧೀಪ್ರತಿಮೆ"ಯ ಉದ್ಘಾಟನೆಯು ಮಣಿಪಾಲ ನಗರ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜೀರ್ಣೋದ್ಧಾರಿಯ ಶ್ರೀ ರಾಮಚಂದ್ರ ರಾಯರಿಂದ ನೆರವೇರಿಸಲ್ಪಟ್ಟಿತು.

ನಗರ ಸಭಾಧ್ಯಕ್ಷ ಡಾ। ವಿ. ಎಸ್. ಆಚಾರ್ಯರು ಸ್ವಾಗತಿಸಿದ ಬಳಿಕ ಶ್ರೀ ಎ. ನಾರಾಯಣ ರಾಯರು ಉದ್ಯಾನದ ಬೀಗದ ಕೈಯನ್ನು ನಗರ ಸಭಾಧ್ಯಕ್ಷರಿಗೆ ಒಪ್ಪಿಸಿದರು. ಶ್ರೀ ಕೆ. ಕೆ. ಪೈಯವರು ಗಾಂಧೀ ಪ್ರತಿಮೆಯ ಅನಾವರಣಗೊಳಿಸಿ ಗಾಂಧೀಜಿಯವರ ಕಟ್ಟಾದರ್ಶಗಳಿಂದ ಪ್ರಭಾವಿತರಾಗಿದೇ ಇರುವುದು ಶೋಚನೀಯವೆಂದೂ ನುಡಿದರು. ನಾವಿಂದಿನ ಜನಾಂಗಕ್ಕಾದರೂ ನಾವು ಮಹಾತ್ಮರ ಜೀವನ ಸಂದೇಶವನ್ನು ಮುಟ್ಟಿಸಬೇಕೆಂದೂ ಹೇಳಿದರು. ಚೀಫ್ ಪ್ರಿಫೆಕ್ಟ್ ಶ್ರೀ ಜಿ.ಎನ್.ಪೈರವರು ಸ್ವಾಮಿಯವರು ವಂದನಾರ್ಪಣೆ ಗೈದರು.

ಎಂ. ಜಿ. ಎಂ. ಕಾಲೇಜಿನಲ್ಲಿ ಗಾಂಧೀ ಶತಮಾನೋತ್ಸವ

ಇದೇ ತಾ. 1 ಮತ್ತು 2ರಂದು ಎಂ.ಜಿ.ಎಂ. ಕಾಲೇಜಿನಲ್ಲಿ ಗಾಂಧೀ ಶತಮಾನೋತ್ಸವವು ವಿವಿಧ ವಿಧಾಯಕ ಕಾರ್ಯಕ್ರಮಗಳಿಂದ ಜರಗಿಸಲ್ಪಟ್ಟಿತು.

ತಾ. 1ರಂದು ಶ್ರೀ ಯೋಗೀಶ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಸ್ವಾತಂತ್ರ್ಯ ಯೋಧರನ್ನು ಗೌರವಿಸಲಾಯ್ತು. ಸ್ಥಳೀಯರಲ್ಲಿ ವಿಷಯಗಳಾನವರಿಗೆ ಬಹುಮಾನ ವಿತರಣೆಯಾಯ್ತು. ಸಂಜೆ ಮಣಿಪಾಲ ಕಾಲೇಜ್ ಆಫ್ ಎಜುಕೇಶನ್ ಉಡುಪಿ ಇದ್ದ ನಗರ ಸಭಾಪತಿ ಡಾ। ವಿ. ಎಸ್. ಆಚಾರ್ಯರು ಗಾಂಧೀಜಿ ಕುರಿತ ಪುಸ್ತಕ ಹಾಗೂ ಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಿದರು.

ತಾ. 2ರಂದು ಸಗ್ರಿ ಹರಿಜನ ಕಾಲೋನಿಯಲ್ಲಿ ಸಿಂಡಿಕೇಟಿನ ಮುಖ್ಯಾಧಿಕಾರಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಹರಿಜನ ಮಕ್ಕಳಿಗೆ ಪಾರಿತೋಷಕ ವಿತರಣೆ ಮಾಡಲಾಯ್ತು. ಅರಂಭದಲ್ಲಿ ಪರಜ ಸ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದ ಅನುಭವ ಮಂಟಪಕ್ಕೆ ಪ್ರಿನ್ಸಿಪಾಲ್ ಶ್ರೀ ಕೆ.ಶಿ. ಹರಿದಾಸ ಭಟ್ಟರೂ ದೇಗುಲ ಮತ್ತು ಭಜನಾ ಮಂದಿರಕ್ಕೆ ಶ್ರೀ ಕೆ. ಕೆ. ಪೈಗಳೂ ದೀಪ ಹಚ್ಚುವುದರ ಮೂಲಕ ಪ್ರಾರಂಭೋತ್ಸವ ನೆರವೇರಿಸಿದರು. ಮೊಜಿ ಕಾನ್ಸಿಲರ್ ಶ್ರೀ ಗೋಪಾಲಕೃಷ್ಣ ಇವರು ಮೊನ್ನೆಯಾಡಿದ ಬಳಿಕ ಅಧ್ಯಕ್ಷರು ಗಾಂಧಿಯ ತತ್ವಗಳು ಕಲವೇ ವರ್ಷಗಳಲ್ಲಿ ಮರೆಯುತ್ತಿರುವುದಂತಾದು ದಕ್ಕೆ ವಿಷಾದ ಸೂಚಿಸಿ ಇದಕ್ಕೆ ಕಾರಣವೇ ನೆಂಬುದನ್ನು ಹುಡುಕುವಂತಾಗಬೇಕೆಂದರು.

ಅನಂತರ ಉಡುಪಿ ಮತ್ತು ಮಣಿಪಾಲ ಆಸ್ಪತ್ರೆಯಲ್ಲಿಯ ಬಡರೋಗಿಗಳಿಗೆ ಹಣ್ಣು ಹಂಪಲುಗಳನ್ನು ಹಂಚಲಾಯ್ತು. ಮಧ್ಯಾಹ್ನ ಕಾಲೇಜಿನ ವತಿಯಲ್ಲಿ ಸಾವಿರಾರು ಬಡಬಗ್ಗರಿಗೆ ಭೋಜನ ಕೊಡಲಾಯ್ತು. ಇವರ ಸೌದಾರ್ಯತೆಯನ್ನು ಶ್ರೀಮತಿ ಕಾರಂತ ಮಾಧವ ಪೈಯವರು ನೆರವೇರಿಸಿದರು.

ಶ್ರೀ ಎಂ.ಡಿ. ಕಾಮತರ ನಿಧನ

ಉಡುಪಿಯ ಜನಪ್ರಿಯ ಎಡ್ವಕೇಟ್ ಶ್ರೀ ಎಂ. ಡಿ. ಕಾಮತರು ತಾ.12ರಂದು ಹೃದಯ ಸ್ತಂಭನದಿಂದ ಇಹನರಾದರೆಂಬುದು ವಿಷಾದಕರವಿದೆ. ದಿವಂಗತರು ಕೆನರಾ ಮ್ಯಾಚುಯಲ್ ಇನ್ಶೂರೆನ್ಸ್ ಕಂಪೆನಿಯ ಡೈರೆಕ್ಟರಾಗಿ ಸೇವೆ ಸಲ್ಲಿಸಿದ್ದರಲ್ಲದೆ ಸಿಂಡಿಕೇಟ್ ಬ್ಯಾಂಕಿನ ರೀಜನಲ್ ವೈಸ್ಚೇರ್ಮನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು.

ಗಾಂಧಿ ಶತಮಾನೋತ್ಸವ

ತಾ. 1-10-69ರಂದು ಗಾಂಧಿ ಶತಮಾನೋತ್ಸವವನ್ನು ಲೋಕಸೇವಾ ಪೈಯರ್ ಪ್ರೈಮರಿ ಶಾಲೆಯಲ್ಲಿ ವಿವಿಧ ವಿಧಾಯಕ ಕಾರ್ಯಕ್ರಮಗಳಿಂದ ಆಚರಿಸಲಾಯ್ತು.

ಶ್ರೀಗಳಾದ ಕೆ. ಯಸ್. ಕೃಷ್ಣಭಟ್ಟ, ವೆಂಕಪ್ಪಯ್ಯ ಸಾರೆ, ಬಿ.ನಾರಾಯಣ ರಾವ್, ಯು.ಗಂಗಾಧರ ಭಟ್ಟ, ಕೆ.ಸಂಜೀವಸೆಟ್ಟಿ, ಬಿ. ಯನ್. ನರಸಿಂಹ ಮೂರ್ತಿ ಇವರು ಗಾಂಧೀ ಜಿಯ ವಿಚಾರ ಮಂಡನೆಗೈದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಮುಡಿಯೂರು ನಾರಾಯಣ ಭಟ್ಟರು ಗಾಂಧೀಜಿಯವರ ವ್ಯಕ್ತಿತ್ವವನ್ನು ನೆನೆಸಿ ಅವರು ನಡೆಸಿದ ಕಾರ್ಯಗಳನ್ನು, ಹರಿಕೊಟ್ಟ ಆದರ್ಶಗಳನ್ನು ಶ್ಲಾಘಿಸಿ, ಇಂದಿನ ಈ ಕಲಿಕ ಪರಿಸ್ಥಿತಿಯಲ್ಲಿ ದೇಶದಾದ್ಯಂತ ಅರಾಜಕತೆ ವ್ಯಾಪಿಸುವ ಭಯದ ಈ ಸನ್ನಿವೇಶದಲ್ಲಿ ಯಾವ ರೀತಿ ನಾವು ರಾಷ್ಟ್ರದ ಈ ಸಂಕಟವನ್ನು ಪರಿಹರಿಸಬಹುದು ಎಂಬುದಾಗಿ ಉಪನ್ಯಾಸವಿತ್ತರು.

ಗಾಂಧಿ ಶತಾಬ್ದಿ

ಉಡುಪಿ ಮೋಡರ್ನ್ ಪಾ. ವಿ. ಶಾಲೆಯಲ್ಲಿ ಗಾಂಧೀ ಶತಾಬ್ದಿಯು ಟೀಗೈ ಧ್ವಜಾರೋಹಣದೊಂದಿಗೆ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯರು ಧ್ವಜಾರೋಹಿಸಿದ ಬಳಿಕ ಮಕ್ಕಳಿಂದ ಸಾಮೂಹಿಕ ಶುಭಕ್ಕ, ಭಜನೆಗಳು ನಡೆದವು. ಮುಂದೆ ಸಭೆಯು ವಿದ್ಯಾರ್ಥಿ ರಾಮದಾಸ ಬಲ್ಲಾಳರಿಂದ ನಡೆದು ಮಕ್ಕಳಿಂದ ಭಾಷಣಗಳ ಬಳಿಕ ಹಿರಿಯವಿದ್ಯಾರ್ಥಿ ಸಂಘದಿಂದ ಬಡವಿದ್ಯಾರ್ಥಿಗಳಿಗೆ ಒದಗಿಸಲಾದ ಉಚಿತಗಳನ್ನು ಹಳೆ ವಿದ್ಯಾರ್ಥಿ ಸಂಘದ ಕೋಶಾಧಿಕಾರಿಗಳಾದ ಶ್ರೀ ಬಾಲಕೃಷ್ಣ ಪಂಗಣ್ಣಾಯರು ಗಳಿಕೆ ನಡೆದ ಗಾಂಧೀಜಿಯ ಜೀವನ ಆದರ್ಶಗಳ ಮೇಲೆ ಉಪನ್ಯಾಸ ಮಾಡಿದರು. ಸಭೆಯ ಭಾಷಣ, ಅಧ್ಯಕ್ಷರ ಭಾಷಣದ ಬಳಿಕ ಹಳೆ ವಿದ್ಯಾರ್ಥಿ ಸಂಘದ ಉಪಕಾರ್ಯದರ್ಶಿ ಶ್ರೀ ಪಿ. ಶೆಟ್ಟಿಯವರು ಧನ್ಯವಾದ ಸಮರ್ಪಣೆ ಮಾಡಿದರು.

ಕಾಲವು ಬದಲಾಗಿದೆ...

ಹಾಗೆಯೇ ಸ್ತ್ರೀಯರ ಅಭ್ಯಾಸಗಳು!

ಸ್ತ್ರೀಯರು ಚಿನ್ನದ ಮೇಲೆ ಧನವಿನಿಯೋಗಮಾಡುವ ವ್ಯಾಮೋಹದ ದಿನಗಳು ಹೋಗಿವೆ. ಇಂದು ಉಳಿತಾಯದ ಧನವಿನಿಯೋಗವೆ ಸ್ತ್ರೀಯರ ಬದಲಾದ ಅಭ್ಯಾಸವಾಗಿದೆ ವಿಶ್ವತ್ಯಾಲಕ್ಕೆ ಕೂಡಿಡುವುದೇ ಒಂದು ಸದ್ಗುಣವಾಗಿದೆ. ಸಿಂಡಿಕೇಟ್ ಬ್ಯಾಂಕ್‌ನಲ್ಲಿರುವ ನಾವು ನಮ್ಮ "ಎಲ್ಲಾ ಮಹಿಳೆಯರೇ ಇರುವ ಶಾಖೆಗಳ" ಮೂಲ ಕದೇಶದಲ್ಲಿ ಸ್ತ್ರೀಯರು ಉಳಿತಾಯದ ಅಭ್ಯಾಸ ಮಾಡುವಂತೆ ತಿರುತಿರುಗಿ ಹೇಳುತ್ತಿದ್ದೇವೆ. ಮತ್ತು ಅನೇಕ ಪಟ್ಟಣಗಳಲ್ಲಿ ನಮ್ಮ ಬ್ಯಾಂಕಿನ ಸೇವಿಂಗ್ಸ್ ಕೌಂಟರುಗಳ ವ್ಯವಹಾರವು ಪೂರ್ಣ ಸ್ತ್ರೀಯರಿಂದಲೇ ನಡೆಸಲ್ಪಡುತ್ತದೆ.

ನಮ್ಮ 343 ಶಾಖೆಗಳಲ್ಲಿ 1200 ಕ್ಕೂ ಮಿಕ್ಕಿ ಮಹಿಳೆಯರು ಕಾರ್ಯನಿರತರಾಗಿ ವಿಶೇಷಾಸ್ಥಂತ ಉಳಿತಾಯದ ಸಂದೇಶವನ್ನು ಸಾರುತ್ತಿದ್ದಾರೆ.



ಸಮಾಜ ಸೇವೆಯಲ್ಲಿ ಅತ್ಯುತ್ತಮ ಬ್ಯಾಂಕಿಂಗ್ ಸಂಸ್ಥೆ

ಸಿಂಡಿಕೇಟ್ ಬ್ಯಾಂಕ್

BANKING AT ITS SOCIAL BEST

SYNDICATE BANK

H O. MANIPAL

CUSTODIAN: T.A. PAI

ಪುತ್ತೂರು ಲೇಂಡ್ ಟ್ರಿಬ್ಯೂನಲ್‌ನಲ್ಲಿ

R. R. C. 302/1969.

ಲಕ್ಷ್ಮಪ್ಪಮ್ಮ — ಅರ್ಜಿದಾರಳು.
ವೆಂಕಟ್ರಮಣ ಭಟ್ಟ ಕೂಡಾ-ಎದ್ರಿರು.

ಮೇಲಿನ ವ್ಯವಹಾರದ 8ನೇ ಎದ್ರಿ— ಲಕ್ಷ್ಮಿ, ಬಡಕಿಲ ಗೋವಿಂದ ಭಟ್ಟರ ಮಗಳು, ಬಂಟ್ವಾಳ ತಾಲ್ಲೂ ಯಿಡ್ಡಿದು ಗ್ರಾಮದ ಪುತ್ತೂರಲ್ಲಿ, ಇವರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ಅರ್ಜಿದಾರಳು ಗೇಣಿ ಬಾಕಿ ಬಗ್ಗೆ ಪೀವು ವಸ್ತೆಯರ ಮೇಲೆ ಮಾಡಿದ ಮೇಲ್ಕಂಡ ಅರ್ಜಿಯು ತಾ. 14-10-69ಕ್ಕೆ ಇಟ್ಟುರುವುದರಿಂದ, ಆದ್ದ ಏಂಮದೇನಾದರೂ ಅಕ್ಷೇಪಣೆಗಳಿದ್ದ ಸದ್ರಿ ದಿನ ವಜಹ್ಯಾರು ಕೋರ್ಟಿಗೆ ಮುಂದೆ ಪೀವು ಹಾಜರಾಗಿ ಉದಹರಿಸಿಕೊಳ್ಳಬೇಕಾಗಿದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವುದು. ಎಂಕ ಈ ಮೂಲಕ ತಿಳಿಸಲಾಗಿದೆ.

(Sd) B. Ishwara Bhat
Advocate, Puttur.

ಪುತ್ತೂರು, 6-10-69.

READ & ADVERTISE IN NAVAYUGA WEEKLY

ಪುಸ್ತಕ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸು ತಿರುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳಿಸಿಕೊಡಬೇಕಾಗಿ ವಿನಂತಿ.

ಸಂ: ಶ.

ದುರ್ಗಾದಂಡಕಂ :

ಲೇಖಕರು: ಶ್ರೀ ಸೊಡಂಕೂರು ತಿರುಮಲೇಶ್ವರ ಭಟ್ಟ. ಪ್ರಕಾಶಕರು: ಕವಿ ರಾಜ ಪಿ. ವಿ. ನಾಯಕ್, ಆನಂದ ಪುರಾತನ, ಮಂಗಳೂರು-೧. ಪುಟಗಳು : ೨೦. ಬೆಲೆ: ರೂ. ೦-೫೦.

ವಿದ್ವಾನ್ ಶ್ರೀ ತಿರುಮಲೇಶ್ವರ ಭಟ್ಟರು ಇತ್ತೀಚೆಗೆ ಶ್ರೀ ದುರ್ಗಾಪರಮೇಶ್ವರಿಯ ಪುಣ್ಯನಾಮ ಸ್ತುತಿಯನ್ನು ದಂಡಕ ರೂಪದಲ್ಲಿ ಬಿತ್ತರಿಸಿ ಭಜಕಮಂಡಲಿಗೆ ಕಾಣಿಕೆ ಇತ್ತಿದ್ದಾರೆ. ದಂಡಕ ಧುರದಲ್ಲಿ ಶಂಕೃತಧಾರೆಯಲ್ಲಿ ಹಲವು ಸ್ತುತಿಗಳನ್ನು ಶ್ರೇಷ್ಠ ಕವಿಗಳೂ ರಚಿಸಿದ್ದರು. ಕನ್ನಡದಲ್ಲಿ ಇಂತಹ ಪ್ರಯೋಗಗಳು ನಡೆದಿಲ್ಲವೆಂದೇ ಹೇಳಬಹುದು. ಶ್ರೀ ಭಟ್ಟರ ಕೃತಿ ಸಂಪೂರ್ಣ ಸಫಲವಾಗಿದೆ.

ಛಂದಸ್ಸು ಬಂಧ, ಪದವಿನ್ಯಾಸ, ಶಬ್ದಗಳಿಂದ ಶಂಗೊಳಿಸುವ ದುರ್ಗಾದಂಡಕದ ಉಪಯೋಗವನ್ನು ದುರ್ಗಾಪರಮೇಶ್ವರಿಯ ಭಕ್ತರು, ವ್ಯಾವಹಾರಿಕವಾಗಿ ಮಾಡಿಕೊಳ್ಳಬೇಕು.

ಚಾಟಿ—ಚುಟುಕಗಳು :

ಲೇಖಕರು: ಶ್ರೀ ಭಾಲಚಂದ್ರ ವೆಂ ಟೇಶ ಫಾಟೇಕರ. ಪ್ರಕಾಶಕರು: ಸವಿತಾ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ—೧. ಪುಟಗಳು : ೨೪. ಬೆಲೆ: ರೂ. ೦—೫೦.

ಇತ್ತೀಚೆಗಿನ ದಿನಗಳಲ್ಲಿ ಚುಟುಕಗಳ ಹುಟ್ಟಿನಲ್ಲಿ ಸಮೃದ್ಧ, ಸಮೃದ್ಧವಾಗಿ ರಾಜಕೀಯರಂಗದ ಲೋಪ ದೋಷಗಳನ್ನು ಎತ್ತಿತೋರಿಸುವ ಪರಿಪಾಟ ಇಂದಿದೆ. ನಾಲ್ಕು ಚರಣಗಳಿಂದ ಒಂದ ಚಟುವಟಿಕೆಯ ಚಾಟಿಯೇಟು ಬಹಳ ರುಚಿಕರವಾಗಿರುವುದೂ ಉಂಟು. ಶ್ರೀ ದಿನಕರ ದೇಸಾಯರ ಚುಟುಕದಲ್ಲಿ ಬಲ ಯೂರಿನೆ ನೋಡಿಲ್ಲಿ?

ದೇಶಸೇವೆಯಲ್ಲಿ ನಿರತರಾದ ಶ್ರೀ ಭಾಲಚಂದ್ರ ವೆಂಕಟೇಶ ಫಾಟೇಕರರು ಇಂಥ ಹೊಲಸು ರಾಜಕೀಯದಿಂದ ಮನನೊಂದು ತಮ್ಮ ಶಬ್ದ ಚಾಟಿ ಪ್ರಯೋಗವನ್ನಿಲ್ಲಿ ಮಾಡಿದ್ದಾರೆ.

"ಎಡಗಿ ಬಿಟ್ಟವ್ವ ದೇ. ಧ. ಗಳ
ಮನೆಯ ರಾಟೆ
ಪಾನಬಂದಿಗೆ ಹಾಕಿದರು ಏಟು ಚಾಟೆ
ಸತ್ಯಸ್ವಾರ್ಥತ್ಯಾಗ ಅದವ್ವ ಲಯಂತಿ
ಬಜೆಗಾಗಿ ಉಳಿಸಿದರು
ಗಾಂಧೀ ಜಯಂತಿ."

ಗಾಂಧಿ ಶತಮಾನೋತ್ಸವ-ಜಯಂತಿಗಳನ್ನು ಆಚರಿಸುತ್ತಿರುವ ವಾತಾವರಣ ಎಷ್ಟೊಂದು ಹೊಲಸು! ಹೃದಯದ ವೇದನೆಯನ್ನು ಅರ್ಥವಿಸಿಕೊಳ್ಳುವ, ಅದನ್ನು ದೂರಮಾಡುವ ಸಹೃದಯತೆಮೂಡಿಸುವಲ್ಲಿ ಈ ಚುಟುಕಗಳು ನೆರವಾದಾವೆ?

ಕಂಗು ತೆಂಗುಗಳ ಕೃಷಿ

ಲೇಖಕರು, ಪ್ರಕಾಶಕರು: ಶ್ರೀ ದೇಲಂ ಪಾಡಿ ಮುಹಾಲಿಂಗೇಶ್ವರ ಭಟ್ಟ; ಪೋ ಸ್ಟ್: ದೇಲಂಪಾಡಿ [ಕೇರಳ]. ಪುಟಗಳು: ೫೮. ಬೆಲೆ: ರೂ. ೧-೫೫

ಕೃಷಿಕ ರಂಗದಲ್ಲಿ ರಾಜ್ಯ ನಡೆಯುವ ವರೆಗೆ ದೃಷ್ಟಿ ಇತ್ತೀಗ ಹರಿಯ ತೊಡಗಿದೆ. ಕೃಷಿಕೋ ನಾಸ್ತಿ ದುರ್ಭಿಕ್ಷಂ ಎಂದು ನಮ್ಮ ಹಿರಿಯರು ಕೃಷಿಕರ ಸಂದನ್ನತೆಯನ್ನು ಎತ್ತಿಹೇಳಿದ್ದರು. ಆದರೆ, ಕೃಷಿ ವಿಧಾನದ ಪರಿಜ್ಞಾನ ತಿಳಿಸುವುದಾಗಲಿ, ಅಂಗಳದಿಂದ ಕೃಷಿಯೊಂದು ಅನ್ನ-ತಾಪ್ಪಿ ಪಕ್ಷ ವ್ಯಕ್ತಿಯೆಂಬ ದಿಕ್ಕಾರವೆಗೆ ಜನ ಮನ ಗುರಿಯಾಯಿತು.

ಕೃಷಿಯನ್ನೂ ಕುರಿಯೂದ ರೀತಿಯಲ್ಲಿ ವೈಜ್ಞಾನಿಕವಾಗಿ ಮಾಡುವ ಬಗ್ಗೆ ಜನತಾ ಭಿಂಚಿ ಹೆಚ್ಚಬೇಕಾಗಿದೆ. ನಮ್ಮ ದೈನಂದಿನ ಈ ವಿಧಾನ ತಿಳಿಸಬೇಕು. ಶ್ರೀ ಮಹಾಲಿಂಗೇಶ್ವರ ಭಟ್ಟರ ಗ್ರಂಥ ತೆಂಗು ಮತ್ತು ಕಂಗು ಬೆಳೆಸುವ ಶಾಸ್ತ್ರೀಯವಾಗಿ ಹೇಗೆ ಮಾಡಬಹುದೆಂದು ಸವಿವರವಾಗಿ ತಿಳಿಸುತ್ತದೆ. ಬೀಜ ತಯಾರಿಸುವುದರಿಂದ ತೊಡಗಿ ತೆಂಗು ಕಂಗುಗಳ ಕೊಟ್ಟೆಬೆಟ್ಟಿಸಿ ಅವನ್ನು ಸುರಕ್ಷಿತವಾಗಿಡುವುದನ್ನೂ ತೋಟಕ್ಕೆ ತಗಲುವ ರೋಗಗಳು ಮತ್ತವುಗಳ ನಿವಾರಣೋಪಾಯಗಳನ್ನು ಇಲ್ಲಿ ವಿವರಿಸಲಾಗಿದೆ. ತಮ್ಮ ತೋಟಗಾರಿಕೆಯಲ್ಲಿನ್ನೂ ಅನಾಧಜ್ಞಾನವನ್ನು ಇತರರಿಗೂ ಹಂಚುವ ಉದಾರ ಮನೋಭಾವದ ಉದ್ದೇಶ ಸಫಲವಾಗಿದೆ. ತೋಟಗಾರ ಕನ್ನಡಿಗರು ಈ ಪುಸ್ತಕದಿಂದ ಕಲಿತುಕೊಳ್ಳಬೇಕಾದ ಸಂಗತಿಗಳು ಅನೇಕವಿವೆ. ಇದರ ಸಂಪೂರ್ಣ ಪ್ರಯೋಜನವನ್ನವರು ಪಡೆದುಕೊಳ್ಳಬೇಕು.

—ಗೋರಾ.

ಸ್ವಾಭಿಮಾನದ ದೀಪ ಉರಿಯಲಿ

(ಎರಡನೇ ಪುಟದಿಂದ)

ಳ ಸರಕಾರ ಅವರ ಮಾತನ್ನು ಕೇಳಲಿಲ್ಲ. ಅಷ್ಟೇ ಅಲ್ಲ, ಅದೇ ಸಮಯದಲ್ಲಿ ಒಂದು ಮಹಾಮೇವನ ಮಂದಿರವನ್ನು ಮಾಡ್ದಾಪಾಲು ಮಾಡಲಾಯಿತು. ಅದನ್ನು ವಿಚಾರಿಸುವವರ್ಯಾರು? ಶಬರಿಮಲೆಯಲ್ಲಿರುವ ಅಯ್ಯಪ್ಪಸ್ವಾಮಿಯು ದೇವಸ್ಥಾನವನ್ನು ಧ್ವಂಸಮಾಡಿದಾಗ 'ಅಯ್ಯೋ' ಅಂದವರ್ಯಾರ? ವಿವೇಕಾನಂದ ಶಿಲೆಯ ಮೇಲೆ ಸ್ಮಾರಕ ನಿರ್ಮಾಣಕ್ಕೆ ರಾಷ್ಟ್ರಾಭಿಮಾನಿಗಳು ಮುಂದೆ ಬಂದಾಗ ಅದಕ್ಕೆ ದುರಿ ಒಂದವರಿಗೆನೇ ಆ ಧನ ದ್ಯಾನು ಸರಕಾರ ಹಾಗೂ ದಿಲ್ಲಿ ನಿಯಂತ್ರಣಾಧಿಕಾರಿಗಳು ಬೆಂಬಲ ಕೊಟ್ಟಿರಲ್ಲದೆ, ವಿವೇಕದಿಂದ ವರ್ತಿಸಲು ಅಡೆಪ್ಪ ಪ್ರಯತ್ನ ನಡೆಯಬೇಕಾಯಿತು! ತಮಿಳ್ನಾಡಿನಲ್ಲಿ ದೇವಸ್ಥಾನಗಳನ್ನು ಧ್ವಂಸವಾಡಲು ದ್ರಾವಿಡ ಮುನ್ನೇತ್ರ ಕಳ್ಳಗಂ ಧಾಮಿಯಾಗ ಆಡ್ಡಬಂದಿಲ್ಲಾರು?

ಗೋಪೂಜೆ ಇಲ್ಲದ ದೀಪಾವಳಿ ಇದೆಯೇ? ಗೋರೂಜೆ ಪಡೆಯುವಲ್ಲಿ ಇಂದೇನು ನಡೆಯುತ್ತಿದೆ? ಗೋವನಧೆಗೆ ಪಡೆ ಇದೆಯೇ?

ಹಿಂದೂಸ್ಥಾನದಲ್ಲಿ ಇಲ್ಲಿಲ್ಲ ನಡೆಸುವಾಗ ಸೆಕ್ಯೂಲರಿಸ್ಟ್ ವಾದಿ, ಪರಮತ ಸಹಿಷ್ಣು, ಸಂಪ್ರದಾಯ ಸಹಿಷ್ಣುವೆಂದು ಸರಕಾರ ವಹಿಸಿಕೊಂಡಿರುತ್ತದೆ. ಈ ಸಹಿಷ್ಣುತೆಯಿಲ್ಲದೆ ಬೇರೆಷ್ಟೇನಿದೆ ಎಂಬುದಕ್ಕೆ ಪ್ರಸ್ತುತ ಮರುಗುವುದು ಮಹದಾಶ್ಚರ್ಯವೇ ಸರಿ. ಇಸ್ರೇಲಿನ ದಬ್ಬಾಳಿಕೆಯನ್ನು ಖಂಡಿಸಲು ಬಲಾತ್ಕಾರ ಸಭೆ-ಮೆರವಣಿಗೆಗಳನ್ನು ನಡೆಸಿದ ಇಲ್ಲಿಯ ಮಹಮ್ಮದೀಯರು ಇಲ್ಲಿ ಈ ರೀತಿ ಮಾಡುತ್ತಿದ್ದರೆಯೇ ಪಾಕಿಸ್ತಾನವೇ ಸರಿ—ಎನ್ನಲಿಲ್ಲ. ಅವರಿಗೆ ಹಾಗಲ್ಲ, ಭಾರತ ಭೂಪಾಗಭೂಮಿ ಇದೆ. ಪಕ್ಕಾ ಪವಿತ್ರ ಧಾರ್ಮಿಕ ಸ್ಥಳವಿದೆ. ಹಾಗಿರುವಾಗ ಅವರು ಇಲ್ಲಿಯವರ ಪವಿತ್ರ ಮಂದಿರಗಳನ್ನು ಮಸೀದಿಗಳನ್ನಾಗಿ ಪರಿವರ್ತಿಸುವ ದರಲ್ಲೇನಿದೆ ಆಶ್ಚರ್ಯವಿಲ್ಲ.

ಭಾರತೀಯರು ರಾಷ್ಟ್ರೀಯ ಸ್ವಾಭಿಮಾನದ ದೀಪ ಆರಿ ಹೋಗ ಕೃತಿದೆ. ಆದ್ದರಿಂದಲೇ ಇಲ್ಲಿ ಇದೆಲ್ಲಾದರೂ ಉರಿಯುವುದನ್ನು ಕಂಡೊಡನೆ ದಿಲ್ಲಿ ದೊರೆಗಳು ಅದನ್ನು ಪ್ರಗತಿವಿರೋಧಿ ಲಕ್ಷಣವೆಂದು ಜರೆದು ಅದನ್ನು ಆರಿಸಲು ಮುಂದಾಗುತ್ತಿದ್ದಾರೆ. ಅವರು ದೀಪದ ಬತ್ತಿಗೆ ಹಿಡಿದಿರುವ ಮಸಿಯನ್ನು ತೆಗೆಯುವ ಆಲೋಚನೆಯನ್ನೂ ಇಲ್ಲವಾಗಿದ್ದರೂ ಅವರಲ್ಲಿ ಸ್ವಾಭಿಮಾನದ ದೀಪ ಉರಿಸಲು; ಅವರು ರಾಜಕೀಯ ಅಂಧಕಾರದಿಂದ ರಾಷ್ಟ್ರೀಯತೆಯ ಬೆಳಕಿನತ್ತ ಬರಬೇಕೆಂಬುದೇ ಆಶಯ.

ಆದರಲ್ಲೂ ಈ ವರ್ಷ ಗಾಂಧೀಜಿ ಜನ್ಮಶತಮಾನೋತ್ಸವವನ್ನಾಚರಿಸುವ ವರ್ಷವಿದೆ. ದ್ವಿತೀಯ ಮಹಾಯುದ್ಧದ ಸಮಯದು ಶ್ರೀ ವೇಣಿಹನದಾಸ ಕರಂಚಂದ ಗಾಂಧೀಜೀಯವರು ಹಿಟ್ಲರನಿಗೆ ಬುದ್ಧಿ ಹೇಳಿದರು. ಅದಕ್ಕೆ ಅವನಿತ್ತ ಉತ್ತರ—ಗಂಲಾಮಿ ರಾಷ್ಟ್ರವು ಸ್ವತಂತ್ರ ರಾಷ್ಟ್ರಕ್ಕೆ ಬುದ್ಧಿ ಹೇಳಲು ಯೋಗ್ಯವಿರುವ ವಿಲ್ಲ ನಾವೀಗ ಇಸ್ರೇಲಿಗೆ ಬುದ್ಧಿ ಹೇಳಲು, ತೆಗಳಲು ಹೊರಟಿದ್ದೇವೆ—ನಮ್ಮ ಪವಿತ್ರ ಮಂದಿರ, ಯಾತ್ರಾಸ್ಥಳ, ಗೌರಿಬಿಂದ ಗಳನ್ನು ಅಕ್ರಮಾಯಿಗಳಿಂದ ಹಾಳುಮಾಡಲು. ಅಪವಿತ್ರಗೊಳಿಸಲು ಬಿಟ್ಟು ಕೊಟ್ಟು, ಸಂಯುಕ್ತ ರಾಷ್ಟ್ರಸಂಘದ ನೂತನೆನೇ ಕಿವಿಗೊಡನ ಇಸ್ರೇಲ್, ಇಂತಹ ಅಲಹೀನ ಸ್ಥಿತಿಯಲ್ಲಿ ಪವಿತ್ರ ಮಾತನ್ನು ಕೇಳುವದುಂಟೇ? ಇಸ್ರೇಲ್ ನಮ್ಮ ಮಾತನ್ನು ಯಾವಾಗ ಕೇಳೀತು?—ನಮ್ಮಲ್ಲಿ ರಾಷ್ಟ್ರೀಯತೆಯ ಸ್ವಾಭಿಮಾನದ ದೀಪ ಉರಿಯುತ್ತಿದ್ದಲ್ಲಿ ಮಾತ್ರ. ಇಂದೊಮ್ಮು ಪ್ರಪಾತವ ರಾಷ್ಟ್ರವೆಂಬುದನ್ನು ಛಾಪ್ತ ವರೆಯುದೆ ಗೌರವದಿಂದ, ಅಭಿಮಾನದಿಂದ, ಶ್ರದ್ಧೆಯಿಂದ, ಉತ್ಸಾಹದಿಂದ, ಧೈರ್ಯದಿಂದ,ಸ್ವಗೌರವದಿಂದ ಒಕ್ಕಟ್ಟಿನ ದಾರಿಯಲ್ಲಿ ನೋಡಿಕೆಸ್ಟುಸ್ಟಾಗ ತಾನಾಗಿಯೇ ಅದು ಶತ್ರು ಮಾತಿಗೆ ಕಿವಿಗೊಟ್ಟೀತು.

ಉಯ್.ಲಿ, ಬೆಳಗಲಿ, ಸ್ವಾಭಿಮಾನದ ದೀಪ.

(ಮಗಿಯಿತು)

ಮಗುವಿನೊಂದಿಗೆ....!

೧

ಕಾರಿರುಳ ಕತ್ತಲೆಯು ಕವಿದೊಗೆದು
ಮಾಡಿರುವ
ಕೋಟಿಕಿರಣದ ತೇಜೋಮೂರ್ತಿ ದಿನಕರನ|
ಆದಿ ಬ್ರಹ್ಮನ ಸೃಷ್ಟಿ! ಕಾಲಾಭೂದ ಶಾಸ್ತ್ರಿಯು ಸೆರಿ ಉದಿಸಿದ ಪೆದೀವ ವಮನಸಮೇ

೨

ಜನ್ಮತೆರೆಗಳ ಸಾಗಿ ಕಾಲಪ್ರಗೆ ಶಿರಬಾಗಿ
ಪಮ್ಮನನು ಪಾತಾಗಿ ಜನಿಸಿದೆ ಕಂದ
ಜೊನ್ನವಮಳೆ ಕರೆಸಿದೆ! ಹಾರ್ದಿನು ಪರಿಸಿದೆ|
ಇಳೆಯನ್ನೆ ನಲಿಸಿದೆ! ಸಗ್ಗದಾನಂದ|

೩

ಪುಧುರ ಮುದ್ದಿಗೆ ಹೂಪ ತೆರದಿ ನಿನ್ನಯ ಭಾವ
ವಿರತಿಯೊಗದ ನಡಕೆ ಪರಶುದ್ಧ ಚಿನ್ನ
ಜೀವನದ ನಸುಕಿನಲಿ ಎದ್ದೆತ್ತ ನೋಡಿಸಿತೆ
ವಿಶ್ವರೂಪದ ಸೃಷ್ಟಿ "ಬೇಕು ಬನ್ನ" !

೪

ಕವಿಯನಾದದೂ ಹಿರಿಯ ಭವಿತವ್ಯ
ಕಾದಿಹುದು
ಹುಡುರು ಲೋಕಕೂ ಕೇರ್ತಿ ದೀರು ಕುಲ
ಜ್ಯೋತಿ|
ಆಯುದಾರೋಗ್ಯವನು ಹರಸಿ ಜಗದೀಶ
"ಬಾಳ ತೊಟ್ಟಿಲ-ತೂಗುತಿರಲಾದಿಶಕ್ತಿ

"ದೇವಕೀನಂದನ" ವಿಜ್ಞಾನ

೦ ೦ ೦

ನಮ್ಮ ಬೇಕುಗಳನ್ನು ಅರ್ಥಾತ್ ಅಕೆಗಳನ್ನು ಹೆಚ್ಚಿಸಿಕೊಳ್ಳಲು ಬದ್ಧರೂಪಕವಾಗಿ ಮತ್ತು ಸ್ವಕಂತೋಷದಿಂದ ಆವುಗಳನ್ನು ಕಡಿಮೆ ಮಾಡಿಕೊಳ್ಳುವದಕ್ಕಿಂತಲೂ ಸಿಜವಾದ ನಾಗರಿಕತೆ ಅಡಗಿದೆ.

೦ ೧ ೦



NAVAYUGA 9—10—1969
Registered with the Registrar of News Papers for India under No. R. N. 3546/'67

RgGD. No. B. G: 176
LICENCE No. 33
Licensed to Post without Prepayment

ಗಾಂಧೀ ಜನ್ಮ ಶತಾಬ್ದಿ:

ವಿಶ್ವಶಾಂತಿ ಮತ್ತು ಗಾಂಧಿ

ಲೇಖಕರು:
ಡಾ| ಅಲ್ಬರ್ಟ್ ಐಯಿನ್‌ಸ್ಟೀನ್

ಮಾನವ ಜಾತಿಗೆ ಉಜ್ವಲ ಭವಿಷ್ಯ ವಿರಬೆಯೆಂದು ನಂಬಿದವರಿಗೆ ಮಹಾತ್ಮಾ ಗಾಂಧಿಯವರ ದಃಖದ ವ್ಯತ್ಯಯವಿಲ್ಲದ ಕುಂಬ ದುಃಖವಾಗಿರಬಹುದು. ಮಹಾತ್ಮರು ತಮ್ಮ ಜೀವನ ಸಿದ್ಧಾಂತ ವಿರೋಧಿ ಅಹಿಂಸೆಗೇ ಗುರಿಯಾದರು. ದೇಶದಲ್ಲಿ ಅವ್ಯವಸ್ಥೆ ಮತ್ತು ಉಚ್ಛಾತಗಳು ನಡೆಯುತಿದ್ದಾಗ, ತಮ್ಮ ದೇಹಕ್ಕೆ ಸೈನಿಕ ರಕ್ಷಣೆ ಸ್ವೀಕರಿಸಲು ನಿರಾಕರಿಸಿದ್ದರಿಂದ ಅವರ ಕೊಲೆಯಾಗುವುದು ಸುಲಭವಾಯಿತು. ಶಕ್ತಿಯ ಪ್ರಯೋಗವು ಕೆಟ್ಟ ದುಃ ಪೂರ್ಣ ನ್ಯಾಯ.ಕ್ಕಾಗಿ ಹೋರಾಡುವವರು ಶಕ್ತಿಪ್ರಯೋಗವನ್ನು ನಿರಾಕರಿಸಲೇ ಬೇಕು ಎಂಬುದರಲ್ಲಿ ಗಾಂಧಿಗೆ ದೃಢವಿಶ್ವಾಸವಿತ್ತು.

ಇದಕ್ಕಾಗಿಯೇ ಗಾಂಧಿ ತಮ್ಮ ಜೀವ ಭವವನ್ನು ಸಮರ್ಪಿಸಿದರು, ತಮ್ಮ ಹೃದಯ ಮತ್ತು ಬುದ್ಧಿಗಳಲ್ಲಿ ಇದೇ ವಿಶ್ವಾಸವನ್ನು ಒಲವಾಗಿ ನಿಟ್ಟು ಬ್ರಹ್ಮ ದೇಶವೊಂದಕ್ಕೆ ಸ್ವಾತಂತ್ರ್ಯ ತಂದರು. ರಾಜ್ಯಕೀಯ ಕುಟಿಲತೆ ಮತ್ತು ಪ್ರವಂಚನೆಯಿಂದ ಜನತೆಯ ಒಲವುಗಳಿಸುವುದು ಅಸಾಧ್ಯವೆಂದೂ ನೈತಿಕ ಜೀವನಾದರ್ಶಗಳ ಮಂಡಲಕ್ಕೆ ಅವನ್ನು ಹೊಂದುವುದು ಸಾಧ್ಯವೆಂದೂ ಅವರು ತಮ್ಮ ಜೀವನದ ಪೂರಾಲಕ ಲೋಕಕ್ಕೆ ತೋರಿಸಿಕೊಟ್ಟರು.

ಇಂದು ವಿಶಾಲ ಜನತ್ರಿಯಲ್ಲಿ ಗಾಂಧಿಗೆ ಗೌರವ ಸಲ್ಲುತ್ತಿದೆ. ಇದಕ್ಕೇನು ಕಾರಣವಿರಬಹುದು? ನೈತಿಕ ಆಪತ್ಸಾಲ್ಯ ಮತ್ತು ಪತನಗಳ ಇಂದಿನ ದಿನಗಳಲ್ಲಿ ರಾಜ್ಯಕೀಯರು ಕ್ಷೇತ್ರದಲ್ಲಿ ಮಾನವೀ ಸಂಘರ್ಷಗಳ ಮೂಲ್ಯವನ್ನು ಎತ್ತಿ ಹಿಡಿದ ಏಕೈಕ ರಾಜ್ಯಕೀಯರು ಹರಿಪರು ಅವರು. ರಾಜ್ಯನೀತಿಯಲ್ಲೂ ಇತರಿಡೆಯಂತೆ ಶಕ್ತಿಪ್ರದರ್ಶನದ ಸ್ಥಾನವನ್ನು ಕಾನೂನು ಮತ್ತು ನ್ಯಾಯಗಳಿಗೆ ಮಾರ್ಗವಾಗಿ ನಮ್ಮ ಆಚರಣೆಯು ಕಾರ್ಯರೂಪಕ್ಕೆ ಬಂದಾಗಲೇ ಮಾನವ ಜಾತಿಯ ಭವಿಷ್ಯ ಸಹನೀಯವಾಗುವುದೆಂಬ ಕರಿನ ಪುರಿತವನ್ನು ನಾವು ಕಲಿಸುಬೇಕು.

ಗಾಂಧಿ ನಮ್ಮ ಕಾಲದ ಮಹಾವೈಗ್ಞಕರೂಪಿ ರಾಜ್ಯನೀತಿ ಪ್ರತಿಭೆಯಾಗಿದ್ದರು. ನೇರ ದಾರಿಯನ್ನು ಅವರು ತೋರಿಸಿದ್ದರು. ನೇರದಾರಿಯಲ್ಲಿ ಮುನ್ನಡೆದಂತೆ ಮಾನವ ಅದಕ್ಕಾಗಿ ಇಡೀಭೂ ಶಕ್ತಿಗಳನ್ನೂ ಕೂಡಬಲ್ಲನೆಂಬುದಕ್ಕೆ ಅವರೇ ಸಾಕ್ಷಿ ಪುರುಷರಾಗಿದ್ದರು. ಭಾರತದಂತಹ ಸುವಿಶಾಲ ದೇಶವೊಂದಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುವುದರ ಮೂಲಕ ಮಹಾತ್ಮರು ಮನುಷ್ಯನ ಇಚ್ಛಾಶಕ್ತಿಯು ದೃಢ ಆಸ್ಥೆಯಿಂದ ಕೂಡಿದಾಗ ಸಾಮಾನ್ಯವಾಗಿ ಅಜೇಯವೆಂದು ಭಾವಿಸಿದ ಭೌತಿಕ ಶಕ್ತಿಗಳನ್ನೂ ಪರಾಜಯಗೊಳಿಸಬಲ್ಲುದೆಂಬುದನ್ನು ಪ್ರಜ್ಞೇವಾಗಿ ಪ್ರಮಾಣೀಕರಿಸಿದರು.

ಗಾಂಧೀ ವಿಷಯದಲ್ಲಿ ನನ್ನ ವಿಶ್ವಾಸವಿದು: "ನಮ್ಮ ಸಮುದಾಯದ ಎಲ್ಲ ರಾಜ್ಯನೇತಾರರಲ್ಲಿ ಅವರ ವಿಚಾರಗಳು ಅತ್ಯಂತ ಪ್ರಬುದ್ಧ' ನಾವು ಅವರ ಭಾವನೆಯನ್ನು ಅರ್ಥವಿಸಿಕೊಂಡು ಕಾರ್ಯಪ್ರವೃತ್ತರಾಗಬೇಕು. ಆಂತರಿ, ಯಾವುದೇ ಕಾರಣಕ್ಕಾಗಿ ಹೋರಾಡುವಾಗ ಹಿಂಸೆಗೆ ಅವಕಾಶ ನೀಡದಿರದು. ನವಿಗೆ ಕೆಟ್ಟದೆಂದು ತೋರುವ ಸಂದರ್ಭಗಳಲ್ಲಿ ನಾವು ತಲೆಹಾಕಲೇ ಬಾರದು.

ಮಹಾತ್ಮರು ಹಿಂಸಾರಹಿತ ಕ್ರಾಂತಿಯನ್ನು ನಡೆಸಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ಗಾಂಧಿ ಉಪಾಧ್ಯಾಯ ಪ್ರೇ ಬ್ರಹತ್ವ್ಯಾಮೂಣದಲ್ಲಿ ಕಾರ್ಯಾಚರಣೆ ನೊಳಿಸಿದರೆ, ವಿಶ್ವಕ್ಕೆ ಸ್ಥಾಯಿ ಶಾಂತಿಯನ್ನು ತಂದ ಕೊಡುವ ಸವಸ್ಯೆ ಬಗೆಹರಿಯುವುದೆಂದು ಫಲಗೆ ಭಂಬಲಿಯಿದೆ.

ನಾವು ಜೀವನದಲ್ಲಿ ಶಾಂತಿವಾದಿ. ಆದುದರಿಂದು ನಮ್ಮ ಸಮಯದಲ್ಲಿ ವಾಸ್ತವಿಕ ಮಹಾರಾಜ್ಯ ನೇತಾರರಿಗಿರುವ ಅರ್ಹತೆಯುಳ್ಳವರೆಂದರೆ ಗಾಂಧಿ ಮಾತ್ರ ಎಂದು ಒಪ್ಪುತ್ತೇನೆ.

ಥೋರೋ ಏನು ಬರೆದಿದ್ದಾನೋ ನಾನು ಓದಲಿಲ್ಲ. ಆವನ ಜೀವನೇತಿಹಾಸವೇನೋ ನಾನರಿಯೆನು. ಸ್ವತಂತ್ರ ನೈತಿಕ ವಿಚಾರಗಳಿಂದ ಓತಪ್ರೋತರಾದ ಆಂಥವರು ಯಾವಾಗಲೂ ಹುಟ್ಟುತ್ತಿರುತ್ತಾರೆ, ಇಂದಿಗೂ ಆಂಥವರಿದ್ದಾರೆ, ಕಾನೂನಿನ ರಕ್ಷಣೆಗೊಳಗಾದ ಅನ್ಯಾಯುಗಳನ್ನು ವಿರೋಧಿಸುವುದು ತಮ್ಮ ಕರ್ತವ್ಯವೆಂದು ತಿಳಿಯುವ ಈ ಬಗೆಯ ಜನರು ವಿರಳರು. ಗಾಂಧೀ ವಿಚಾರಧಾರೆಯ ನೇರಳೆ ಥೋರೋವಿನ ಪ್ರಭಾವ ಹುಟ್ಟು ಬಿದ್ದಿರಬಹುದು. ಆದರೆ, ಗಾಂಧೀವಿಶಾಲತೆಗೆ ವಿಶಿಷ್ಟ ಪರಿಸ್ಥಿತಿಗಳೊಂದಿಗೆ ವಿಲಕ್ಷಣ ಬೌದ್ಧಿಕ ವಕ್ತ ನೈತಿಕ ಒತ್ತಡವೂ ಕಾರಣವಾಗಿದೆ ನೆಂಬ ದನ್ನು ಮರೆಯುವುದು ಸಾಧ್ಯವಿಲ್ಲ. ಥೋರೋ ಮತ್ತು ಟಾಲ್‌ಸ್ಟಾಯ್‌ಯವರು ಇದ್ದಿರಲಿಲ್ಲವಾದರೂ ಗಾಂಧಿ ಗಾಂಧಿರೂಪಿಯೇ! ತೀರ ತಿದ್ದಿರಿಂದು ಫನ್ನ ಅಚಲ ವಿಶ್ವಾಸ.

ಗಾಂಧಿಯಂತಹ ರಕ್ತ-ಮಾಂಸಗಳಿಂದ ಕೂಡಿದ ವ್ಯಕ್ತಿಯೊಬ್ಬ ಈ ಜಗತ್ತಿನಲ್ಲಿ ಜೀವಿಸಿಕೊಂಡಿದ್ದನೆಂಬ ಐತಿಹಾಸಿಕ ಸತ್ಯವನ್ನೂ ಮುಂದಿನ ಪೀಳಿಗೆಯವರು ನಂಬುವುದೂ ಪ್ರಾಯಃ ಕಷ್ಟವಾಗಬಹುದು.

ಸತ್ಯ ಧರ್ಮಗಳ ವಿಕೃತ ರೂಪಗಳು

(ಹಿಂದಣ ಸಂಚಿಕೆಯಿಂದ)

ಯಿಸ್ಕಲಾಂದು, ಗೆದ್ದವಂದ್ದ ಈಗ ಸತ್ಯವೆನ್ನೀತೇ; ಧರ್ಮವೆನ್ನಿಸೀತೆ; ಆದರೆ, ನಿಂದಾಸ್ತುತಿಪ್ರಭೇದಿಸವರು ಇಳಿಸುಲೇದೇ ಕಾಗಿ ಬರುವ ದಿನವೊಂದು ಬಂದೇ ತೀರುವುದು. ಆದು ವರೆಗೆದ್ದ ಸತ್ಯ—ಧರ್ಮ ಅಗ ಅಸತ್ಯ-ಅಧರ್ಮವಾಗುವುದು.

ಸತ್ಯ ಮತ್ತು ಧರ್ಮಗಳು ಬದಲಾಗದೆ ಯೂ ಬದಲಾಯಿಸೇಕಾದರೆ, ಅವುಗಳ ರೂಪವಿಶೇಷವಾಗಬೇಕು. ವಿಕೃತ ಸತ್ಯವನ್ನು ವಿಕೃತಧರ್ಮವನ್ನು ಪ್ರಕೃತ ಸತ್ಯವೆಂದು ಪ್ರಕೃತಧರ್ಮವೆಂದು ಭ್ರಮಿಸಿದಷ್ಟು ಸಮಯದು ನಾವು ಶಾಂತ ಸಾಗರದಲ್ಲಿ ಮುಳುಗುತ್ತೇನೆಯೇ ಹೊರತು ಗೌರವಾಂತರವನ್ನು ಏರುವುದಿಲ್ಲ. ನಮ್ಮ ಇಂದಿನ ಕಥೆಯನ್ನು ವೀಕ್ಷಿಸುವಾಗ—

ಸರಕಾರ ಹಂಗಿನೋಲು
ಶಿರಿಮುಳಿಗಳತ್ತಿತ್ತ
ಸೆರೆ ಕುಡಿದವರು ಕೆಲವರು
ಬಸುಗಾಳಿ ಬೀಗುವುದು
ಜನಪೆದ್ದು ಕಡಿಸುವುದು
ಉರಳಿದಿಹ ದಜ್ಜಂಯೊ!
—ಮಾಂಕುತಿಮ್ಮ॥

ಎಂಬ ಡಿ. ವಿ. ಜಿ ಮಾತು ನೆನಪಿಗೆ ಬರುವುದು.

ಸುಸ್ಥಿರವಾದ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
105 ವರ್ಷಗಳಿಂದ ಹೆಬ್ಬಿರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
Phone— 5711, 5712, 5713 } 3 Lines

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸ್ವಾಗತಿಸುವ ಅತ್ಯಾಧುನಿಕ

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಸಾಫೀಯುದಲ್ಲಿ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ನ್ಯಾಯಾಲಯದ ಕಟ್ಟೆಗಿಂತ ಹೆಚ್ಚಿನ ಉನ್ನತ ಕಟ್ಟೆಯೊಂದಿದೆ. ನಮ್ಮ ಅಂತಃಸಾಕ್ಷಿಯೇ ಆ ಕಟ್ಟೆ. ಇತರ ಉಳಿದೆಲ್ಲ ನ್ಯಾಯಾಲಯಗಳ ಕಟ್ಟೆಗಳನ್ನು ಹಾಗೆ ಪರಿಗಣಿಸಿದೆ.

Edited, Printed & Published by K. H. Shetty, at the Navayuga Press, Udipi, S. India.

ನವಯುಗ

NAVAYUGA 16—10—1969 ಸಂಪುಟ 49 ಸಂಚಿಕೆ 7

ಗಾಂಧಿನಾಡು ಬೆಂಗಾಡಾಯಿತು?

ಹಿಂದೂ ನಾಗರಿಕತೆಯಷ್ಟೇ ಅಥವಾ ಪಶ್ಚಿಮದ ಹಿಂದೆ ಹುಟ್ಟಿದ ಗ್ರೀಕ್ ರೋಮನ್ ನಾಗರಿಕತೆ, ಗ್ರೀಸ್ ದೇಶದಲ್ಲಾ ಭಾರತದಲ್ಲಿಯೇ ಅನೇಕಾನೇಕ ಕತೆಗಳು ಸುತ್ತಿದ್ದವು. ಭಾರತದಲ್ಲಿ ಸತ್ಯ ಹರಿಶ್ಚಂದ್ರನ ಕತೆ ಪ್ರಸಿದ್ಧವಾದದ್ದು. ವಿಶ್ವಾಮಿತ್ರ—ವಸಿಷ್ಠ ದ್ವೇಷ ಮತ್ತು ವೈಮನಸ್ಸಿಗೆ ಭೂಪಾಲ ಹರಿಶ್ಚಂದ್ರ ಬಲಿ. ಆದರೂ ಆತ ತ್ಯಾಗ ವೀರ—ಸರ್ವಸ್ವವನ್ನೂ ಕಳೆದುಕೊಂಡು ಸತ್ಯವನ್ನು ಉಳಿಸಿಕೊಂಡ. ಕುಲ ಗುರು ವಸಿಷ್ಠನಿಂದಲೂ ಪ್ರಶಂಸೆ ಗಳಿಸಿದ.

ಒಂದು ಕಾಲದಲ್ಲಿ ಗ್ರೀಸ್ ದೇಶದ ಡಯೊಜೆನಿಸ್ ದೊರೆ ಆಳುತ್ತಿದ್ದ. ಆಳ್ವಿಕೆಯಲ್ಲಿ ಸತ್ಯವಂತರಿಂದರೂ ಇರುತ್ತಾರೇ ಎಂಬ ಜಿಜ್ಞಾಸೆ ಅತನಿಗೆ. ಪರೀಕ್ಷಾರ್ಥ ಸಂಚಾರ. ಎಲ್ಲೆಲ್ಲೂ ಅರಸಿದರೂ ಸಿಕ್ಕಲಿಲ್ಲ ಸಂತೃಪ್ತಿ. ಕೊನೆಗೂ ಹಗೆ ಹಾಗಲಲ್ಲೇ ದೀವಟಿಗೆ ಹಚ್ಚಿದ, ಸತ್ಯ ಹುಡುಕಲು ಶೋಧಕ್ಕೆ ತೊಡಗಿದ, ಪಂಜಿನ ಮಂದ ಬೆಳಕಿನಲ್ಲಿ ಬೆತ್ತಾರೆಯಿಂದ ಅರಸಿದ. ಅವಧೇಷ? ಹುಸಿಹೊಸ ಬದ ಜವಳಕ್ಕೆ ಸಿಗಲಿಲ್ಲ. ಹತಾಶನಾಗಿ ಭಗ್ನ ಮನೋರಥ ಡಯೊಜೆನಿಸ್ ಸತ್ಯಕ್ಕಾಗಿ ಜಗತ್ತಿನ ಸಂಪರ್ಕವನ್ನೇ ಬೇಡವೆಂದು ನಿರ್ಧಾರಕ್ಕೆ ಬಂದ. ಜಗತ್ತಿನಲ್ಲಿ ಸಿಗುವುದು ಹೇಗೆ? ಬಹಳಷ್ಟು ಅಲೆದಾಡಿದ, ಪೊಟ್ಟೆಯೊಂದರ ರಚನೆ ಬಾಹ್ಯಜಗತ್ತಿನ ಸಹವಾಸ ದೂರ. ಪೊಟ್ಟೆಯಲ್ಲೇ ವಾಸ ಬೆಳಗಿದ ಶೂರ.

ಅಂದು ಡಯೊಜೆನಿಸ ದೊರೆಯ ತಲೆ ಕೆಟ್ಟಿ ಮಾಡಿದ ಜಿಜ್ಞಾಸೆ ಇಂದಾರ ತಲೆಯಲ್ಲಿ ತಲೆಯೆತ್ತುತ್ತಿದೆ? ಸತ್ಯವಂತ ಎಂಬ ಈ ಜಗತ್ತಿನಲ್ಲಿ ಎಂದು ಇಲ್ಲದವರು ಎಂದು ಇದ್ದಾರೆಯೇ? ಪೆದ್ದವರದು ಸತ್ಯ; ಬುದ್ಧಿವಂತರದು ಮಿಥ್ಯವೆಂಬುದು ನಿತ್ಯ ಸತ್ಯ; ತನ್ನ ಬೆನ್ನೆಲುಬನ್ನೇ ಆಯುಧವಾಗಿಸಿ ಬಲಿ ದೇವತೆಗಳಿಗೆ ನೀಡಿದ ತ್ಯಾಗ ವೀರ ದಧೀಚಿ ಮಹರ್ಷಿ. ಮಹಾ ಪಾಪಿಯಾಡಲೆಂದೆ ನೀಡಿದ ದಾನನೀರಿನ ಬಲಿ; ಸತ್ಯನ ದೇಹವನ್ನೇ ಬದಲು ನೀಡಿದ ಶರಣಾಗತ ರಕ್ಷಕ ಶಿಬಿ; ಸತ್ಯಕ್ಕಾಗಿ ಸರ್ವಸ್ವವನ್ನೂ ಕಳೆದುಕೊಂಡ ಸತ್ಯವಾಕ್ಯ ಹರಿಶ್ಚಂದ್ರ.... ಇವರೆಲ್ಲರೂ ಬಾಳಿ ಬೆಳಗಿ ಅಮರರಾದ ಪಾವನ ಭೂಮಿ ಭಾರತದ ನೆಲ. ಇಲ್ಲಿ ಇಂದೇನು ನಡೆಯುತ್ತಿದೆ?

ಈ ಶತಮಾನದ ಪ್ರಾರ್ಧದಲ್ಲಿ ಸತ್ಯ—ತ್ಯಾಗ—ದಾನ ಪೂಜಿಸಲ್ಪಡುವ ಪವಿತ್ರ ಸದ್ಗುಣಗಳಿಗೆ ಇನ್ನೊಂದು ಹೆಸರು ಗಾಂಧಿ. ಅವರಲ್ಲಿ ಲೋಕ ಪೂಜಾರ್ಹತೆ ಇದ್ದಾಗ್ಯೂ ಎಂದಿತು; ಭಾರತೀಯ ಜನಕೋಟಿ ಬಾಸು ಎಂದಿತ; ಹಲವರು ರಾಷ್ಟ್ರ ಪಿತನೆಂದು ಕರೆದರು. ಮಾನವತೆಯ ಜೀವಂತ ಮೂರ್ತಿಯೆಂದರು. ಗಾಂಧಿ ನಾಡು ಧನ್ಯವೆಂದರು ವಿದೇಶೀಯರು. ಆದರೆ, ಗಾಂಧಿ ನಾಡವರು ಧನ್ಯರಾಗಿದ್ದಾರೆಯೆ? ಇದು ಇಂದಿಗೂ ಎಂದೆಂದಿಗೂ ಪ್ರಶ್ನಾರ್ಥಕ ಚಿಹ್ನೆಯ ಹಿಂದೆಯೆ ಇರುತ್ತದೆ.

ಗಾಂಧಿ ಭಾರತದ ಭಾಗ್ಯವಿಧಾತರೆನಿಸಿದರು. ಆವರ ಹಿಂದೆಯೇ ಭಾಗ್ಯವೂ ಅಸ್ತಮಿಸಿತೆ? ಗಾಂಧಿ ನಾಮಶೇಷವಾಯ್ತು ಭಾರತೀಯ ಜನಕೋಟಿ ನದಿಯಲ್ಲಿ ವೆರೆಯುವುದು ಮೂಢ ಹುಂಬತಿ? ಮಳೆ ನಿಂತರೆ ಮರೆ ತಾವೇ ತಾನಾಗಿ ಇಳಿಯುವಂತೆ ಗಾಂಧಿ ಮೂರ್ತ ಅದೃಶ್ಯನಾದ ಕೂಡಲೇ ಭಾರತೀಯರ ಮಾನವತೆಯಲ್ಲೂ ಲೋಪ ತಲೆದೋರಿತೆ? ಗಾಂಧಿಯು ದೇಶಕ್ಕೆ ನೀಡಿದ ಸ್ಫೂರ್ತಿ, ಉತ್ಸಾಹಗಳೆಲ್ಲ ನಾಮಾವಶೇಷವಾಯ್ತೆ?

ಇತಿಹಾಸ ಮರುಕೊಳಿಸುತ್ತದೆ ಎಂಬ ದೊಂದು ಗಾದೆ. ಶಂಡೆಯು ಮಗನಾಗಿ ಕುಟ್ಟತ್ತಾನೆಂಬುದೊಂದು ವಿಶ್ವಾಸ. ಧರ್ಮಸಾಮ್ರಾಟ ಅಶೋಕ, ದಿಗ್ವಿಜಯ ಶೀಲ ಚಂದ್ರಗುಪ್ತ, ವಿಶ್ವಮಾನವಿಕ್ಯ, ಸಾಮ್ರಾಟ ಹರ್ಷವರ್ಧನ, ದಕ್ಷಿಣಾಪಥಚಕ್ರವರ್ತಿ ಎರಡನೆಯ ಪುಲಿಕೇಶಿ, ಕಲಾರಾಧಕ ವಿಷ್ಣುವರ್ಧನ, ಯಶಸ್ವೀ ಚಾಣಕ್ಯ ವಿಜಯನಗರಾಧಿಪ ಕೃಷ್ಣದೇವರಾಯ, ವಿಶ್ವ ಸಾಮ್ರಾಜ್ಞಿ ಒಂದನೆಯ ವಿಕ್ಟೋರಿಯಾ ... ಇವರೆಲ್ಲರ ಹೆಸರು ಅಜರಾಮರ ಚಿರ ಸ್ಥಾಯಿಯಾಯಿತು ನಿಜ. ಆದರೆ, ಇವರ ನಂತರದ ರಾಜರು? ತಮ್ಮ ಪೂರ್ವಜರು ಇಟ್ಟ ಹೆಜ್ಜೆಯಲ್ಲೇ ಮುಂದುವರಿಯುವ ಪ್ರಯತ್ನ ನಡೆಸಿದರೂ ಆದರಲ್ಲಿ ಯಶಸ್ಸಿಗಳಿಸಲಿಲ್ಲ. ಇವರೆಲ್ಲರೂ ಅದ್ವಿತೀಯ ಪುನರ್ವಸು ಮಳೆಯಂತೆ ಬಾಳಿದರು; ಜನತೆಯಲ್ಲಿ ಉತ್ಸಾಹದ ನೆರೆ ಹರಿಸಿದರು, ಜನ ಭೂಮಿಯನ್ನು ತಡಿಸಿದರು; ಮುಂದೆ ಮಳೆ ನಿಂತಿತ; ನೆರೆಯಿಳಿಯಿತ; ನದಿ ಬತ್ತಿತು; ಭೂಮಿಯೊಣಗಿತು; ಬಂಜರಾಯಿತ. ಮೂಢವತೆ ಸಹಾರ ಮರುಭೂಮಿಯಾಯಿತ. ಸ್ವಾರ್ಥ ಸೂರ್ಯನ ಬಿಸಿ ಕಿರಣಗಳು ಮರೀಚಿಕೆಯನ್ನಷ್ಟೇ ತೋರಿಸತೊಡಗಿದವು.

ಭಾರತವೂ ಗಾಂಧಿ ನಂತರ ಬೆಂಗಾಡಾಯಿತೆ? ಗಾಂಧಿ ಶತಾಬ್ದಿಯ ಅಬರ ತೆಯುದ್ದ ಭಾಗವಹಿಗಳು ಬಂದ ಗಡಿನಾಡ ಗಾಂಧಿ ಯಾದು ಎನ್ನುತ್ತಾರೆ.ಅವರ ಮಾತನ್ನಾತ್ತ ಒಪ್ಪಲಾರೆವು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಾವು ಬಹಳಷ್ಟು ಪ್ರಗತಿ ಸಾಧಿಸಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲಿ ನಾವು ಮುಂದುವರಿದ್ದೇವೆ. ದೇಶಕಟ್ಟುವ ಕಾರ್ಯದಲ್ಲಿ ನವ್ಯ ನಾಯಕರೂ ನಾವೂ ದುಡಿಯುತ್ತಿದ್ದೇವೆ. ಸಮೃದ್ಧಿಯನ್ನು ನಾವು ಪಡೆಯುತ್ತೇವೆ; ಸ್ವಾವಲಂಬನೆಯನ್ನು ಸಾಧಿಸುತ್ತೇವೆ.

ನಿಜ. ನಮ್ಮ ಪ್ರಗತಿಯ ಒಂದು ವಿಶಾಲ ಮಾತ್ರವಿದು. ಚಾರಿತ್ರ್ಯ ಒಂದು ಹುಲು ಮಾತ್ರ ನಮಗೆ ಗೊತ್ತಿದೆ. ಇನ್ನೊಂದು ಆಗೋಚರ. ಭಾರತದ ನಾಯಕರಲ್ಲೂ ಜನತೆಯಲ್ಲೂ ಇಂದು ಸ್ವಾರ್ಥವೊಂದನ್ನು ಹೊರತು ಮತ್ತಾವ ಗುಣವೂ ಕಾಣಿಸಿಕೊಳ್ಳುತ್ತಿಲ್ಲವೆಂಬುತ್ತಾರೆ ಗಡಿನಾಡಗಾಂಧಿ, ತಾನು—ತನ್ನದು ಎಂಬ ಮಮಕಾರವಷ್ಟೇ ಅವರಿಗೆ ಕೇಳಿಸಿತು. ಗಾಂಧಿನಾಡನರಳ್ಳಿನ ದೋಷ ನಿವಾರಣೆಯಾಗಬೇಕು; ಅಂದಿ ಮಷಿನ್ಗಿಗೆ, ಹೃದಯಕ್ಕೆ ಹಿಡಿದ ಕೆಲಸ ದೂರವಾಗದೇ ಕು. ಈ ಮಹಾನ್ ಉದ್ದೇಶವಿಂದ ಗಡಿನಾಡ ಗಾಂಧಿ ಮೂರು ದಿನಗಳ ಉಪವಾಸವನ್ನೆ ಮಾಡಿದರು. ಹಲವಾರು ಭಾರತೀಯರೂ ಇವರನ್ನನುಕರಿಸಿ ಒಂದು ದಿನದ ಉಪವಾಸ ಮಾಡಿದರು. ವ್ಯಕ್ತಿಗತ ಉನ್ನತಿಗೆ ಧಾರ್ಮಿಕ ಜೀವನ ಅವಶ್ಯ. ಧಾರ್ಮಿಕ ಜೀವನಕ್ಕೆ ತ್ಯಾಗ ಅವಶ್ಯ. ಇಂದ್ರಿಯ ಅಸ್ಪತೆಯಷ್ಟೆ ದೂರ ಮಾಡಿ ಇಂದ್ರಿಯಜಯವನ್ನು ಬುದ್ಧಿಯ ಅಧೀನಕ್ಕೆ ತರುವುದೇ ತ್ಯಾಗ. ಇದಕ್ಕೆ ಮೂಲ ಸಾಧನ ಉಪವಾಸ.

ಗಾಂಧಿ ಉಪವಾಸ ಮಾಡುತ್ತಿದ್ದಾಗ: ನನ್ನಲ್ಲಿ ಹುಳುಕುಗಳಿರುವುದರಿಂದಲೇ ನನ್ನ ಆಪ್ತರೂ ಯಿದಳು ತಪ್ಪು ಮಾಡುತ್ತಾರೆ ಎಂದು ತನ್ನನ್ನು ಪರಿಶುದ್ಧಗೊಳಿಸುತ್ತಿದ್ದರು. ಗಾಯೇ ಅವರು ಹಲವಾರು ಬಾರಿ ಉಪವಾಸ ಮಾಡಿದ್ದರು; ಆದರೆ ಮೂಲಸಾಂಸ್ಕೃತಿಕ ಬಲ ಕಳೆದು ಕೊಂಡಿರಲಿಲ್ಲ. ದು; ಆದರೆ ಹಿಮಾಲಯದಷ್ಟು ಆತ್ಮಬಲ ಸಂಪಾದಿಸಿಕೊಂಡಿದ್ದರು. ಇಂದು ಆದೇ ಉಪವಾಸ ಪರರ ವಿರುದ್ಧ ಒತ್ತಡ ತರುವುದಕ್ಕಾಗಿ ಮತ್ತು ತನ್ನಲ್ಲಿಲ್ಲದ ಸ್ವಾರ್ಥಸಾಧನೆಗಾಗಿ ಉಪಯೋಗವಾಗುತ್ತಿದೆ; ಗಾಂಧಿನಾಡಿನಲ್ಲಿ ಗಾಂಧಿ ತತ್ವ ಗಾಳಿಗುಮ್ಮಟವಾಗುತ್ತಿದೆ.

"ಭಾರತದ ಎಲ್ಲ ರಾಜ್ಯಕೀಯ ಪಕ್ಷಗಳೂ ಗುಂಪುಗಳೂ ಒಂದೇ ಗರಿಷ್ಠ ಟ್ಯಕ್ಕೆ ಒಂಡಿದೆ. ಆದರೆ, ಅವುಗಳ ನಡವಳಿಕೆ ಸಹಕಾರವಾಗಲೀ ಪ್ರೇಮವಾಗಲಿ; ಇಲ್ಲ" ಎಂದರು ಗಡಿನಾಡ ಗಾಂಧಿ.

ಗುರಿಯೊಂದೇ. ದಾರಿ ಹಲವು. ದೇವರೊಬ್ಬನೇ ನಾಮ ಹಲವು. ದಾರಿಯೂ ಒಂದೂಂದು ಮತದವರು ಒಬ್ಬರಿನ್ನೊಬ್ಬರಿಗೆ ಸಹಕಾರ ನೀಡಿ ಪ್ರೇಮಪೂರ್ಣ ಪ್ರೀತಿಸುವುದುಂಟೇ? ಬಲಾತ್ಕಾರದ ಮತಾಂತರದಲ್ಲು ಇಂದಿಗೂ ನಡೆವಾಗ ಸಹಕಾರ ಪ್ರೀತಿಗಳು ಸಮೂಹ ಸುಳಿದಾಡುವು. ಇದೇ ಮೂಲ ರಾಜಕೀಯ ಪಕ್ಷಗಳಿಗೂ ಅನ್ವಯ. ಅಧಿಕಾರಗಳಿಸುವುದು, ಗಳಿಸಿದ ಅಧಿಕಾರವನ್ನು ಉಳಿಸಿಕೊಳ್ಳುವುದಷ್ಟೇ ರಾಜಕೀಯಪಕ್ಷಗಳ ಚರಮ ಧ್ಯೇಯ.

ಜನತೆಯ ಬಗ್ಗೆ ಸೂಕ್ಷ್ಮದಲ್ಲೀ ನಾಯಕರ ಬಗ್ಗೆ ಜೂಗಲೀ ಚಿಂತಿಸುವವರ ಸಂಖ್ಯೆ ತುಂಬ ಕಡಿಮೆಯಾಗಿದೆ ಎಂದು ವಿಷಾದದಲು ಗಡಿನಾಡ ಗಾಂಧಿ.

ತಾನು - ತನ್ನವರು ಮೂಢ ಜನತೆ, ಪನ್ನ ಜನರು ಮೂಢ ನಾಡು ಎಂಬ ಭಾವನೆ ಸ್ವಾರ್ಥವೆನಿಸಿಬಹುದು. ಅಹಗ್ರಹ ಮನೆಯಿಂದಲೇ ಆರಂಭವಾಗ ಬೇಕು. ತನ್ನ ಸ್ಥಾನ ಮಾನಗಳ ಬಗ್ಗೆ ತನ್ನ ತ್ತ ವ್ಯಕ್ತರ ಬಗ್ಗೆ ಚಿಂತಿಸುವುದಕ್ಕೇ ಅವಕಾಶವಿಲ್ಲದಷ್ಟು ವಿಶಾಲ ಸಮ್ಮಾದಾಗಿರಬೇಕು. ವಿಶಾಲ ಜನತೆಯ ಬಗ್ಗೆ ವಿಶಾಲ ಹಾಗು ಬಗ್ಗೆ ಗಮನ ಹರಿಸಲು ಬಿಡುವು ಯಾರಿಗಿದೆ? ಗಾಂಧಿಯಿರಬಹುದು ಒಬ್ಬ ಗಾಂಧಿ ಹಾಗೆ ಮಾಡಿದ್ದರು. ಅವರ ಈ ಆಲೋಚ

(ಎಂಟನೇ ಪುಟ ನೋಡಿ)

ನಂಬಿದವರಕೈ ಬಿಡುವುದುಂಟೇ?

ಆಂಗ್ಲ : ಇಂದಿರಾ ಸಕ್ಸೇನಾ.

ವಸಂತಾದ ಜಾತ್ರೆಯೇ ಜಾತ್ರೆ. ಬಣ್ಣ ಬಣ್ಣದ ಟೆಟ್ಟಿಗಳದ್ದುಟ್ಟವರು, ಭಿನ್ನ ಭಿನ್ನ ಭಾಷೆಗಳನ್ನಾಡುವವರು, ಅನೇಕಾನೇಕ ಆಲಂಕಾರಗಳನ್ನು ಮಾಡಿಕೊಂಡಿರುವವರು.... ಸ್ತ್ರೀಯರು, ಪುರುಷರು, ಮಕ್ಕಳು, ಮುದುಕರು.... ಎಲ್ಲರೂ ಸೇರಿದ್ದರು. ಧ್ವನಿವರ್ಧಕಗಳು ಸೀರೋಷ್ಟಂ ಘನದ ಸಂಗೀತಗಳನ್ನು ಸಾರುತ್ತಿದ್ದುವು. ಹಾಡನ್ನು ಕೇಳುತ್ತಿದ್ದವರು ಕೆಲವರು. ವಿಚಿತ್ರ ವಿನೋದಗಳನ್ನು ಕಾಣುತ್ತಿದ್ದವರು ಕೆಲವರು; ತೀರ್ಥ-ತೀರ್ಥಗಳನ್ನು ತೆಗೆದುಕೊಳ್ಳುತ್ತಿದ್ದವರು ಕೆಲವರಂತಲ್ಲಿ ಮೂತಾಡುವ ಮಂದಿ ಮತ್ತಷ್ಟು. ಅವರ ಪಡುವೆ ಇದ್ದವರಲ್ಲಿ ಭಿಕ್ಕುವೂ ಒಬ್ಬನು. ಅವನು ಬೂದು ಬಣ್ಣದ ಮುಂಡಾಸು ಕಟ್ಟಿಕೊಂಡಿದ್ದನು— ಈ ಆದಕ್ಕೆ ಖಾದಿ ಬಣ್ಣ ಒಂದೇ ಯೊಂದರೂ ತೆಗೆದುಕೊಳ್ಳುವಾಗ ಅದು ಬೆಳ್ಳಗೆಯೇ ಇತ್ತು. ಅವನ ಕೊಳವಿ ಬಣ್ಣದ ಜುಬ್ಬಾ ಹಾಕಿಕೊಂಡಿದ್ದನು; ಅದಕ್ಕೆ ಅಲ್ಲಲ್ಲಿ ಅನೇಕ ತೇಪೆಗಳು. ಮಣ್ಣು ಒಣ್ಣದ ಕಂಬಳಿಯನ್ನು ಅವನು ಉಟ್ಟುಕೊಂಡಿದ್ದನು ವತ್ತಾ ನೆಟ್ಟಗಳನ್ನು ಮೆಟ್ಟಿಕೊಂಡಿದ್ದನು. ಅವನ ಕೈ ಗಂಟಲ್ಲೊಂದು ಮಂದ ಬೊಗ್ಗೆ ಇತ್ತು. ಅದನ್ನು ಅವನೇ ಮಾಡಿಕೊಂಡಿದ್ದನು. ಅವನ ಒಳಿ ಇದ್ದವ್ವ ಜಪ್ಪೇ. ಅದನ್ನುಳಿದು ಜಾತ್ರೆಗೆ ಖಸ್ಸಿನಲ್ಲಿ ಹೋಗಲು ಅವನ ಹತ್ತಿರ ಹಣ ವಿರಲಿಲ್ಲ. ಅವನು ನಡೆದುಕೊಂಡೇ ಬಂದಿದ್ದನು.

ಭಿಕ್ಷುಭಿಣಾಯೇ ಸರಿ. ಈ ವರ್ಷವೂ ತೂ ಅವನು ಬಡವ್ವ ನಾರಾಯಣನ ಪದಮ ಭಕ್ತನಾಗಿ ಬಿಟ್ಟಿದ್ದನು. ಕೆಲವು ವಾರಗಳಿಂದ ಅವನ ಮಗನು ರೋಗದಿಂದ ಡಾಸಿಗೆ ಹಿಡಿದು ಬಿಟ್ಟಿದ್ದನು. ಆರು ತಿಂಗಳ ಒಂದೆ ಅವನ ಹೆಂಡತಿಯು ತೀರ್ಥ ಹೋಗಿದ್ದುವು. ಆ ಹಳ್ಳಿಯಲ್ಲಿ ಅವನಿಗೆ ಸ್ನೇ ಸಾಲಕೊಡುವಿ ಎವರೂ ಉಳಿದಿರಲಿಲ್ಲ. ಆ ಸನುಯದಲ್ಲಿ ಅವನಿಗೆ ಅದಾ ದಾಯಕ ವಾಣಿ ಕೇಳಿ ಬಂತು. ಅವನ ಸ್ನೇಹಿತ ಬೇರು ಅವನಿಗೊಂದು ಸಲಹೆ ಕೊಟ್ಟನು—ನವರಾತ್ರಿಯು ಸಮಾಪ್ತದಲ್ಲಿ ನಡೆಯುವ ದೇವಿಯ ಜಾತ್ರೆಗೆ ಹೋಗಿ, ದೇವಿಯ ಧ್ಯಾನವನ್ನು ಬೇಡಿಕೊಂಡಲ್ಲಿ ಕಷ್ಟ ನಿವಾರಣೆಯಾಗುತ್ತದೆಂದೂ ಶೇಷು ಸೂಚಿಸಿದ್ದ ಅದನ್ನು ನಂಬಿಕೊಂಡು ಅವನು ಜಾತ್ರೆಗೆ ಬಂದಿದ್ದನು.

ಜಾತ್ರೆ ಮರುಳೋ, ಜನ ಮರುಳೋ ಎಂಬಂತೆ ಎಲ್ಲಿ ನೋಡಿದರೂ ಜಾತ್ರೆಯೇ, ಎಲ್ಲಿ ನೋಡಿದರೂ ಜನರೇ. ಅದೇನನ್ನಾ ದರೂ ಕೊಂಡುಕೊಳ್ಳೋಣವೆಂದರೆ ಅವನ ಒಳಿ ಬಿಡಿಕಾಸೂ ಇರಲಿಲ್ಲ. ತೆರೆದಿರು ವ ಇಡಗರು ಇಷ್ಟಬಂದಂತೆ ತೆಗೆದುಕೊಂಡು ತಿನ್ನುತ್ತಿದ್ದರು. ಅವನಿಗೆ ಬೇಕಾಗಿದ್ದು ದುರ್ಲಭ, ಜಾತ್ರೆಯಲ್ಲಿ, ತಿಂಡಿಯಲ್ಲಿ ಸಾಮಾನು—ಸರಂಜಾಮುಗಳಲ್ಲಿ ಅವನಿಗೆ ಬೇಕಾಗಿರುವದು ಹಣ—ಹಣ ವೊಂದೇ.

ಅದಕ್ಕಾಗಿ ಬಾಯಿಬಿಡುತ್ತ ಅವನೊಂ ದೆಡೆ ನಿಂತುಕೊಂಡಿದ್ದನು ಆಗ ಕೇಳಿ ಬಂದ ಒಂದು ಸ್ವರ ಅವನನ್ನೆ ಚ್ಚರಿಸಿತು. "ಈ ಸ್ವರ ನಿನ್ನದೆಂದು ತಿಳಿದುಕೊಂಡಿರುವೆ ಏನು?"— —ಕೇಳುತ್ತಿದ್ದಾಕೆ ಎದುರಿನಲ್ಲಿ ನಿಂತುಕೊಂಡಿದ್ದಳು. ಅವಳನ್ನು ಅವನು ಕಣ್ಣೆತ್ತಿ ನೋಡಿದನು; ಆಕೆ ಪರಮ ರುಣಿ; ಅವನನ್ನೇ ನೋಡುತ್ತಿದ್ದಳು. ಆ ಬ್ಯಾಲಿವಳ ಉಡುಗೆತೊಡುರೆಯೇ! ಅವ ಳಂತೂ ಹಳ್ಳಿಯ ಹುಡುಗಿಯಲ್ಲ; ಕಾಲೇ ಜಿನವಳಿಯೇ ಇರಬೇಕು, ಪಟ್ಟಣದ ಪುತ್ರಿ, ನಗರದ ನಿವಾಸಿಯೇ ನಿಜ ಅವನಿ ಗದ್ಯಾವುದೂ ಬೇಕಾಗಿಲ್ಲ. ಅವಳನ್ನಾಕ ರ್ಷಿಸಿದ್ದು ಇವಳ ಕತ್ತಿಗೆಯಲ್ಲಿದ್ದ ಮುತ್ತಿನ ಹಾರ. ಅತ್ಯಮಿಸುತ್ತಿರುವ ಸೂರ್ಯ ನ ಕಿರಣ ಅದರ ಮೇಲೆ ಬಿದ್ದಾಗ ಅದು ಜಗಜಗಿಸಿ ಕಣ್ಣು ಕೋರೈಸುತ್ತಿತ್ತು. ಅವಳು ಕಣ್ಣು-ಬಾಯಿ ಬಿಟ್ಟು ಆದನ್ನೇ ನೋಡುತ್ತ ನಿಂತುಬಿಟ್ಟನ ಕಂಬದಂತೆ.

"ನೀನು ಕೆಟ್ಟಿಡಪೆನು?" ಆಕೆ ಘರ್ಜಿಸಿದಳು.

ಜಾತ್ರೆ ತನ್ನತ್ತ ನೋಡಿ ನಗಾಡುತ್ತಿ ದೆಂಬ ದರ ಅರಿವು ಅವನಿಗಾಗ ಆಯಿತು. ಒಡನೆ ಅವನು ಅಲ್ಲಿಂದ ಕಾಲ್ಕಿತ್ತಿದು ಜನ ಜಂಗುಳಿಯಲ್ಲಿ ಸೇರಿಹೋದನು. ಅವಳು ಅಲ್ಲಿದ್ದ ಅಂಗಡಿಗಳನ್ನು ನೋಡುತ್ತ ಹೋದನು. ಅದೆಲ್ಲಿ ಹೋದರೂ ಅವನ ಯೋಚನೆಯಿಂದ ಮುತ್ತಿನ ಹಾರ ಹಾರಿ ಹೋಗಲೇ ಇಲ್ಲ. ಅದೇ ಯೋಚನೆ ಅವ ನಿಗೆ.

ಆಲೆದಾಡುತ್ತ ಭಿಕ್ಕು ಬಂದು ಶರ ಬತ್ತು ಅಂಗಡಿಯು ಬಳಿ ಬಂದು ನಿಂತ ಪು. ಆಗ ಅವನೆದುರಿಗೆ ಅದೇ ಮುತ್ತಿನ ಹಾರ ಒಂದು ನಿಂತಿತು ಆ ಬಾಲೆ ಅಲ್ಲಿಗೆ ಬಂದಿದ್ದಳು. ಅವಳು ಶರಬತ್ತು ತೆಗೆದುಕೊಂಡಳು. ಶಕ್ತಿ ಕೊಂಕಿಸಿ, ತಲೆ ತಗ್ಗಿಸಿ ಆಕೆ ಶರಬತ್ತು ಕುಡಿದಳು. ಆಗ ಪಟ್ಟಿಲ್ಲದೆ ಕರಕರನೆ ಸರವು ಕೆಳಗೆ ಜಾರಿ ಬಿತ್ತು. ಆಕೆ ಅದನ್ನು ಗಮನಿಸಲೇ ಇಲ್ಲ. ಜನರೆಲ್ಲರೂ ಆಕೆಯು ಕೊಂಪುಟಿ, ಕಣ್ಣೆಳೆಯನ ಕೈಗಳನ್ನೇ ಎಡೆಬಿಡದೆ ದಿಟ್ಟಿಸುತ್ತಿದ್ದುದರಿಂದ ಅದ್ಯಾರ ದೃಷ್ಟಿಯೂ ಅತ್ತ ಹೋಗಲೇ ಇಲ್ಲ. ಭಿಕ್ಕುವಿನ ದೃಷ್ಟಿಯೊತ್ತ ಆದರ ಮೇಲೆಯೇ ಇದ್ದುದರಿಂದ ಅವನು ಮಾತ್ರ ಅದನ್ನು ಗಮನಿಸಿದ್ದನ. ಶರಬತ್ತು ಕುಡಿದಾಕೆ ಮುಂದಕ್ಕೆ ಹೋದಳು. ಶರಬತ್ತು, ನೀರು ಬಿದ್ದು ಅ ದಾಗಲೇ ಅಲ್ಲಿ ಕೆಸರಾಗಿತ್ತು. ಕೆಸರಿನಲ್ಲಿ ದ್ದ ಹಾರವನ್ನು ಯಾರೂ ನೋಡಲಿಲ್ಲ. ಈಗೇನು ಮಾಡುವುದ ? ಹಾರವನ್ನೆಂತು ಹೆಕ್ಕಲಿ? ಯಾರಾದರೂ ಕಂಡಲ್ಲಿ? ಏನೇ ಆಗಲಿ, ಅದನ್ನು ಹೆಕ್ಕಲೇ ಬೇಕು. ಕೆಸರಿ ನಿಂದ ಕೆರವನ್ನೆತ್ತು ವವನಂತೆ ನಟಿಸುತ್ತ ಅವನು ಆ ಹಾರವನ್ನು ಹೆಕ್ಕಿದನು. ತಕ್ಷ ಣವೇ ತನ್ನನ್ನು ಅದ್ಯಾರೋ ಗಮನಿಸು ತ್ತಿದ್ದಾರೆಂಬ ಭಯ ಅವನನ್ನಾವರಿಸಿತು. ಫಿಡವಾಗಿ ಅತ್ತ ಅದ್ಯಾರಾ ನೋಡಿರಲಿಲ್ಲ. ಗವ ನಿಸುವವರು ತನ್ನನ್ನು ಹಿಡಿಯುಬಿ ಟ್ಟಲ್ಲಿ ?

ಅಷ್ಟಂತ ಅದೆಂತಾದರೂ ತಪ್ಪಿಸಿಕೊಳ್ಳಬೇಕೆಂದು ಬಿಕ್ಕು ಹೆಜ್ಜೆಗಳನ್ನು ಆಗ ಧ್ವನಿವರ್ಧಕಗಳಿಂದ ಕೇಳಿಬಂತು—ಮು ತ್ತಿನಹಾರ ಕಾಣೆಯಾಗಿದೆ. ಜನರಲ್ಲಿರೂ ತಾವಿರುವ ತಾಣವನ್ನು ಬಿಟ್ಟು ಬಿಟ್ಟುಅ ಲ್ಲಾಡಬಾರದೆಂದು. ಆಗಲೇ ಜಾತ್ರೆ ದಸ್ಥಳವನ್ನು ಪೋಲೀಸರು ವಶಕ್ಕೆಗೆ ತಾಕಿದರು. ಅಯ್ಯಯ್ಯೋ! ಇನ್ನು ತಪ್ಪಿ ಸಿಕೊಳ್ಳಲು ಸಾಧ್ಯವೇ ಇಲ್ಲ. ನಿನ್ನು ಮಾಡಿ ಲಿಡವನ್ನು ದೂರ ಬಿಸಾಡಿ ಬಿಡುವನೇ? ಯಾರಾದರೂ ಅದನ್ನು ನೋಡಿಬಿಟ್ಟಿ? ಸರಿ ಕೆಲಸುಲ್ಲೇ ಇರಲಿ. ಆದರೆ ಜೇಬು ಹಾಪ್ಪು ಮಾಡುವಾಗ ಸಿಕ್ಕಿಬೀಳಬೇಕಾಗುತ್ತದಲ್ಲವೇ? ಬೇರೆಯವರ ಬಟ್ಟೆಯೊಳಗೆ ಹಾಕಿ ಬಿಡಲೇ? ಅವರು ತನ್ನನು ನುಮ್ಮನೆ ಬಿಡುವರೇ? ಅದಾಗಲೇ ಕಾಣೆಯಾಗಿರುವ ಸುದ್ದಿಯಷ್ಟು ಘೋಷಿಸಿ ಬಿಟ್ಟಿದ್ದಾರೆ.

ಅವನ ಹಣೆಯಲ್ಲಿ ಬೆವರಿನ ಹನಿಗಳೆದ್ದು ಬಾಡುವು. ಛ್ಯಾ! ಆ ಪೋಲೀಸ್ ತನ್ನತ್ತಲೇ ಬರುತ್ತಿದ್ದಾನೆ. ಇನ್ನೇನು ಹಿಡಿದು ಬಿಟ್ಟಂತೆಯೇ ಸರಿ. ಪೋಲೀಸರ ವಿರುದ್ಧ ದೆಸೆಯಲ್ಲಿ ಅವನು ಹೋದನು. ಯಾರೋ ತನ್ನನ್ನು ಹಿಂ ಬಾಲಿಸುತ್ತಿರುವ ಕಾಲಿನ ಶಬ್ದ ಕೇಳಿ ಬಂದಂತಾಯಿತು ಅವನಿಗೆ. ಅವನು ವೇ ಗವೇಗವಾಗಿ ಸಾಗಿದನು. ಆಗ ತಲೆಗದೇ ನೋ ತಾಗಿದಂತಾಯಿತು— ಪೋಲೀಸರ ದೊಣ್ಣೆಯೇ ಇರಬೇಕು. ಆದರೆ ಎದುರಿಗಿದ್ದಲ್ಲಿ ಪೋಲೀಸ್ ಇಲ್ಲವಲ್ಲಾ ! ಓಹ್ಹೋ! ತಾ ಗಾತ್ತಿದ್ದ ದೊಡ್ಡ ಮರವಿನ ಕಂಬಾ ಣಾಗಿದ್ದು.

ಬಹಳ ಭಗ್ನದಿಂದ ಸಾಲ್ಕೆಸೆಗಳನ್ನೂ ನೋಡಿದನು. ಆವನೆಸುರಿನಲ್ಲಿ ಧ್ವನಿಪ್ರ ಸಾರವಿತ್ತು. ಅದುಲ್ಲಿ ಪೊಲೀಸರ ಘೋಷಿಸುತ್ತಿದ್ದರು. ಪಕ್ಕದಲ್ಲೇ ಆ ಕರುಣೆ ಫಿಂತ.ಕೊಂಡಿದ್ದಳು, ಆಕೆಯು ಕಣ್ಣಾಗಿ ಂದ ಕಣ್ಣೀರು ಹರಿಯುತ್ತಿತ್ತು. ಕ್ಷಣ ಕಾಲ ಅವನ ಉಸಿರು ನಿಂತುಹೋಯಿ ತು. ಈಗೇನು ಮಾಡಲಿ? ಅವನೆಂದು ನಿಟ್ಟುಸಿರೆಳೆದು, ಹೆಜ್ಜೆ ಮುಂದಿಟ್ಟನು; ಜೇಬು ಮುಟ್ಟಿನೋಡಿದನು — ಹಾರ ಯಥಾಪ್ರಕಾರ.

"ಪೋಲೀಸರೇ! ಹಾರ ಇನಗೆ ಸಿಕ್ಕಿದೆ. ಶರಬತ್ತು ಅಂಗಡಿಯು ಹತ್ತಿರ ಅದು ಕೆಸರಿನಲ್ಲಿ ಬಿದ್ದಿರೆಕೊಂಡಿತ್ತು. ಅದನ್ನು ನಿಮ್ಮ ಬಾದೇಜಸ್ತಗೊಪ್ಪಿಸಲೆಂದು ಇತ್ತ ಬರುತ್ತಿದ್ದೆ. ಆಗ ಕಾಣೆಯಾಗಿರುವ ವಿಷಯವನ್ನು ನೀವು ಘೋಷಿಸಿದಿರಿ. ಇಕೊಳ್ಳಿ, ಇದನ್ನು ತೆಗೆದುಕೊಳ್ಳಿರಿ.

"ಛಾಪ್ಪ, ಹೌದು, ಆದೇ ನೆನ್ನೆ ಹಾರ" ಸಂತೋಷದಿಂದ ಆಕೆ ಚಿಗಿದಾಡಿದಳು.

ಹಾರವನ್ನು ಆಕೆಗೆ ಒಪ್ಪಿಸಿದರು. ಭಿಕ್ಕುವಿಗೆ ಕೈಕಂಬ ಹಣ ಬಹುಮಾನವಾಗಿ ಸಿಕ್ಕಿತು. ಜನರೆಲ್ಲರೂ ಅವನ ಒಂದಿಷ್ಟು ಹೊಗಳಿಕೆ ಹಾಡನ್ನು ಹಾಡಿದರು.

ಅವನ ಇಷ್ಟಸ್ಪುರ್ತಿಯಾಯಿತು. ದೇವಿಯ ವರ ಸಿಕ್ಕಿತೆಂದನಿಗೆ. ಸಂತೋಷದಿಂದ ಅವನು ಹಳ್ಳಿಗೆ ಹಿಂತಿರುಗಿದನು— ನಂಬಿದವರ ಕೈಬಿಡುವುದ ಂಟೇ..... ದಾಸರ ಹಾಡನ್ನು ಪಾಡುತ್ತ.

—ಶ್ರೀ ವಿವೇಕಾನಂದ

[ದಿ ಹಿಂದೂಸ್ಥಾನ್ ಟೈಮ್ಸ್ (ಸಾಪ್ತಾಹಿಕ) ದಿಂದ]

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವೈದ್ಯಶಾಲಾ (ಪೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

READ & ADVERTISE IN NAVAYUGA WEEKLY

ಫೋನ್ : 526

1921 ಸ್ಥಾಪನೆ

ಸಂಪುಟ ೪೯

ಸಂಚಿಕೆ ೭

VOL. 49

No. 7

ಸಮಾಚಾರ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೬—೧೦—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟಿಯವರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಅಜ್ಞಾತವಾಸಕ್ಕೆ ನಾಂದಿ

ಶ್ರೀಮತಿ ಇಂದಿರಾ ಗಾಂಧಿಯವರು "ಅಲ್ಪಸಾಕ್ಷಿಯ ಗುಂಪೊಂ"ದಷ್ಟು ಕಟ್ಟಿದ ಮೇಲೆ ಕಾಂಗ್ರೆಸ್ಸು ಕಾರ್ಯಕಾರಿಣಿ ಐಕ್ಯ ಗೊತ್ತುವಳಿಯನ್ನು ಸ್ವೀಕರಿಸಿದರೂ ಆದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ; ಸಿಂಡಿಕೇಟ್ಟಿಗೆ ಪಕ್ಷದ ಇಬ್ಭಾಗ ತಪ್ಪಲು ಒಂದಾರುವೆಂದ ಕಂಡುಬಂದರೂ ಕಾಂಗ್ರೆಸ್ ಪಕ್ಷವು ತನ್ನ ಪರಂಪರೆಯನ್ನು ಮೀರಿ ಪಡೆಯಲಿಲ್ಲವೆಂದು ಕೂಡ ಹಿದರೂ ಈ ಪರಂಪರೆಯು ಅಸ್ಥಿತ್ವ ಮತ್ತು ಏಕ್ಯಗಳು ಕಾಗದ ಪತ್ರಗಳಲ್ಲಿ ಮಾತ್ರವೇ ಉಳಿಯುವಂತಾಗುತ್ತಿರುವುದು ಕಾಂಗ್ರೆಸ್ಸಿಗೂ ದೇಶಕ್ಕೂ ನೆಮ್ಮದಿಯನ್ನು ತರುವ ಲಕ್ಷಣವಲ್ಲ. ಕಾಂಗ್ರೆಸ್ ಅಧ್ಯಕ್ಷ ಮತ್ತವರ 'ಸಿಂಡಿಕೇಟ್' ಪ್ರಧಾನಿ ಇಂದಿರಾ ಗಾಂಧಿ ಮತ್ತವರ 'ಇಂಡಿಕೇಟ್' ನಾಮಾಂಕಿತರ ಮೇಲೆ ಆರೋಪ ಹೊರಿಸುವುದನ್ನು ನಿಲ್ಲಿಸಿದ್ದರೂ ಸಿಂಡಿಕೇಟು ತಮ್ಮ ಮನಬಿಚ್ಚಂಗ ಮಾಡತ್ತಿದೆ, ತಮ್ಮನ್ನು ಅಧಿಕಾರದಿಂದ ಇಳಿಸಲು ಬೊಂಬು ಹಾಕುತ್ತಿದೆ ಎಂಬ ಆಪಾದನೆಗಳನ್ನು ಕೊಡುತ್ತಲೇ ಬಂದಿದ್ದಾರೆ. ತಮ್ಮ ವಿರುದ್ಧ ಹರಿದ ಬರುತ್ತಿರುವ "ಇಂಡಿಕೇಟ್" ಅಸ್ತ್ರವನ್ನು ತುಂಡರಿಸುವುದು ಆಗ ಸಿಂಡಿಕೇಟಿನ ನಿಲುಮೆಯಿಸಿದರೆ ಆಶ್ಚರ್ಯವಿಲ್ಲ.

ಸದ್ಯ ಇನ್ನೊಂದು ಬಿರುಗಾಳಿಯೆದ್ದು ಕಾಂಗ್ರೆಸ್ ಹಡಗನ್ನು ಮತ್ತೊಮ್ಮೆ ಉರುಳಿಸುವ ಪ್ರಯತ್ನ ನಡೆಯುತ್ತಿದೆ.ದುರದೃಷ್ಟದಿಂದ ಇದು ಹೊರಗಿನಿಂದ ಬಂದ ಬಿರುಗಾಳಿಯಲ್ಲ. ಇಂದು ಕಾಂಗ್ರೆಸ್ಸು ಹೆಪ್ಪರವಾಗಿ ಸುಳಿದಂತಿದ್ದು; ಬಿರುಸು ಹಿಂಡಲಿಲ್ಲಂತಿದೆ. ಒಂದೊಂದು ಬಿಮರೂ ಇನ್ನೆಂದಕ್ಕೆ ತಾಗಿ ತಾಗಿ ಬಪಪ್ಪರವನ್ನೇ ಎಬ್ಬಿಸ ಹತ್ತಿದೆ. ಒಮ್ಮೊಮ್ಮೆ ಈ ತಾಕಲಾಟವೇ ಕೊಡಲಿ ಯೇಟಿಗೂ ವಿಗಿಲಾಗಿ ಉರುಳುವ ಸಂದರ್ಭ ಬರುತ್ತದೆ ಎಂಬಂತಿದೆ. ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಸುಬ್ರಹ್ಮಣ್ಯಂರವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿಯೇ ತೀರ್ಪರಾಗಲಿಲ್ಲ. ಅವರು ಮಾಜಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜರ ಮೇಲೆ ಶರಪ್ರಹ್ಮವನ್ನೇ ಎಸೆದಿದ್ದಾರೆ. ಇವನ್ನು ನಿರುಪಾಧ್ಯವೆಂದಿಂದಲೇ ಕಾಮರಾಜರು ತುಂಡರಿಸಿದ್ದಾರೆ. ತಮಿಳುನಾಡಿನಲ್ಲಿ ಆರಂಭವಾದ ಪೋರಾಟದ ಗಾಳಿ ನವದಿಲ್ಲಿಯಲ್ಲೂ ಬೀಸಿತು. ಸಿಂಡಿಕೇಟ ನೆಪ್ಪ ತಮ್ಮ ಡಾವಪನ್ನು ಮೊದಲೇ ಎಸೆದು ಇಂಡಿಕೇಟ್ ಸಿಂಡಿಕೇಟಿನ ಮೇಲೆ ವಿಜಯ ಸಾಽದ್ದು ರಾಷ್ಟ್ರಪತಿ ಜಾನಾವಣೆಯಲ್ಲಿ. ಜುನಾಪಣೆ ಗೆದ್ದ ಬಳಿಕ ಅವರು ತಮ್ಮ ಪಾಳಪನ್ನು ವಾಪಾಸು ಪಡೆಸಿಕೊಂಡೇನೆದು ಹೇಳಿದರೂ ಅದಕ್ಕವರು ಸಿದ್ಧರಿಲ್ಲವೆಂಬುದಕ್ಕೆ ಇತ್ತೀಚಿನ ವಿದ್ಯಮಾನಗಳು ಸಾಕ್ಷಿಹೇಳುತ್ತವೆ.ಶ್ರೀ ಸಿ.ಸು. ರವರ ರಾಜಿನಾಮೆಯಂ ಪ್ರಕರಣದ ಹಿಂದೆಯೇ ಇಂಡಿಕೇಟ್ ಮಿತ್ರರು ಸಿಂಡಿಕೇಟ್ ತಮಿಳುನಾಡು, ಉತ್ತರಪ್ರದೇಶ, ಆಂಧ್ರ ಪ್ರದೇಶಗಳ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರುಗಳನ್ನು ನೆಲಗವ ಮಾಡಲು ಹವಣಿಸುತ್ತಿದೆಯೆಂಬ ಹೊಸ ಆರೋಪ ಹೊರಿಸಿದರು. ಸಿಂಡಿಕೇಟ್ ಇದನ್ನು ಅಲ್ಲಗಳೆಯಲೇ ಬೇಕು ತಾನೆ? ಪ್ರಧಾನಿಯವರು ತಮ್ಮ ಪಾಳಪನ್ನು ಮತ್ತೊಂದು ಬಾರಿ ಎಸೆದು ಸಿಂಡಿಕೇಟು ಕಲೆಯೆ ಪ್ರದಂಡಿ ನೋಡ ಹೊರಟಿದ್ದಾರೆ. ಇಂತಹ ಹಿನಪಿಡಿಕೆ ಸಿಂಡಿಕೇಟು ಹೂಡಿತ್ತು —ಎಲ್ಲ ವೆಂಬುದಕ್ಕೆ ಬಲವಾದ ಸಾಕ್ಷಿಗಳಿಲ್ಲವಾದರೂ ಪಕ್ಷದ ಕೆಲವಾರು ಹಿರಿಯ ನಾಯಕರ ಮೇಲೆ ಕೋಲಾಹಲವೆಬ್ಬಿಸಲು ಬೇಕಾದ ವಾತಾವರಣವನ್ನು ಅವರು ನಿರ್ಮಿಸಿದ್ದಾರೆಂಬುದು ಶತಸ್ಸಿದ್ಧ.

ಕಾಂಗ್ರೆಸ್ಸು ನಾಯಕರು ಈ ಬಗೆಯೂ ಗಿ ಪರಸ್ಪರ ವಿರೋಧಿಯಾದ ಹೇಳಿಕೆಗಳನ್ನು ನೀಡುವುದು ಶಿಸ್ತುಬದ್ಧ ಕಾಂಗ್ರೆಸಿಗರ ಕಣ್ಣುಗಟ್ಟಿದಂತಾಗಿದೆ. ಯಾವ ವಿಕೃತಿಗೂ ಎಡೆಗೊಡದವರು ದಿಗ್ಭ್ರಾಂತರಾಗಿದ್ದಾರೆ ಇದರಿಂದ ಪೊಂದು ಪಕ್ಷ ತ್ಯಾಗಕ್ಕೆ ಅಥವಾ ಅಜ್ಞಾತವಾಸಕ್ಕೆ ಅವರು ಮನದಂದುಕೊಳ್ಳಬಾಹುದು. ಮಹಾ ಪ್ರಧಾನಿ ಜವಾಹರಲಾಲರ ನಂತರ ಉತ್ತರಾಧಿಕಾರ ಹೋರಾಟ ಧಾರಕದಲ್ಲಿ ಆರಂಭವಾಗುತ್ತದೆ ಎಂದ ವಿದೇಶೀಯರು ರಾಜ್ಯಕೀಯ ಭವಿಷ್ಯವಾದಿಗಳ ಮಾತು ಆ ಕಾಲಕ್ಕೆ ಸುಳ್ಳಾದರೂ ಇಂಗ ಪತ್ಯವಾಗುವಂಥ ಸ್ಥಿತಿಗೆ ಬಂದಿದೆ. ದೇಶದಲ್ಲಿ ಬಡತಿ ಹಾರಕಾರ ರಚಿಸಿ ಉತ್ತಮ ಆಡಳಿತ ನೀಡಬಲ್ಲ ರಾಜ್ಯಕೀಯ ಪಕ್ಷ ವೊಂದರ ಅಭಾವ ಇರುವಾಗ ನಾಕ ಪ್ಪ ಬಲಶಾಲಿಯೂದ ಕಾಂಗ್ರೆಸ್ಸು ಈ ರೀತಿ ಅಂತರಿಕವಾಗಿ ಪೊರಾಡಿ ಜೊತೆಪೆರಿ, ಅದು ಶೀಘ್ರನೀಮಸಲ್ಲಿ ದೇಶಕ್ಕೆ ವಿಳಗೆದುನ್ನು ತರುವಂಥದ್ದಾಲ್ಲ. ಈಗ ಆರಂಭವಾದ ಪೋರಾಟದ ಎರಡನೆಯ ಅಂಕ ಎಲ್ಲಿಯ ವರೆಗೂ ಮುಂದುವರಿಯಬಹುದು. ಪಾಪಸೀಯವೃದಾದರೊಂದು ಗಾಂಪು ಕಲಿಬಾಗದಿ ಅಥವಾ ಅಜ್ಞಾತವಾಸಕ್ಕೆ ಹೋಗದೆ ಇದು ನಿಲ್ಲುವುದು ಸಾಧ್ಯವಿಲ್ಲ. ಇಂತಹ ಸಂಧಿಕಾಲದಲ್ಲಿ ಜನತೆ ಅತೀವ ಜಾಗೃತವಾಗಿರಬೇಕಾಗುತ್ತದೆ. ಮನೆಯೊಳಗೆ ನೆರೆ ನುಗ್ಗಿದ ಬಳಿಕ ಎಚ್ಚರಾದರೆ ಬದುಕುವುದು ಕಸ್ಟ. ನಾಡುಕಮಣಿಯಳಿಗೆ ಸಂವುದು ಕಸ್ಟ. ನಾಡುಕಮಣಿಯಳಿಗೆ ಸಂಕಷ್ಟ ಪಾಳವಪನ್ನು ವಾಪಾಸು ಪಡೆಸಿಕೊಂಡೇದು ಹೇಳಿದರೂ ಅದಕ್ಕವರು ಸಿದ್ಧರಿಲ್ಲವೆಂಬುದಕ್ಕೆ ಇತ್ತೀಚಿನ ವಿದ್ಯಮಾನಗಳು ಸಾಕ್ಷಿಹೇಳುತ್ತವೆ.ಶ್ರೀ ಸಿ.ಸು. ರವರ ರಾಜಿನಾಮೆಯಂ ಪ್ರಕರಣದ ಹಿಂದೆಯೇ ಇಂಡಿಕೇಟ್ ಮಿತ್ರರು ಸಿಂಡಿಕೇಟ್ ತಮಿಳುನಾಡು, ಉತ್ತರಪ್ರದೇಶ, ಆಂಧ್ರ ಪ್ರದೇಶಗಳ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರುಗಳನ್ನು ನೆಲಗವ ಮಾಡಲು ಹವಣಿಸುತ್ತಿದೆಯೆಂಬ ಹೊಸ ಆರೋಪ ಹೊರಿಸಿದರು. ಸಿಂಡಿಕೇಟ್ ಇದನ್ನು ಅಲ್ಲಗಳೆಯಲೇ ಬೇಕು ತಾನೆ? ಪ್ರಧಾನಿಯವರು ತಮ್ಮ ಪಾಳಪನ್ನು ಮತ್ತೊಂದು ಬಾರಿ ಎಸೆದು ಸಿಂಡಿಕೇಟು ಕಲೆಯೆ ಪ್ರದಂಡಿ ನೋಡ ಹೊರಟಿದ್ದಾರೆ. ಇಂತಹ ಹಿನಪಿಡಿಕೆ ಸಿಂಡಿಕೇಟು ಹೂಡಿತ್ತು —ಎಲ್ಲ ವೆಂಬುದಕ್ಕೆ ಬಲವಾದ ಸಾಕ್ಷಿಗಳಿಲ್ಲವಾದರೂ ಪಕ್ಷದ ಕೆಲವಾರು ಹಿರಿಯ ನಾಯಕರ ಮೇಲೆ ಕೋಲಾಹಲವೆಬ್ಬಿಸಲು ಬೇಕಾದ ವಾತಾವರಣವನ್ನು ಅವರು ನಿರ್ಮಿಸಿದ್ದಾರೆಂಬುದು ಶತಸ್ಸಿದ್ಧ.

ಆದರೆ ಇಂದು ಭಾಷಣಕ್ಕೆ ಬರಬೇಕೆಂದು ಆಮಂತ್ರಣ ಬಂದಾಗ, "ದಮ್ಮಯ್ಯ ವಿಟ್ಟು ಕ್ಷಮಿಸಿ ನನಗೆ ಎಳ್ಳಷ್ಟೂ ಬಿಡುವಿಲ್ಲ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಬೇಕಾಗಿದೆ" ಎಂದು ಪ್ರಾಧ್ಯಾಪಕರು ಉತ್ತರ ಕೊಡುವರು ಭಾಷಣಕ್ಕೆ ಹೆಚ್ಚಾಗಿ ಅವರನ್ನೇ ಆಮಂತ್ರಿಸುವುದು ನಿಜವಾದ ಕಾರಣ ಚಿಕ್ಕ ಮಾಕ್ಯಳ ಎದುರು ಬಾಯಿ ಬಾಯಿ ಬಿಡಕ್ಕೆ ಭಾಷಣ ಮಾಡುವ ವಿರಕ್ತಿಯನ್ನು ಎದುರಿಸಬೇಕಾಗುವದೆಷ್ಟು ಎಂಬೀ ಭಾವನೆ ಕಟ್ಟಿಸಿಕೊಳ್ಳಲು ಅವರು ಆಮಂತ್ರಣ ನಿರಾಕರಿಸುವರು.

ಈಗ ಇಪ್ಪತ್ತು ವರುಷಗಳ ಹಿಂದಿನ ಬದುಕು ಬಾಳಿನಲ್ಲಿ ಸಿಲುಕುಂಡ ಧರ್ಮಿಷ್ಠ ಧೈರ್ಯಗುಂದಿ ನಿರಾಶೆ ಕವಿತ್ತು. ಆಕರ್ಷಣೆ ಪತ್ತು ಅವಕಾಶವಿತ್ತು. ದೇಶಪರದೇಶಗಳ ಶೈಲಿಯಲ್ಲಿಂದ ಮುಕ್ತವಾಹವಿತ್ತು. ನಾಡು—ನುಡಿಗಳ ಅಭಿಮಾನ ಮಾತ್ರ. ಆದನ್ನೆ ಹೆಚ್ಚಿಸುವ ಸಾಂಸ್ಕೃತಿಕ ಕಾರ್ಯಕ್ರಮ ಇಷ್ಟೆಗಳನ್ನು ಜನ ಬೆಚ್ಚಿಕೊಳ್ಳುತ್ತಿತ್ತು. ಐಂಡಿಕ್ಕಿ ವಿದ್ವತ್ತುಗಳಿಗೆ ಜನ ಬೆಲೆಯಾಗುತ್ತಿತ್ತು. ಇವುಗಳನ್ನು ಅರ್ಥವಂತಿಕೆಂದ ಸಂತೋಷಪಡವ ಅವಕಾಶವನ್ನೂ ಪಡೆದಿತ್ತು.

ಆದರೀ ಎರಡು ದಶಕಗಳ ಅವಧಿಯಲ್ಲಿ ಮಹತ್ವ ಬದಲಾವಣೆ. ತರುಣರಿಗೆ ಒನ್ನೇಕ ಬಗೆಯ ಆಕರ್ಷಣೆಗಳ. ವಿದ್ಯಾವಿಷಯಗಳಿಗೆ ಜೀವನದಲ್ಲಿ ಸರಿಯಾಗಿರುವ ಚಿಂತನೆ ಮಾಡುವರು. ಒಬ್ಬರಿಗು ಒಂದು ತೆನಗಿಲ್ಲದೆ ಇಲ್ಲವರು ಇರುವ ಪರಿಯೇ ಬೇರೆ ದೂರದ ಚಂದ್ರನಿಗೆ ನಾಗಿ ತನ್ನ ಹಜ್ಜೆಯ ಮುದ್ರೆಯನ್ನು ಬಿಟ್ಟು ಬಂದ ಸಾಹಸಿ ಮಾನವ ಜಗದಗಲ ಮುಗಿಲೆತ್ತರ ಮೀರಿ ಬೆಳೆದಿದ್ದಾನೆ. ಹಿಂದಿನ ಅನೇಕ ಊಹೆ ಕಲ್ಪನೆಗಳನ್ನೆ ಸುಳ್ಳಾಗಿಸಿದ್ದಾನೆ ವಿಜ್ಞಾನ ನಾಗಾಲೆ ಯಿಂದ ಮುನ್ನಡೆಯುತ್ತಿದೆ. ಇದ ಮುನ್ನಡೆದ ಫಲಪ್ರಾಪ್ತಿಗಳ ಲೆಕ್ಕಣಿಕೆ, ಆಧುನಿಕ ವೈದ್ಯಾಲಯಗಳು ಲೈಲಯಾನ್ಸ್‌ಗಳ ಸ್ಥಿರಪಡಿಸಿದ ಸಂಗತಿ. ಇಂದ ಕಲಿಯುವ ಶಿಕ್ಷಣದಿಂದ ಹಿಡಿದು ಕಲಿಯುವ ವಿದ್ಯಾರ್ಥಿಯ ವರೆಗೆ, ಶ್ರಮ ಜೀವಿಯಿಂದ ಹಿಡಿದು ಬುದ್ಧಿಜೀವಿಯ ವರೆಗೆ ಹಕ್ಕುಬಾಧ್ಯತೆಗಾಗಿ ಹೋರಾಟ. ಆದರೆ ಅತ್ಯಲ್ಪ ರಕ್ಷಣೆಯ ಬಗೆಯಲ್ಲಿ ಕಳಕಳ ಕಡಿಮೆ. ಕಡಿಮೆ ಗಡಿಕ- ಹೆಚ್ಚು ಪ್ರತಿಕ್ರಿಯಾ. 'ಹುರುಕೋದಪಿಡುಂ ಪುಣ್ಯವಂತರಿಗಳ' ವಿದ್ಯಾರ್ಥಿಗಳು.

(ಪದಿನೆಟನೇ ಪುಟ ನೋಡಿರಿ)

ಯೋಜಿತ ಉಳಿತಾಯವು ನಿಮ್ಮ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಖಚಿತ ಮಾರ್ಗ—

ಆರ್ಥಿಕ ಸಮಸ್ಯೆಗಳ ಸುಳಿಗೆ ಸಿಕ್ಕಿ ಅವರ ಪರಿಹಾರಕ್ಕೆ ಹಾತೊರೆಯುವ ಬದಲು ಕಾಯಬೇಡಿ ಈ ಸುಳಿಯಿಂದ ಪಾರಾಗಲು ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್‌ನಲ್ಲಿ ಕ್ರಮವಾಗಿ ಉಳಿತಾಯ ಮಾಡಲು ನೀವು ಆರಂಭಿಸಿರಿ. ಸಂಭವಿಸಬಹುದಾದ ತುರ್ತು ಪರಿಸ್ಥಿತಿಗಳಲ್ಲಿ ಖರ್ಚಿಗೆ ನೀವು ಸಿದ್ಧವಾಗಿ ಹಣವನ್ನು ದೊರಕಿಸಿಕೊಳ್ಳಬಹುದು. ಇಷ್ಟೆ ಅಲ್ಲದೆ ಈ ಕ್ರಮದಿಂದ ನಿಮಗೆ ಭದ್ರತೆ ಮತ್ತು ಆಕರ್ಷಕ ಬಡ್ಡಿಯೂ ಸಿಕ್ಕುವುದು.

ಒಂದು ಸೇವಿಂಗ್ಸ್ ಬ್ಯಾಂಕ್ ಅಕೌಂಟನ್ನು ಈ ದಿನವೇ ತೆರೆಯಿರಿ.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು (ಸ್ಥಾಪನೆ 1906) ಆಡಳಿತ ಮಂಡಲ
ಉಡುಪಿ ಮಂಗಳೂರು

ಕೆ. ರಾಮದಾಸ್ ನಾಯಕ್
ಜನರಲ್ ಮೇನೇಜರ್

"NAVAYUGA" Kannada Weekly is recommended for High Schools and Public Libraries by the Director of Public Instruction in Mysore, Bangalore vide their letter No. CL-4,17-4,65-66 dated 26-4-1966.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯ ಶತಾಬ್ದಿ ಸಂವತ್ಸರದಲ್ಲಿ

ಗಾಂಧೀವಾದದ ಸಂಪೂರ್ಣ ಕೊಲೆ

** ಶ್ರೀ ಕೆ. ಜಿ. ಹೆಗಡೆ **

ಬಿಳಿಯರು ಗಾಂಧೀತಾತನ ನಾಡನ್ನು ಬಿಟ್ಟುಹೋದ ಬಳಿಕ ಗಾಂಧೀವಾದಿಗಳ ಸರ್ಕಾರ ರಚನೆಯಾಯಿತು. ಈ ಸರ್ಕಾರದ ಅಡಿಕೆತಿ ನಡೆಯುತ್ತ ಬಂದಂತೆ ಗಾಂಧೀವಾದದ ಚಿತ್ರಹಿಂಸೆಯಾಗುತ್ತ ಬಂತು. ಇದೀಗ ಗಾಂಧೀ ಶತಾಬ್ದಿಯ ವರ್ಷ—ಗಾಂಧೀವಾದದ ಸಂಪೂರ್ಣ ಕೊಲೆಯಾಗುವ ಸಂಭವ ಇಷ್ಟಕ್ಕಿಹಾಕಿದಂತಿದೆ. ಗಾಂಧೀವಾದಿಗಳು ಇದನ್ನು ಕಂಡೂ ಕಂಡೂ ಕರುಬಬೇಕಷ್ಟೆ, ನಾಲ್ಕು ಪಟಕು ಕಣ್ಣೀರು ಸುರಿಸಿ ಕಣ್ಣು ಮುಚ್ಚಿಕೊಳ್ಳಬೇಕಷ್ಟೆ.

ನನ್ನ ಜೀವನದಲ್ಲಿ ಮಹಾತ್ಮಾ ಗಾಂಧೀ ಪಡುವರ ಮೊಶ್ಮೊದಲಿನ ದರ್ಶನವಾಹುದು ಉಡುಪಿಯ ಅಜ್ಜರಕಾಡಿನಲ್ಲಿ; ಸುಮಾರು ಮೂವತ್ತೈದು ವರ್ಷಗಳ ಹಿಂದೆ. ಆಗ ನನ್ನನ್ನು ನನ್ನಪ್ಪ ಅವರ ಜೊಗಲ ಜೋಲೀರಿಸಿ ಬಾಪುವನ್ನು ತೋರಿಸಿ ಪರಿಚಯ ಮಾಡಿದ್ದ. ನನಗಾಗ ಎಂಟು—ಹತ್ತು ವರ್ಷಗಳ ಪ್ರಾಯವಿರಬೇಕು. ಅಜ್ಜರ ಕಾಡು ಬೈಠಾನಿನಲ್ಲಿ ಜಮ್ಮಾಂದು ಬಹು ದೊಡ್ಡ ಸಭೆ ಹಿಂದೆಂದೂ ನೆರೆದಿಲ್ಲ. ಅಥವಾ ಅಂತಹ ಜನ ಸಮುದಾಯವನ್ನು ನಾನು ಕಂಡಿರಲಿಲ್ಲ. ಆ ಸುಂದರ ದೃಶ್ಯ ಪ್ರಸ್ಫುಟಿಸಟಲದಲ್ಲಿ ಇಂದಿಗೂ ಅಚ್ಚಳಿಯದೆ ನಿಂತುಬಿಟ್ಟಿದೆ.

ಅಂದಿನ ದಿನಗಳಲ್ಲಿ ನಾವೆಲ್ಲ ಪುಟ್ಟಳು ಗಾಂಧೀ ಮಹಾರಾಜಕೀ ಜೈ ಎಂದು ಜಯಕಾರ ಹಾಕುತ್ತಿದ್ದೆವು. ಮಕ್ಕಳೆಂದೇನು? ದೊಡ್ಡವರೂ ಅದೇ ಘೋಷಣೆಯನ್ನು ನೂಡತ್ತಿದ್ದರು. ಪ್ರಾಯಃ ಪಿಚ್ಚಿನ ಜನರಿಗೆ ಅಂಗ್ಲ ಸರಕಾರ ಹೋದ ಬಳಿಕ ಬ್ರಿಟಿಷ್ ರಾಜನ ಬದಲು ಗಾಂಧಿಯರ್ನೇ ಭಾರತದ ಮಹಾರಾಜನೆನ್ನಾಗಿ ಪಟ್ಟಕ್ಕೇರಿಸಬೇಕೆಂಬ ಹಂಬಲವಿದ್ದಿರಬೇಕು.

ನಾವೆಲ್ಲ ನಾಲ್ಕಾಣೆಯ ಕಾಂಗ್ರೆಸ್ ಸದಸ್ಯರಾಗಿದ್ದಿಷ್ಟವಾದರೂ ಗಾಂಧೀ ಬೇಕಿಯನ್ನು ಧರಿಸತ್ತಿದ್ದಿವು! ಗಾಂಧೀಭಕ್ತರಾಗಿದ್ದೆವು!! ಹೆಚ್ಚಾಗಿ ಖಾದಿಯನ್ನೇ ತೊಡುತಿದ್ದೆವು! ನಮ್ಮಣ್ಣ ಮನೆಯಲ್ಲೇ ನೂಲು ತಗೆಯುತಿದ್ದ. ಜೇಲೀಸರು (ಕಂಪು ಟೊಪ್ಪಿಯವರು) ಕಮ್ಮ ಮನೆಗೂ ಧಾವಿಸಿದ್ದರು. ಜನರೆಲ್ಲ ಪುಣ್ಯಸೇವಿಸದಂತೆ ನಾವು ಆತಂಕಗಳನ್ನು ಒಡ್ಡುತಿದ್ದೆವು. "ಪುರಡೆ ಕಲೀ ಸಂಡಸರಾ" (ಮೃತ್ಯುಸಾನವನ್ನು ಮಾಡಬೇಡಿರಿ) ಎಂಬ ಹುಳು ಪದವನ್ನು ಹಾಡುತಿದ್ದೆವು. ಅರ್ಥಾತ್ ಗಾಂಧೀಜಿಯವರ ಶತ್ರು—ಅಪಘಾತಗಳನ್ನು ಸಂಪೂರ್ಣ ಅರಿಯದವರಾಗಿದ್ದರೂ ನಾವೆಲ್ಲ ಗಾಂಧೀಜಿಯ ಅನನ್ಯ ಅನುಯಾಯಿಗಳಾಗಿದ್ದೆವು.

ಆದರೆ ನಮ್ಮಪ್ಪ ಮಾತ್ರ ನಮಗೆ ಸ್ವಾತಂತ್ರ್ಯ ಲಭಿಸಲಾ ಸ್ವರಾಜ್ಯ ಬಿಳ್ಕುವದೆಂದು ಕೆಂಬದಿದ್ದರಲ್ಲ. ಗಾಂಧೀಜಿಯವರ ಕಾರ್ಯಕ್ರಮದಲ್ಲಿ ಅವರಿಗೆ ಸದಾಸುಖವೂ ತಿಯಿದ್ದಿದ್ದರೂ ನಮಮಡೂ ಅವರಿಂದ ತೆಲಿ ಸೊಮ್ಮೆ ರಾತ್ರ ಹೊತ್ತಿನಲ್ಲಿ "ನಾಗುದ್ದನೇ ಆಗುತಿತ್ತು. "ಏನೇ ಡೇಳು, ಬಿಳಿ ಜನರು (ದೊರೆಗಳು) ಭಾರತವನ್ನು ಬಿಟ್ಟು ಹೊಲಗುವದಿಲ್ಲ" ಎಂಬುದೇ ಅವರ ಖಂಡಿತ ಅಭಿಪ್ರಾಯವಾಗಿತ್ತು. ನನ್ನ ತೀರ್ಥರೂಪರು ಸ್ವಾತಂತ್ರ್ಯ ಮತ್ತು ಸ್ವರಾಜ್ಯಗಳನ್ನು ಕಂಡೇ ಕನ್ನ ಸೋಲಪ್ಪೊಪ್ಪಿ ದಿವಂಗತರಾದರು. ಅಣ್ಣನೂಶ್ರ ಅಕಾಲದಲ್ಲೇ ವಿಧಿವಶರಾದರು.

ನಾವೆಲ್ಲ ದೇಶದ ಸ್ವಾತಂತ್ರ್ಯಕ್ಕಾಗಿ—ಸ್ವಂತಾಜ್ಯಕ್ಕಾಗಿ ಅಳಿಳಾಡೆವೆ ಪಲ್ಲಿಸಿರುತ್ತೀವೆ! ಏನಿಲ್ಲವಾದರೂ ೧೯೪೨ರಲ್ಲಿ ಶಂತೀ ಕಂಭದ ಬುಡುಡೆಗಳಿಗೆ ಕಲ್ಲು ಹೊಡೆದಿರುತ್ತೇವೆ. ಸ್ತಂಭಗಳನ್ನು ಉರುಳಿಸಿರುತ್ತೇವೆ. ನಾಲ್ಕಾರು ತಾಸಿನ ಅವಧಿಗಾದರೂ ಸರಿಗೆಗಳನ್ನು ಕಡಿದು ಸಂಪರ್ಕ ಕೆಟ್ಟಿಸಿರುತ್ತೇವೆ. ನಮ್ಮ ಪರೇಲರ ನೌಜನ್ಯದಿಂದ ಜೇಲುವಾಸದಿಂದ ತಪ್ಪಿರುತ್ತೇವೆ ಆದರೂ ನಾವು ಮಾತ್ರ ಮೂರು ಎಕರೆ ಜಮೀನಿಗಾದರೂ ಅರ್ಜಿಹಾಕಿಲ್ಲ. ಅಂದಿನಿಂದ ಇಂದು ದೇಶದಲ್ಲಿ ಬಹಳ ಪರಿವರ್ತನೆಯಾಗಿದೆ. ನನಗೆ ಕಾಣುವ ಮಹಾ ಪರಿವರ್ತನಗಳಲ್ಲಿ ಆದು ಕಾಂಗ್ರೆಸ್ ಅಗಿದ್ದ ಬಹು ಜನ ಇಂದು ಕಾಂಗ್ರೆಸ್ಸಿನಲ್ಲಿಲ್ಲ. ಅಂದರೆ ಅವರೆಲ್ಲ ಬೇರೆ ಪಂಥ ಪಂಗಡಗಳಿಗೆ ಸೇರಿರುವರೆಂಬುದಲ್ಲ. ಗಾಂಧೀವಾದಿಗಳಾಗಿ ತಮ್ಮ ಬದುಕನ್ನೆ ದೇಶಸೇವೆಗಾಗಿ, ಜನತಾ ಸೇವೆಗಾಗಿ ಪಣವಾರ್ಡಿಸಿ ಮಾಡಿದವರಲ್ಲಿ, ಅನೇಕರು ಸ್ವಾತಂತ್ರ್ಯಾನಂತರದ ಹೊಲಸು ರಾಜಕೀಯ ವಾತಾವರಣವನ್ನು ಕಂಡು ರಾಜಕೀಯದಿಂದ ವಿಮುಕ್ತರಾಗಿದ್ದಾರೆ. ಅನಂತರ ಕಾಂಗ್ರೆಸ್ ಆದವರೆಲ್ಲ ಅಥವಾ ಉಳಿದವರೆಲ್ಲ ಗಾಂಧೀವಾದವನ್ನೇ ನೀರೆಳು ಬಿಟ್ಟಿರುತ್ತಾರೆ.

ಗಾಂಧೀಜಿಯವರನ್ನು ನಾವು ಕೊಂದೆವು! ವ್ಯಕ್ತಿಯನ್ನು ಕೊಲ್ಲುಬಹುದು ಅಂದರೆ ದುರಾತ್ಮರಿಂದ ಅನು ಸಾಧ್ಯವಾಗಬಹುದು. ಆದರೆ ವಾದ(Ideoloy)ವನ್ನು ಕೊಲ್ಲುವುದು ಕರಿನು ಅನಾಧ್ಯ. ಆದರೆ ಗಾಂಧೀಜಿಯ ಕೊಲೆಯೊಂದಿಂದಿನಿಂದ ಭಾರತದಲ್ಲಿ ಗಾಂಧೀವಾದದ ಕೊಲೆಯೂ ಗುಟ್ಟಲೇ ಬಂದಿದೆ. ಅದೀಗ ಈ ಶತಾಬ್ದಿ ಸಂವತ್ಸರದಲ್ಲಿ ಗಾಂಧೀ ಶತ್ರು—ಅಪಘಾತಗಳ ಕನ್ನ ಸಂಪೂರ್ಣ ಕೊಲೆಯಾಗಿದೆ! ಇದಕ್ಕಾಗಿ ನನಗೆ ಅಸರಿಮಿತ ದುಃಖವಾಗುತ್ತದೆ. ಗಾಂಧೀ ಸರಕಾರ ಅಥವಾ ಗಾಂಧೀ ಭಕ್ತರಿಂದಲೇ ಇನ್ನೆಲ್ಲ ನಿರ್ಘೃಣತೆಯಿಂದ ಫಿಲಾಜ್ಫಿಯಿಂದ, ನಿರ್ದಾಕ್ಷಿಣ್ಯತೆಯಿಂದ, ನಿರಾಳಕ್ತಿಯಿಂದ ಕ್ರಾಲ್ದೆಸೆಗಳಲ್ಲೂ ಜರಗುತ್ತಿದೆ. ನಮ್ಮ ದೇಶದ ವಿಚಾರವಂತರು ಇನ್ನೆಲ್ಲ ಪಂಥಬಿಲಿಸಿ ಗಾಂಧೀವಾದವನ್ನು ಸಂಪೂರ್ಣ ಕೊಲೆಯಿಂದ ಉಳಿಸಬೇಕೆಂದೇ ಈ ಲೇಖನದ ಉದ್ದೇಶ. ಪಾಲ್ಯ ಜನರಾದರೂ ಈ ದುರವಸ್ಥೆಯನ್ನು ಮನಗಂಡು ಗಾಂಧೀ ಕಾರ್ಯಕ್ರಮ ಜಲ್ಲಿ ಪ್ರವೃತ್ತರಾದರೆ ಭಾರತದ ಭಾಗ್ಯೋದಯ ಖಂಡಿತ.

ಪೆಮ್ಮದು ಒಂದೇ ದೇಶ; ನಾವೆಲ್ಲ ಒಂದೇ ಜನಾಂಗ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ, ಪರದೇಶೀಯರ ಅಡಳಿತದಿಂದ ಜರ್ಜರಿತವಾದ ಈ ಪೌರ್ಭಾಗ್ಯ ದೇಶದ ಜನರನ್ನು ಸಂಘಟಿಸಿದವರು ಗಾಂಧೀಜಿ. "ನಾವೆಲ್ಲ ಒಂದೇ ಜನಾಂಗ; ನಮ್ಮದು ಒಂದೇ ದೇಶ" ನೆಂದು ಜನಜನಿತವಾಗಿ ನಾರಿ ಜನಕೋಟಿಯನ್ನು ಅನಹಕಾರ ಚಳುವಳಿಯಲ್ಲಿ ದ ಮುಕೆಸಿದವರು ಗಾಂಧೀಜಿ. ಹಿಂದೂ ಮುಸ್ಲಿಂ ಐಕ್ಯತೆಗಾಗಿ ಆತ್ಮಬಲಿದಾನ ಮಾಡಿ ಮಡಿದವರು ಗಾಂಧೀಜಿ. ಆದರೆ ಇಂದು ಈ ಪಪಥಾಕ್ಯ ದೇಶದಲ್ಲಿ ಒಬ್ಬ ಕಾಂಗ್ರೆಸಿಗನಾದರೂ ಇವನ್ನು ಅಕ್ಷರಶಃ ಪಾಲಿಸುವವನಿಲ್ಲವಲ್ಲ ಎಂಬುದಕ್ಕೇರು ಮಿತಿಯುಬೇಕಾಗಿದೆ. "ನಾವೆಲ್ಲ ಭಾರತೀಯರು; ಭಾರತ ನಮ್ಮ ದೇಶ" ಎನ್ನುವ ಬದಲು ನಾವು ಸಂ.ರ್ಯಾತವಿಳಿರು, ಗುಜರಾತಿಗಳು, ಬಂಗಾಲಿಗಳು, ಮಲೆಯಾಳಿಗಳು, ಉತ್ತರ—ದಕ್ಷಿಣದವರೆಂದೂ ಕರೆಸಿಕೊಂಡು ಒಂದು ಹಳ್ಳಿಗಾಗಿ, ಅಥವಾ ತಾಲೂಕಿಗಾಗಿ, ಜಿಲ್ಲೆಗಾಗಿ ಪ್ರಾಂತ ಪ್ರಾಂತಗಳಲ್ಲಿ ವೈಷಮ್ಯವನ್ನು ಬಿತ್ತಿ ಜಡಿಯಲ್ಲೇ ತನ್ಮೆಯಂಗಾಗಿದ್ದೇವೆ.

ಜ್ಞಾನ ದಾರಿದ್ರ್ಯದಿಂದ ಪೀಡಿತರಾದ ಕೆಲವು ಸುಶಿಕ್ಷಿತ ಉತ್ತರ ಭಾರತೀಯರು ಇಂದಿಗೂ ದಕ್ಷಿಣ ಭಾರತೀಯರನ್ನೆಲ್ಲ ವಿದರಾಷಿಗಳೆಂದು ಸಂಬೋಧಿಸುತ್ತಾರೆ. ವಿಚಾರವಿಹೀನರಿಗೆ ದಾಕ್ಷಿಣಾತ್ಯರ ಸಾಂಸ್ಕೃತಿಕ ಪರಂಪರೆಯು ಗಂಧಗಾಳಿ ಇನ್ನೂ ಸೋಕಿಲ್ಲ. ದೇಶ ವಿಭಜನೆ ಬಾಗಿ, ಸ್ವಾತಂತ್ರ್ಯ ಅಥವಾ ಸ್ವರಾಜ್ಯ ಸಿಕ್ಕಿ ಇಪ್ಪತ್ತೈರಡು ವರ್ಷಗಳು ಸಂದವಾದರೂ ಮುಸಲ್ಮಾನರು ಇನ್ನೂ ರಾಷ್ಟ್ರೀಯವಾದಿಗಳಾಗಿಲ್ಲ. ಮುಸ್ಲಿಂ ಲೀಗಿನಂತಹ ಹುಚ್ಚುನಾಯಿ ಸಂಘ-ಸಂಸ್ಥೆಗಳ ಹಿಂದೆ ಬಹು ಜನ ಮುಸಲ್ಮಾನರು ಅಡ್ಡಾಡುವುದಕ್ಕೆ ಏನು ಹೇಳಬೇಕು? ಕ್ರೈಸ್ತರಲ್ಲೂ ರಾಷ್ಟ್ರೀಯ ಮನೋಸ್ಪರ್ಧೃತ್ತಿ ಇನ್ನೂ ಸರಿಯಾಗಿ ಮೂಡಿಬಂದಿಲ್ಲ. ಪರಧರ್ಮೀಯರೆಂದಾಕ್ಷಣ ಎಲ್ಲಕ್ಕೂ ಪರದೇಶಗಳ ಅಂಧಾಭಿಮಾನಿಯು ಮೋಹ ಇನ್ನೂ ಬಿಟ್ಟಿಲ್ಲ. ಅಂತಹ ಜನರೊಂದಿಗೇ ಕಾಂಗ್ರೆಸಿಗರೇ ಅಂದರೆ ಗಾಂಧೀ ವಾದಿಗಳೇ ಸ್ನೇಹ

(ಹದಿನೇಳನೇ ಪುಟ ನೋಡಿರಿ)

KARNATAKA BANK

extends liberal credit facilities to agriculturists and small-scale industrialists through its 69 branches.

Further particulars can be had either from our local office at:-

Car Street, UDIPI (Phone : 371)

or any other branch offices.

Karnataka Bank Limited,
(Regd. Office : Mangalore—3)

ತುಳುನಾಡಿನ ಧಾರ್ಮಿಕ ಪರಂಪರೆ

ಡಾ। ಕೂ. ವ್ಯಾ. ರಮೇಶ

‡ ‡

ಎಲ್ಲೆಲ್ಲೂ ಗೋಚರವಾಗುವ ಮತೀಯ ಗಲಭೆಗಳು ತುಳುನಾಡಿನಲ್ಲೂ ಅಪರೂಪಕ್ಕೆ ಕಾಣಿಸುತ್ತಿವೆ. ವಿಜಯನಗರಕ್ಕೆ ಮೊದಲು ಇಲ್ಲಿ ಮತೀಯ ಸೌಹಾರ್ದವೇ ತುಂಬಿತ್ತು; ವಿಜಯನಗರ ಆರಸರಕಾಲದಲ್ಲಿ ನಡೆದ ಗೊಂದಲಗಳಿಗೆ ರಾಜಕೀಯವೇ ಕಾರಣ. ಈಸಾಯಿಯರೂ ಸಹ ಸ್ಥಳೀಯರ ದೃಷ್ಟಿಯಿಂದ ಇಲ್ಲಿ ನಡೆದುಕೊಂಡರು. ತುಳುನಾಡಿನ ಧಾರ್ಮಿಕ ಪರಂಪರೆ ಅನಾದಿಯಿಂದಲೂ ಸಮನ್ವಯಾತ್ಮಕವಾಗಿಯೇ ಬೆಳೆದು ಬಂದಿದೆ.

ಇಂದಿನ ವಿಶ್ವದಲ್ಲಿ ಪ್ರಚಾರದಲ್ಲಿರುವ ಧರ್ಮಗಳೆಲ್ಲವೂ ತಮ್ಮ ಹುಟ್ಟುಗುಣಗಳನ್ನೂ ಗುರಿಗಳನ್ನೂ ಆಧ್ಯಾತ್ಮಿಕ ಮೌಲ್ಯಗಳನ್ನೂ ಕಳೆದುಕೊಂಡು, ಖರಿದು ವಸ್ತು ನಿಂಬಿಕೆಗಳ ಉದ್ಭವ ಸಂಸ್ಥೆಗಳಾಗಿ ಮೂಕ್ಯ ಉಳಿದಿವೆ ಎಂದು ಹೇಳಿದರೆ ಅದು ಅಸಹಜಾರದ ಮಾತಾಗಲಾರದು. ತನು ಬಂಕುದಾದರೂ ಎಲ್ಲಿಂದ; ತನ್ನಲ್ಲಿಯ ಜೀವಶಕ್ತಿಯು ಎಂತಹುದು; ಎಲ್ಲಿಯದ; ಜೀವನದ ಆರ್ಥವೇನು; ತಾನು ಹೇಗೆ ಬಾಳಿದೆ, ಏನೇನು ಮಾಡಿದರೆ ಆ ಜೀವವು ಸಾರ್ಥಕವಾಗುವುದು; ತಾನಿಲ್ಲವೆಂದಾಗ ಹೋಗುವುದಾದರೂ ಎಲ್ಲಿಗೆ; ಈ ತಿಲುವಿಲ್ಲದ ಜನನ-ಮರಣದ ಚಕ್ರವನ್ನು ಉರುಳಿಸುತ್ತಿರುವ ಶಕ್ತಿ ಯಾವುದು, ಎಂಬಹದು, ಎಲ್ಲಿಯದು— ಈ ಪ್ರಶ್ನೆಗಳಿಗೆ ಉತ್ತರ ಹುಡುಗುವ ಪ್ರಯತ್ನಗಳೇ ಜಗತ್ತಿನ ಎಲ್ಲ ಧರ್ಮಗಳ ತೋರುವಿಕೆಗೆ ಕಾರಣವಾದವು. ಈ ಪ್ರಯತ್ನದಳ ಗುರಿ ಒಂದೇ ಆದರೂ ಮಾಡಿಬಂದ ಉತ್ತರಗಳು ಬೇರೆ ಬೇರೆಯವಿದ್ದುವು; ಬೇರೆ ಬೇರೆಯ ರೂಪ, ಧ್ಯೇಯ, ಧೋರಣೆಗಳನ್ನು ತಾಳಿದವು. ಹೀಗಾಗಿ ಅಸ್ತಿತ್ವಕ್ಕೆ ಬಂದವುಗಳೇ ಸನಾತನ, ಜೈನ, ಬೌದ್ಧ, ಯಹೂದ್ಯ, ಕ್ರೈಸ್ತ, ಇಸ್ಲಾಂ ಇತ್ಯಾದಿ ಧರ್ಮಗಳು.

"ವಿವಿಧ ಧರ್ಮಗಳ ಧ್ಯೇಯ, ಉಪದೇಶಗಳನ್ನು ಕೇಳಿ, ಮನವರಿಕೆ ಮಾಡಿಕೊಂಡು, ಇದೇ ಸದ್ಧರ್ಮವೆಂದು ತಮ್ಮ ತಮ್ಮ ಪುಸ್ತಿಗೆ ಕಂಡ ಯಾವುದೇ ಮತವನ್ನು ಅವಲಂಬಿಸುವ ಸ್ವಾತಂತ್ರ್ಯ ಮಾನವಂಗೆ ದೊರೆತಿದ್ದರೆ, ಜಗತ್ತಿನ ಎಲ್ಲ ಧರ್ಮಗಳೂ ಇಂದಿರೂ ಶ್ರೇಷ್ಠ ಆಧ್ಯಾತ್ಮಿಕ ಮೌಲ್ಯಗಳಾಗಿಯೇ ಉಳಿಯುತ್ತಿದ್ದವು. ಆದರೆ ಆಹಮಹಮಿಕೆಯ, ಅಕ್ಷ ಸಮರ್ಥನೆಯ ದುರ್ಗುಣಗಳನ್ನು ಗೆಲ್ಲಲಾರದೇ ಹೋದ ಮಾನವ ಜಾತಿಯು, ಪರಸ್ಪರ ವಿರೋಧಿಗಳು, ಒಂದನ್ನೊಂದು ನಿರ್ನಾಮಗೊಳಿಸಲು ಸತತ ಪ್ರಯತ್ನಶಕ್ತಿರುವ, ಹಲವು ಸ್ವಾರ್ಥಪರ ಧಾರ್ಮಿಕ ಕೋಮುಗಳಾಗಿ ಒಡೆದು ಹೋಗಿರುವುದನ್ನು ಕಾಣುತ್ತೇವೆ. ಪರಧರ್ಮ ದುರ್ಸಹನೆಯೆಂಬ ವಿಷ ಗಾಳಿಯು ದಿನಬೆಡೆದೆ ಜಗತ್ತಿನ ಒಂದಲ್ಲ ಒಂದು ಪ್ರಾಂತದಲ್ಲಿ ಬೀಸುತ್ತಲಿದೆ; ಅದರ ಪ್ರಭಾವಕ್ಕೊಳಗಾಗಿ, ಭಾರತೀಯರೂ ಸೇರಿದಂತೆ, ವಿಶ್ವದ ಅಲ್ಲಲ್ಲಿಯ ಜನರು ಧರ್ಮದ ಹೆಸರಿನಲ್ಲಿ ಹೇಳಲ್ಲದ ಹಿಂಸಾಕೃತ್ಯಗಳನ್ನೆಸಗುತ್ತಲಿದ್ದಾರೆ. ಈ ಗಾಳಿಯು ಇಂದಿನ ತುಳುನಾಡಿನತ್ತಲೂ ಕೆಲವೊಮ್ಮೆ ಬೀಸುತ್ತಿದೆ; ಪಾಡಿನ ಪಾಡಿನವರ ಒಳ್ಳೆಯ ಹೆಸರಿಗೆ ಕಳಂಕವನ್ನುಂಟುಮಾಡುತ್ತಿದೆ.

ಭಾರತೀಯರಾದ ನಾವಿಂದು ಇಂತಹ 'ಧರ್ಮಸಂಕಟ'ಕ್ಕೀಡಾಗಿರುವುದಕ್ಕೆ ಕಾರಣಗಳನ್ನು ಹುಡುಕುವುದು ಕಷ್ಟದ ಕೆಲಸವೇನೂ ಅಲ್ಲ; ಇಂದು ನಮ್ಮಲ್ಲಿರುವ ಧಾರ್ಮಿಕ ಸಂಸ್ಕೃತಿಯು ವಿವಿಧ ನೆಲೆ, ನಿಲುವುಗಳ ಹುಟ್ಟು ಬೆಳವಣಿಗೆಗಳನ್ನು ಅಳವಡಿಸಿ ಅಭ್ಯೆಸಿಸುವ ಐತಿಹಾಸಿಕ ದೃಷ್ಟಿಯೊಂದಿದ್ದರೆ ಸಾಕು.

ವರ್ತಕರಾಗಿ ನಮ್ಮಲ್ಲಿಗೆ ಬಂದು, ಪದೇ ಪದೇ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಂಡು ಕೊನೆಗೂ ಇಡಿಯ ಭಾರತದ ಅಧಿಪತ್ಯವನ್ನು ಗಳಿಸಿಕೊಂಡ ಬಳಿಕವು ರು ಕೊಟ್ಟವೊದಲು ಕಾಲಿಟ್ಟದ್ದು ದಕ್ಷಿಣ ಭಾರತದಲ್ಲಿ; ಆದರಲ್ಲೂ ಪಶ್ಚಿಮ ಕರಾವಳಿಯಲ್ಲಿ. ಆವರು ಭಾರತದ ಎಲ್ಲೆಡೆಗಳಲ್ಲೂ ಕಂಡದ್ದು ಧಾರ್ಮಿಕ ಕ್ಷೇತ್ರಗಳಲ್ಲಿರು ಸಂದಿಗ್ಧ ವಾತಾವರಣವನ್ನು. ಅಕಸ್ಮಾತ್ತಾಗಿ ತಮ್ಮ ಕಾಲಿಗಾದ ಒಡೆತನವನ್ನು ಸ್ಥಿರೀಕರಿಸಿ ಕೊಳ್ಳವಲ್ಲಿ ಮತ್ತು ಭಾರತದ ವೈವಿಧ್ಯ ತಮ್ಮ ಪ್ರಭಾವವು ಕುಗ್ಗದಂತೆ ಹೊಡಿಕೊಳ್ಳವಲ್ಲಿ, ಭಾರತೀಯರ ಧಾರ್ಮಿಕ ಜೀವನಕ್ಕೆ ಕಳಂಕಪ್ರಾಯವಾಗಿದ್ದ ಈ ಪರಸ್ಪರ ದ್ವೇಷ ಭಾವನೆಗಳ ಪೂರ್ಣ ಉಪಯೋಗ ಪಡೆಯಲು ಅಂಗ್ಲ ಸಾಮ್ರಾಜ್ಯ ಶಾಹಿಗಳು ಹಿಂಜರಿಯಲಿಲ್ಲ. ಮೊದಲೇ ಉರಿಯುತ್ತಿದ್ದ ಜಾತಿ ದ್ವೇಷದ ಬೆಂಕಿಗೆ, ಹಂದಭೂ ಒದಗಿ ಖಂದಾಗಲೆಲ್ಲ ಇನ್ನಷ್ಟು ಎಣ್ಣೆ ಸುರಿದು ಕೆಚ್ಚಚ್ಚೆ ಬೆಬ್ಬಸಿ, ಹರಡಿಸಿ, ಒಗ್ಗಟ್ಟಿನ ತಂಪು ನೆನ್ಮನ್ನೆಂಟದಂತೆ ನೋಡಿಕೊಳ್ಳುವಲ್ಲಿ ಆಂಗ್ಲೇಯರು ತೀರಾ ಯಶಸ್ವಿಯಾಗಿದ್ದರು. ಆವರ ಪರಿಣಾಮವಾ, ಕೊನೆಗೂ ಭಾರತೀಯರು ತಾವು ಹೊಡಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಗೆದ್ದ ನಿಂತರಾದರೂ, ಒಡೆದ ಮನೆಯೇ ಅವರ ವಾಲಿಗಾನಿದೆಯೆಂಬುದು ನಮ್ಮೆಲ್ಲರ ಅನುಭವ ವೆಲ್ಲವೇ?

ಆದೇನೇ ಇರಲಿ, ಪ್ರಸಕ್ತ ಲೇಖನಕ್ಕೆ ಸಂಬಂಧಪಟ್ಟದು ಇಡಿಯ ಭಾರತವಲ್ಲ; ಆದರೆ ಒಂದು ಸಣ್ಣ ಸರಹದ್ದು ಪ್ರಾಂತವಾಗಿರುವ ದಕ್ಷಿಣ ಕನ್ನಡ ಜಿಲ್ಲೆ ಆಥವಾ ತುಳುನಾಡು. ಇಂದಿನ ತುಳುನಾಡಿನಲ್ಲಿ ವೈಷ್ಣವ, ಶೈವ, ಜೈನ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಪ್ರಚಾರದಲ್ಲಿವೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಇವುಗಳ ಪೈಕಿ ಕ್ರೈಸ್ತ ಧರ್ಮವು ತೀರ ಇತ್ತೀಚೆಗಷ್ಟೆ. ತುಳುನಾಡಿನಲ್ಲಿ ಆ ಧರ್ಮದ ಬೆಳವಣಿಗೆಯು ಆಂಗ್ಲೇಯರ ಮತ್ತು ಮತಾಂಧತೆಗೆ ಹೆಸರುವಾಸಿಯಾಗಿರುವ ಪೋರ್ಚುಗೀಸರ ಪ್ರಭಾವಕ್ಕೊಳಗಾಗಿತ್ತಾದರೂ ಅದು ಸ್ಥಳೀಯ ಸಂಸ್ಕೃತಿಯಿಂದಲೂ ಗಣನೀಯ ಪ್ರಮಾಣದಲ್ಲಿ ಸ್ಫೂರ್ತಿ ಪಡೆದಿರುತ್ತದೆ. ಆಂಗ್ಲೇಯರು ತುಳುನಾಡಿನ ವರನ್ನೂ ಕ್ರೈಸ್ತ ಮತಾವಲಂಬಿಗಳಾಗಿ ಪರಿವರ್ತಿಸುವ ಆಸಕ್ತಿ ವಹಿಸಿದ್ದರಾದರೂ ದೇಶೀಯ ಧರ್ಮಗಳ ಬಗೆಗೂ ತುಸುವ ಟ್ಟಿಗೆ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದರೆಂಬುದಕ್ಕೆ ಕಾರ್ಕಳ ಶಾಖಾಕಿನ ಕಾಂತಾವರದ ಕಾಂತೇಶ್ವರ ದೇವಾಸ್ಥಾನದ ತಾಸನವೊಂದನ್ನು ಇತ್ತಿ ಉದಹರಿಸಬಹುದಾಗಿದೆ. ಕ್ರಿ. ಶ. ೧೮೦೯ರಲ್ಲಿ ಖರೀಯಿಸಲಾದ ಈ ತಾಸನವು ಆ ದೇವಾಲಯದ "ಲಿಂಗರೂಪದಿಂದಲೂ ಶಿವಾಪರ್ಯಂತ" ಜೀರ್ಣೋದ್ಧಾರದ ಕೆಲಸವಾಗಬೇಕೆಂದು ಕುಂಪಿಣಿ (ಅಂದರೆ East India Company) ಸುವರು ಮತ್ತು ಅವರ ಅಧಿಕಾರವರ್ಗಕ್ಕೆ ಸೇರಿದ ರೇವನ್ಯೂ ಸಾಹೇಬರು ಆಜ್ಞೆ ವಿಧಿಸಿದರೆಂದೂ, ಆದರಂತೆಯೆ ಕ್ರೋಧಿನ-ವಿಭವ ಸಂವತ್ಸರಗಳಲ್ಲಿ ಜೀರ್ಣೋದ್ಧಾರದ ಕೆಲಸವು ನಡೆದ, ವಿಭವ ಸಂವತ್ಸರದ ಮಾಘ ಶುದ್ಧ ಗಳಂದು ಇಡಿಬಳಿನ ನಾರಾಯಣ ತಂತ್ರಿಗಳು "ಬ್ರಹ್ಮಕಲಶವ ಮಾಡಿ ಶುದ್ಧ, ಸಂಪ್ರೋಕ್ಷಣೆ ಮಾಡಿದ"ರೆಂದೂ ತಿಳಿಸಲಾಗಿದೆ.

ಹೀಗೆ ಆಂಗ್ಲೇಯರು ನಮ್ಮ ದೇಶದ ಧರ್ಮಗಳಲ್ಲೂ ವಿಷಯಬಂದಾಗ ಸಹಾನುಭೂತಿಯಿಂದ ಕಾಣುತ್ತಿದ್ದುದಕ್ಕೆ, ಅವರು ತಮ್ಮ ದೇಶದ ಮಟ್ಟಿಗೆ ಪರಂಪರೆಯಾಗಿ ಬೆಳೆಸಿಕೊಂಡು ಬಂದಿದ್ದ ರಾಜ್ಯನೀತಿ ಪತ್ತು ದೇವಕ-ಶಾಸ್ತ್ರಗಳ ಕ್ಷೇತ್ರಗಳಲ್ಲಿಯ ಉದಾರಾಭಿಪ್ರಾಯವಷ್ಟೇ ಅಲ್ಲದೆ, ಭಾರತೀಯರ, ತಾಳವರ ನಿವೇಶನಾತ್ಮಕವಾದ ಧಾರ್ಮಿಕ ಪರಂಪರೆಯೂ ಒಂದು ಕಾರಣವಾಗಿದ್ದಿತೆಂದೇ ಕೊಳ್ಳಬೇಕು. ದೇಶದ ಉಳಿದೆಲ್ಲ ಪ್ರಾಂತಗಳಿಗಿಂತಲೂ ಹೆಚ್ಚಾಗಿ ತುಳುನಾಡಿನಲ್ಲಿ ಆ ಪ್ರಾಂತದ ಇತಿಹಾಸ ಕಾಲದಿಂದಲೂ ಧಾರ್ಮಿಕ ಕ್ಷೇತ್ರದಲ್ಲಿ, ಕೆಲವೊಂದು ವಿಷಾದಕರವಲ್ಲದ ಅಂಶಗಳನ್ನೂ ಘಟನೆಗಳನ್ನೂ ಬಿಟ್ಟರೆ, ಶಾಂತಿಪೂರ್ಣ ವಾತಾವರಣವೇ ನೆಲೆಸಿಕ್ಕಿಂದು ದೊರೆತಿರುವ ಐತಿಹಾಸಿಕ ಆಧಾರಗಳಿಂದ ಉಹಿಸಬಹುದಾಗಿದೆ.

ಕ್ರಿ. ಶ. ೯ನೆಯ ಶತಮಾನದ ಮಧ್ಯಭಾಗದಿಂದ ೧೫ನೇ ಶತಮಾನದ ಮಧ್ಯಭಾಗದ ವರೆಗೆ ತುಳುನಾಡಿನ ದೊರೆತನವಾಗಿ ನೆರೆದ ಕೆಳದಿಯ ಅರಸುಮನೆಯ ಶಾಖೆಯ ಮಟ್ಟಿಗೆ ಆ ಪ್ರಾಂತದ ಉದಾರ ಧಾರ್ಮಿಕ ಪರಂಪರೆಯ ಪ್ರಭಾವಕ್ಕೆಯಳಗಾದ್ದರು. ಕೆಳದಿಯ ನಾಯಕರು, ವೀರಶೈವ ಮತಾವಲಂಬಿಗಳು, ತುಳುನಾಡು ಅವರ ವೈ ಸೇರಿದಾಗ ಆ ಪ್ರಾಂತದಲ್ಲಿ ವೈಷ್ಣವ, ಶೈವ, ಜೈನ ಮತ್ತು ಸ್ವಲ್ಪವು ಟ್ಟಿಗೆ, ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಪ್ರಚಾರದಲ್ಲಿದ್ದುವು. ಶಿವಾಲಯುಗಳಿಗೂ ವೀರಭೈರ ಮರಗಳಿಗೂ ಸಾಕಷ್ಟು ಪೋಷಣೆ ನೀಡಿ "ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ", "ಶಿವಗುರು ಭಕ್ತಿ ಪರಾಯಣ" ಎಂಬೀ ಬಿರುದುಗಳನ್ನು ಪಳಿಸಿಕೊಂಡಿದ್ದ ಕೆಳದಿಯ ನಾಯಕರು ಉಡುಪಿಯ ಶ್ರೀ ಕೃಷ್ಣ ದೇವರ ಮಠಕ್ಕೆ ದಾನಗಳನ್ನು ನೀಡಿದ್ದರೆಂಬುದು ತಿರೂರು ಮರದಲ್ಲಿರುವ ಎರಡ ತಾಮ್ರಶಾಸನಗಳಿಂದ ತಿಳಿದು ಬರುತ್ತದೆ. ಕೆಳದಿಯ ನಾಯಕರು ಇಸ್ಲಾಂ ಮತಕ್ಕೂ, ಕ್ರೈಸ್ತ ಧರ್ಮಗಳ ಪೋಷಕರಾಗಿಯೂ ಇದ್ದರೆಂಬುದು ಇತಿಹಾಸಜ್ಞರಿಗೆ ತಿಳಿದ ವಿಷಯವೇ ಆಗಿದೆ.

ಆದರೂ ಅಲ್ಲಿಯವರೆಗೆ ತುಳುನಾಡಿನಲ್ಲಿ ಜೈನ ಧರ್ಮಕ್ಕೆ ಅಪಾರ ಪ್ರೋತ್ಸಾಹವಿತ್ತು. ಅನೇಕಾನೇಕ ಸುಂದರ ಬಸದಿಗಳ ನಿರ್ಮಾಣಕ್ಕೆ ಮುಖ್ಯರಿಸಿದ್ದ ಹಲವು ಸ್ಥಳಿಕ ಜೈನ ಅರಸು ಮನೆತನಗಳನ್ನು ನಿರ್ಮೂಲನಮಾಡಿದವರು ಕೆಳದಿಯ ಆರಸರುಗಳೇ. ಆದರೆ, ಸ್ವಧರ್ಮಪರರಿಗಿಂತಲೂ ರಾಜಕೀಯ ಅವಶ್ಯಕತೆಯೇ ಆವರ ಈ ಎಸಕಕ್ಕೆ ಮುಖ್ಯ ಪ್ರೇರಣೆಯಾಗಿತ್ತೆಂಬ ದನ್ನು ಇಲ್ಲಿ ಒತ್ತಿ ಹೇಳಲೇ ಬೇಕು. ಒಟ್ಟಿನಲ್ಲಿ, ಜೈನ ಆರಸು ಮನೆತನಗಳು ಅಳಿದು ಹೋದ ಸೀಲೆ ಅನೇಕ ಸುಂದರ ಬಸದಿಗಳೂ ವೈಭವರಹಿತವಾಗಿ ಬಾಳು ಬೀಳಲಿಡಿಗಿದವು.

ಹೀಗೆ ಯಾವುದೇ ಒಂದು ಧರ್ಮದ ಹಿಂಬಾಲಕರಲ್ಲಿ ನಿಷ್ಠೆಯನ್ನು, ಅದರ ಪರಿಣಾಮವಾಗಿ ಆ ಧರ್ಮವು ಬಲಿಷ್ಠವಾಗುವುದು ತುಳುನಾಡಿನ ಧಾರ್ಮಿಕ ಪರಂಪರೆಗೆ ಬಾಹ್ಯವಾದ ವೈಲಕ್ಷಣ್ಯವೇ ಆಗಿದೆ. ಈ ದೋಷ ತುಳುನಾಡಿನಲ್ಲಿ ಕಾಣಿಸಿಕೊಂಡದ್ದೇ, ಕ್ರಿ. ಶ. ೧೫ನೆಯ ಶತಮಾನದ ಮಧ್ಯಭಾಗದಲ್ಲಿ ಆ ನಾಡು ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಾಗಿನಿಂದ ಎಂದು ತಿಳಿಯಬೇಕು. ತುಳುನಾಡನ್ನು ಕೆಳದಿಯವರ ಆಡಳಿತಕ್ಕೆ ಒಪ್ಪಿಸಿದವರು ವಿಜಯನಗರ ಸಾಮ್ರಾಟರು. ಆಸಾವಪ್ರಭುತ್ವವು ಹುಟ್ಟಿದ್ದೆ ಮಹಮ್ಮದೀಯರ ದಾಳಿಗಳನ್ನು ತಡೆಗಟ್ಟಿದ ಕ್ಷತ್ರಿಯಾಧಾರಿತವಲ್ಲಾದರೂ ಹಿಂದೂ ಸಂಸ್ಕೃತಿಯು ನಿರಾತಂಕವಾಗಿ ಬೆಳೆಯುವಂತೆ ಮಾಡಲೆಂದು. ಇದೇ ಕಾರಣಕ್ಕಾಗಿ ವಿಜಯನಗರದ ಸಾಮ್ರಾಟರು ತಮ್ಮ ಉತ್ತರಕ್ಕಿದ್ದ ಮಹಮ್ಮದೀಯರ ದಾಳಿಗಳನ್ನು ತಡೆಗಟ್ಟಿದ ಪ್ರಬಲ ಹಿಂದೂ ಸಾಮ್ರಾಜ್ಯವಾಗಿ ಬೆಳೆದರ

ಆದರೂ ಆ ಕಾಲದ ತುಳುನಾಡಿನಲ್ಲಿ ಕೆ ಲವೊಮ್ಮೆ ಧಾರ್ಮಿಕ ಗಲಭೆಗಳು ಏಡಿ ದ್ದೇಳುತಿದ್ದವೆಂಬುದು ಮಾನವ ಜಾತಿಯ ಮೂಢನಿಷ್ಠೆಯ ದೌರ್ಬಲ್ಯವನ್ನೇ ಸೂಚಿಸು ತ್ತದೆ.

ವಿಜಯನಗರ ಕಾಲದ ತುಳುನಾಡಿನಲ್ಲಿ ಶೈವ, ವೈಷ್ಣವ ಮತ್ತು ಜೈನ ಧರ್ಮಗಳು ಪ್ರಬಲವಾಗಿದ್ದವು. ಅಲ್ಲದೆ, ವಿದೇಶೀ ವಾಣಿಜ್ಯವು ದಿನೇ ದಿನೇ ಬೆಳೆಯುತ್ತ ಬಂದಿದ್ದು, ಪರ್ಷಿಯ, ಅರೇಬಿಯ ಮುಂತಾದ ಮುಸಲ್ಮಾನ ರಾಷ್ಟ್ರಗಳಿಂದ ಬಂದು ತುಳುನಾಡಿನಲ್ಲಿ ನೆಲೆಸಿದ್ದ ಮುಹಮ್ಮದೀಯ ವರ್ತಕರು ತಂಡಗಳಾಗಿ ಪ್ರಮುಖ ವರ್ತಕ ಪಟ್ಟಣಗಳಲ್ಲಿ ಕಾಣಿಸಿಕೊಂಡಿದ್ದರು. ಈ ತಂಡಗಳನ್ನು ಅಂದಿನ ಶಾಸನಗಳಲ್ಲಿ "ಹಂಜಮಾ"ಎಂದು ಉಲ್ಲೇಖಿಸಲಾಗಿದೆ.

ಈ ಹಂಜಮಾನದವರನ್ನು ಕಷ್ಟ ನಷ್ಟದಲ್ಲಿ ನೀಡುಮಾಡುವಂತಹ ಪರಿಸ್ಥಿತಿಗಳು ಕೆಲವೊಮ್ಮೆ ಉಂಟಾಗುತ್ತಿದ್ದವು. ಉದಾಹರಣೆಗೆ, ಕ್ರಿ. ಶ. ೧೪೦೩ರಲ್ಲಿ ಬಾರಕೂರು ರಾಜ್ಯದ ರಾಜ್ಯಪಾಲನಾಗಿದ್ದ ಮಹಾಬಳದೇವ ಒಡೆಯನು ರಾಜಧಾನಿ ಪಟ್ಟಣ ಬಾರಕೂರಿನ ಹತ್ತು ಕೇರಿಯ ಹಂಜಮಾನದವರ"ಅನ್ಯಮನ್ನೆಯಮಯ ಸಂಕೇತಗಳನ್ನು'ಹೂವುದೋರಣಕಾಸ್ಯ ಗಳೆದು ಹಾಕಿದನು. ಇದರಿಂದಾಗಿ ಹಂಜಮಾನದವರಿಗೆ ಹಿಚ್ಚಿನ ತೊಂದರೆಗಳುಂಟಾದವು. ಆ ವೇಳೆಗೆ ಹತ್ತು ಕೇರಿಯ ಪ್ರಧಾನಪತಿಯಾಗಿದ್ದ ಚಿಕ್ಕಣ್ಣಿಯು ರಾಜ್ಯಪಾಲನ ಈ ವರ್ತನೆಯು ನ್ಯಾಯಯುತವಲ್ಲವೆಂದು ಸಾಮ್ರಾಟ ವಿಜಯ ಬುಕ್ಕರಾಯನಲ್ಲಿ ಹೋಗಿಯಿಡಲು, ಬುಕ್ಕರಾಯನೂ ಗೋವೆಯ ರಾಜ್ಯಪಾಲ ಬಾಚಣ್ಣ ಒಡೆಯನೂ ಬಾರಕೂರಿಗೆ ಹೋಗಿ ವಿಚಾರಣೆ ನಡೆಸಿ ತೀರ್ಪು ನೀಡಬೇಕೆಂದು ಆಜ್ಞೆ ವಿಧಿಸಿದನು. ಅದರಂತೆಯೇ ಬಾರಕೂರಿಗೆ ಹೋದ ಬಾಚಣ್ಣ ಒಡೆಯನು ಮಹಾಬಳದೇವನ ವರ್ತನೆಯು ವಿಪರೀತವೆಂದು ಮನಗಂಡು, ತೊಂದರೆಗೀಡಾಗಿದ್ದ ಹಂಜಮಾನದವರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಪುನಃ ಅವರ ಸ್ವಾಧೀನಪಡಿಸಿ, ಅವರು ಅನುಭವಿಸಿದ್ದ ಕಷ್ಟನಷ್ಟಗಳಿಗೆ ಪರಿಹಾರವಾಗಿ ಅವರಿಗೆ ಭೂಮಿದಾನವನ್ನೂ ಮಾಡಿದನು.ಕ್ರಿ.ಶ ೧೪೧೫ರಲ್ಲಿ ವಂಗಳೂರು ರಾಜ್ಯಕ್ಕೆ ರಾಜ್ಯಪಾಲನಾಗಿದ್ದ ತಿಮ್ಮಣ್ಣಿ ಒಡೆಯನು, ತನ್ನ ಕೂರ್ಮವ್ಯೂಹದೆಗಳನ್ನು ಏಸಿ ನಂದ ೧೫ ಡಿಸೆಂಬರ ಬಂದಿದ್ದ ಮಂಗಳೂರು ನಗರದ ಹಂಜಮಾನದವರ ವೇಲೆ ಯಾವುದೋ ಕಾರಣವಾಗಿ ಸಾಮ್ರಾಜ್ಯದ ಸೇನೆಯನ್ನು "ಹರಿಂಬಟ್ಟಿ" ಅಽಕಾರ ವ್ಯಾಪ್ತಿಗಿದ್ದ ಕೆಲವು ಹಳ್ಳಿಗಳನ್ನು ಸುಟ್ಟುಹಾಕಿದನು. ಈ ವಾರ್ತೆಯು ಸಾಮ್ರಾಟ ೧ನೆಯ ದೇವರಾಯನ ಮಂತ್ರಿ ಸಾಮ್ರಾಜ್ಯದ ಪ್ರಧಾನ ದಂಡನಾಯಕರುಗಳಿಗೆ ಕಿವಿಮುಟ್ಟಿತಾಗಿ, ಹಂಜಮಾನದವರ ವಿರುದ್ಧ ಕೈಗೊಂಡಿದ್ದ ಕಾರ್ಯಕ್ರಮಗಳನ್ನು ಆ ಕೂಡಲೆ ನಿಲ್ಲಿಸಿ, ಅವರ ಒಕ್ಕಲುತನವನ್ನು ಅವರಿಗೇ ಒಪ್ಪಿಸಬೇಕೆಂದೂ, ಅಲ್ಲದೆ ಅವರಿಗೆ ಮಾನ್ಯ ಪರಿಹಾರ ನಿಡಬೇಕೆಂದೂ, ಆಜ್ಞೆವಿಧಿಸಲಾಯಿತು. ರಾಜ್ಯಪಾಲನೂ ತನ್ನ ಪ್ರಧಾನಿಗಳ ನಿಶ್ಕರ್ಷೆಯಂತೆ, ಬಂಗ, ಅಚಿಲ ಮುಂತಾದ "ಸಮಸ್ತ ಕಟ್ಟಳೆ" ಯವರ ಸಮ್ಮುಖದಲ್ಲಿ ಹಂಜಮಾನದವರನ್ನು ಕರೆಸಿ ರಾಜಾಜ್ಞೆಯನ್ನು ನೆರವೇರಿಸಿದನು.

ಅಷ್ಟೂ, ಈ ಘಟನೆಯಿಂದಾಗಿ ತಿಮ್ಮಣ್ಣಿ ಒಡೆಯನಿಗೂ ಹಂಜಮಾನದವರಿಗೂ ನಡುವೆ ವೈರ ಬೆಳೆಗು ಕ್ರಿ. ಶ ೧೪೨೬ರಲ್ಲಿ ಹಂಜಮಾನದವರು ಮತ್ತೊಂದು ಬಾರಿ ಶಂಕಟಕ್ಕೀಡಾಗಬೇಕಾಯಿತು. ತಿಮ್ಮಣ್ಣಿ ಒಡೆಯನ ಪ್ರತೀಕಾರಕ್ಕೆ ಬೆದರಿ ಹಂಜಮಾನದವರ ಮುಖ್ಯಸ್ಥನಾದ ಉಮ್ಮರ ಮರಕಾಲನು ಕಪ್ಪ ಬಂಧುಬಳಗ, ಪರಿವಾರಗಳೊಡನೆ ನಗರಿರಾಜ್ಯದ ದೊರೆ ಸಂಗಿರಾಯ ಒಡೆಯನ ಬಳಿ ಧಾವಿಸಿ, ತನಗೂ ರಾಜ್ಯಪಾಲನಿಗೂ ನಡುವೆ ಪುನಃ ಶಾಂತಿಯು ವಾತಾವರಣವು ಏಳೆಗುವಂತೆ ಮಾಡಬೇಕೆಂದು ಬಿನ್ನವಿಸಿಕೊಂಡನು. ಸಂಗಿರಾಯನು ಅದಕ್ಕೆ ಒಪ್ಪಿ, ಮಾತುಕತೆಗಳು ನಡೆಯುತ್ತಿರುವಾಗ ಉಮ್ಮರ ಮರಕಾಲನೂ ಅವನ ಹಿಂಬಾಲಕರೂ (ಉತ್ತರ ಕನ್ನಡ ಜಿಲ್ಲೆ ಹು) ಕಾಸರಕೋಡಿನಲ್ಲಿ ತಂಗಿರಬೇಕೆಂದೂ ತಾಕೀತಿಸಿದನು. ಆಲ್ಲದೆ ಹಂಜಮಾನದವರ ರಕ್ಷಣೆಗಾಗಿ ಕೋಟೀಶ್ವರ ನಾಯಕನ ನಾರುಶಸ್ತ್ರದಲ್ಲಿ ತನ್ನ ಸೇನೆಯ ಸಾವಿರ ಭಟರನ್ನೂ ಕಾಸರಕೋಡಿಗೆ ಕಳುಹಿಸಿಕೊಟ್ಟನು. ಆಷ್ಟರಲ್ಲೇ ತಿಮ್ಮಣ್ಣಿ ಒಡೆಯನು ಸೇನೆಯೊಂದಿಗೆ ಮುನ್ನಡೆದು ಮೋಸದಿಂದ ಕಾಸರಕೋಡಿನ್ನು ವಶಪಡಿಸಿ, ಉಮ್ಮರ ಮರಕಾಲ ಮತ್ತು ಹಂಜಮಾನದವರ ಹೆಣ್ಣುಕಟ್ಟಳೆಗಳನ್ನು ತೊಂದರೆಗೀಡುಮಾಡಿದವನಾಗಿ, ಸಿಟ್ಟಿಗೆದ್ದ ಕೋಟೀಶ್ವರ ನಾಯಕನು ಸಾಮ್ರಾಜ್ಯದ ಸೇನೆಯೊಡನೆ ಕಾದಾಡುತ್ತ ಹಂಜಮಾನದವರನ್ನು ಸುರಕ್ಷಿತ ಪ್ರದೇಶಕ್ಕೆ ದೋಣಿಗಳ ಮೂಲಕ ಸಾಗಿಸಿ ನಂತರ ಯುದ್ಧರಂಗದಲ್ಲಿ ವೀರ ಮರಣವನ್ನಪ್ಪಿದನು.

ಮೇಲೆ ವಿವರಿಸಲಾಗಿರುವ ಕ್ರಿ. ಶ. ೧೪೦೩ರ, ೧೪೧೫ ಮತ್ತು ೧೪೨೬ರ ಘಟನೆಗಳಲ್ಲಿ ಕಷ್ಟಕ್ಕೀಡಾದವರು ಇಸ್ಲಾಂ ಧರ್ಮದ ಹಂಜಮಾನದವರೇ ಆಗಿದ್ದರೂ, ಅದಕ್ಕೆ ಕಾರಣರು ತುಳುನಾಡಿನ ಜನಸಾಮಾನ್ಯರಾಗಿರದೆ, ಸಾಮ್ರಾಜ್ಯದ ಅಧಿಕಾರಿಗಳಾಗಿದ್ದರು. ಅಲ್ಲದೆ ಮೊದಲ ಎರಡು ಘಟನೆಗಳಲ್ಲಿ ಸಾಮ್ರಾಟರೂ, ಮೂರನೆಯ ಘಟನೆಯಲ್ಲಿ ಜೈನ ಧರ್ಮದವನಾದ ಸಗರಿಯ ಸಂಗಿರಾಯು ಒಡೆಯರೂ ವಹ್ವ ಪ್ರವೇಶಿಸಿ ಹಂಜಮಾನದವರ ಹಕ್ಕುಬಾಧ್ಯತೆಗಳನ್ನು ಕಾಪಾಡಿದ್ದರೆಂಬುದು ನಾಡಿನವರಿಗೆ ಚೆನ್ನಾಗಿಯೇ ತಿಳಿದ ಸಂಗತಿ.

ಆದರೆ ವಿಜಯ ನಗರ ಕಾಲದ ತುಳು ನಾಡಿನಲ್ಲಿ ಮಹಮ್ಮದೀಯರನ್ನಳಿದು ಇನ್ನಿತರ ಧರ್ಮಗಳವರ ನಡುವೆ ಕಾಡ ಕೆಲವೊಮ್ಮೆ ಕಾದಾಟಗಳು ನಡೆದು ಹೋಗುತ್ತಿದ್ದವು. ಕ್ರಿ. ಶ. ೧೪ ನೆ ಶತಮಾನದ ದ ಗಾಸೊಡೆಯು ದಿನದಂದು ಬರೂರಿನ ಪಡ ವರೀರಿ ಮತ್ತು ಮೂಡಕೇರಿಗಳ ನಿವಾಸಿಗಳ ನಡುವೆ ಭೀಕರಧಾವಣೆಗಳು ತಲೆದೋರಿ ಹಿಂಸಾತ್ಮಕ ಘಟನೆಗಳಲ್ಲಿ ಕೊನೆಗೊಂಡಾದ, ಕಂದಾವರ ಗ್ರಾಮದವರ ಮಧ್ಯಸ್ಥಿಕೆಯಲ್ಲಿ ಸಮಧಾನದ ಒಪ್ಪಂದವೊಂದನ್ನು ರಚಿಸಿ, ಎರಡು ಕೇರಿಯವರ ನಡುವೆ ಪುನಃ ಶಾಂತಿಯ ವಾತಾವರಣವನ್ನು ಕಲ್ಪಿಸಿದ ಖುಗೆಗೆ ಇದೇ ಪತ್ರಿಕೆಯ 1968ರ ದೀಪಾವಳಿ ಸಂಚಿಕೆಯ 'ತುಳುನಾಡಿನಲ್ಲಿ ಹಬ್ಬಗಳು' ಎಂಬ ಲೇಖನದಲ್ಲಿ ವಿಶದವಾಗಿ ಬರೆದಿದ್ದೆ. ಅದರಂತೆಯೆ, ಕ್ರಿ. ಶ. ೧೫೫೦ರಲ್ಲಿ ರಾಷ್ಟ್ರಕ ದೀಪೋತ್ಸವಕ್ಕೆ ಸಂಬಂಧಿಸಿದ ಕಟಿಪಟಿ ಹಬ್ಬದಂದು ಕೋಟೇಶ್ವರ ದೇವಾಲಯದ ಅವರಣದಲ್ಲಿ ನಡೆದು ಹೋದ ಹತ್ಯಾಕಾಂಡದಿಂದಾಗಿ ಅರು ತಿಂಗಳುಗಳ ಕಾಲ ಬಾಗಿಲು ಮುಚ್ಚಿದ್ದ ದೇವಾಲಯವನ್ನು ಶುದ್ಧೀಕರಿಸಿ ಪುನಃ ಬಾಗಿಲು ತೆರೆಯಿಸಿದವನು ತುಳುನಾಡಿನ ಅಂದಿನ ರಾಜ್ಯಪಾಲನೂ ಇಸ್ಲಾಂ ಧರ್ಮದವನೂ ಆದ ಎಬಿದಾಳುಖಾನನೆಂಬೂ, ಕ್ರಿ. ಶ. ೧೬೩೫ರಲ್ಲಿ, ದೀವಳಿಗೆ ಹಬ್ಬದ ಸಂದರ್ಭದಲ್ಲಿ, ಮೂಡಬಿದಿರೆಯ ಬೆಟ್ಟಕೇರಿಯವರಿಗೂ ಪಡಲಂಗಡಿ ಕೇರಿಯವರಿಗೂ ನಡುವೆ, ಹಿಂದೂ—ಜೈನ ಧರ್ಮಗಳಿಗೆ ಸಂಬಂಧಿಸಿದಂತೆ, ಜಾತಿಕಲಹವು ಹುಟ್ಟಿ, ಹೇಳ ಹೇಸುವ ಅತ್ಯಾಚಾರಗಳಲ್ಲಿ ಕೊನೆಗೊಂಡಾಗ, ತಾಳವರೆಲ್ಲರ ಪ್ರೀತಿ ಗಾರವಕ್ಕೆ ಪಾತ್ರರಾಗಿದ್ದ ಜೈನಗುರು ಕಳುಸಮಂತಭದ್ರರು ಮಧ್ಯ ಪ್ರವೇಶಿಸಿ, ತಾವೂ ತಮ್ಮ ಶಿಷ್ಯವರ್ಗದವರೂ ಅನಶನವ್ರತವನ್ನು ಕೈಗೊಂಡು ಅಸು ನೀಗುವುದಾಗಿ ಬೆದರಿಕೆ ಹಾಕಿದ ಪರಿಣಾಮವಾಗಿ ಶಾಂತ ವಾತಾವರಣವು ಮರಳಿತೆಂದೂ ಅದೇ ಲೇಖನದಲ್ಲಿ ತೋರಿಸಿ ಕೊಟ್ಟಿದ್ದೆ.

ಐತಿಹಾಸಿಕ ದೃಷ್ಟಿಯಿಂದ ಹೇಳಿವುದಾದರೆ ತುಳುನಾಡಿನಲ್ಲಿ ಧಾರ್ಮಿಕ ಕಲಹಗಳು ಕಾಣಿಸಿಕೊಂಡದ್ದು ಆ ಪ್ರಾಂತ ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಾನಂತರವೇ ಎಂಬ ಪೀಠಿಕೆಯನ್ನು ಹೇಳಿರುವೆನು. ಕ್ರಿ. ಶ. ೧೪೩೬ನೆಯ ಶತಮಾನದ ಪೂರ್ವಭಾಗದಲ್ಲಿ, ವಿಜಯನಗರ ಸಾಮ್ರಾಜ್ಯವು ಸ್ಥಾಪಿತವಾದ, ನೇರೆಗೆ ಭಾರತದ ಧಾರ್ಮಿಕ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾದ ಬದಲಾವಣೆಗಳಂಟಾಗಿದ್ದವು. ಆ ಕಾಲಕ್ಕೂ ಹಿಂದಿನ ಶತಮಾನಗಳಲ್ಲಿ ಜಗತ್ತಿನ ನೆರೆಬೇರೆ ಭಾಗಗಳಿಂದ ಎಷ್ಟೋ ಯಾತ್ರಾಸಂಗಗಳು ಭಾರತಕ್ಕೆ ಬಂದು ತಳವೂರಿದ್ದವು. ಆದರೆ ಆ ಯಾತ್ರಾಸಂಗಗಳ ಧಾರ್ಮಿಕ ಆಚಾರ ಅನುಷ್ಠಾನಗಳು ದೇಶೀಯರ ಧಾರ್ಮಿಕ ಜೀವನದೊಂದಿಗೆ ಸಮಾಧಾನ ಹೊಂದಿ, ಅವರೆಲ್ಲರೂ ತಮ್ಮವರೇ ಆಗಿಹೋದರು. ಹೀಗಾಗದೆ ತಮ್ಮ ಧರ್ಮದ ಮಹಶ್ವತನ್ನೂ ಆಚಾರ ಅನುಸರಣೆಗಳನ್ನೂ ಭದ್ರವಾಗಿ ಉಳಿಸಿ ಬೆಳೆಸಿಕೊಂಡು ಬಂದಿಗಿವರೆಗಿದರೆ ಇಸ್ಲಾಂ ಧರ್ಮದವರು ಮಾತ್ರ. ಇದರಿಂದಾಗಿ ಧಾರ್ಮಿಕ ಕ್ಷೇತ್ರದಲ್ಲಿ ತಲೆದೋರಿದ ನಿಸ್ಕರ್ಷೆಯ ಅಂತಿಮ ಫಲವೆಂಬಂತೆ ಹುಟ್ಟಿದ ದ ಗಾಸೊಡೆಯು ದಿನದಂದು ಬರೂರಿನ ಪಡ ವರೀರಿ ಮತ್ತು ಮೂಡಕೇರಿಗಳ ನಿವಾಸಿಗಳ ನಡುವೆ ಭೀಕರಧಾವಣೆಗಳು ತಲೆದೋರಿ ಹಿಂಸಾತ್ಮಕ ಘಟನೆಗಳಲ್ಲಿ ಕೊನೆಗೊಂಡಾದ, ಕಂದಾವರ ಗ್ರಾಮದವರ ಮಧ್ಯಸ್ಥಿಕೆಯಲ್ಲಿ ಸಮಧಾನದ ಒಪ್ಪಂದವೊಂದನ್ನು ರಚಿಸಿ, ಎರಡು ಕೇರಿಯವರ ನಡುವೆ ಪುನಃ ಶಾಂತಿಯ ವಾತಾವರಣವನ್ನು ಕಲ್ಪಿಸಿದ ಖುಗೆಗೆ ಇದೇ ಪತ್ರಿಕೆಯ 1968ರ ದೀಪಾವಳಿ ಸಂಚಿಕೆಯ 'ತುಳುನಾಡಿನಲ್ಲಿ ಹಬ್ಬಗಳು' ಎಂಬ ಲೇಖನದಲ್ಲಿ ವಿಶದವಾಗಿ ಬರೆದಿದ್ದೆ. ಅದರಂತೆಯೆ, ಕ್ರಿ. ಶ. ೧೫೫೦ರಲ್ಲಿ ರಾಷ್ಟ್ರಕ ದೀಪೋತ್ಸವಕ್ಕೆ ಸಂಬಂಧಿಸಿದ ಕಟಿಪಟಿ ಹಬ್ಬದಂದು ಕೋಟೇಶ್ವರ ದೇವಾಲಯದ ಅವರಣದಲ್ಲಿ ನಡೆದು ಹೋದ ಹತ್ಯಾಕಾಂಡದಿಂದಾಗಿ ಅರು ತಿಂಗಳುಗಳ ಕಾಲ ಬಾಗಿಲು ಮುಚ್ಚಿದ್ದ ದೇವಾಲಯವನ್ನು ಶುದ್ಧೀಕರಿಸಿ ಪುನಃ ಬಾಗಿಲು ತೆರೆಯಿಸಿದವನು ತುಳುನಾಡಿನ ಅಂದಿನ ರಾಜ್ಯಪಾಲನೂ ಇಸ್ಲಾಂ ಧರ್ಮದವನೂ ಆದ ಎಬಿದಾಳುಖಾನನೆಂಬೂ, ಕ್ರಿ. ಶ. ೧೬೩೫ರಲ್ಲಿ, ದೀವಳಿಗೆ ಹಬ್ಬದ ಸಂದರ್ಭದಲ್ಲಿ, ಮೂಡಬಿದಿರೆಯ ಬೆಟ್ಟಕೇರಿಯವರಿಗೂ ಪಡಲಂಗಡಿ ಕೇರಿಯವರಿಗೂ ನಡುವೆ, ಹಿಂದೂ—ಜೈನ ಧರ್ಮಗಳಿಗೆ ಸಂಬಂಧಿಸಿದಂತೆ, ಜಾತಿಕಲಹವು ಹುಟ್ಟಿ, ಹೇಳ ಹೇಸುವ ಅತ್ಯಾಚಾರಗಳಲ್ಲಿ ಕೊನೆಗೊಂಡಾಗ, ತಾಳವರೆಲ್ಲರ ಪ್ರೀತಿ ಗಾರವಕ್ಕೆ ಪಾತ್ರರಾಗಿದ್ದ ಜೈನಗುರು ಕಳುಸಮಂತಭದ್ರರು ಮಧ್ಯ ಪ್ರವೇಶಿಸಿ, ತಾವೂ ತಮ್ಮ ಶಿಷ್ಯವರ್ಗದವರೂ ಅನಶನವ್ರತವನ್ನು ಕೈಗೊಂಡು ಅಸು ನೀಗುವುದಾಗಿ ಬೆದರಿಕೆ ಹಾಕಿದ ಪರಿಣಾಮವಾಗಿ ಶಾಂತ ವಾತಾವರಣವು ಮರಳಿತೆಂದೂ ಅದೇ ಲೇಖನದಲ್ಲಿ ತೋರಿಸಿ ಕೊಟ್ಟಿದ್ದೆ.

ಐತಿಹಾಸಿಕ ದೃಷ್ಟಿಯಿಂದ ಹೇಳಿವುದಾದರೆ ತುಳುನಾಡಿನಲ್ಲಿ ಧಾರ್ಮಿಕ ಕಲಹಗಳು ಕಾಣಿಸಿಕೊಂಡದ್ದು ಆ ಪ್ರಾಂತ ವಿಜಯನಗರ ಸಾಮ್ರಾಜ್ಯದೊಂದಿಗೆ ವಿಲೀನಗೊಂಡಾನಂತರವೇ ಎಂಬ ಪೀಠಿಕೆಯನ್ನು ಹೇಳಿರುವೆನು. ಕ್ರಿ. ಶ. ೧೪೩೬ನೆಯ ಶತಮಾನದ ಪೂರ್ವಭಾಗದಲ್ಲಿ, ವಿಜಯನಗರ ಸಾಮ್ರಾಜ್ಯವು ಸ್ಥಾಪಿತವಾದ, ನೇರೆಗೆ ಭಾರತದ ಧಾರ್ಮಿಕ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾದ ಬದಲಾವಣೆಗಳಂಟಾಗಿದ್ದವು. ಆ ಕಾಲಕ್ಕೂ ಹಿಂದಿನ ಶತಮಾನಗಳಲ್ಲಿ ಜಗತ್ತಿನ ನೆರೆಬೇರೆ ಭಾಗಗಳಿಂದ ಎಷ್ಟೋ ಯಾತ್ರಾಸಂಗಗಳು ಭಾರತಕ್ಕೆ ಬಂದು ತಳವೂರಿದ್ದವು. ಆದರೆ ಆ ಯಾತ್ರಾಸಂಗಗಳ ಧಾರ್ಮಿಕ ಆಚಾರ ಅನುಷ್ಠಾನಗಳು ದೇಶೀಯರ ಧಾರ್ಮಿಕ ಜೀವನದೊಂದಿಗೆ ಸಮಾಧಾನ ಹೊಂದಿ, ಅವರೆಲ್ಲರೂ ತಮ್ಮವರೇ ಆಗಿಹೋದರು. ಹೀಗಾಗದೆ ತಮ್ಮ ಧರ್ಮದ ಮಹಶ್ವತನ್ನೂ ಆಚಾರ ಅನುಸರಣೆಗಳನ್ನೂ ಭದ್ರವಾಗಿ ಉಳಿಸಿ ಬೆಳೆಸಿಕೊಂಡು ಬಂದಿಗಿವರೆಗಿದರೆ ಇಸ್ಲಾಂ ಧರ್ಮದವರು ಮಾತ್ರ. ಇದರಿಂದಾಗಿ ಧಾರ್ಮಿಕ ಕ್ಷೇತ್ರದಲ್ಲಿ ತಲೆದೋರಿದ ನಿಸ್ಕರ್ಷೆಯ ಅಂತಿಮ ಫಲವೆಂಬಂತೆ ಹುಟ್ಟಿದ

(ಉದಿನೈದನೇ ಪುಟ ನೋಡಿರಿ)

ದೀಪಾವಳಿಯ ಶುಭಾಶಯಗಳು

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ



ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾರ್ಕಿಂಗಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಶ್ರೀರಾಮಚಂದ್ರನ ಜನನ ಕಾಲ ಯಾವುದು?

ಪಂಡಿತ ಬಿ. ಲಕ್ಷ್ಮಣದೇವ ವಿದ್ಯಾರ್ಥಿ

ಪ್ರತಿವರ್ಷವೂ ಪರಮೋತ್ಸವ ಶ್ರೀರಾಮಚಂದ್ರಪ್ರಭುವಿನ ಜನ್ಮದಿನ ಚೈತ್ರ ಶುಕ್ಲ ನವಮಿ "ಶ್ರೀರಾಮನವಮಿ" ಯೆಂದು ಲೋಕಪ್ರಸಿದ್ಧಿ. ರಾಮಭಕ್ತವಿಮಾನಕ್ಕೆ ಮಹೋತ್ಸವದ ದೇಶದಾದ್ಯಂತ ಮಾತ್ರವಲ್ಲ ವಿದೇಶಗಳಲ್ಲಿಯೂ ಅತಿ ವಿಜೃಂಭಣೆಯಿಂದ ಆಚರಿಸಲ್ಪಡುತ್ತಿದೆ. ಅಯೋಧ್ಯಾಪುರಿಯಲ್ಲಿ ಈ ಉತ್ಸವಕ್ಕೆ ಬಹಳ ಪ್ರಾಧಾನ್ಯತೆ ಇದೆ.

ಲೋಕನಾಯಕ ರಾಮಚಂದ್ರನ ಆವಿರ್ಭಾವ ಒಂದು ಮಹಾ ಪರಿವರ್ತನಕಾರಕ ಘಟನೆಯಲ್ಲಿ ಆಗಿರುತ್ತದೆ. ಅದರಿಂದ ಮಹಾನ್ ವಿಭೂತಿಯು ಜನನವಾಗಿ ಇಂದಿಗೆ ಎಷ್ಟು ವರ್ಷಗಳು ಉರುಳಿದವೆಂಬ ಜಿಜ್ಞಾಸೆ ಪ್ರತಿಯೊಬ್ಬರ ಮನಸ್ಸಿನಲ್ಲಿ ನೆಲೆಸಿರುತ್ತದೆ. ತ್ರೇತಾಯುಗದ ಅಂತ್ಯದಲ್ಲಿ ರಾಮಾವತಾರವಾಯಿತು. ಭಾರತೀಯರು ಕಾಲಗಣನೆಯ ಪ್ರಕಾರ ಶ್ರೀ ರಾಮನ ಜನನವಾಗಿ ಇಂದಿಗೆ ಸುಮಾರು ಒಂಭತ್ತು ಲಕ್ಷ ವರ್ಷಗಳು ದಾಟಿದವು. ಈ ಭೂಮಿಯ ಜೀವಪರಿಕ್ರಮ ನಾಲ್ಕು ಯುಗಗಳಾಗಿ ವಿಂಗಡಿಸಲ್ಪಟ್ಟಿದೆ. (ಕೃತ, ತ್ರೇತ, ದ್ವಾಪರ, ಕಲಿ.) ಅವುಗಳ ಕಾಲಾವಧಿ ಕ್ರಮವಾಗಿ 4,800, 3,600, 2,400, 1,200 ದೇವ ವರ್ಷಗಳೆಂದೂ 172,800, 129,600, 86,400, 43,200 ಮಾನವ ವರ್ಷಗಳೆಂದೂ ಗಣನೆಗೆ ತರಲ್ಪಟ್ಟಿದೆ. ಈ ಕ್ರಮವು ಪ್ರಚಲಿತ ಕಾಲದ ವಿದ್ವಾಂಸರಲ್ಲಿ ಮತಭೇದವಿರಬಹುದು. ನಾಲ್ಕು ಯುಗಗಳಲ್ಲಿ ಪ್ರತಿಯೊಂದು ಯುಗದ ಪ್ರಾರಂಭದ ಹನ್ನೆರಡನೆಯ ಭಾಗ ಸಂಧ್ಯಾಂಶ ಕಾಲವೆಂದು ಹೇಳಲಾಗುತ್ತದೆ. ಈ ಕಾಲ ಗಣನೆಯು ಕೃತಯುಗ ಮಹಾಭಾರತ ಮತ್ತು ಮನುಸ್ಮೃತಿಯಲ್ಲಿ ಭಿನ್ನಾಭಿಪ್ರಾಯ ಕಂಡು ಬರುವುದಿಲ್ಲ.

ವರ್ಷಮಾನ ಕಾಲದಲ್ಲಿ 28ನೆಯ ಕಲಿಯುಗ ನಡೆಯುತ್ತಿದೆ. ಇಂದಿನ ಕಲಿಯುಗದಲ್ಲಿ ಇಂದಿಗೆ 5,066 ವರ್ಷಗಳು ಕಳೆದು ಹೋದುವು. ಈ ಲೆಕ್ಕ ಪ್ರಕಾರ ತ್ರೇತಾಯುಗದ ನಂತರ ದ್ವಾಪರ ಯುಗಕ್ಕೆ 8,64,000 ವರ್ಷ ಮತ್ತು ಕಲಿಯುಗಕ್ಕೆ ಈ ತನಕ 5066 ವರ್ಷಗಳು ಸಂದು ಹೋದವು; ಇವುಗಳಲ್ಲಿ ಶ್ರೀ ರಾಮನ ರಾಜ್ಯ ಶಾಸನ ಕಾಲದ 11,000 ವರ್ಷಗಳನ್ನು ಸೇರಿಸಿದರೆ ಸುಮಾರು 8,87,000 ಕ್ಕೆ ತಲ್ಪುತ್ತದೆ. ಆದರೆ ಶ್ರೀ ರಾಮನ ಜನ್ಮವಾಗಿ ಇಂದಿಗೆ ಇಷ್ಟು ವರ್ಷಗಳಾದುವೆಂದು ಯಾರು ಒಪ್ಪುತ್ತಾರೆ? ಪ್ರಾಚೀನ ವಿಷಯಗಳ ತಥ್ಯಾಂಶಗಳನ್ನು ಶೋಧನೆ ಮಾಡುವ ಕಾರ್ಯದಲ್ಲಿ ಆನೇಕ ವಿದ್ವಾಂಸರು ಪ್ರಶಂಸನೀಯ ಸ್ಥಾನಗಳನ್ನೂ ಪಡೆದಿರುತ್ತಾರೆ. ಪರಂತು ಭಾರತೀಯ ಸಂಸ್ಕೃತಿ ಎಷ್ಟು ಪ್ರಾಚೀನವಾಗಿದೆಯೆಂಬುದರ ಕಲ್ಪನೆ ಮಾತ್ರ ಅವರಿಗೆ ಈ ತನಕ ಉಂಟಾಗದಿರಲಿ ಪಕ್ಷ ಶೋಚನೀಯ. ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ವಿದ್ವಾಂಸರು ರಾಮಾಯಣ ಕಾಲವನ್ನು 6,000 ವರ್ಷಗಳಿಗಿಂತ ಹೆಚ್ಚಾಗಿ ಪರಿಗಣಿಸುವುದಿಲ್ಲ. ಅವರ ಗಣನೆಯಂತೆ ಇಂದಿಗೆ 25 ಯಾ ಮೂರಾಕ್ಕು ನಾನಿರ ವರ್ಷಗಳ ಮೊದಲು ಜಗತ್ತಿನಲ್ಲಿ ಕಾವ್ಯ ಯುಗವಿತ್ತು; ಮತ್ತು ಮನುಷ್ಯರು ಕಾಡುಗಳಲ್ಲಿ ನಗ್ನರಾಗಿ ಸಂಚರಿಸುತ್ತಿದ್ದರು. ಈ ವಿದ್ವಾಂಸರು ವೇದ ಕಾಲವು ಇಂದಿಗೆ 25 ಅಥವಾ 30 ಸಾವಿರ ವರ್ಷಕ್ಕಿಂತ ಹಿಂದಿಲ್ಲವೆಂದು ನಂಬುವುದಿಲ್ಲವೆಂದು ನೀಲಿ ರಾಮಾಯಣ ಕಾಲದ ಅತಿ ಪ್ರಾಚೀನತೆಯನ್ನು ಒಪ್ಪುವರೆ?

ಶ್ರೀ ರಾಮನು ಮತ್ತು ಮಹಾಕವಿ ವಾಲ್ಮೀಕಿ ಸಮಕಾಲೀನರು; ಮತ್ತು ಶ್ರೀ ರಾಮಚಂದ್ರಪ್ರಭುವಾಣಮೇ ಮಹಾಕವಿ ವಾಲ್ಮೀಕಿ ಮೂಲ ರಾಮಾಯಣವನ್ನು ರಚಿಸಿದನೆಂದು ಕಂಡುಬರುತ್ತದೆ. ವಾಲ್ಮೀಕಿ ವಿರಚಿತ ರಾಮಾಯಣದಲ್ಲಿ ನಾಲ್ಕು ದಾಡೆಗಳುಳ್ಳ ಆನೆಗಳ ವರ್ಣನೆ ಕಂಡುಬರುತ್ತದೆ. ಪ್ರಚಲಿತ ಕಾಲದಲ್ಲಿ ದೊರೆಯುವ ರಾಮಾಯಣಗಳಲ್ಲಿ ಈ ವಿವರಣೆಗಳು ಕಂಡುಬರುವುದಿಲ್ಲ. ಇಂದಿಗೆ ಸುಮಾರು ೧೧ ಲಕ್ಷ ವರ್ಷಗಳಿಗೆ ಮೊದಲು ನಾಲ್ಕು ದಾಡೆಗಳುಳ್ಳ ಆನೆಗಳು ಆಸ್ಯಾ, ಆಂರೋಪ್, ಆಮೆರಿಕ ಮತ್ತು ಆಫ್ರಿಕ ದೇಶಗಳಲ್ಲಿ ದೊರಕುತ್ತಿದ್ದವು. ಇದರ ಪರಿಜ್ಞಾನ ಇಂದಿಗೆ ಮುನ್ನೂರು ವರ್ಷಗಳ ಈಚೆಗಷ್ಟೆ ವಿಜ್ಞಾನಿಗಳಿಗೆ ತಿಳಿಯಲಿಲ್ಲ

ಸೀತಾನ್ವೇಷಣಾರ್ಥಿ ಮಹಾವೀರ ಹನುಮಂತನು ಲಂಕೆಗೆ ಹೋಗಿ ಭಗ್ನವೇ ಷದಿಂದ ರಾತ್ರಿಕಾಲದಲ್ಲಿ ವಟೂಲೆ ಮೂಲೆಗಳಲ್ಲಿ ಹುಡುಕುತ್ತಿರುವಾಗ ರಾಕ್ಷಸ

(ಪದಿನಾಲ್ಕನೇ ಪುಟ ನೋಡಿರಿ)

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಶನ್

ಲಿಮಿಟೆಡ್

ಬೋಳಾರ, ಮಂಗಳೂರು

ಸಹಕಾರಿ ರಂಗದಲ್ಲಿ ಮೀನುಗಾರಿಕೆಯ ನೇಲುಗೈಯನ್ನು ತೋರಿಸುವ 8.50 ಲಕ್ಷಕ್ಕೂ ಮಿಕ್ಕ ಪಾಲು ಭಂಡವಾಳ ಹೊಂದಿರುವ 1700ಕ್ಕೂ ಹೆಚ್ಚು ಸದಸ್ಯರುಗಳಿರುವ

ರಾಜ್ಯದ ಏಕಮಾತ್ರ ಮೀನುಗಾರಿಕಾ ಪ್ರಾಥಮಿಕ ಸಂಘಗಳ ಒಕ್ಕೂಟ.

ವಾರ್ಷಿಕ ಸರಾಸರಿ ಅತ್ಯುತ್ತಮ 100 ಯಾಂತ್ರೀಕೃತ ದೋಣಿಗಳನ್ನು ಉತ್ಪಾದಿಸಿ ದಾಖಲೆ ಸ್ಥಾಪಿಸಿರುವ ಯಾಂತ್ರೀಕ ದೋಣಿ ನಿರ್ಮಾಣ ಕಟ್ಟೆ.

ಎಲ್ಲಾ ಮೀನುಗಾರಿಕಾ ಯಂತ್ರಗಳ ಬಿಡಿಭಾಗಗಳು ಮತ್ತು ಮೀನುಗಾರಿಕಾ ಸವಲತ್ತುಗಳನ್ನು ಹೊಂದಿರುವ ನಮ್ಮ ಶೇಖರಣಾಗೃಹ.

12 ಲಕ್ಷ ರೂಪಾಯಿ ವೆಚ್ಚದಿಂದ ನಿರ್ಮಾಣಗೊಂಡ ನಮ್ಮ ಮಂಜುಗಡ್ಡೆ ಸ್ಥಾವರ ಪ್ರೀಯಿಂಗ್ ಮತ್ತು ಶೀತಲೀಕರಣ ಕಾರ್ಖಾನೆ.

ಜಿಲ್ಲೆಯ ಸಹಕಾರಿ ಮೀನುಗಾರರ ಸಹಭಾಗಿತ್ವದ ಸಂಕೇತ

ನಮ್ಮ ಸದಸ್ಯರುಗಳಿಗೆ ಮತ್ತು ಹಿತಚಿಂತಕರಿಗೆ ದೀಪಾವಳಿಯ ಶುಭಾಶಯಗಳು

ಶ್ರೀ ಯಸ್. ಕೆ. ಅಮೀನ್, M. L. A.,
ಅಧ್ಯಕ್ಷ.

ಬಿ. ಮಾಧವರಾವ್, B. A.,
ಜನರಲ್ ಮೆನೇಜರ್

ಬಿ. ಕರುಣಾಕರ್, B. A.,
ಕಾರ್ಯದರ್ಶಿ.

ರುಮೇನಿಯೂದಲ್ಲಿ ಪ್ರತಿಯೊಬ್ಬನೂ ತನ್ನ ಹಂಬಾದ ದಿನ ಪುಸ್ತಕವನ್ನ ಅಂಗಡಿಗೆ ಹೋಗುತ್ತಾನೆ' ಬುಕಾರೆಸ್ಟ್‌ನಲ್ಲಿ ಪ್ರಕಟಣಾ ಮಂದಿರವೊಂದರಲ್ಲಿ ನಾನು ಕೇಳಿದ ಮಾತುಗಳಿವು. ಇದು ಸಿಹಿ ಕಹಿಮಿಶ್ರಿತವೆಂದು ಹೇಳಬೇಕಾಗಿಲ್ಲ. ಆದರೆ ವಾಸ್ತವವಾಗಿ ನಾವು ಇಟ್ಟುಕೊಂಡಿದ್ದ ಅಳತೆಪಾತ್ರೆಯ ಎಲ್ಲೆಯನ್ನು ಇದು ನಿಜಕ್ಕೂ ಹೊರಿದ ದಾಗಿತ್ತು.

ರುಮೇನಿಯೂದಲ್ಲಿ ಬಿ.ಸಿ.ಟಿ.(ಸರ್ವಜನಿಕ ಪುಸ್ತಕ ಭಂಡಾರ) ಎಂಬ ಹೆಸರಿನ ಪ್ರಸಾರಣಾಲಯವಿದೆ. ಈ ಸಂಸ್ಥೆಯಾರಭಿಸಿದಂದಿನಿಂದ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಒಂದು ಅಂದಾಜಿಗೆ 75 ಸಾವಿರ ಪ್ರತಿಗಳನ್ನು ಮುದ್ರಿಸಲಾಗುತ್ತದೆ. ಒಂದೊಂದು ಪುಸ್ತಕವೂ ಸಾಮಾನ್ಯವಾಗಿ ಅನೇಕ ಆವೃತ್ತಿಗಳನ್ನು ಪಡೆಯುತ್ತವೆ. ಕೆಲವು ಜನಪ್ರಿಯ ಕೃತಿಗಳು 20ನೆಯ ಆವೃತ್ತಿಯನ್ನೂ ದಾಟಿದ್ದೂ ಇದೆ. ಇದು ಒಂದು ಪ್ರಕಾಶನ ಸಂಸ್ಥೆಗೆ ಉತ್ಪಾದನೆಯ ಮಾತಾಯಿತು. ಇನ್ನಿತರ ಪ್ರಕಾಶನ ಸಂಸ್ಥೆಗಳನ್ನು ಗಣನೆಗೆ ತೆಗೆದು ಕೊಂಡರೆ ರುಮೇನಿಯೂದಲ್ಲಿ ಪ್ರತಿ ಮೂರು ದಿನಗಳಿಗೆ ಎರಡು ಪುಸ್ತಕಗಳಂತೆ ಪ್ರಕಟವಾಗುತ್ತದೆ.

ಮತ್ತೊಂದು ಪ್ರಕಾಶನ ಸಂಸ್ಥೆಗೆ ಭೇಟಿಕೊಟ್ಟಾಗ ನನಗೆ ತಿಳಿದ ವಿಷಯ ಇದು. ಕೇವಲ ಎರಡು ಕೋಟಿ ಜನಸಂಖ್ಯೆಯುಳ್ಳ ಈ ಚಿಕ್ಕ ರಾಷ್ಟ್ರದಲ್ಲಿ ಪ್ರತಿವರ್ಷ ಕೊನೆಯ ಪಕ್ಷ ಎಂಟು ಸಾವಿರ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಅಂದರೆ, ಸುಮಾರು ಎಂಟು ಕೋಟಿ ಪ್ರತಿಗಳನ್ನು ಪ್ರಕಟಿಸಿದಂತಾಯಿತು. ಅಂದರೆ ಒಬ್ಬ ವಯಸ್ಕರಿಗೆ ನಾಲ್ಕು ಪುಸ್ತಕಗಳಂತೆ ಇಲ್ಲಿ ಪುಸ್ತಕಗಳು ಪ್ರಕಟವಾಗುತ್ತಿವೆ ಎಂಬ ಅಂಶ ನ್ಯಕ್ತಪಟ್ಟಿತು. ಎಂದಮೇಲೆ ರುಮೇನಿಯೂ ಪುಸ್ತಕಗಳ ಲೋಕ ಎಂಬ ದರಲ್ಲಿ ಆಶ್ಚರ್ಯವೇನೂ ಇಲ್ಲ.

ನನಗೆ ರುಮೇನಿಯೂದ ಭಾಷೆ ಗೊತ್ತಿಲ್ಲ. ಆದರೂ ಆ ದೇಶದಲ್ಲಿ ಪ್ರಕಟವಾದ ರೀತಿನೀತಿ ಮತ್ತು ಚರ್ಚೆದ ಬೈಂಡಿನ ಪುಸ್ತಕಗಳನ್ನು ಮುಟ್ಟಿನೋಡಿದಾಗ ಆ ಗ್ರಂಥಗಳ ಕರ್ತೃಗಳ ಆಕೃತಿಗಳ ಅಂದಾಜು ನನಗೆ ಉಂಟಾದಂತೆ ಭಾಸವಾಯಿತು.

ಆದ್ದರಿಂದ ಈ ಪ್ರಶ್ನೆಗಳು ನನ್ನ ಬಾಯಿಂದ ಬಹಳ ಬೇಗ ಹೊರಬಿದ್ದವು. ಈ ನನ್ನ ಪ್ರಶ್ನೆಗೆ ಉತ್ತರವಾಗಿ ನನ್ನ ರುಮೇನಿಯನ್ ಲೇಖಕ ಮಿತ್ರರು, ನನ್ನ ಕಡೆ ನೋಡಿ ನನಗನ್ನ ಕ್ಕಿರುವಂತೆ ಕೃತಿಗಳ ಇಂಗ್ಲೀಷ್ ಭಾಷಾಂತರವನ್ನು ನನ್ನ ಕಡೆಗೆ ಕಳುಹಿಸಿದರು.

ರುಮೇನಿಯೂದಲ್ಲಿ ನಾನು ಮೂರು ವಾರ ಇದ್ದೆ. ಪ್ರೇಕ್ಷಣೀಯ ಸ್ಥಳಗಳಿಗೆ ಹೋದುವುದು ಪ್ರವಾಸಿ ಜನರನ್ನು ಸಂದರ್ಶಿಸುವುದು ಇದರಲ್ಲಿಯೇ ಸಮಯ ಕಳೆಯುತ್ತಿತ್ತು. ರಾತ್ರಿಯಲ್ಲಿ ಆ ಗ್ರಂಥಗಳನ್ನು ಓದಿದೆ. ಅವು ನನ್ನಲ್ಲಿ ಕಲ್ಪನೆತೆಯನ್ನು ತಂದವು. ಕೆಲವು ಕವನಗಳಂತೂ ನಳಗೆ ಬಹು ಮೆಚ್ಚುಗೆಯಾದವು. ಅಂತೆಯೇ ನನ್ನ ಬದುಕಿನಲ್ಲಿ ಸಮಗ್ರ ಭಾಗವಾದವು. ಆಗಲೆ ನನ್ನ ಭಾಷೆಗೆ ಸಂತೋಷದಿಂದ ಕರ್ಜಾಮೆ ಮಾಡಿದೆ. ಮುಖ್ಯವಾಗಿ, ಆ ಬ್ಲಾಂಡಿಯಾನ ರವರ ಹಲವು ಪೂರ್ಣ ಪದ್ಯಗಳು ಹಾಗೂ ದೀರ್ಘ ಕವನಗಳ ಕೆಲವು ಭಾಗಗಳೂ ನನ್ನ ಮನಸ್ಸನ್ನು ಸೆರೆಹಿಡಿದವು.

ಇದೇ ನನ್ನ ಪ್ರಶ್ನೆಗೆ ರುಮೇನಿಯೂದ ಲೇಖಕ ಮಿತ್ರರು ನೀಡಿದ ಉತ್ತರ. ಇತರರ ಪ್ರಶ್ನೆಗೂ ಬಹುಃ ಇದೇ ಉತ್ತರ ದೊರೆಯಬಹುದು. ಆಧುನಿಕ ರುಮೇನಿಯನ್ ಲೇಖಕ ಜೀವಧವನ್ನು ಸಂಪೂ

—ಶ್ರೀ ಅಮೃತ ಪ್ರೀತಂ

ಪುಸ್ತಕಗಳ ಲೋಕ- ರುಮಾನಿಯಾ

ಮೂರು ದಿನಗಳಿಗೆರಡು ಹೊಸ ಪುಸ್ತಕ, ಒಟ್ಟು ವಯಸ್ಕರಿಗೆ ನಾಲ್ಕು ಪುಸ್ತಕಗಳಂತೆ ರುಮಾನಿಯೂದಲ್ಲಿ ಪ್ರಕಟವಾಗುತ್ತವೆ. ಆದುದರಿಂದಲೇ ಆದು ಪುಸ್ತಕಗಳ ಲೋಕ! ಆಧುನಿಕ ರುಮೇನಿಯೂದ ಕವಿ ಜೀವನವನ್ನು ವೈಯಕ್ತಿಕ ದೃಷ್ಟಿಕೋಣದಿಂದ ನೋಡುತ್ತಾನೆ; ಅವನೇನೆಗೈಲ್ಪಡಿಸುತ್ತಾನೆ.

ರುಮೇನಿಯೂದ ಈ ಚಿಕ್ಕ ರಾಷ್ಟ್ರದಲ್ಲಿ ಪ್ರತಿವರ್ಷ ಕೊನೆಯ ಪಕ್ಷ ಎಂಟು ಸಾವಿರ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಅಂದರೆ, ಸುಮಾರು ಎಂಟು ಕೋಟಿ ಪ್ರತಿಗಳನ್ನು ಪ್ರಕಟಿಸಿದಂತಾಯಿತು. ಅಂದರೆ ಒಬ್ಬ ವಯಸ್ಕರಿಗೆ ನಾಲ್ಕು ಪುಸ್ತಕಗಳಂತೆ ಇಲ್ಲಿ ಪುಸ್ತಕಗಳು ಪ್ರಕಟವಾಗುತ್ತಿವೆ ಎಂಬ ಅಂಶ ನ್ಯಕ್ತಪಟ್ಟಿತು. ಎಂದಮೇಲೆ ರುಮೇನಿಯೂ ಪುಸ್ತಕಗಳ ಲೋಕ ಎಂಬ ದರಲ್ಲಿ ಆಶ್ಚರ್ಯವೇನೂ ಇಲ್ಲ.

ನನಗೆ ರುಮೇನಿಯೂದ ಭಾಷೆ ಗೊತ್ತಿಲ್ಲ. ಆದರೂ ಆ ದೇಶದಲ್ಲಿ ಪ್ರಕಟವಾದ ರೀತಿನೀತಿ ಮತ್ತು ಚರ್ಚೆದ ಬೈಂಡಿನ ಪುಸ್ತಕಗಳನ್ನು ಮುಟ್ಟಿನೋಡಿದಾಗ ಆ ಗ್ರಂಥಗಳ ಕರ್ತೃಗಳ ಆಕೃತಿಗಳ ಅಂದಾಜು ನನಗೆ ಉಂಟಾದಂತೆ ಭಾಸವಾಯಿತು.

ರುಮೇನಿಯೂದಲ್ಲಿ ಬಿ.ಸಿ.ಟಿ.(ಸರ್ವಜನಿಕ ಪುಸ್ತಕ ಭಂಡಾರ) ಎಂಬ ಹೆಸರಿನ ಪ್ರಸಾರಣಾಲಯವಿದೆ. ಈ ಸಂಸ್ಥೆ ಯಾರಭಿಸಿದಂದಿನಿಂದ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಒಂದು ಅಂದಾಜಿಗೆ 75 ಸಾವಿರ ಪ್ರತಿಗಳನ್ನು ಮುದ್ರಿಸಲಾಗುತ್ತದೆ. ಒಂದೊಂದು ಪುಸ್ತಕವೂ ಸಾಮಾನ್ಯವಾಗಿ ಅನೇಕ ಆವೃತ್ತಿಗಳನ್ನು ಪಡೆಯುತ್ತವೆ. ಕೆಲವು ಜನಪ್ರಿಯ ಕೃತಿಗಳು 20ನೆಯ ಆವೃತ್ತಿಯನ್ನೂ ದಾಟಿದ್ದೂ ಇದೆ. ಇದು ಒಂದು ಪ್ರಕಾಶನ ಸಂಸ್ಥೆಗೆ ಉತ್ಪಾದನೆಯ ಮಾತಾಯಿತು. ಇನ್ನಿತರ ಪ್ರಕಾಶನ ಸಂಸ್ಥೆಗಳನ್ನು ಗಣನೆಗೆ ತೆಗೆದು ಕೊಂಡರೆ ರುಮೇನಿಯೂದಲ್ಲಿ ಪ್ರತಿ ಮೂರು ದಿನಗಳಿಗೆ ಎರಡು ಪುಸ್ತಕಗಳಂತೆ ಪ್ರಕಟವಾಗುತ್ತದೆ.

ಮತ್ತೊಂದು ಪ್ರಕಾಶನ ಸಂಸ್ಥೆಗೆ ಭೇಟಿಕೊಟ್ಟಾಗ ನನಗೆ ತಿಳಿದ ವಿಷಯ ಇದು. ಕೇವಲ ಎರಡು ಕೋಟಿ ಜನಸಂಖ್ಯೆಯುಳ್ಳ ಈ ಚಿಕ್ಕ ರಾಷ್ಟ್ರದಲ್ಲಿ ಪ್ರತಿವರ್ಷ ಕೊನೆಯ ಪಕ್ಷ ಎಂಟು ಸಾವಿರ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಅಂದರೆ, ಸುಮಾರು ಎಂಟು ಕೋಟಿ ಪ್ರತಿಗಳನ್ನು ಪ್ರಕಟಿಸಿದಂತಾಯಿತು. ಅಂದರೆ ಒಬ್ಬ ವಯಸ್ಕರಿಗೆ ನಾಲ್ಕು ಪುಸ್ತಕಗಳಂತೆ ಇಲ್ಲಿ ಪುಸ್ತಕಗಳು ಪ್ರಕಟವಾಗುತ್ತಿವೆ ಎಂಬ ಅಂಶ ನ್ಯಕ್ತಪಟ್ಟಿತು. ಎಂದಮೇಲೆ ರುಮೇನಿಯೂ ಪುಸ್ತಕಗಳ ಲೋಕ ಎಂಬ ದರಲ್ಲಿ ಆಶ್ಚರ್ಯವೇನೂ ಇಲ್ಲ.

ನನಗೆ ರುಮೇನಿಯೂದ ಭಾಷೆ ಗೊತ್ತಿಲ್ಲ. ಆದರೂ ಆ ದೇಶದಲ್ಲಿ ಪ್ರಕಟವಾದ ರೀತಿನೀತಿ ಮತ್ತು ಚರ್ಚೆದ ಬೈಂಡಿನ ಪುಸ್ತಕಗಳನ್ನು ಮುಟ್ಟಿನೋಡಿದಾಗ ಆ ಗ್ರಂಥಗಳ ಕರ್ತೃಗಳ ಆಕೃತಿಗಳ ಅಂದಾಜು ನನಗೆ ಉಂಟಾದಂತೆ ಭಾಸವಾಯಿತು.

ರುಮೇನಿಯೂದಲ್ಲಿ ಬಿ.ಸಿ.ಟಿ.(ಸರ್ವಜನಿಕ ಪುಸ್ತಕ ಭಂಡಾರ) ಎಂಬ ಹೆಸರಿನ ಪ್ರಸಾರಣಾಲಯವಿದೆ. ಈ ಸಂಸ್ಥೆ ಯಾರಭಿಸಿದಂದಿನಿಂದ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಒಂದು ಅಂದಾಜಿಗೆ 75 ಸಾವಿರ ಪ್ರತಿಗಳನ್ನು ಮುದ್ರಿಸಲಾಗುತ್ತದೆ. ಒಂದೊಂದು ಪುಸ್ತಕವೂ ಸಾಮಾನ್ಯವಾಗಿ ಅನೇಕ ಆವೃತ್ತಿಗಳನ್ನು ಪಡೆಯುತ್ತವೆ. ಕೆಲವು ಜನಪ್ರಿಯ ಕೃತಿಗಳು 20ನೆಯ ಆವೃತ್ತಿಯನ್ನೂ ದಾಟಿದ್ದೂ ಇದೆ. ಇದು ಒಂದು ಪ್ರಕಾಶನ ಸಂಸ್ಥೆಗೆ ಉತ್ಪಾದನೆಯ ಮಾತಾಯಿತು. ಇನ್ನಿತರ ಪ್ರಕಾಶನ ಸಂಸ್ಥೆಗಳನ್ನು ಗಣನೆಗೆ ತೆಗೆದು ಕೊಂಡರೆ ರುಮೇನಿಯೂದಲ್ಲಿ ಪ್ರತಿ ಮೂರು ದಿನಗಳಿಗೆ ಎರಡು ಪುಸ್ತಕಗಳಂತೆ ಪ್ರಕಟವಾಗುತ್ತದೆ.

ಮತ್ತೊಂದು ಪ್ರಕಾಶನ ಸಂಸ್ಥೆಗೆ ಭೇಟಿಕೊಟ್ಟಾಗ ನನಗೆ ತಿಳಿದ ವಿಷಯ ಇದು. ಕೇವಲ ಎರಡು ಕೋಟಿ ಜನಸಂಖ್ಯೆಯುಳ್ಳ ಈ ಚಿಕ್ಕ ರಾಷ್ಟ್ರದಲ್ಲಿ ಪ್ರತಿವರ್ಷ ಕೊನೆಯ ಪಕ್ಷ ಎಂಟು ಸಾವಿರ ಹೊಸ ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಅಂದರೆ, ಸುಮಾರು ಎಂಟು ಕೋಟಿ ಪ್ರತಿಗಳನ್ನು ಪ್ರಕಟಿಸಿದಂತಾಯಿತು. ಅಂದರೆ ಒಬ್ಬ ವಯಸ್ಕರಿಗೆ ನಾಲ್ಕು ಪುಸ್ತಕಗಳಂತೆ ಇಲ್ಲಿ ಪುಸ್ತಕಗಳು ಪ್ರಕಟವಾಗುತ್ತಿವೆ ಎಂಬ ಅಂಶ ನ್ಯಕ್ತಪಟ್ಟಿತು. ಎಂದಮೇಲೆ ರುಮೇನಿಯೂ ಪುಸ್ತಕಗಳ ಲೋಕ ಎಂಬ ದರಲ್ಲಿ ಆಶ್ಚರ್ಯವೇನೂ ಇಲ್ಲ.

With best compliments from

M/S. H. VENKATRAYA SHENOY

HALEANGADI

Manufacturers of

SHENOY'S

MANGALORE SNUFF

Phone : Mangalore

8236

ಮನೋಲ್ಲಾಸಕ್ಕೆ ಮತ್ತು ರುಚಿಗೆ

ಸಿಸಿಸಿ ಕಾಫಿ

ಪರಿಮಳವನ್ನು ಕಾಪಾಡುವಂತೆ ವಿಶಿಷ್ಟ ರೀತಿಯಲ್ಲಿ ಪ್ಯಾಕ್ ಮಾಡಲ್ಪಡುವ ಸಿಸಿಸಿ ಕಾಫಿ ವಿವಿಧ ಮಿಶ್ರಣದಲ್ಲಿ ದೊರೆಯುತ್ತವೆ.

ತಯಾರಕರು :

Manufacturers
ಕರ್ನಾಟಿಕ ಕಾಫಿ ಕಂಪನಿ
CARNATIC COFFEE COMPANY
Sree Sreenivasa Krupa
Davangere City (MYSORE STATE)

ಕರ್ನಾಟಿಕ ಕಾಫಿ ಕಂಪೆನಿ

ಶ್ರೀ ಶ್ರೀನಿವಾಸ ಕೃಪ

ದಾವಣಗೆರೆ ಸಿಟಿ (ಮೈಸೂರು ರಾಜ್ಯ)

ಣವಾಗಿ ವೈಯಕ್ತಿಕ ದೃಷ್ಟಿಕೋಣದಿಂದ ಅನುಭವಿಸುತ್ತಾನೆ. ಆದನ್ನೇ ಅಭಿವ್ಯಕ್ತ ಪಡಿಸುತ್ತಾನೆ. ಅದು ಹೊಸ ವಾಸ್ತವಿಕತೆಗೆ, ಸೂಕ್ಷ್ಮವೀಯ ಸಂಬಂಧ ಮತ್ತು ಹೊಸ ಜೀವನ ವಿಧಾನಗಳೆಡೆಗೆ ನಿರ್ದೇಶನವೀಯುತ್ತದೆ.

ಅಭಿವ್ಯಕ್ತಿಯಲ್ಲಿ ತಪ್ಪತಪವಿರುವುದು ಇಂತಹ ಬರವಣಿಗೆಗಳಿಲ್ಲಿರಲೇಬೇಕಾದ ಅಂಶ. ಆದರೆ ಅಕರ್ಷಕ ಸಮಾನತೆಯಿಂದ ಫ್ರಾಂಕ್ ಮನೋಲಿಸ್ಸೂಸ್‌ರವರ ಮೂರು ಗೀತೆಗಳ ಒಂದು ಗೀತೆಯಲ್ಲಿ ಕಾಣಬಹುದು.

ನಾನೆಂದುಕೊಂಡೆ, ನಾಮೂರು
ಗೀತೆಗಳ ಬರೆವೆ
ಅದರಲ್ಲಿ ಮೂರು ಪ್ರಿಯ ವಿಷಯ-
ಗಳ ನಡಗುರುವೆ
ಎಂದೆಂದೂ ಸತ್ಯರುವ ತಾರೆ ತೂರಿ
ಬಂದ ತಾರೆಗಳಂತೆ
ನೈಮ್ಸ್ ಮಟದಲ್ಲಿ ಮೂರು ಆರೆ
ಹುಟ್ಟಿಡಿ ಹುಳುಗಳಂತೆ
ನನ್ನೆಡೆಯಲ್ಲಿ ನೀಸಂಕೆ ಧಾರ
ವಾಗಿರುವ ಮಽರು ಕ್ಷಣಗಳ
ನೋವು ಕುಳಿರನು,
ಹಿತ್ತಾಳೆ ಶವಪೆಟ್ಟಿಗೆಯಲಿ ಜೊಳಿ
ನಾಕನ್ಗಾಸುವ ಈ ಗೀತೆಗಳಲ್ಲಿ,

ಸಾಲಿನ್ ಸೊರೆಸ್ಕಾರವರ ಪದ್ಯಗಳು ನನ್ನನ್ನು ಚಕಿತಗೊಳಿಸಿದವು. ನಾನು ಭಾರತಕ್ಕೆ ಬಂದಮೇಲೆ, ಅವರ ಪರ್ಯಾಯ ಭಾಷಾಂತರವನ್ನು — ನಾಜೂನ್ ವಿಶ್ವವಿದ್ಯಾನಿಲಯದ ಕಿಂಗಳ ಲೇಖಕರ ಗೋಷ್ಠಿಯಲ್ಲಿ; ಸಾಹಿತ್ಯ ಅಕಾಡೆಮಿಯವರು ಏರ್ಪಡಿಸಿದ್ದ ಸಭೆಯಲ್ಲಿ ಓದಿದೆ. ಆಧುನಿಕ ಪರ್ಯಾಯ ಜಗತ್ತಿಗೆ ಮೂಕಾಡಲು ಅವಕಾಶ ಸಿಕ್ಕಿದಾಗಲೆಲ್ಲ, ಅವರೆ ಪದ್ಯಗಳನ್ನು ನಾನು ಉಲ್ಲೇಖಿಸಿ ಮಾಡಲು ವಿಳಂಬಮಾಡುತ್ತಿರಲಿಲ್ಲ. ಅವರ ಪದ್ಯಗಳಲ್ಲೊಂದು ಈ ರೀತಿ ಇದೆ :

ಸೂರ್ಯಾಸ್ತ ಸಮಯದಲಿ
ನೆರೆಮನೆಗೆ ತೆರಳಿ
ನಾ ತರುವೆ ಕುರ್ಚಿಗಳ
ಎರವಲಾಗಿ.
ಅಷ್ಟು ಇಷ್ಟೆಂದಲ್ಲ—
ಅವರು ಕೊಟ್ಟಷ್ಟೂ.....
ಈ ಕುರ್ಚಿಗಳಿಗೇ
ನಾನು ಪದ್ಯಗಳನೋದುವೆನು.
ನಾಲಾಗಿ ವಿಸ್ತೃತಂ ಕೂಡಿಸಿದ
ಕುರ್ಚಿಗಳೇ ಕಾವ್ಯವಾಚಕಕೆ
ಸಭ್ಯ ಸಭಿಕರಹುದು.
ಈ ಕುರ್ಚಿಗಳ ಕಂಡೊಡನೇ
ನನಗೆ ಭಾವೋದ್ವೇಗ
ನವ್ಯ ಧ್ವನಿ ನಡುಗುವುದು.
ಗಂಟೆಗಟ್ಟಲೆ ನಾನು ನನ್ನಾತ್ಮವನು
ಬಹಿರಂಗ ಪಡಿಸುವೆನು
ಬಳಿಕ ಕುರ್ಚಿಗಳು ಹೇಳುವವು
ಆಕೆ ಹೇಗೆ ಗಂಭೀರವಾಗಿ ಕೊನೆಯು
ನಿರನೆಳೆದಳೆಂದು
ಕುರ್ಚಿಗಳ ಸಂಗಮವೇ ಗಂಭೀರ,
ಕೋರಿಕೆಯು ಉತ್ಸಾಹಕೆ ಎಡೆಯಿಲ್ಲ
ಎಲ್ಲಿ;
ಇನ್ನೊಂದು ಪದ್ಯ ಈ ರೀತಿ ಇದೆ
ನಾನೊಮ್ಮೆ ಹರೆಯ
ಮುನ್ನಾಜ್ಞೆಯನಾಲಿಸಿದೆ
ಮೂಡಣದ ದಿಕೆಯಿಂದ ಪಡುವಣದ
ಕಡೆಯಿಂದ
ಅಸ್ಪಷ್ಟಿಕ್ಯಗಳಿಂದ
ಗಾಳಿ ಬೀಸುವುದೆಂದು
ಬೆಳಗಾಳಿ ಬರುವುದೆಂದು,
ಈ ಗಾಳಿಗಳ, ಧೂಳನಾಗರವಾಗಿ
ಎಲ್ಲಾ ಒಂದೆಡೆ ಸೇರಿ
ಸಿಕ್ಕೆಬೆಲ್ಲವನ್ನ ವಡಾಡುವವು ಕಾಗದವ
ಮರಗಳು ಕಾಗದ
ಚಿನ್ನವೂ ಕಾಗದ.
ಜನರಿಗೊ ಗಾಬರಿಯೇ ಗಾಬರಿ

ಕೊನೆಗೆ :—

ಅವರ ಈ ಹಾಳೆಯು ಹಾವಿನೊಲು
ಸರಸರನೆ ಸುರಳಿಯಾಗಿ
ಬಳಿಕ ಈ ಕೊಯಿಗಳ ಹಾಳೆ
ಸುರಳಿ ಶಿಥಿಲವಾಗಿ
ಉದ್ದನೆಯು ಕಾಗದವಾಡುವುವು.
ಕೆಲವು ಕಾಗದದಳು ಲೇಖನಿಕೆ,
ಇನ್ನು ಕೆಲವು ಪಾರ್ಸಲ್‌ಗಳ
ಕಟ್ಟಲು
ಇನ್ನು ಕೆಲವು ಪಾಪೂರಾದ
ಲತ್ಕೃಟಿಗೂರುವುವು
ಮತ್ತೆ ಕೆಲವು ಬೈಬಲಿನ
ಪುಟಗಳಾಗುವುವು
ಇನ್ನು ಹಲವು ಹೊಗೆಸೊಪ್ಪು ತುತ್ತಿ
ಸಿಗರೇಟಿನ ಹೊಕಳನ್ನೆ ಎನಿಸುವವು.
ಕಟ್ಟಕಡೆಗೆ ವೃತ್ತಪತ್ರಿಕೆಗಳಾಗುವವು.

ರುಮೇನಿಯದಲ್ಲಿ ಭಾರತದ ಅನೇಕ ಮಹಾಕಾವ್ಯಗಳನ್ನು ಭಾಷಾಂತರಿಸಿ ಪ್ರಕಟಿಸಲಾಗಿದೆ. ಮಹಾಭಾರತ ವಸ್ತು ಗಾಮಾಯಣ, ಉಪನಿಷತ್ತುಗಳು, ಕಾಳಿದಾಸ, ರವೀಂದ್ರನಾಥ ಠಾಕೂರ್, ಪ್ರೇಮಚಂದ್, ಆರ್. ಕೆ. ನಾರಾಯಣ್, ರಾಜಾರಾವ್ ರೇಣ್ಣು, ಯ.ಕಪಾಲ ಮಶ್ತು ಶಿವಶಂಕರ ಪಿಳ್ಳೆ ಅವರ ಕೃತಿಗಳೇ ಇವುಗಳಲ್ಲಿ ಪ್ರಮುಖವಾಗಿದೆ.

ಸಾಹಿತ್ಯ ಅಕಾಡೆಮಿ ರುಮೇನಿಯದ ಸಣ್ಣ ಕಥೆಗಳ ಸಂಕಲನವೊಂದನ್ನು ಪ್ರಕಟಿಸಿದೆ. ಇದು ಅಂತಹ ದೊಡ್ಡ ಸಾಧನೆಯೇನೂ ಆಗದಿದ್ದರೂ ಭಾರತ ರುಮೇನಿಯಗಳ ನಡುವಣ ಸಾಂಸ್ಕೃತಿಕ ತಿಳಿವಳಿಕೆಯನ್ನು ಹೆಚ್ಚಿಸುವ ದಿಸೆಯಲ್ಲಿ ಒಂದು ಉತ್ತಮ ಆರಂಭವೆಂದು ಹೇಳಬಹುದು. ರಾಷ್ಟ್ರಕಟ್ಟುವ ಮಹತ್ಕಾರ್ಯದಲ್ಲಿ ಇದೊಂದು ಜೀವಜಲ. ಅಂದರೆ ಓಯಿಸಿಸ್ ಎಂದು ಹೇಳಬಹುದು. ಕಾರಣ ಈ ಯತ್ನ ಸ್ವಾಗತಾರ್ಹ.

ಕ್ಷಯರೋಗದ ಚಿಹ್ನೆಗಳು

ಕ್ಷಯರೋಗದ ಚಿಹ್ನೆಗಳು ತೋರಿದಾಗ ದೇಹದಲ್ಲಿ ಆಯಾಸ, ಹಸಿವು ಕಡಿಮೆಯಾಗುವುದು ದೇಹದ ತೂಕ ಇಳಿಯುವುದು, ಅಲ್ಪಸ್ವಲ್ಪ ಜ್ವರ, ವಿಶೇಷತಃ ಬೆಳಗಿನ ಹೊತ್ತಿನಲ್ಲಿ ಕೆಮ್ಮು. ಎದೆಯಲ್ಲಿ ನೋವು ಮತ್ತು ಕೆಲವೊಮ್ಮೆ ರಕ್ತ ಕಾರುವುದು ಉಂಟಾಗುವುದು. ಇಂತಹ ಚಿಹ್ನೆಗಳಲ್ಲಿ ಯಾವುದಾದರೂ ಕಾಣಿಸಿಕೊಂಡಾಗ ಅವನ್ನು ಉಲಕ್ಷ್ಯ ಮಾಡಬಾರದು. ಅತಿ ಸಮೀಪದಲ್ಲಿ ಇರುವ ಕ್ಷಯರೋಗ ಕ್ಲಿನಿಕ್‌ಗೆ ಹೋಗಿ ಪರೀಕ್ಷಿಸಿಕೊಳ್ಳಬೇಕು.

ನಿಮ್ಮ ರಾಜ್ಯದಲ್ಲಿರುವ ಕ್ಷಯರೋಗ ಸಂಘಕ್ಕೆ ಒಡ ಕ್ಷಯರೋಗಿಗಳ ಚಿಕಿತ್ಸೆ ಹಾಗೂ ಅಲೈಕೆಗಾಗಿ ನಿಧಿ ಬೇಕಾಗಿದೆ ಈ ದಿನಗಳಲ್ಲಿ ಮಾರಲ್ಪಡುತ್ತಿರುವ ಕ್ಷಯರೋಗ ಮೊಹರುಗಳನ್ನು ಪಡೆದುಕೊಂಡು ನೀವು ಅವರಿಗೆ ಸಹಾಯವನ್ನು ಮಾಡಬಹುದು

ಇಂದೇ ಟಿಬಿ ಮೊಹರುಗಳನ್ನು ಖರೀದಿಸಿರಿ!

ಈ ಮೊಹರುಗಳು ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಂಘ ಮತ್ತು ಇನ್ನಿತರ ಬೇರೆ ಬೇರೆ ಶಾಖೆಗಳಲ್ಲಿ ದೊರಕುವುವು

Space donated by
National Organic Chemicals Industries Ltd, Bombay.

60 ವರ್ಷಗಳಿಗೂ
ಮಿಕ್ಕಿ ಪ್ರಸಿದ್ಧವಾಗಿದೆ—

ಶ್ರೀ ಅಂಬಾಲ್
ಆಫೀಸರ ನಶ್ಯ

10, 25 ಗ್ರಾಮುಗಳ ಡಬ್ಬಿಗಳಲ್ಲಿ ದೊರಕುತ್ತವೆ.

ಶ್ರೀ ಅಂಬಾಲ್ ಮತ್ತು ಕಂಪೆನಿ

201, ಮಿಂಟ್ ರಸ್ತೆ, ಸುದ್ರಾಸು—1

ಫೋನ್ : 32061

ಶ್ರೀರಾಮಚಂದ್ರನ ಜನನ ಕಾಲ ಯಾವುದು?

(ಹಿನ್ನೊಂದನೇ ಪುಟದಿಂದ)

ರಾಜನ ವಿಶಾಲವಾದ ರಾಜದ್ವಾರಾದಿಯ ದ್ವಾರಗಳಲ್ಲಿ ನೋಡಿದ ಜಾನುವಾರುಗಳಲ್ಲಿ ನಾಲ್ಕು ದಾಡೆಗಳಿದ್ದ ಆನೆಗಳೂ ಇದ್ದವು.

ವರಣಶ್ಚ ಚಕ ರ್ದಂತೈಃ ಶ್ವೇತಕಾ
ಮುನಿಚಯೋಭವೇಃ |
ಭೂಷಿತೇ ಶ್ರೀಚರೇ ದ್ವಾರಂ
ಮತೇಶ್ಚ ಮೃಗಪಕ್ಷಿಭಃ ||
ವಾಲ್ಮೀಕಿ ರಾಮಾಯಣ ಸುಂದರ
ಕಾಂಡ ಸರ್ಗ ೪, ಶ್ಲೋ. ೨೮.

ಇದೇ ಪ್ರಕಾರ ಒಂಭತ್ತನೆಯ ಸರ್ಗದ ಏಳನೆಯ ಶ್ಲೋಕದಲ್ಲಿಯೂ ಮೂರು ಮತ್ತು ನಾಲ್ಕು ದಾಡೆಗಳುಳ್ಳ ಆನೆಗಳ ವರ್ಣನೆ ಕಂಡುಬರುತ್ತದೆ.

ಕುಂಭಕರ್ಣನು ಪಥಿಕಲ್ಪಟ್ಟನಂತರ ರಾವಣನ ಕಡೆಯಿಂದ ಮಹೋದರನು ಯುದ್ಧಕ್ಕೆ ತೆರಳಿದಾಗ ಅಕಸ್ಮಾತ್ "ಶುಭ ಶಕುನ" ಎಂಬ ಹೆಸರಿನ ಆನೆಯು ಮೇಲೆ ಕುಳಿತಿದ್ದನು. ಆನೆಯು "ಐರಾವತ" ವೆಂಬ ಜಾತಿಗೆ ಸೇರಿದ ಆನೆಯಾಗಿತ್ತು.

ಶಕಃ ಸ ದರ್ಶನಂ ಪ್ರಾಗಂ ಪ್ರಾಲ
ಜೀಮೂತಸ್ಯ ಸೈಂಹಿಮಃ ಐರಾವತ
ಕುಲೇಜಾತ ಮೂರ ರೋವೇ
ಮಹೋದರ ||

ವಾ. ರಾ. ಯು. ಕಾಂ. ೬೯.೨೦

ದೇವೇಂದ್ರನ ಆನೆಯಿಂದೀಚೆ ಐರಾವತವೆಂಬ ಒಂದು ಭಾವನೆ ಸರ್ವಸಾಧಾರಣವಾಗಿ ಜನರಲ್ಲಿದೆ. ಆದರೆ ಇದು ಸರಿಯಲ್ಲ. ಐರಾವತವೆಂಬುದು ಆನೆಯು ಒಂದು ಜಾತಿ ವಿಶೇಷವಾಗಿರುತ್ತದೆ. ಈ ಜಾತಿಯ ಆನೆಗಳು ಮಹಾ ಪ್ರಬಲ ಶಕ್ತಿಶಾಲಿಗಳಾಗಿರುತ್ತವೆ. ಇವುಗಳಿಗೆ ನಾಲ್ಕು ದಾಡೆಗಳಿರುತ್ತವೆ.

ಶ್ರೀರಾಮ ಮತ್ತು ಹನುಮಂತನ ಕಾಲದಲ್ಲಿ ನಾಲ್ಕು ದಾಡೆಗಳುಳ್ಳ ಆನೆಗಳಿದ್ದವು ಎಂಬುದು ಅಥವಾ ನಾಲ್ಕು ದಾಡೆಗಳುಳ್ಳ ಆನೆಗಳು ದೊರಕುತ್ತಿದ್ದ ಕಾಲದಲ್ಲಿ ಶ್ರೀರಾಮ ಮತ್ತು ಹನುಮಂತ ಇವರುಗಳು ಜನಿಸಿದ್ದರೆಂಬುದಾಗಿ ಕಂಡು ಬರುತ್ತದೆ.

ವರ್ತಮಾನ ಕಾಲದ ವೈಜ್ಞಾನಿಕರ ಸಂಶೋಧನೆಯಲ್ಲಿ, ಇಂದಿಗೆ ಸುಮಾರು ಹತ್ತು ಲಕ್ಷ ವರ್ಷಗಳ ಮೊದಲಿನಿಂದ ಲೂ ಇಂತಹ ಆನೆಗಳು ದೊರಕುತ್ತಿದ್ದವೆಂದು ತೋರಿಬರುತ್ತದೆ. ನಾಲ್ಕು ದಾಡೆಗಳುಳ್ಳ ಆನೆಗಳು ಜಗತ್ತಿನಲ್ಲಿ ದೊರಕುವ ಪ್ರಾಣಿ ಶಾಸ್ತ್ರಜ್ಞರೆಲ್ಲರೂ ಸರ್ವ ಸಮ್ಮತಿಯಿಂದ ಒಪ್ಪುತ್ತಾರೆ. ಆದರೆ ಇದರ ಕಾಲಮಾನದ ಕುರಿತಾಗಿ, ಹತ್ತು ಲಕ್ಷ ವರ್ಷಗಳೋ ಅಥವಾ ಒಂದು ಲಕ್ಷವೂ ಐವತ್ತು ಸಾವಿರ ವರ್ಷಗಳ ವ್ಯತ್ಯಾಸವೋ ಎಂಬುದರ ಕುರಿತಾಗಿ ಮಾತ್ರ ತೀವ್ರ ಮತಭೇದವಿದೆ.

"ಒಟಾಗೋ ವಿಶ್ವವಿದ್ಯಾಲಯ" ದಲ್ಲಿ ಪ್ರಾಣಿ ಜಂತು ವಿಜ್ಞಾನದ ಪ್ರಾಧ್ಯಾಪಕರಾದಿ ವಂಗತ ಡಾ. ಟಿ. ಜೆಫ್ರೀಕಾರ್ ಮತ್ತು "ಸಿಡ್ನಿ ವಿಶ್ವವಿದ್ಯಾಲಯ"ದ ಪ್ರಾಣಿ ವಿಜ್ಞಾನದ ಪ್ರೊಫೆಸರ್, ಪ್ರೊಫೆಸರ್ (ದಿವಂಗತ) "ವಿಲಿಯಮ್ ಹಸ್ಬೈಲ್" ಮತ್ತು "ವಾಶಿಂಗ್ಟನ್ ವಿಶ್ವವಿದ್ಯಾಲಯ"ದ ಜಂತು ವಿಜ್ಞಾನ ಮತ್ತು ತುಲನಾತ್ಮಕ ಶರೀರ ವಿಜ್ಞಾನದ ಪ್ರೊಫೆಸರ್ ಎ. ಜೆ. ಕೂರ್ಕಲ್ ಇವರುಗಳ ಮಂತ್ರಾಂತರ ಸಂಶೋಧಿಸಲ್ಪಟ್ಟ "ವಿ ಟೆಕ್ಸ್ಟ್ ಬುಕ್ ಆಫ್ ಜೂಲೋಜಿ" ಎಂಬ ಗ್ರಂಥದ ದ್ವಿತೀಯ ಆವೃತ್ತಿಯ 7ನೇ ಮುದ್ರಣದ 811ರಿಂದ 818ರ ವರೆಗಿನ ಪುಟಗಳಲ್ಲಿ 'ಶುಂಡ ಮಂಡಲ'ದ ವಿವರಣೆಗಳಲ್ಲಿ ಆನೆಗಳ ಅಸ್ತಿತ್ವವು ಜೀವ ವಿಜ್ಞಾನದ ನೂತನ ಯುಗ ಕ್ಕಿಂತ ಸುಮಾರು 425 ಲಕ್ಷ ವರ್ಷಕ್ಕೆ ಮೊದಲಿನಿಂದ ಇತ್ತೆಂದು ಕಂಡುಬರುತ್ತದೆ. ಇಷ್ಟೆಂದು ದೀರ್ಘಕಾಲಾನಂತರಗಳೊಳಗೆ ಆನೆಗಳ ದಾಡೆ, ದೇಹದ ಗಾತ್ರ ಮತ್ತು ಅವಯವಗಳಲ್ಲಿ ಪರಿವರ್ತನೆಯುಂಟಾಗಿರಬಹುದೆಂಬುದರಲ್ಲಿ ಸಂದೇಹವಿಲ್ಲ. ಆದ ಪ್ರಯುಕ್ತ ನಾಲ್ಕು ದಾಡೆಗಳುಳ್ಳ ಆನೆಗಳು, ಅತಿ ಪ್ರಾಚೀನ ಕಾಲದಲ್ಲಿದ್ದವೆಂದೂ ಆ ಕಾಲವನ್ನು ಮಹರ್ಷಿ ವಾಲ್ಮೀಕಿಯು ಜೀವಿತ ಕಾಲವೆಂದೂ ತಿಳಿದುಬರುತ್ತದೆ. ಮಹರ್ಷಿ ವಾಲ್ಮೀಕಿ ಇಂದಿಗೆ ಸುಮಾರು ಒಂಭತ್ತು ಲಕ್ಷ ವರ್ಷಗಳಿಗೆ ಮೊದಲು ಇದ್ದನೆಂದು ಸ್ಪಷ್ಟವಾಗುತ್ತದೆ. ವಾಲ್ಮೀಕಿ ಬರೆದ ರಾಮಾಯಣದಲ್ಲಿ, ರಾವಣನ ರಾಜಸಭೆಯು ಹೊರಗಡೆ ಮಹಾದ್ವಾರದಲ್ಲಿ ನಾಲ್ಕು ದಾಡೆಗಳುಳ್ಳ ಆನೆಗಳಿದ್ದುವೆಂದು ಸ್ಪಷ್ಟವಾಗಿ ವಿವರಿಸಿರುತ್ತಾನೆ. ಮಹಾ ಕವಿ ವಾಲ್ಮೀಕಿಯು ನಂತರದ ಕವಿಗಳು ವಾಲ್ಮೀಕಿಯು ಮೂಲ ಗ್ರಂಥದ ಶಕಹದಿಯಲ್ಲಿ ತಮ್ಮದೇ ಆದ ಸೂತನ ಗ್ರಂಥವನ್ನು ("ಶ್ರೀ ಮದ್ವಾಲ್ಮೀಕಿ ರಾಮಾಯಣ" ಎಂಬ ಹೆಸರಲ್ಲಿಯೇ) ರಚಿಸಿರಬೇಕು. ಅದರಲ್ಲಿ ಅವರು ಮೂಲಗ್ರಂಥದಲ್ಲಿದ್ದ ಅನೇಕ ವೈಜ್ಞಾನಿಕ ಹಾಗೂ ಪ್ರಾಣಿಗಳ ಅಸ್ತಿತ್ವದ ವಿಷಯಗಳನ್ನೂ ಲೋಪಗೊಳಿಸಿ ಇತರ ಅನೇಕವಿಷಯಗಳನ್ನು ಸೇರಿಸಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಈ ಕಾರಣ ಇತ್ತೀಚೆಗೆ ಅಳವಾಗಿ ಅಧ್ಯಯನ ಮಾಡಿದರೆ ಮಾರ್ಗದರ್ಶಿ ಪುರುಷೋತ್ತಮ ಶ್ರೀರಾಮಚಂದ್ರನು ಜನಿಸಿದ ಕಾಲನಿರ್ಣಯದಲ್ಲಿ ಇನ್ನಷ್ಟು ಮಹತ್ವಪೂರ್ಣ ವಿಷಯಗಳೂ ದೊರಕಬಹುದು.

ಸ್ಥಾಪನೆ: 1931

ದಿ ವಿಜಯ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಲೈಟ್ ಹೌಸ್ ಹಿಲ್ ರಸ್ತೆ

ಮಂಗಳೂರು — 3.

ಫೋನ್: 5711 — 3 ಲೈನುಗಳು

ಮೈಸೂರು, ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ
105ಕ್ಕೂ ಮಿಕ್ಕಿ ಶಾಖೆಗಳು.

ಠೇವಣಾತಿಯ ಬಡ್ಡಿ ದರಗಳು

91 ದಿನಗಳಿಗೂ ಮಿಕ್ಕಿ 6 ತಿಂಗಳ ಕಡಿಮೆ ಅವಧಿಗೆ	4¼%
6 ತಿಂಗಳಿಗೆ ಮಿಕ್ಕಿ 9 ತಿಂಗಳ ಕಡಿಮೆ ಅವಧಿಗೆ	4¼%
9 ತಿಂಗಳಿಗೆ ಮಿಕ್ಕಿ 1 ವರ್ಷ ಕಡಿಮೆ ಅವಧಿಗೆ	5¼%
1 ವರ್ಷಕ್ಕೆ ಮಿಕ್ಕಿ 2 ವರ್ಷಗಳ ಕಡಿಮೆ ಅವಧಿಗೆ	5½%
2 ವರ್ಷಗಳಿಗೆ ಮಿಕ್ಕಿ 3 ವರ್ಷಗಳ ಕಡಿಮೆ ಅವಧಿಗೆ	6%
3 ವರ್ಷಗಳಿಗೆ ಮಿಕ್ಕಿ 5 ವರ್ಷಗಳ ಕಡಿಮೆ ಅವಧಿಗೆ	6¼%
5 ವರ್ಷಗಳಿಗೆ ಮಿಕ್ಕಿದ ಅವಧಿಗೆ	6½%
ಸೇವಿಂಗ್ಸ್ ಬ್ಯಾಂಕ್ ಠೇವಣಾತಿ— ಎಸ್.ಬಿ. ನಿಯಮಗಳಿಗನುಸಾರವಾಗಿ	3½%

ರಿಕರಿಂಗ್ (ಮಾಸಿಕ) ಠೇವಣಾತಿ ಮತ್ತು "ಜೀವನ ನಿಧಿ" ದೈನಿಕ ಠೇವಣಾತಿ ಯೋಜನೆಗಳು
ಇನ್ನಿತರ ಆಕರ್ಷಣೀಯ ಸೌಲಭ್ಯಗಳು.

ಧಾರ್ಮಿಕ ಹಾಗೂ ಪರೋಪಕಾರಿ ಸೇವಾಸಂಸ್ಥೆಗಳ ಠೇವಣಾತಿಗಳಿಗೆ ಹೆಚ್ಚಿನ ಬಡ್ಡಿದರಗಳನ್ನು ನೀಡಲಾಗುವುದು.

ಕೃಷಿಕರಿಗೆ ಮತ್ತು ಸಣ್ಣ ಪ್ರಮಾಣದ ಉದ್ಯಮಿಗಳಿಗೆ ಉದಾರ ಶರ್ತಗಳ ಮೇರೆಗೆ ಸಾಲಗಳನ್ನು ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗಳಿಗೆ ನಮ್ಮ ಹತ್ತಿರದ ಶಾಖೆಯೊಡನೆ ಸಂಪರ್ಕವನ್ನಿಟ್ಟುಕೊಳ್ಳಿರಿ.

ತುಳುನಾಡಿನ ಧಾರ್ಮಿಕ ಪರಂಪರೆ

(ಹಿನ್ನೆಲೆ ಪುಟದಿಂದ)

ತ್ತು ಇಂದಿನ ಜಾತಿ ಕಲಹಗಳಿಗೆ ಕಾರಣವಾಗಿದೆ.

ವಿಜಯನಗರ ಕಾಲಕ್ಕೆ ಹಿಂದಿನ ತುಳುನಾಡಿನ ಇತಿಹಾಸದ ಮಧ್ಯ(ಕ್ರಿ. ಶ. ೧೦—೧೪ನೆಯ ಶತಮಾನಗಳು) ಮತ್ತು ಪ್ರಾಚೀನ (ಕ್ರಿ. ಶ ೭—೧೦ನೆಯ ಶತಮಾನಗಳ) ಯುಗಪರ್ವಗಳಲ್ಲಿ ಈ ನಿಷ್ಠುರತೆ ಇರಲಿಲ್ಲ. ಆ ಯುಗಪರ್ವಗಳಲ್ಲಿ ತುಳುನಾಡಿನ ಧಾರ್ಮಿಕ ಜೀವನವು ಅಕ್ಷುಣ್ಣ ಶಾಂತಿಯುತವಾಗಿದ್ದಿತೆಂದು ಇಂದಿನ ಶಾಸನಗಳ ಆಧಾರದ ಮೇಲೆ ಹೇಳಬಹುದು. ಆ ಎರಡು ಯುಗಪರ್ವಗಳಲ್ಲಿಯೂ ತುಳುನಾಡನ್ನಾಳುತ್ತಿದ್ದರು, ತಮ್ಮ ತಮ್ಮ ಆಳುಪರು ಶೈವ ಧರ್ಮಾವಲಂಬಿಗಳಾಗಿದ್ದರೂ, ಅವರ ರಾಣಿಯರು ಜೈನ ಧರ್ಮಾನುಯಾಯಿಗಳಾಗಿದ್ದರೂ, ಅವರ ರಾಣಿ ಚಾಕಲ ಮಹಾದೇವಿಯು ಜೈನಳಿದ್ದಳು, ಜೈನರ ಕೇಂದ್ರಸ್ಥಾನಗಳಲ್ಲೊಂದಾಗಿದ್ದ ವಂಗಂಗದಲ್ಲಿ ಅನೇಕ ಧರ್ಮಕಾರ್ಯಗಳನ್ನು ನೆರವೇರಿಸಿದ್ದಳು. ಕ್ರಿ. ಶ. ೧೫೯೦ರಿಂದ ೧೬೦೨ ವರೆಗೆ ರಾಜ್ಯವಾಳಿದ ಆಳುಪ ವೀರಪಾಂಡ್ಯದೇವನು ಸ್ವತಃ ಶೈವನಿದ್ದರೂ, ತನ್ನನ್ನು "ಚಾರುಕೀರ್ತಿದೇವರ ದಿವ್ಯ ಶ್ರೀ ಪಾದಪದ್ಮಾರಾಧಕ"ನೆಂದು ಬರೆದುಕೊಂಡಿದ್ದ.

ವ್ಯಾಪಾರ ಆಳುಪರ ಕಾಲದಲ್ಲಿ ತುಳುನಾಡಿನಲ್ಲಿ ಶೈವ ಧರ್ಮವೇ ಪ್ರಬಲವಾಗಿತ್ತಾದರೂ ಇತರ ಧರ್ಮಗಳೂ, ಅದರಲ್ಲೂ ಮುಖ್ಯವಾಗಿ ಜೈನಧರ್ಮವು ಪ್ರಚಾರದಲ್ಲಿದ್ದವು (ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳ ಬಹು ಭಾಗಗಳನ್ನೊಳಗೊಂಡಿದ್ದ) ಕದಂಬ ಮಂಡಲ ಮತ್ತು (ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲಭಾಗಗಳನ್ನೊಳಗೊಂಡಿದ್ದ) ಪೊಂಬಚ್ಚ ಪ್ರದೇಶ ಆವರ ಆಳಿಕೆಗೊಳಗಾಗಿದ್ದವು. ವ್ಯಾಪಾರ ಆಳುಪರು ಕೂಡ ಧಾರ್ಮಿಕ ಸ್ವಾತಂತ್ರ್ಯವನ್ನು ಪೋಷಿಸಿದ್ದರು. ಕ್ರಿ.ಶ ೬೦೦ರಿಂದ ೭೫೦ರ ವರೆಗೆ ರಾಜ್ಯವಾಳಿದ ಆಳುಪ ವಿಕ್ರಮಾದಿತ್ಯನು "ಸ್ವತಃ ಶೈವ ಧರ್ಮಾವಲಂಬಿಗಳಾಗಿದ್ದರೂ, ಅವನ ರಾಣಿಯೂ ಜಿಳುಕ್ಕ ಚಕ್ರವರ್ತಿ ವಿಜಯಭಟ್ಟಾರಿಕೆಯ ಪುತ್ರಿ ಸತ್ಕುಶ್ರಯು ಶಹೋರಿಯೂ ಆದ ಕಂಚವ್ವ ದೇವಿ ಜೈನ ಧರ್ಮವನ್ನು ಪಾಲಿಸಿದ್ದಳು. ಅವಳು ಪುನಿರೆಯಲ್ಲಿ ಕಟ್ಟಿಸಿದ "ಆನೆಸೆಜ್ಜೆಯ ಬಡಿ"ಗೆ ಗಡಿಗೆರೆ ಗ್ರಾಮವನ್ನು ದತ್ತಿಯಾಗಿ ಕೊಡಬೇಕೆಂದು ಚಕ್ರವರ್ತಿಯನ್ನು ಬಿನ್ನವಿಸಿಕೊಂಡವನು ವಿಕ್ರಮಾದಿತ್ಯ.

ಈ ಮೇಲಿನದು ತುಳುನಾಡಿನ ಧಾರ್ಮಿಕ ಸಂಸ್ಥೆಯ ಒಂದು ಪಕ್ಷಿನೋಟ ಅಷ್ಟೆ. ತುಳುನಾಡಿನ ಇತಿಹಾಸದ ಪ್ರಾಚೀನ ವಸ್ತು ಶುಷ್ಕಸಂಗಗಳ ಧಾರ್ಮಿಕ ಪರಂಪರೆಯು ಜೀವನಾಡಿಯೂ ಆಗಿದ್ದ ಧಾರ್ಮಿಕ ಉದಾರಾಭಿಪ್ರಾಯವು ಫಲವಾಗಿಯೂ ನಿದರ್ಶನಾತ್ಮಕವಾದದ್ದೇ ಹೌದು. ವಿಜಯನಗರದ ಕಾಲದಲ್ಲೂ ಇಂದೂ ಈ ಶ್ರೇಷ್ಠ ಪರಂಪರಾ ವೈಶಿಷ್ಟ್ಯವು ಸ್ವಲ್ಪ ಮಟ್ಟಿಗೆ ಕುಂಟಿತಗೊಂಡಿರುವುದು ಕಲಿಯುಗ ಬೆಳೆಯುತ್ತಿರುವ ಪ್ರಭಾವದಿಂದಲೇ ಇರಬೇಕು.

ಆದರೆ ಎಲ್ಲ ಧರ್ಮಗಳನ್ನೂ ಸಮಾನ ದೃಷ್ಟಿಯಿಂದ ಕಾಣುವುದೇ ಶ್ರೀಮಂತ ಸ್ಥಿರವೆಂದು ನಾವು ಹೇಳಿದ ಇಬ್ಬರು ಭಾರತೀಯ ಮಹಾಪುರುಷರ— ಅಶೋಕ ಚಕ್ರವರ್ತಿ ಮತ್ತು ಪೂಜ್ಯ ಬಾಪೂಜಿ-ವಿಶ್ವದ ಎಲ್ಲೆಡೆಗಳಲ್ಲೂ ತಮ್ಮ ಪ್ರಭಾವವನ್ನು ಬೀರಿ ಹೋಗಿದೆ ಮತ್ತೂ ಈ ಕಲಿಯುಗದಲ್ಲಿ. ಇವರಿಬ್ಬರಿಗೂ ಸಂದಿಸಿ ಉರುಳಿಹೋದ ಸಾವಿರಾರು ಇಸ್ಪೆರಡು ಶತಮಾನಗಳ ಅವಧಿಯಲ್ಲಿ ಧಾರ್ಮಿಯರು ಎಷ್ಟೋ ಬಾರಿ ಕಣ್ಣುಬ್ಬಿಸಿ ಕಪ್ಪುದಾರಿ ಹಿಡಿದದ್ದುಂಟು; ಕಾಲ ಕೈವಿಸುವ ಮುನ್ನ ಕಣ್ಮೆರೆದು, ಚೇತರಿಸಿಕೊಂಡು ಹುನಃ ಶತಾರ್ಧವನ್ನು ಹಿಡಿದದ್ದುಂಟು. ಆದರೆ ಹಿಂಸೆಯಿಂದ ಅಹಿಂಸೆಗೆ, ಕತ್ತಲೆಯಿಂದ ಸತ್ಯಕ್ಕೆ ಮರಳಿ ಸುರಳಿ ಹೋಗಿಬರುವ ಈ ಕೂಗುಮಟ್ಟಿಕೆ ಅಹರ್ವಿದ್ದ್ವ; ದುಷ್ಪರಿಣಾಮಕಾರಿಯೂ ವಿನಾಶಕಾರಿ. ಹೀಗಾಗಲೆ ಧಾರ್ಮಿಕರು ಎಂದೆಂದಿಗೂ ತಮ್ಮ ಧಾರ್ಮಿಕ ಜೀವನದಲ್ಲಿ ಉದಾರಾಭಿಪ್ರಾಯ ಉಳಿಸಿಕೊಂಡಿರಬೇಕು. ತುಳುನಾಡಿನವರೆಲ್ಲರೂ ತಮ್ಮ ಧಾರ್ಮಿಕ ಪರಂಪರೆಯ ಶ್ರೇಷ್ಠ ಅಂಶಗಳನ್ನು ಪಾಲನೆ ಮಾಡಿಕೊಳ್ಳುತ್ತಲೇ ಆದರೆ ಆ ಕ್ಷೇತ್ರದಲ್ಲಿ ಮುಂದಾಳುತನ ವಹಿಸಿ ಇಡೀ ಭಾರತವೂ ವಿಶ್ವದ ಇತರ ಎಲ್ಲ ಜನಾಂಗಗಳಿಗೂ ಒಂದು ಉತ್ಕೃಷ್ಟ ನಿದರ್ಶನವಾಗಿ ಬೆಳಗುವಂತೆ ಮಾಡಬಲ್ಲರು. ಹಾಗಾಗಲಿ ಎಂಬುದೇ ಈ ಲೇಖನದ ಉದ್ದೇಶ

'ಅಕಾರಾದ್ಯಕಿತಂ ತೋಯಂ ಯಥಾ
ಗಚ್ಛತಿ ಸಾಗರಂ।
ಸರ್ವ ದೇವನಮಸ್ಕಾರಃ ಕೇಶವಂ ಪ್ರತಿ
ಗಚ್ಛತಿ ॥'

Tel. "Udaya" Coondapoor

Phone | Office 21
Residence: 41

UDAYA INDUSTRIES, GULVADY

Manufacturers of:

Jyothi Brand Tiles, Bridges Bricks, Ceiling Tiles, Flooring Tiles

and

Saw Mill owners, P. O. Basrur, S. K.

ಸುಪ್ರಸಿದ್ಧ "ಜ್ಯೋತಿ" ಗುರುತಿನ ಹಂಚುಗಳ
ನಿರ್ಮಾಪಕರು.

ಉದಯಾ ಇಂಡಸ್ಟ್ರೀಸ್, ಗುಲ್ವಾಡಿ, ದ. ಕ.

ನಮ್ಮ ಭಾಷಾಭಿಮಾನ ಬೆಳೆಯುತ್ತಿದೆಯೆ?

ಶ್ರೀ ಕದ್ದಲಸೆ ವಿಶ್ವೇಶ್ವರ ಶರ್ಮಾ

ರಾಜ್ಯದಲ್ಲಿ ಆಡಳಿತ ಭಾಷೆ ರಾಜ್ಯದ ಭಾಷೆಯೇ ಆದರೆ ಜನಸಾಮಾನ್ಯರಿಗೂ ಸಾಮಾನ್ಯ ತಿಳುವಳಿಕೆ ಬರುತ್ತದೆ. ಕನ್ನಡ ರಾಜ್ಯದಲ್ಲಿ ಕನ್ನಡಿಗರೇ ಆ ಭಾಷೆಯ ಬಗ್ಗೆ ಆದರ-ಅಭಿಮಾನ ಪಡದಿದ್ದರೆ, ಇನ್ನಾರು ಪಡಬೇಕು? ಇನ್ನಾರು ಆದನ್ನು ಬೆಳೆಸಬೇಕು?

ದೇಶದ ಸರ್ವತೋಮುಖ ಅಭಿವೃದ್ಧಿಗಾಗಿ—ಸ್ವರಾಜ್ಯ ಬಂತೆಂದು; ಭಾಷೆಗಳ ಬೆಳವಣಿಗೆಗಾಗಿ ಪ್ರಾಂತಗಳ ರಚನೆಯೂ ಯಿತು. ಪ್ರಾಂತೀಯ ಭಾಷೆಗಳಲ್ಲಿಯೇ ಆಡಳಿತ ನಡೆಸುವುದರಿಂದ ಜನಸಾಮಾನ್ಯರ ವ್ಯವಹಾರಕ್ಕೆ ಸೌಲಭ್ಯ ದೊರೆಯುವುದೆಂಬುದು ಈ ಪ್ರಾಂತರಚನೆಗೆ ಪ್ರೇರಣೆಯೂದ ವಿಷಯವಾಗಿದೆ.

ಸ್ವಾತಂತ್ರೀಕರಣದ ನಂತರ ಈ ವಿಚಾರದ ಸ್ವರೂಪವೇ ಬೇರೆಯಾಯಿತ್ತು. ರಾಜಕೀಯ ಆಡಳಿತಕ್ಕೆ ಪ್ರಧಾನವಾಗಿ ಭಾಷೆ ಗೌಣವಾಯಿತು. ಆಡಳಿತದಲ್ಲಿ ಹೆಚ್ಚು ಕಾಲ ಅಧಿಕಾರ ಗಳಿಸುವ, ಉಳಿಸುವ ಹಂಬಿಕೆ, ಹೊಂಚಿಕೆಗೇ ಇದ್ದಷ್ಟು ಪವನ ಭಾಷಾ ಬೆಳವಣಿಗೆಗೆ ಇರದಾಯಿತು. ಹಾಗಾಗಿ ಸಾಮಾನ್ಯ ಸುಪ್ರಸಿದ್ಧ ಭಾಷಾಭಿವೃದ್ಧಿಯು ಅದರ ಬೆಳವಣಿಗೆಗೆ ಸೇವೆ ಸಲ್ಲಿಸಿದಷ್ಟು ಸರಕಾರದಿಂದ ಸರಿಯಾದ ಸಹಾಯ ದೊರಕಿಲ್ಲವೆಂದರೆ ಅದೇನು ಆಶ್ಚರ್ಯ ಸಂಗತಿಯಲ್ಲ.

ಸರಕಾರಕ್ಕೆ ಆಡಳಿತ ನಡೆಸಲು ರಾಜ್ಯದ ಅವಶ್ಯಕತೆಯಿರುವಷ್ಟೇ ಭಾಷೆಗೂ ಮಾಹತ್ವವಿರುತ್ತದೆ, ರಾಜ್ಯಕ್ಕಾಗಿ ಸರಕಾರ ದುಡಿಯುವಂತೆ ಅದು ಭಾಷೆಯು ಬೆಳವಣಿಗೆಗೂ ದುಡಿಯಬೇಕಾಗುತ್ತದೆ; ಆಡಳಿತದ ಜ್ಞಾನ ಜನಸಾಮಾನ್ಯರಿಗೆಲ್ಲ ಆಗಬೇಕಾದರೆ ಅಲ್ಲಿಯ ಪ್ರಾದೇಶಿಕ ಭಾಷೆಯಲ್ಲಿಯೇ ಪಡೆಯುವುದು ತೀರ ಅವಶ್ಯ. ಈ ವ್ಯವಸ್ಥೆಯು ಸುಗಮ, ಸೌಲಭ್ಯಕ್ಕಾಗಿಯೇ ಭಾಷಾವಾರು ಪ್ರಾಂತ ರಚನೆ ಸಳು ಬೆಳೆದುಬಂದವು. ಇಷ್ಟಿಯ ಸಿದ್ಧಾಂತ ಅಲ್ಲಿಯ ಭಾಷೆಯ ಸಮಗ್ರ ಹಿತದೃಷ್ಟಿಯಿಂದ ಇದ್ದದ್ದೇಬು.ದು ಮರೆಯಲಾರದ ಮಾತು.

ಆದರೆ ಇಂದು ಈ ಭಾಷಾವಾರು ಪ್ರಾಂತರಚನೆಯಾಗಿ ಆದದ್ದೇನು? ಭಾಷೆಗಳಿಗಾಗಿ ಪ್ರಾಂತವಾದರೂ—ಪ್ರಾಂತಗಳಿಂದ ಭಾಷೆ ಹಿಗ್ಗುವ ಅಭಿಲಾಷೆ ಕಂಡುಬರುತ್ತಿಲ್ಲ. ಭಾಷೆಗಳಿಗಿಂತಲೂ ಹೆಚ್ಚು ಪ ಸ್ಥಾನ-ಮೋಹ ಬೇರಾವುದೋ ಇಂದು ಅಕ್ರಮಿಸಿಕೊಂಡಿರುತ್ತದೆ.

ಭಾಷೆ ಭಾವನೆಗಳನ್ನು ಪ್ರಕಟಿಸುವ ಒಂದು ಪ್ರಮುಖ ಸಾಧನ. ರಾಜಕೀಯದ ಸ್ಥಿತಿ, ಗತಿ, ಧೋರಣೆಗಳು, ಜನಸಾಮಾನ್ಯರಿಗೂ ತಿಳಿಯಬೇಕಾದರೆ ಆಡಳಿತ ಭಾಷೆ ಅಲ್ಲಿಯ ಪ್ರದೇಶದ ಭಾಷೆಯೇ ಆಗಿರಬೇಕು. ಪ್ರಾಂತದ ಭಾಷೆ ಪರಿಚಯದ ಭಾಷೆಯಾದ ಮೂಲಕ ಅಲ್ಲಿಯ ಜನ ಈ ಭಾಷಾ ಸೌಲಭ್ಯದಿಂದಾಗಿ ಸರಕಾರವನ್ನೂ ಅದರ ಆಡಳಿತವನ್ನೂ ಬೇಗ ಗುರುತಿಸಿಕೊಳ್ಳುತ್ತಾರೆ. ನೇರವಾಗಿ ಈ ಭಾಷಾ ಸೇತುವೆಯ ಮೂಲಕ ಜನ ಮತ್ತು ಆಡಳಿತದ ಸಂಪರ್ಕ ಸುಗಮವಾಗಿ ಸಾಗುತ್ತಿದೆ.

ಆದರೆ ಇಂದು ಈ ವಿಚಾರದಿಂದ ನಾವು ದೂರ ಉಳಿದಿದ್ದೇವೆ. ಭಾಷಾವಾರು ಪ್ರಾಂತ ರಚನೆಯೊಂದಿಗೆ, ಭಾಷೆಗಳಿಗೆ ಪ್ರಾಮುಖ್ಯತೆ ದೊರಕಿ ಎಷ್ಟೋ ವರ್ಷಗಳು ಗತಿಸಿಹೋದವು. ಆದರೂ ಭಾಷೆಯ ಕಡೆಗೆ ಸರಕಾರದ ದೃಷ್ಟಿ ಅಷ್ಟಾಗಿ ಹೋಗಲಿಲ್ಲ. ಇವತ್ತೂ ವಿದೇಶೀ ಭಾಷೆಯೇ ನಮ್ಮ ಸರಕಾರದ ನಮ್ಮ ಪ್ರಾಂತದ ಆಡಳಿತ ಭಾಷೆಯೇ ಆಗಿರುತ್ತದೆ.

ಕನ್ನಡ ರಾಜ್ಯೋದಯವಾದಾಗ ನಮ್ಮ ಜನ ಅನೇಕ ಕನಸು ಕಂಡಿದ್ದರು. ಕನ್ನಡದ ಬಳಕೆ ಇನ್ನೂ ಹೆಚ್ಚುತ್ತದೆ, ಕನ್ನಡದ ಅಭಿಮಾನ, ಅಭಿವೃದ್ಧಿಯ ಅಭಿಲಾಷೆ ಬೆಳೆಯುತ್ತದೆ. ಹಂಬಿಕೆಹೊದ ಹರಿದುಹೋದ ನಾಡು ಏಕೀಕೃತವಾಗಿ ಕನ್ನಡದ ವಕ್ತೆಲ್ಲ ತಮ್ಮ ಮಾತೃಭಾಷೆಯಲ್ಲಿ ಸರಸವಾಡುತ್ತ ಫಲಿಯುವ ಸಂದರ್ಭ ಬೇಗನೇ ಬರುತ್ತದೆಂದು ಆಶಿಸಿದ್ದರು. ಆದರೆ ಈ ಆಶೆ ಆ ಕನಸು, ಇನ್ನೂ ಕನಲವಾಗಿಲ್ಲ! ತಾಯಿನಾಡನ್ನ ಇನ್ನೂ "ಕನ್ನಡನಾಡು", "ಕರ್ನಾಟಕ ರಾಜ್ಯ" ಎಂದು ಕರೆಯಿಸುವಷ್ಟೂ ಕಮ್ಮ ರಾಜ್ಯದ ರಾಜಕೀಯ ಮುಖಂಡರು ಮನಃಪಾಗಲಿಲ್ಲ. ಅಂದಾಗ ಕನ್ನಡದಲ್ಲಿಯೇ ಆಡಳಿತ ಯಾವಾಗ ಆಗಬಲ್ಲದು? ಪ್ರತಿವರುಷವೂ ಈ ಮುಖಂಡರು ಹೇಳುವುದುಂಟು, "ಇನ್ನು ಸದ್ಯದಲ್ಲಿಯೇ ಕನ್ನಡವು ಆಡಳಿತಭಾಷೆಯಾಗಬಲ್ಲದು" ಎಂದು. ಆದರೆ ಈ ಹೇಳಿಕೆದಳು ಪ್ರತಿವರುಷವೂ ರಾಜ್ಯೋದಯದ ಸಂದರ್ಭದಲ್ಲಿ ಉತ್ಸವಕ್ಕೆ ಔಚಿತ್ಯವಾಗಿ ಕೇಳಿಕೆ ನಡೆಸುತ್ತಿರುವುದರಿಂದ ಈ ಹೇಳಿಕೆ ಬರೀ ಕೇಳಿಕೆಗಾಗಿ ಮಾತ್ರ ಎಂದು ತಿಳಿದರೆ ತಪ್ಪೇನೂ ಇರಲಾರದು. 'ಸದ್ಯ' ಶಬ್ದಕ್ಕೆ ಸಮಯದ ವ್ಯಾಪ್ತಿ ಎಷ್ಟೋ ಏನೋ!

ಸರಕಾರದ ರಾಗದಪತ್ರಗಳು ಇಂದು ಕನ್ನಡದಲ್ಲಿ ಬರುವುದೇ ಇಲ್ಲ. ನಾಲ್ಕು ನಾಲಿಪ ಉತ್ತರವಾದರೂ ಅದು ಇಂಗ್ಲೀಷಿನಲ್ಲಿಯೇ ಬರುತ್ತದೆ. ಸಾಮಾನ್ಯ ರೈತರಿಗೆಲ್ಲ ಇಂಗ್ಲೀಷ್ ಬರುತ್ತಿಲ್ಲವೆಂಬುದು ಸರಕಾರಕ್ಕೆ ತಿಳಿಯದೆಯಿದೆಯೇ? ಅವರೇ ಈ ಅಂಕೆ ಸಂಖ್ಯೆಗಳನ್ನು ಹೇಳಿ-ತಿಳ್ತರೆ. ಎಷ್ಟೋ ಕಡೆಯಲ್ಲಿ ಕೂರಕ್ಕೆ ಬಂ-ಲಂಡಕ್ಕು ಅನಕ್ಷರಸ್ಥರೆಂದು, ಇಂಥಲ್ಲಿ ಸರಕಾರದ ಉತ್ತರ, ಆದೇಶ, ಆಜ್ಞೆಗಳು ಯಾವುದೋ ದೇಶದ ಭಾಷೆಯಲ್ಲಿ ಇಂದರೆ ಅದರ ಬಗ್ಗೆ ಅವರು ಹೇಗೆ ತಿಳಿಯುವುದು? ಅದರ ತಿಳುವಳಿಕೆಯ ಬಗ್ಗೆ ಬೇರೊಬ್ಬರ ಆಶ್ರಯವನ್ನೆ ಪಡೆಯುವ ಸಂದರ್ಭ ಹೆಚ್ಚಾಗಿ ಬರುತ್ತವೆ. ಆಶ್ರಯ ದೊರೆಯದಿದ್ದರೆ ಹಣಕೊಟ್ಟು ತಿಳುವಳಿಕೆ ಪಡೆಯಬೇಕು. ಇಂಥ ಪರಿಸ್ಥಿತಿಯಲ್ಲಿ ಸರಕಾರ ಯಾಕೆ ತರಬೇಕು? ಯಾಕೆ ತಪ್ಪಿಸಬಾರದು? ಸರಕಾರೀ ಅಧಿಕಾರಿಗಳಿಗೆ ಕನ್ನಡ ಬರುತ್ತಿಲ್ಲವೇನ? ಆ ದಾಯಕರ, ವ್ಯಾಪಾರಿಕರ, ಮುಂತಾದ ಸಾಮಾನ್ಯ ವ್ಯವಹಾರದ ಫಾರ್ಮು, ಪತ್ರಗಳೂ ಕನ್ನಡದಲ್ಲಿಲ್ಲ. ಜನಸಾಮಾನ್ಯರ ದಿನಚರೀ ವ್ಯವಹಾರದ "ಮನೀ ಆಡರ್ರ ಫಾರ್ಮುಗಳು, ಪೋಷ್ಟಕಾರ್ಡ್, ಕವರುಗಳ್ಲೂ ಸಹ ಕನ್ನಡವಿಲ್ಲವೆಂದರೆ ಕನ್ನಡಕಾಯ್ತು, ಭಾಷೆಗೆ ಎಂಥ ಸೇವೆ ಸಲ್ಲಿಸಿದ್ದೀವಿ!

ಸರಕಾರದ ಈ ಧೋರಣೆಯ ಮೂಲ ಕವೋ ಏನೋ ಜನಾಂದದಲ್ಲಿಯೂ "ನಮ್ಮ ಭಾಷೆ, ನಮ್ಮಭಾಷೆಯ ಅಭಿಮಾನ" ಬೆಳೆಯದೇ ಇರುವುದು ವಿಷಾದಕರ ಸಂಗತಿ. ನವ್ಯ ಕನ್ನಡ ಭಾಷೆಯೆಂದರೆ ಕನ್ನಡದ ಜನಕ್ಕೇ ಅಸ್ಪಷ್ಟವಾಗಿದೆ. ತಾಯಿಯ ಪೂಜೆ, ಪೂಜ್ಯತೆ ಮನೆಯಲ್ಲಿಯೇ ನಡೆಯದಿದ್ದರೆ ಇನ್ನೆಲ್ಲಿ ನಡೆಯುತ್ತದೆ? ಕರ್ನಾಟಕ ರಾಜ್ಯಧಾನಿಯಲ್ಲೇ ಕನ್ನಡಕ್ಕೆ ಆಗ್ರ ಪ್ರಾಶಸ್ತ್ಯ ಸಿಗದಿದ್ದರೆ ಇನ್ನೆಲ್ಲಿ ಸಿಗಬೇಕು? ಹೊರಫಿಂದ ರಾಜ್ಯದ ರಾಜಧಾನೀ, ಆದರೆ ಅಲ್ಲಿಯೇ ಕನ್ನಡದ ಬಳಕೆ ಕಡಿಮೆ. ತಮಿಳರೋ, ತೆಲಗರೋ ತೋರುವಷ್ಟು ಆದರೆ ಕನ್ನಡಿಗರಿಂದ ಸಿಗುತ್ತಿಲ್ಲವೆಂದು ಹೇಳಲಾಗುತ್ತಿದೆ. ಅಲ್ಲಿಯ ಮತ್ತು ಹಲವು ಕಡೆಯ ಅಂಡಡಿಗಳಿಗೆ, ಸರಕಾರೀ ನಿಲಯ, ಫಲಕಗಳಿಗೆ ಕನ್ನಡದ ಬೋರ್ಡುಗಳೇ ಕಾಣಿಸಿ. ಬಳಕೆಯಲ್ಲೂ ಸಹ ಕನ್ನಡ ಆಡುವುದು, ಕನ್ನಡ ಪತ್ರಿಕೆ ಓದುವುದು ಇವು ಕಡಿಮೆ ತರಗತಿಯುದೆಂದೇ ಭಾವಿಸಲಾಗುತ್ತದೆಯೇ ಹೊರತು ನಾವು ಕನ್ನಡದ ಮಾತೃಳಿಂಬ ಭಾವನೆಯಲ್ಲಿ ಅದನ್ನು ಹೆಚ್ಚಿಚ್ಚು ಬಳಸಿ ಬೆಳೆಸಬೇಕೆಂಬ ತಾತ್ಪರ್ಯದಲ್ಲಿ ಅಭಿಮಾನವಿಲ್ಲದವರಾಗಿದ್ದೇವೆ.

ನಾಲ್ಕು ಅಕ್ಷರ ಇಂಗ್ಲೀಷ ಕಲಿತೊಡನೆ ತಮ್ಮ ಮಾತೃಭಾಷೆಯಾದ ಕನ್ನಡವನ್ನು ಮರೆಯುವುದು ಇತ್ತೀಚೆಗೆ ಅಭ್ಯಾಸವೇ ಆಗಿ ಬಿಟ್ಟಿದೆ. ಜನರ ಮಧ್ಯದಲ್ಲಿ ಕನ್ನಡ ಆಡುವುದಕ್ಕಿಂತಲೂ ಇಂಗ್ಲೀಷ ಆಡುವುದು ಪಾಂಡಿತ್ಯದ ದ್ಯೋತಕವೆಂದು ಭಾವಿಸಿದ ಜನಗಳೂ ಇದ್ದಾರೆ. ಹೀಗಾಗಿ ಮಾತೃ ಭಾಷೆಗೆ ಸಿಗಬೇಕಾದ ಸ್ಥಾನ—ಮಾನ, ಗೌರವಾದರ ಅಭಿವೃದ್ಧಿಗಳು ಸಿಗದಿದ್ದುದು ಆಶ್ಚರ್ಯ ಪಡಬೇಕಾದ್ದೇನೂ ಆಗಿಲ್ಲ.

ಇಂಗ್ಲೀಷಕ್ಕಾಗಲೀ ಬೇರೆ ಭಾಷೆಯು ನ್ಯಾಗಲೀ, ಆಡುವುದಾಗಲೀ, ಬಳಸುವುದಾಗಲೀ ಬೇಡವೆಂಬ ನಾನು ಹೇಳುತ್ತಿಲ್ಲ. ಮೊದಲು ಮಾತೃಭಾಷೆಗೆ ಸಿಗಬೇಕಾದ ಸ್ಥಾನ—ಮಾಪಿ ಸಿಗಬೇಕು. ಎಲ್ಲ ಭಾಷೆಗಳನ್ನು ತಾವು ಆದರದಿಂದಲೇ ಕಾಣುವುದು ಅವಶ್ಯ, ಜ್ಞಾನ ಹೊಂದಿ ಭಾಷೆ ಪಡೆದಿದ್ದರೇನ? ಅದು ಗ್ರಾಹ್ಯವೇ ಸರಿ, ಆದರೆ ಅಷ್ಟೂ ಪ್ರಾಂತಗಳ ಭಾಷೆಯಲ್ಲಿಯೇ ಅಲ್ಲಿಯ ರಾಜಕೀಯ ಸಾಮಾಜಿಕ ವ್ಯವಹಾರಗಳು ನಡೆಯುವುದರಿಂದ ಜನಕ್ಕೆ ಹೆಚ್ಚು ಉಪಯೋಗವಾಗುತ್ತದೆ, ಬೇಗ ಅವರ ಪ್ರಜ್ಞೆ ವಿಕಾಸವಾಗುತ್ತದೆ.

ಪ್ರಜಾಪ್ರಭುತ್ವದ ರಾಜ್ಯಪದ್ಧತಿಯಲ್ಲಿ ಪ್ರಜೆಗೆ ರಾಜಕೀಯದ ಸ್ಥಿತಿ-ಪ್ರಜ್ಞೆಗಳು ತೀರ ಅನಿವಾರ್ಯವಾದುದು. ಪ್ರಜೆಯ ಪ್ರಜ್ಞೆ ವಿಕಾಸವಾದಷ್ಟು "ಸ್ಥಿತಪ್ರಜ್ಞ"ನಾದಷ್ಟು ಈ ರಾಜಕೀಯ ತಿಳಿಯೂಗುತ್ತದೆ, ಸ್ಥಿರವಾಗುತ್ತದೆ, ದೇಶಕ್ಕೆ ಬೇಕಾದ ಭದ್ರ ಆಡಳಿತವನ್ನು ರೂಪಿಸಲು ಸಾಧ್ಯವಾಗುತ್ತದೆ. ಹಾಗಾಗಿ ರಾಜ್ಯದಲ್ಲಿ ಆಡಳಿತ ಭಾಷೆ ರಾಜ್ಯದ ಭಾಷೆಯೇ ಆದರೆ ಜನಸಾಮಾನ್ಯರಿಗೂ ಸಾಮಾನ್ಯವಾದ ತಿಳುವಳಿಕೆ ಬರುತ್ತದೆ. ಅನೇಕ ತೊಡಕು-ತೊಂದರೆ ತಪ್ಪುತ್ತದೆ. ಈ ದೃಷ್ಟಿಯಿಂದ ಸರಕಾರ ಮತ್ತು ವಿಚಾರವಂತರು ವಿಚಾರಿಸಲಿ, ಎಲ್ಲಿ ಹೊವ ಭಾಷೆ ದೋಷ? ಅಲ್ಲಿ ಅದನ್ನೇ ಬಳಸಲಿ. ಆದರೆ ಸಾಧ್ಯವಿದ್ದಲ್ಲಿಯೂ ನಮ್ಮ ಮಾತೃಭಾಷೆಯನ್ನು ಮರೆಯುವುದು ಸಾಧುವಲ್ಲ. ಕನ್ನಡ ಪ್ರಾಂತದಲ್ಲಿ ಕನ್ನಡಿಗರೇ ಆ ಭಾಷೆಯ ಬಗ್ಗೆ ಆದರ-ಅಭಿಮಾನ ಪಡದಿದ್ದರೆ ಇನ್ನಾರು ಪಡಬೇಕು? ಇನ್ನಾರು ಆದನ್ನು ಬೆಳಸಬೇಕು?

ಅಮೃತಾಂಜನ

● ತಲೆ ನಿಡಿತ ● ನೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸಂಗ್ರಾಹ್ಯ ಸಂಕಲನಗಳು

ತಿಲ್ಲಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ನಾಟಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ಕುಂಚ ಸುಮಪ	1—20
ಮುತ್ತಿನ ಮಾಲೆ	1—80
ಹೂ ಗೊಂಚಲು	1—70
ವಿಕಾಂಕಿ ನಾಟಕಗಳು	1—00
ಭಾರತದ ನಾಲ್ಕುಮುಖಿಗಳು	1—00
ದೇಶವಿದೇಶದ ಮಹಾ ಜೀವಿಗಳು	1—80
ಜೋಗುಸರ ಕತೆಗಳು	2—00
ಗುಡಿಮುಸ್ತುಗಳು	1—50
ಕುಂಚಗಜ್ಜಾಯ	2—00
ಪುಷ್ಪಶತ	2—00

ನವಭಾರತ ಪುಸ್ತಕ ಭಂಡಾರ್, ಉಡುಪಿ.

ಗಾಂಧೀವಾದದ ಸಂಪೂರ್ಣ ಕೊಲೆ

(ಎಂಟನೇ ಪುಟದಿಂದ)

ಬೆಳೆಸುತ್ತಾರೆ. ಭಾವೈಕ್ಯತೆಯ ನೆಪದಲ್ಲಿ ಅಲ್ಲ, ತಮ್ಮ ಸ್ವಾರ್ಥ ಸಾಧನೆಗಾಗಿ, ನೇಮ ಫಿಲಾಮಗಳನ್ನೆಲ್ಲ ಬದಿಗೊತ್ತಿ ದೇಶದ್ರೋಹಿಗಳಾಗುತ್ತಿದ್ದಾರೆ!

ಪೂರ್ಣ ಸ್ವರಾಜ್ಯ

ಗಾಂಧೀಜಿಯವರ ಸಂಪೂರ್ಣ ಸ್ವರಾಜ್ಯದ ಕಲ್ಪನೆ ಅನುಪಮವಾಗಿತ್ತು. ಅದಾತ್ತ ಧ್ಯೇಯಗಳಿಂದ ಕೂಡಿತ್ತು. ಧನಿಕರಿಗೆ ಮಾತ್ರ ಅಧಿಕಾರ-ಅರಸೊತ್ತಿಗೆಯಲ್ಲ. ದೀನದಲಿತರಿಗೂ, ರೈತರಿಗೆ, ಕಾರ್ಮಿಕರಿಗೆ—ಎಲ್ಲರಿಗೂ ಸ್ವಾತಂತ್ರ್ಯ, ಸ್ವರಾಜ್ಯ. ಜಮೀನುದಾರರಿಗೆ ಮಾತ್ರ ಸ್ವರಾಜ್ಯವಲ್ಲ; ಜಮೀನು ಇಲ್ಲದವರಿಗೂ. ಹಿಂದುಗಳಿಗೆ ಮಾತ್ರವಲ್ಲ; ಮುಸಲ್ಮಾನರಿಗೂ ಕ್ರೈಸ್ತರಿಗೂ ಜಾತಿಭೇದವಿಲ್ಲ. ಹಿಂದುಳಿದವರು ಮತ್ತು ಮುಂದುವರಿದವರೆಂಬ ತಾರತಮ್ಯವಿಲ್ಲ; ಸತ್ಯ ಅಹಿಂಸೆಗಳು ಹಿನ್ನೆಲೆಯಲ್ಲಿ ಎಲ್ಲರೂ ಸ್ವಾತಂತ್ರ್ಯ ಮತ್ತು ಸ್ವರಾಜ್ಯ, ಅದರಲ್ಲಿ ಕಪಟವಿಲ್ಲ. ಸ್ವರಾಜ್ಯವೇನೋ ಪಕ್ಕಾಯಿತು. ಅದರೆ ನಿಜಕ್ಕೂ ಅದರ ಸಾಲಭ್ಯ ಮಾತ್ರ ವಾಸ್ತವಿಕವಾಗಿ ಕಾಣದೆ ಹೋಳಿಗೆಯೂಗಿಯೇ ಉಳಿದಿದೆ. ಕಾಂಗ್ರೆಸ್ಸಿಗರು, ಗಾಂಧೀವಾದಿಗಳು ಅಥವಾ ಗಾಂಧೀ ಶಿಷ್ಯ ಬೋಧಕರು ತಮ್ಮ ಸ್ವಾರ್ಥ ಸಾಧನೆಗಳಲ್ಲೇ ಹಿರಿಕರಾಗಿದ್ದಾರೆ. ಪಮ್ಮ ಬೊಕ್ಕಸವನ್ನೇ ಗುಂಬುತಿದ್ದಾರೆ. ಲೋಕ ಕಲ್ಯಾಣದ ಹೆಸರನ್ನಿಟ್ಟು ರಾಮರಾಜ್ಯದ ನೆಪದಲ್ಲಿ ಜನರನ್ನೆಲ್ಲ ವಂಚಿಸುತಿದ್ದಾರೆ. ತಮಗೆ ಬೇಕಾದವರ ಏಳಿಗೆಗೆ ಮಾತ್ರ ಸಾಧಿಸುತಿದ್ದಾರೆ. ನಿರ್ಬಲರಿಗೆ, ಶಿಸ್ತಾಯುಕರಿಗೆ, ಧಿರಂತರ ದರಿದ್ರದಿಂದ ನರಳುವವರಿಗೆ, ಬಡವರಿಗೆ—ವಕ್ಕಲಿಗೆ ಇನ್ನೂ ಸ್ವರಾಜ್ಯ ಸಿಕ್ಕಿಲ್ಲ. ಜಹಜನರ ಕಲ್ಯಾಣವಾಗಿಲ್ಲ. ಸರ್ವತೋಮುಖ ಅಭಿವೃದ್ಧಿ ಸರ್ವಾಂಗೀಣ ಸುಖ ಸಾಲಭ್ಯ ಸಮತೆಗಳು ಗಾಂಧೀಜಿಯು ಕನಸಾಗಿತ್ತು. ಕನಸಲ್ಲ; ದೈನಂದಿನದ ಕಾರ್ಯಕ್ಷೇತ್ರವಾಗಿತ್ತು. ನಿಜಾರ್ಥದಲ್ಲಿ ಸಾಧಿಸಿತ್ತು. ಅದರೆ ಇಂದು ಎಲ್ಲಾ ತಿರುವು ಮುರುವು ಆಗಿದೆ.

ಏಕೈಕ ದೇವ

"ರಾಮ ಎನ್ನು, ಅಲ್ಲಾ ಎನ್ನು, ಗಾಡ್ (God) ಅನ್ನು" ದೇವರನ್ನು ಹೀಗೆ ಹೆಸರಿನಿಂದ ಬೇಕಾದರೆ ಕರೆ ಎಂದವರು ಗಾಂಧೀಜಿ. ಪಮ್ಮ ಮತ, ಧರ್ಮ ಸಂಪ್ರದಾಯಗಳು ಮೂಢವನ ಕಲ್ಯಾಣೋನ್ನತಿಗಳಿಗೆ ಅಡ್ಡ ಬರಬಾರದು. ಎಲ್ಲರಿಗೂ ಒಬ್ಬನೇ ದೇವರು, ಒಂದೇ ದೈವ ಎಂದೇ ಗಾಂಧೀಜಿ ಎಲ್ಲಾ ಧರ್ಮಗಳ ಗ್ರಂಥ ಪಠನವೂಡುತ್ತಿದ್ದರು. ಮತ ಪಂಥಗಳಿಂದ ಎಷ್ಟೆಲ್ಲ ಅನಾಹುತವಾಗಿಲ್ಲ? ಎಂತಹ ಹಾನಿ ಆಗಿಲ್ಲ? ಇತಿಹಾಸ ಧರ್ಮದ ಹೆಸರಿನಲ್ಲಿ ಜರುಗಿದ ರಕ್ತದ ಹೊಳೆಯ ಕತೆಗಳನ್ನೇ ಸಾರುತ್ತದೆ. ಇಪ್ಪತ್ತನೆಯ ಶತಮಾನದಲ್ಲೂ ಗಾಂಧೀಜಿ ಪರಮತ ಸಹಿಷ್ಣುತೆಯನ್ನು ಕಲಿಸಿದ್ದರೂ ಪರಮತ ಗೌರವಗಳನ್ನು ರಕ್ಷಿಸಿದ್ದರೂ ಪಾವು ಅವೆಲ್ಲವನ್ನೂ ಮರೆತು ಬಿಟ್ಟಿರುತ್ತೇವೆ. ಇಡಿಯು ಜೀವಮಾನವನ್ನೇ ಗಾಂಧೀಜಿ ಪರಧರ್ಮೀಯರ ಕಲ್ಯಾಣಕ್ಕಾಗಿ ಪದಾರ್ಪಣ ಮಾಡಿದ್ದರೂ ಹಿಂದೂಗಳೂ ಸುಧಾರಿಸಿಲ್ಲ, ಮುಸಲ್ಮಾನರೂ ಸುಧಾರಿಸಿಲ್ಲ. ಈ ದೆಸೆಯಲ್ಲಿ ಗಾಂಧೀವಾದಿಗಳಾದರೂ ಗಾಂಧೀ ಧರ್ಮವನ್ನು ಪಾಲಿಸುತ್ತಿಲ್ಲ. ಸಹನೆ, ಸೈರಣೆ ಪರ ಮತ ದ್ವೇಷವಿಷ್ಣುದಿಗುವಿತೆ— ಎಷ್ಟೊಂದು ಕಿಡ್ಡೇತಿಯಿಂದ, ನಿಸ್ಸೀಮ ಪ್ರೇಮದಿಂದ ಅವರು ಪರಧರ್ಮೀಯರ ಪ್ರೀತ್ಯಾದರಗಳನ್ನ ಗಳಿಸಿದರು! ಇಂದು ಗಾಂಧೀವಾದಿಗಳೇ ಗಾಂಧೀವಾದಿಗಳನ್ನು ಪಂಕಯದಿಂದ, ಅಸಹನೆಯಿಂದ ಕಾಣುತಿದ್ದಾರೆ. ಕಾರಣ ಕಾಂಗ್ರೆಸ್ಸಿಗರು ಇಂದು ಅವೆ ರಿಕನ್ ಕಾಂಗ್ರೆಸ್ ಅಥವಾ ರಷ್ಯನ್ ಕಾಂಗ್ರೆಸ್ ವಾದಿಗಳಾಗಿದ್ದಾರೆ ವಿನಾ ಧಾರಾಳೇಶು ಕಾಂಗ್ರೆಸ್ಸಿಗರಾಗಿಲ್ಲ! ಗಾಂಧೀ ಕಾಂಗ್ರೆಸ್ಸಿನಲ್ಲಿ ಉಳಿದಿಲ್ಲ. ಸಹನೆಯೇ ಧರ್ಮ. ಧರ್ಮವೇ ಸತ್ಯ. ಸತ್ಯನೇ ದೇವರು. ಎಂಬೆಲ್ಲ ಅಮೂಲ್ಯ ತತ್ವಗಳನ್ನು ಪ್ರಚಾರಾದಿಸಲೇಕೆಷ್ಟ ವಿಶ್ವಮಾನವಿಯಾಗಿದ್ದರೂ ನಾನೆಲ್ಲ ಚಂದ್ರಗಿರಿಯಲ್ಲೇ ಕಲೆ ಕಾಣುತಿದ್ದೇವೆ.

ಸತ್ಯ ಮತ್ತು ಅಹಿಂಸೆ

ಮಾನವಾತ್ಮ ಸತ್ಯ ಹರಿಶ್ಚಂದ್ರರ ಈ ನಾಡಿನಲ್ಲಿ ಸತ್ಯನೇ ಪ್ರಯೋಗಿಸಿ, ಸರಿ ಪಾಲಿಸಿ, ತ್ರಿಕಾಲಾಬಾಧಿತ ಸತ್ಯನೇ ಸರ್ವಸ್ವ ಎಂದು ಸ್ವರಾಜ್ಯ ಸಿಗದಿದ್ದರೂ ಸತ್ಯನನ್ನು ಬಿಡೆನೆಂದು ಸತ್ಯಾಗ್ರಹಿಯಾಗಿ ಸ್ವರಾಜ್ಯ ಸಾಧಿಸಿದವರಲ್ಲಿ ಗಾಂಧೀಜಿಯೇ ಅಗ್ರಗಣ್ಯರು. ಮಹಾಪುರುಷರು. ತನ್ನ ತನು, ಮನ, ಧನಗಳ ಎಲ್ಲಾ ಕಾರ್ಯಾಚರಣೆಗಳಲ್ಲಿ ಸತ್ಯಕ್ಕೆನೇ ಸರ್ವಾರ್ಪಣ ಮಾಡಿದ ಗಾಂಧೀಜಿಯು ಈ ನಾಡಿನಲ್ಲಿ ಇಂದು ಸತ್ಯಕ್ಕಾದಾ ದರಿದ್ರ್ಯ ತಗಲಿದೆ. ಇಡಿಯು ಜಗತ್ತಿಗೇ ಅಹಿಂಸೆಯು ಮಹತ್ವವನ್ನು, ಅಹಿಂಸಾದಾಯಕ ಪ್ರಭಾವವನ್ನೂ ಪ್ರದರ್ಶಿಸಿ ಹಿಂಸಾತ್ಮಕ ಕಾರ್ಯಕ್ರಮಗಳನ್ನು ಖಂಡಿಸಿ ವಿಶ್ವ ಚರಿತ್ರೆಯಲ್ಲೇ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ-ಸ್ವರಾಜ್ಯಗಳಿಸಿದ ಭಾರತವಿವೆ ಮಾದರಿಯಾಗುವುದಕ್ಕೆ ಬೇರೊಂದು ನಿದರ್ಶನವಿಲ್ಲ. ಅಂತಹ ಗಾಂಧೀಜಿಯೇ ಹುಟ್ಟಾಹಾಕಿದ ಕತೆ ವಿಚಿತ್ರವಾದದ್ದು. ಈ ಮಹಾತ್ಮನ ಆದರ್ಶ ಆದ್ವೈತೀಯವಾಗಿದ್ದು. ಆ ಯುಗಪುರುಷನ ಅನುಭವಗಳೇ, ಸತ್ಯ ಅಹಿಂಸೆಗಳಲ್ಲಿ ಇಂದ ಬಿಂದೆ ಉಳಿಸಿ ಬಿಟ್ಟಿರುತ್ತಾರೆ. ಅವರ ಪಡೆದಳಿಲೆಯಲ್ಲಿ ಬದಲಾವಣೆಗಳಾಗಿವೆ ಸತ್ಯ—ಅಹಿಂಸೆಗಳಲ್ಲಿ ನಂಬುಗೆಯಿಲ್ಲ. ಗಾಂಧೀ ಧರ್ಮವನ್ನು ಪಾಲಿಸುತ್ತಿಲ್ಲ. ಬಹು ಜನ

FOR

QUALITY, ECONOMY, EFFICIENCY AND DURABILITY

USE

KHODAY

• CARBON PAPERS
• TYPEWRITER RIBBONS
• STAMP PADS
• DUPLICATOR INKS
• GEM CLIPS & Office pins

Manufactured under Expert Guidance and Supervision

By

KHODAY RIBBON CARBON & ALLIED INDUSTRIES

Specialists also in FLEXIBLE PACKING MATERIALS

10, 1st MAIN ROAD, GANDHINAGAR, BANGALORE-9

Phone : 71206

ರ ಸಂಗತಿಯನ್ನು ಬಿಟ್ಟು ಬಿಡುವ. ಗಾಂಧೀವಾದಿಗಳೇ ಗಾಂಧೀ ತತ್ವಗಳಿಗೆ ತಿಲಾಂಜಲಿಯನ್ನೀಯುವಾಗ ಮೂಢ ಪಬ್ಲಿಮಂಗಳ ಗೃಹಕ್ಕೆ ನೆಗೆಯದೆ ಸುಮ್ಮನೆ ಕೂತಾನೇ? ಗಾಂಧೀ ಸರಕಾರವಿಂದು ಕೋದಿಪ್ಪುಗ ವಾಗಿದೆ. ಪ್ರಾಮಾಣಿಕ ನಮ್ಮ ಅಂದರೆ ಗಾಂಧಿ ಸರಕಾರ ಇಪ್ಪತ್ತೈರಡು ವರ್ಷಗಳಲ್ಲಿ ಗಂಡುಪ್ರಯೋಗ ಮಾಡಿದ ಪ್ಪು, ಫರಂಗಿ ಸರಕಾರ ಇನ್ನೂರಕ ವರ್ಷಗಳಲ್ಲೂಮಾಡಿಲ್ಲ!ಕೋವಿಪ್ರಯೋಗ ಮಾಡದ ದೊಂದು ಪ್ರಾಂತೀಯ ಸರಕಾರವಾದರೂ ಇಲ್ಲ. ಪ್ರಜಾಪ್ರಭುತ್ವದಲ್ಲಿ, ನಮ್ಮ ಜನರ ಮೇಲೆ ನಮ್ಮವರಿಂದಲೇ ಗುಂಡು! ಇದು ಸರಕಾರದ ಮೂತಾಯಿತು. ಗಾಂಧೀ ದೇಶದ ಜನರ ಅಹಿಂಸಾ ಪ್ರವರ್ತಕರೆ ವಿಧ್ವಂಸಕ ಪ್ರಕರಣಗಳ ಹೆಚ್ಚಾಯಿದೊಂದನ್ನು ತಪ್ಪುಂದಿಸಿದರೆ ನಾವೆಲ್ಲ ನೀಚ ರಾಕ್ಷಸ ಪ್ರವೃತ್ತಿಗಿಂತಲೂ ಹೀನಾವಸ್ಥೆಗೆ ಇಳಿಯಂತೆ ಭಾಗವಾಗಿದಿದು. ಗಾಂಧೀವಾದಿಗಳೇ ಗಾಂಧೀ ತತ್ವ ಉಲ್ಲಂಘನೆಯಲ್ಲಿ ಭಾಗವಹಿಸುತ್ತಾರೆ,ವಿಧ್ವಂಸಕೃತ್ಯ -ಕಾರ್ಯಗಳಲ್ಲಿ ಕೈಯೆತ್ತುತ್ತಾರೆ. ಇದರಲ್ಲೇನೂ ಆಶ್ಚರ್ಯವಿಲ್ಲ. ಇಮ ಬಹಿರಂಗವಾದ ಸತ್ಯ. ನಗ್ನ ಸತ್ಯ. ಆನ ವಿಪ್ಲವ ವರ್ತಮಾನ ಪತ್ರಗಳನ್ನು ಓದುವ ಜನರಿಗೆ ಈ ವಿಷಯದಲ್ಲಿ ಹೆಚ್ಚಿನ ಸಾಕ್ಷಿ ಬೇಡ. ಒಬ್ಬ "ಗಾಂಧಿ' ಇನ್ನೊಬ್ಬ "ಗಾಂಧಿ"ಯನ್ನು ಉಗುಳಿಲು ಅಥವಾ ಸೇಡು ತೀರಿಸಿಕೊಳ್ಳಲು ಎಂತಹ ಹೇಯಕಾರ್ಯಕ್ಕೂ ಅಂಜುವವನಲ್ಲ. ಬೈಬಲ್ಲನ್ನು ಉರಳಿಸುತ್ತಾರೆ, ಬೋಟುರಂ ಬಿಸ್ಸುಗಳನ್ನು ಕೆಡಿಸುತ್ತಾರೆ, ಮನೆ-ಬರ್ಕಾಖಾನೆಗಳನ್ನು ಸುಡುತ್ತಾರೆ.ಹೊಲವನ್ನು ದಾಳುಗೆ ಡವುತ್ತಾರೆ, ಹಂಚಿನರನ್ನು ಜೀವಂತ ಸುಡುತ್ತಾರೆ. ಅಯ್ಯೋ-ಇಂತಹ ಅನಾದರ, ಅನಾಚಾರ, ಅತ್ಯಾಚಾರ, ವಾಮಾಚಾರ ಗಾಂಧೀಜಿಯು ಕಾಲದಲ್ಲಿ ಆಗಿಲ್ಲ. ಆ ಪುಣ್ಯಾತ್ಮ—ಮಹಾತ್ಮ ಇಂದು ನಮ್ಮೊಡನೆ ಇದ್ದು ಬಿಟ್ಟಿದ್ದರೆ ಇಷ್ಟೆಲ್ಲ ಅನಾಹುತಗೊಂದಲವಾಗಲು ಅವಕಾಶವೇ ಇರುತಿದ್ದಿಲ್ಲ.

ಸತ್ಯಾಗ್ರಹ-ಅಸಹಕಾರ-ಹಿತೂರಿ

—	5. Law Charges ...	...	—	494 - 00	5. Other Receipts	1,289 - 79
476 - 61	6. Postage, telegrams, and telephone charges	...	500 - 00	1,175 - 11	(b) Amount recovered from out of the Provision made for bad & doubtful Loans ...	1,293 - 00
1,354 - 49	7. Audit cost	...	1,110 - 38			
1,634 - 30	8. Depreciation on and repairs to property	...	724 - 08			
904 - 00	9. Stationery, printing and advertisement etc.	...	1,232 - 26	2,560 - 00	6. Loss (if any)	
—	10. Loss from sale of or dealing with non-Banking assets	...	—	—		
	11. Other expenditures including					
508 - 31	(a) Commission, Incidental charges meeting expenses etc. ...	...	1,521 - 46			
3,130 - 00	(b) Provision for bad and doubtful debts and Gratuity ...	...	2,521 - 00			
5 - 00	(c) Amount written off ...	...	—			
16,433 - 93	12. Balance of Profit ...	...	16,773 - 78			
86,213 - 02	**Total**		**93,325 - 11**	**86,213 - 02**	**Total**	**93,325 - 11**

(Sd) C. Mascarenhas
Secretary

(Sd) H. Sitharama Bhat
Vice-President

(Sd) B. Prabhakar Rao
Director

(Sd) B. Rammohan Rao
President

Certified that the above Profit and Loss Account Shows true Balance of Profit for the period covered by such account.

Place: Puttur (S. K.)

Date: 15—9—69

(Sd) **B. Devappa Naik**
Senior Grade Auditor
Under Rule 441 of M. C. S. R. Puttur (S. K.)

ಇಂಡಿಕೇಟಿನ ಪ್ರಯೋಗ
ಶಾಲೆ ಬಿಹಾರ

(ಐದನೇ ಪುಟದಿಂದ)

ರ್ಕಟನ್ನು ಖಂಡಿಸುತ್ತಾರೆ.

ರಾಷ್ಟ್ರಪತಿ ಚಿ ನಾವಣಾಸಂಕರ ರಾಷ್ಟ್ರವ್ಯಾಪಿ ಸಂಚಾರದಿಯನ್ನು ಇಂದಿರಾ ಗಾಂಧಿ ಸಿಂಡಿಕೇಟನ್ನು ಬಲಪಡಿಸಿಕೊಂಡರು. ಇದೀಗ ವಿಶೇಷ ಎಐಸಿಸಿಯ ಮುಗಿದ ಬಳಿಕ, ಸಂಸ್ಥಿನ ಅಧಿವೇಶನಕ್ಕೆ ಸಿದ್ಧತೆಗೆ ಂಡ ನಂತರ, ಅಪ್ಪರೊಳಗೆ ತಮ್ಮ ಸ್ಥಾನಕ್ಕೆ ಚ್ಯುತಿ ಬಾರದೆ ಇದ್ದರೆ, ಮತ್ತೊಂದು ಗಂಡಾಂತರಕ್ಕೆ ಕೈಗೊಂಡಾರು. ಹಿಂದೆ ಕಾಂಗ್ರೆಸ್ಸೇತರ ಸರಕಾರಗಳದ್ದ ರಾಜ್ಯಗಳೇ ಆಕೆಯ ಪ್ರಮುಖ ಆಯುಧವಾಗಿದ್ದರೆ ಇಂದ ಕಾಂಗ್ರೆಸ್ ಸರಕಾರಗಳದ್ದ ರಾಜ್ಯಗಳಲ್ಲಿ ಆಕೆಯು ಸಂಚಾರ, ಇಂಡಿಕೇಟಿಗೆ ಬೆಂಬಲ ಕೊಡದ ಕಾಂಗ್ರೆಸ್ ಸರಕಾರಗಳನ್ನು ಉರುಳಿಸಿ ಬಿಡುವುದೇ ಈ ಸಂಚಾರದ ಮುಖ್ಯ ಉದ್ದೇಶ. ತನ್ನ ಕಣ್ಣು ಕೊನೆಯು ಚಲನ ಮಾತ್ರದಿಂದ ಹರಿಹರ ಬ್ರಹ್ಮಾದಿಗಳೂ "ಪಾಹಿ ಮಾಂ" ಎಂದು ಇಂದಿರಾ ಪಾದ ಪದ್ಮಗಳಿಗೆ ಶರಣು ಹೋಗುತ್ತಾರೆಂಬ ಅಚಲ ವಿಶ್ವಾಸ. ಅದುದರಿಂದಲೇ ಆಕೆಯ ಅತ್ಯಸಾಕ್ಷಿಯು ಪ್ರತೀಕವಾಗಿ ನಿದ್ದು ಇಂದ ರಾಷ್ಟ್ರಪತಿ ವಿ. ವಿ. ಗಿರಿಯವರು "ಮುದ್ದಿನ ಮಗಳು" ಎನಿಸಿದ ಇಂದಿರಾಜಿಗೆ ಅವರ ರಾಷ್ಟ್ರಕಾರ್ಯ ಬಲವಾಗೇ ಇರಬಾರದೇಕೆ?

ಬಿಹಾರ ರಾಜ್ಯದ ಕಾಂಗ್ರೆಸ್ ಈಗಾಗಲೇ ಎರಡು ಗುಂಪುಗಳಾಗಿ ಒಡೆದಿತ್ತು. ಮುಖ್ಯವು ಇದು ಉದ್ದೇಶಿತ ವಿಭಜನೆ. ಇಂಡಿಕೇಟ್ ಪರರು ಪಾರ್ಲಿಮೆಂಟಿನ ವಿಸರ್ಜನೆ ಮತ್ತು ಮಧ್ಯಾವಧಿ ಚುನಾವಣೆಗಳ ಸಾಧ್ಯತೆಯನ್ನು ಅಲ್ಲಗಳೆಯುತ್ತಲೇ ಬಂದಿದ್ದರೂ ಇದರ ಸಾಧ್ಯತೆ ಇದ್ದೇ ಇದೆ. ಇದಕ್ಕೆ ಬಿಹಾರವನ್ನು ಪ್ರಯೋಗ ಶಾಲೆಯನ್ನಾಗಿ ಇಂಡಿಕೇಟ್ ಆರಿಸಿದೆಯೆನ್ನ ಬಹುದು. ಅಧಿಕ ಸಂಖ್ಯಾತ ಪಕ್ಷವೆನಿಸಿದ ಕಾಂಗ್ರೆಸ್ಸು ಸಿಂಡಿಕೇಟ್-ಇಂಡಿಕೇಟ್‌ಗಳಲ್ಲಿ ಒಡೆದು ಹೋದುದರಿಂದ, ಅಲ್ಲಿ ಜನಪ್ರಿಯ ಸರಕಾರ ಸ್ಥಾಪನೆ ಅಸಾಧ್ಯ. ಆದುದರಿಂದ ಕೇಂದ್ರದ ಆದೇಶ ಪಡೆದು ರಾಜ್ಯಪಾಲ ಕೂಸಂಗೋ ರಾಷ್ಟ್ರಪತಿ ಆಡಳಿತೆಯನ್ನು ಮುಂದುವರಿಸಿ, ವಿಧಾನ ಸಭೆಯನ್ನು ಬರ್ಖಾಸ್ತುಗೊಳಿಸಿ ಮತ್ತೊಮ್ಮೆ ಸಾರ್ವತ್ರಿಕ ಚುನಾವಣೆಯನ್ನು ನ ಡೆಸುವಂತೆ ಸಲಹೆ ನೀಡಿ ವರದಿ ಕಳಿಸುವ ನಿರೀಕ್ಷೆಯಿದೆ. ಆಗ ಸಿಂಡಿಕೇಟ್—ಇಂಡಿಕೇಟ್‌ಗಳ ಬಲಾಬಲಗಳ ಪರೀಕ್ಷೆ ಚುನಾವಣೆಗಳಲ್ಲಿ ಕೊತ್ತವೊದಲಿಗಾಗಿ ತ್ರದಿ. ಇದರ ಪರಿಣಾಮವನ್ನು ಅನುಲಕ್ಷಿಸಿ ಇಂಡಿಕೇಟಿನ ವಿಜಯದಿನ ಹೆಜ್ಜೆ.

ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ಸಿನ ವಿದ್ಯಮಾನ ಚೋಲಾಹವೂನವಾಗಿದೆ; ಹೆಚ್ಚಿನೆಡೆ ಅದು ಅಧಿಕಾರವಾದಿಗರತ್ತ ವಾಲಿದೆ; ಆದರೆ, ಕರ್ನಾಟಕದ ಕಾಂಗ್ರೆಸ್ ಅಧ್ಯಕ್ಷ ಡ || ನಾಗಪ್ಪ ಆಳ್ವರು ತಮ್ಮ ಬೆಂಬಲ ಬೃಹತ್ತಾಗಿಯು ನಕಲೀ ಕಾಂಗ್ರೆಸಿದಲ್ಲ, ಅಸಲೀ ಕಾಂಗ್ರೆಸ್ಸಿಗೆ ಎಂದು ಸಾರಿದ್ದಾರೆ. ಡಾ|| ಆಳ್ವರು ಕಾಂಗ್ರೆಸ್ ರಾಷ್ಟ್ರಕೇ ರುದಲ್ಲಿ ಆರಂಭದಿಂದಲೂ ಪಕ್ಷದ ಪರವಾಗಿಯೇ ದುಡಿದವರು. ಶಿಸ್ತು ಎಂಬ ಫಿಯಮಗಳೆಲ್ಲವಾದರೆ, ಪಕ್ಷ ಬದುಕುವುದು ಸಾಧ್ಯವಿಲ್ಲವೆಂಬುದು ರಾಜ್ಯಕೇಸುದ ಅಜಾತ ತಿಳಿಯರೂಂಡವರಿಗೂ ಗೊತ್ತು. ಡಾ || ಆಳ್ವರ ಈ ಮಾತಿನಲ್ಲಿ ರಾಜ್ಯದ ಹೆಚ್ಚಿನ ಕಾಂಗ್ರೆಸ್ಸಿಗರು ಧ್ವನಿಗೂಡಿಸುತ್ತಾರೆ.

ಕಾಂಗ್ರೆಸ್ಸು ಎರಡಾಗುತ್ತ. ಇದು ಒಂದಾಗುವುದು ಸಾಧ್ಯವೇ? ಅದೀತು, ಆಗದೆಯೂ ಹೋದೀತು. ಅಧಿಕಾರಲಾಲಸೆಗಾಗಿ ಕಾಂಗ್ರೆಸ್ಸಿನಿಂದ ಸಿಡಿದು ಹಲವು ಪಕ್ಷಗಳು ಜನ್ಮವೆತ್ತಿದುವು. ಇಂದು ಇಂಡಿಕೇಟೂ ಅದೇ ಉದ್ದೇಶದಿಂದ ಸಿಡಿದು ನಿಂತಿದೆ. ಆದರೆ, ಇದೇ ಗುಂಪನ್ನು 'ಅಸಲೀ ಕಾಂಗ್ರೆಸ್' ಎಂದು ಹೇಳಿಸಿ ಮತದಾರರನ್ನು ಮಂಚಿಳಿಸುವ ಹವಣಿಗೆ ಆದ ಕಾರ್ಯಕ್ಕೆ ಮಾಜಿಸ್ಟ್ರೇಟ್ ಕೋರ್ಟಿನಲ್ಲಿ

O. S. 263/1969.

K. ರಾಮಯ್ಯ ಆಚಾರಿ—ವಾದಿ.

ಬಂಬುಯೂನೆ ಶ್ರೀನಿವಾಸಆಚಾರ್ಯರು—ಪ್ರತಿವಾದಿ.

ಇನೇ ಪ್ರತಿವಾದಿಯು ಲಕ್ಷ್ಮಿಪ್ಪ— ಕೊಗ್ಗ ಪ್ರಭಾರಿ ಸಹಿಗಳು, ಕಾರ್ಕಳ ತಾಲೂಕು ಬೇಲಾಯಿ ಗ್ರಾಮದ ಜಾರಿಗೆ. ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ—

ನಿಮ್ಮ ಮತ್ತು ಮಿಕ್ಕ ಪ್ರತಿವಾದಿಯು ನಾದಿಗೆ ತಾ| 6—12—1966ರಲ್ಲು ರೂ. 9000.00ಕ್ಕೆ ರಿಜಿಸ್ಟ್ರಿ ಕ್ರಿಯಿ ಬರಕೊಟ್ಟ ತೋದೆವಿನ ಬಾಬ್ತು ವಾದಿಗೆ ಕಾರ್ಯಕು 5-12-1967 ಮತ್ತು ತಾ. 5.12.68ಕ್ಕೆ ಬರಕ್ಕೆ ಬಡ್ಡಿ ಮತ್ತು ಪಕೇಲ್ ನೋಟೀಸು ಖರ್ಚು ದಗ್ಗೆಂ ಒಟ್ಟು ರೂಪಾಯಿ 337-00 ಕ್ಕೆ ನಿಮ್ಮ ವಗ್ಗೆರೆ ಮೇಲೆ ದಾಕಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜ್ರಾತಿ ಬಗ್ಗೆ ತಾ. 5-12-69ಕ್ಕೆ ಇಟ್ಟಿದ್ದ ಆ ಕಾರು ನಿಮಗೆ ಅಕ್ಕೇಪ ಇದ್ದಲ್ಲಿ ಪೀಠ ಮೇಲ್ಕಂಡ ಕೋರ್ಟಿನಲ್ಲಿ ತಾ| 5-12-69 ಸೋವಾರ್ಷ ಘಂಟೆ 10ಕ್ಕೆ ಬಿದ್ದಾಗಲೀ ಆ ಪಕೇಲರ ಮುಖಲಕವಾಗಲೀ ಹಾಜ್ರಾಗಿ ಉದಪರಿಹಕ್ಕೆದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿ ಕಾರ್ಯನಿರ್ವಹಿಸಲಾದೀತು. ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯಿದೆ.

M. N. Pandi
Advocate, Karkala.

Karkala, 14-11-69.

ಚಂದ್ರದೇವನು ಅಪವಿತ್ರನಾಗಲಿಲ್ಲ

(ಒಂದನೇ ಪುಟದಿಂದ)

ಸ್ಮಶಾಲದಲ್ಲಿ ರಾತ್ರಿಯಲ್ಲಿ ತೇಜಸ್ಸಿನ ಪರಮಾಣು ಉಷ್ಣದಿಂದಾಗುತ್ತದೆ. ಮೋಡಗಳಲ್ಲಿನ ನೀರಿಗಿಂತ ನದಿನಾಲೆಗಳ ನೀರು ಹೆಚ್ಚು ಸ್ಫೂಲ. ಮಂದು ಅದಾಗ ಅದರಲ್ಲಿ ಸ್ಫೂಲತೆ ಬರುತ್ತದೆ. ಇದೇ ಮಂಜು ಸಾವಿರಾರು ವರ್ಷಗಳ ತರಕವುಳಿದರೆ, ಅದು ನೀಲ ಮಣಿಯಾಗ ತ್ತದೆ. ಸೂರ್ಯ ಕಿರಣಗಳಲ್ಲಿ ನೀಲವಣಿಯೂ ಇದೆ ಎಂದರೆ ನಂಬುವುದು ಕಷ್ಟ; ಆದರೆ, ನಿಜ. ಈ ದೃಷ್ಟಿಯಲ್ಲಿ ಚಂದ್ರ— ಭೂಮಿಗಳಲ್ಲಿನ ಮಣ್ಣು ಕಲ್ಲುಗಳು ಒಂದು ಕಾಲದಲ್ಲಿ ನೀರೇ ಆಗಿದ್ದವು. ಪೌರಾಣಿಕಾನುಸಾರ ಕ್ಷೀರಸಾಗರದಲೇ ಸೃಷ್ಟಿ ಉಂಟಾಯಿತು. [ಆಬ್ಧಿಕೃತಿ ಸೃಷ್ಟಿ] ಚಂದ್ರೋದಯವಾದಾಗ, ಸಮುದ್ರದಲ್ಲಿ ಎತ್ತರಿತ್ತರ ತೆರೆಗಳು ಕಾಣಿಸಿಕೊಳ್ಳುತ್ತವೆ. ಆದುದರಿಂದ ಸಮುದ್ರ ಮತ್ತು ಚಂದ್ರಮಂಡಲಗಳ ನಡುವೆಯೂ ನಿಕಟ ಸಂಬಂಧ ಇದ್ದೇ ಇದೆ. ಕೆಲವು ಪುರಾಣಗಳಲ್ಲಿ ಚಂದ್ರನು ಅತ್ರಿ ಮಹರ್ಷಿಯ ಕಾಲದಲ್ಲಿ ಇತರ ರತ್ನಗಳೊಡನೆ ಚಂದ್ರನೂ ಹುಟ್ಟಿದನೆಂದು ಉಲ್ಲೇಖವಿದೆ.

ಚಂದ್ರಲೋಕ ಪದಾರ್ಪಣೆಯಿಂದ ಧರ್ಮಶಾಸ್ತ್ರದ ಪೀಠಲೊಂದು ಬರೆದಿದ್ದಾರೆ. ಆದರೆ ವೈದಿಕ ಧರ್ಮದ ಪೀಠಲೆ ವೈಜ್ಞಾನಿಕ ಮಹತ್ಸಾಧನೆಯು ಫಲ ಯೋಚನೆಯೂ ಇಲ್ಲ. ಭಾರತೀಯ ಶಾಸ್ತ್ರಗಳಲ್ಲಿ ಲೋಕ—ಲೋಕಾಂತರಗಳ ಯೋಚನೆಯನ್ನು ಮನಸ್ಸು ಮಾಡಿದ ನೂರಾರು ಉಲ್ಲೇಖಗಳಿವೆ. ವಶಿಷ್ಠನ ಮಂತ್ರಿಕ ವಿಧಾನಗಳಿಂದಾಗಿ ರಾಜ ರಘುವಿನ ರಥ ಸಮುದ್ರ ಪರ್ವತ ಮತ್ತು ಆಕಾಶಗಳಲ್ಲಿ ಸಮಾನ ರೂಪದಲ್ಲಿ ಸಂಚರಿಸಿದ ಉಲ್ಲೇಖ ರಘುವಂಶದಲ್ಲಿದೆ. ಕರ್ದಮ ಮಹರ್ಷಿ ಪಡೆದ ಪುಷ್ಪಕವಿಮಾನ ಎಲ್ಲೆಲ್ಲಿಯೂ ಅವ್ಯಾಹತವಾಗಿ ಸಂಚರಿಸುತ್ತಿತ್ತು. ದುಷ್ಯಂತ—ಅರ್ಜುನ ಮೊದಲಾದವರು ಇಂದ್ರಲೋಕ ಗಮನವನ್ನೂ ಮಾಡಿ ಬಂದಿದ್ದರು. ಆವರಿಗೆಲ್ಲಾ ಅಲ್ಲಿನ ದಿವ್ಯತೆಯ ಅನುಭವವೂ ಆಗಿತ್ತು; ಆದರೆ, ಇಂದಿನ ವೈಜ್ಞಾನಿಕರಿಗೆ ಅದಾಗುತ್ತಿಲ್ಲ. ಇದಕ್ಕೇಕು ಕಾರಣ? ದಿವ್ಯಾನುಭವ ಪಡೆಯಬೇಕಾದರೆ, ಮನಸ್ಸು ದಿವ್ಯವಾಗಿರಬೇಕು. ಕಂಚುಗಾರ ಹಳ ತಾವರೆಯು ರಸವನ್ನೆಂತು ಹೀರೀತು? ದುಂಬಿಗೆ ಮಾತ್ರ ಅದು ಸಾಧ್ಯ.

ಚಂದ್ರಾದಿಗಳಿಗೆ ರೂಪುಕೊಟ್ಟು ಆನಂದವನ್ನು ಅರಾಧಿಸುವ ಕ್ರಮವಿದೆ. ಆದರೆ ಚಂದ್ರನ ಆಕಾರ ಈ ರೀತಿಯಲ್ಲ. ಇದರಿಂದ ಧರ್ಮಶಾಸ್ತ್ರಗಳೆಲ್ಲ ಲೊಳಲೊಟ್ಟೆಯೆಂದು ಅಧಿಕಾರಿಯರು ಜರೆಯು ಬಹುದು. ಅವರಿಗೆ ಕವಿಲಕರ ಭಟ್ಟನ ಒಂದು ಶ್ಲೋಕ ಉತ್ತರ ಹೇಳಬಹುದೇ:

ಜಪ ಪೂಜನ ಹೋಮೇಷ್ಟೇ
ಪ್ರತಿಮಾ ದೇವತಾಂಶಕಾಃ
ವಿಧಿನಾ ದಿಂಬರೂಪಾಯೇ
ಶಕ್ತಿನ್ನಾಸ್ತ್ಯನ್ಯಸಾಧನಂ: ಸದಾ॥

ಜಪ-ಪೂಜೆ-ವಿಗ್ರಹಗಳಿಗಾಗಿ ವಿದ್ಯಾಸಂಸ್ಥೆಯು ಬಿಂಬರೂಪ ಗ್ರಹಗಳಿಗಿಂತ ಬೇರೆಸಾದ ಅನ್ಯಗಳ ಅಧಿಷ್ಠಾತ ದೇವತೆಗಳನ್ನು ನಿರ್ಮಿಸಿದ. ಅವರು ಮಹಾಪ್ರಳಯ ಪರ್ಯಂತವಿರುತ್ತಾರೆ.

ಭಾರತೀಯ ಧರ್ಮಶಾಸ್ತ್ರ ಬಹಳ ದೂರವಾಗಿದೆ. ಇಂದಿನ ವೈಜ್ಞಾನಿಗ ಸಾಧನೆಗಳು ಅವನ್ನು ಮೆಟ್ಟಿಲಿಲ್ಲಾಲಾಗಿವೆ. ಧರ್ಮ ಶಾಸ್ತ್ರದ ಆಳ ಮುಳುಗದೆ ವೇಲಿನಿಂದ ಕಿಂಚು ನೋಡ ವವರಿಗೆ ಮಾತ್ರ ಅವು ಟೊಳ್ಳೆಂದು ಕಾಣಾಎಹುದೆ. ಧರ್ಮಶಾಸ್ತ್ರವು ವಿಜ್ಞಾನ ಶಾಸ್ತ್ರದ ಕೊನೆಗು ಮೆಟ್ಟಿಲು ಎಂಬ ಮನೋನಿಷ್ಠೆಯಲ್ಲಿ ಇದೀಗ ವಿಶ್ವಾಸ ಮೂಡುವಂತೆ ಕಾಣಬೇಕಿದೆ.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

107 ಶಾಖೆಗಳಿಂದ ಹಬ್ಬುವ "ವಿಜಯಾ ಬ್ಯಾಂಕ್" ಪಲ್ಲಿ

ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಶಿಷ್ಟ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ಫಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3.

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಗುರುನಾನಕರ ಅಮರವಾಣಿ

ಧನ್ಯ ಹೆಂಡತಿ, ಮಗ, ತಂದೆ, ಅಣ್ಣ-ತಮ್ಮ ಇವರಲ್ಲಿ ಯಾರು ನಿನ್ನ ಕೈಹಿಡಿದು ಯಃತ್ಕಾರಿ? ನೀನು ಮರಣಹೊಂದಿದಾಗ ಯಾರೂ ನಿನ್ನ ಸಹಾಯಕ್ಕೆ ಬರಲಾಗುವುದಿಲ್ಲ.

ಂ ಂ ಂ ಂ

ಬೆಳ್ಳಿ—ಚಿಂಗಾರ, ಕೇವಲ ಒಂದು ಭ್ರಾಂತಿ. ಇಂದು ಇನ್ನ ಇವೆಲ್ಲವೂ ಮಣ್ಣಾಲ್ಲಿ ಮಣ್ಣಾಗಿ ಹೋಗುತ್ತವೆ.

ಂ ಂ ಂ ಂ

ಇಂಡಿಕೇಟಿಗೆ ಆಧಾರಗಂಬ ಬೇಕು

(ನಾಲ್ಕನೇ ಪುಟದಿಂದ)

ಪೂರ್ಣಚಂದ್ರ ಎಣಕೆ

ಶೀಘ್ರ ನಿರ್ಧಾರಕ್ಕೆ ಬರುವ ಬುದ್ಧಿ ಸರಕಾರದ ಅಧಿಕಾರಿಗಳಿಗೂ ಇಲ್ಲ; ಸರಕಾರಕ್ಕೂ ಇಲ್ಲ. ವಿತ್ತ ಮಂತ್ರಿಗಳಿಗೆಲ್ಲಿಯದು? ಶ್ರೀಮತಿ ಗಾಂಧಿಯವರ ನೀತಿ-ಫಲ ಮೆ ಸರಿಯಲ್ಲವೆಂದು ತಮ್ಮ ಅಂತರಾತ್ಮ ಹೇಳಿದರೂ ಅದನ್ನು ಒಪ್ಪಿಕೊಳ್ಳಲು ಅವರು ತುಸು ಹಿಂದೆ ಮುಂದೆ ನೋಡುತ್ತಾರೆ. ಕಾಂಗ್ರೆಸ್ಸಿನ ಬಿಕ್ಕಟ್ಟಿನಲ್ಲಿ ಯಾರ ಪಕ್ಷ ವಹಿಸಿದರೆ, ತಮಗೆ ಲಾಭವುಂಟಾಗು ಎಂದು ಎಲ್ಲರಿಗೂ ಯೋಜನ ಕೇಂದ್ರ ವಿತ್ತ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು ಕಾಂಗ್ರೆಸ್ಸಿನ ಗಳಿಗೆಯುಳ್ಳಿರಾಜಿನಾಮೆಯಿತ್ತಾಗಿ, ಶ್ರೀ ಸಿ.ಎಂ. ಪೂಣಚ್ಚ ಅವರು ಆರಂಭದಲ್ಲೇ ನಾಚಿಕೆನೀಡಿದ್ದರು.

ನಿಷ್ಠಾವಂತ ಸಮಾಜವಾದಿ ಶ್ರೀ ಮೊರಾರ್ಜಿ ಸ್ವಾಮಿನಾಥರಿಂದ ಸಮಾಜವಾದದ ಹೆಸರನಲ್ಲೇ ಶ್ರೀಮತಿ ಗಾಂಧಿಯವರು ರಾಜಿನಾಮೆ ಕೇಳಿದ್ದರಿಂದ ಇದು ಸರ್ವಾಧಿಕಾರ ಸ್ಥಾಪನೆಯ ಪೂರ್ವ ತಯಾರಿಯೆಂದು ಕನ್ನಡಿಗರು ತಿಳಿದರು. ಇದನ್ನು ಪ್ರತಿಭಟಿಸಿ ಕೇಂದ್ರದಲ್ಲಿನ ಇತರ ಕನ್ನಡಿಗ ಮಂತ್ರಿಗಳೂ ರಾಜಿನಾಮೆ ನೀಡಬೇಕೆಂದು ಕರೆ ನೀಡಿದರು. ಆ ಕ್ಷಣ ಇದನ್ನು ಯಾರೂ ಕೇಳಿದಂತೆ ಮಾಡಲಿಲ್ಲ. ಕಾಂಗ್ರೆಸ್ಸು ಇಬ್ಭಾಗವಾದ ಮೇಲೆ ಇಂದಿರಾಗಾಂಧಿ ಕರೆದ ಸಂಸತ್ಸದಸ್ಯರ ಸಭೆಯಲ್ಲಿ ಶ್ರೀ ಪೂಣಚ್ಚ ಭಾಗವಹಿಸಲಿಲ್ಲ. ಕೇಂದ್ರ ಸಚಿವರಾಗಿದ್ದೇ ಅವರು ರಾಜಿನಾಮೆ ನೀಡಿದರು.

ಕೊಡಗಿನ ಶ್ರೀ ಪೂಣಚ್ಚ ಅವರಂತೆ ದಲ್ಲಿ ನಿಂತವರು ಯಾವ ಮಂತ್ರಿಗಾದರೂ ಬೆಲುನ್ನಾದರೂ ಯಶಸ್ವಿಯಾಗಿ ನಿರ್ವಹಿಸಲ್ಲ ಸಮರ್ಥರು. ಮಂತ್ರಿಪದಕ್ಕೆ ಅವರು ರಾಜಿನಾಮೆ ನೀಡಿದರೂ ಅವರ ಒಲವು ಇಂದಿಕೇಟಿಗೋ ಇಂಡಿಕೇಟಿಗೋ ತಿಳಿದಾಗಿ ಈಗ ಹೇಳುವಂತಿಲ್ಲ. ರಾಜಿ-ಸಂಧಾನದ ಆಶೆ ಹೊತ್ತವರಲ್ಲಿ ಪೂಣಚ್ಚರೂ ಒಬ್ಬರೆ?

ಕೆಂಪು ನೆರಳಿನಾಶ್ರಯ

ಸಂಸತ್ತಿನಲ್ಲಿ ಇಂದಿಕೇಟಿನ ಬಲ ಹೆಚ್ಚಿವುದು ಕಂಡಿತ. ಶ್ರೀಮತಿ ಗಾಂಧಿ ಹಲವಾರು ಸ್ಥಾನಗಳನ್ನು ತುಂಬಬೇಕಾಗಿದೆ. ಲೋಕಸಭೆ ಮತ್ತು ರಾಜ್ಯಸಭೆಗಳ ಉಪಾಧ್ಯಕ್ಷರ ಕುರ್ಚಿಗಳನ್ನು ತುಂಬಿದೆ ಬಿಡುವಂತಿಲ್ಲ. ಕೆಲವು ಮಂತ್ರಿಗಳೂ ಬೇಕಾಗಿದ್ದಾರೆ. ಈ ಸ್ಥಾನಗಳಲ್ಲಿ ಸಂಖ್ಯೆ ಕಿಂತ ಹತ್ತಿರದವರಿರುವುದೇ ಶ್ರೀಮತಿಜಿಗೆ ಚಿಂತೆ. ಇವನ್ನೆಲ್ಲ ತುಂಬಲು ಕೆಲವು ಸಮಯ ಕಳೆಯಬಹುದು, ಆದರೆ ಕೆಲವಷ್ಟಾದರೂ ಕೂಡಲೇ ತುಂಬಲೇ ಬೇಕಾಗಿವುದು. ಆದ ಗಾಂಧಿ ಕುರ್ಚಿ ನಡಗಿಯೇ ನಡುಗುವುದು.

ಮುಗ್ಗರಿಸಿ ತನ್ನ ಕುರ್ಚಿಯನ್ನು ಸ

ಮ್ಯುನಿಷ್ಟ್ಗಳ ಬಲದಿಂದ ನೆಲೆಗೊಳ್ಳುವುದು ಶ್ರೀಮತಿಯವರ ಆಂದಿನ ಲೆಕ್ಕಾಚಾರ. ಹಾಗೆ ಅಧಿಕಾರಕ್ಕೆ ಅವರೂ ಸಿದ್ಧರೇ. ಆದರೆ,ಈಗ ಶ್ರೀ ಸುಂದರಯ್ಯನವರ ಕಮ್ಯುನಿಷ್ಟ್ ಪಕ್ಷವು ಹಿಡಿಸ್ಟೈದು ಅಂತಹ ಕಾರ್ಯಕ್ರಮದ ಆಧಾರದ ಮೇಲೆ ಮಾತ್ರ ತಮ್ಮ ಬೆಂಬಲ ಎಂದು ಹೇಳಿದ್ದಾರೆ ಕಾಂಗ್ರೆಸ್ಸು ಒಡೆಯುವ ಕಾಂಚಿಯದು ಎಂದು ಆಗಲೇ ಇಂಡಿಕೇಟ್ ಎಂದಿದ್ದರೂ ತಮ್ಮ ನಿಷ್ಠೆಗಳನ್ನು ತಮ್ಮ ಜಿಜ್ಞಾಸೆಗೂ ಕೊನೆಕೊನೆಗೆ ಒಂದು ರೀತಿಯ ಬೆಂಬಲ ನೀಡಿವುದನ್ನು ಇಂದಿರಾ ವರೆಯಲಿಲ್ಲ. ತಾವು ಕಾಳಪರ್ವನ ನೆರಳಲ್ಲಿದ್ದೇನೆಂದು ಪತ್ರಕರ್ತರಲ್ಲಿ ಹೇಳಿದಾಗ, ಜನರೆಲ್ಲರು ನೇಪಾಳವನ್ನು ಆಕ್ರಮಿಸಿಯಾಗಿತ್ತು. ಭಲೆ, ಕೃಷ್ಣ ಮೆನನ್!

ಇತಿಹಾಸದಿಂದ ಪಾಠ ಕಲಿಯಲೇಬೇಕೆನ್ನುವುದು ಬಾಳು ಉಪದೇಶ ಮಾತ್ರವಾಗಿ ಉಳಿದಿದೆ. ಎರಡು ಗುಂಪುಗಳ ನಡುವಣ ಸಮರ್ಪಣೆಯನ್ನು ಶಾಂತಿಕಾಲವೆನ್ನಲೇ ಬೇಡ. ಇವತ್ತಿನ ಈ ರಾಜಕೀಯ ಕಾಂಪ್ರದಲ್ಲಿ ಇಂದಿರಾ ಗಾಂಧಿ ಸರ್ವಾಧಿಕಾರಿಯಾಗುವುದನ್ನು ಅಸಾಧ್ಯವೆನ್ನಲಾಗದು.

ಇಂದೂ ಗೋವಿಂದಾ ಮುಂದೂ ಗೋವಿಂದಾ

ಕೇಂದ್ರದ ರಾಷ್ಟ್ರಪತಿ ಮಂತ್ರಿ ಕೇರಳದ ಪಾಪನಂಪಲ್ಲಿ ಗೋವಿಂದ ಮೆನನ್ನರು ಸರಕಾರದ ರಹಸ್ಯವನ್ನು ಕಾಪಾಡುವುದಕ್ಕಾಗಿ ಸಂವಿಧಾನ ಬಳ್ಳಿಯೇ ತ್ಯಜಿಸಲು ಬರಬೇಕಾದರೆ, ಅದು ಸ್ಥಾನ ಮಹತ್ವ ನೆಲಗಳಿಯಾಗಿರಬೇಕು. ದೇಶದ ಹಣಕಾಸಿನ ಬಿಡ್ಡ ಬ್ಯಾಂಕುಗಳನ್ನು ರಾಷ್ಟ್ರೀಕರಿಸುವುದನ್ನು ಪ್ರಸ್ತಾಪಿಸಿದ ಸಮಯ ಇದರ ಔಚಿತ್ಯವನ್ನು ಸ್ಪಷ್ಟವಾಗಿಯೇ ಎಲ್ಲರಿಗೆ ತಿಳಿಸಿದ್ದರು. ಈ ಸಂಬಂಧದ ತರ್ಕಶಾಸ್ತ್ರವನ್ನು ತಯಾರಿಸಿದ್ದರೂ ಅಂತಹ ಸಿದ್ಧಿಗಳೆಲ್ಲ ಆಧಾರರಹಿತವೆಂದರು. ಆದರೆ, ಸಮಯದ ಸೂಚ್ಯತೆಯ ಕಾರಣದಿಂದ ಕೆಲವರಿಗೆ ಮೊದಲೇ ಗೊತ್ತಿತ್ತು, ಉಳಿದವರಿಗೆ ಹಿಂದಿನಿಂದ ಗೊತ್ತಾಯಿತು.

ಈಗ ಶ್ರೀಮತಿ ಗಾಂಧಿಯವರ ಕಾರ್ಯಕ್ರಮವನ್ನು ಶ್ರೀ ಪೆನನ್ನರು ವಹಿಸಿದ್ದಾರೆ ಪಾರ್ಲಿಮೆಂಟನ್ನು ವಿಸರ್ಜಿಸಿ ಮಧ್ಯಾವಧಿ ಚುನಾವಣೆಗಳನ್ನು ಘೋಷಿಸುವ ಇಂದೆ ಸರಕಾರಕ್ಕೆ ಸಿಪಾಯಿದಂಗೆಯಾದರೂ ಹೇಗೆ ಹೇಗೆ ಹೇಳತೆಯಾಗಿದ್ದರೆ ಅದರಿಂದಲೇ ಎಲ್ಲೆಡೆಯೂ ಸಂಸದೀಯ ಚುನಾವಣೆ ಮಾಡುತ್ತಾನೆ. ಅಡಿಪು ಹಿಂದೆ —ಮಾಡುತ್ತದೊಂದು? ಎಂಬಂತೆ ಭಾರತದ ನೂರಾರು ಮಂತ್ರಿಗಳಿಗೆ ಚಕ್ರಗೂಡು. ಚುನಾವಣಾ ಆಯೋಗವು ಪಕ್ಷಗಳ ಪಟ್ಟಿಯನ್ನು ಪುನರಾವಲೋಕಿಸಲು ಅವಶ್ಯಕತೆಯಿದೆ ಎಂಬಂತೆಯೂ ಚುನಾವಣೆಗಳನ್ನು ನಡೆಸಲು ಸಿದ್ಧವೆನ್ನುವುದೂ ಇದಕ್ಕೆ ಒತ್ತಾಸೆ

ಶ್ರೀ ಮೆನನ್ನರು ವಕೀಲರಾಗಿದ್ದುದು ವಕೀಲಿ ಶಾಯಿ ಎನ್ನೇ ನಿರ್ವಹಿಸುವಂತೆ. ಸರಕಾರದ ಪ್ರತಿ ಕ್ಷಣವನ್ನೂ ಸಮರ್ಥಿಸುವುದೇ ಇವರ ಕೆಲಸ. ಇದರಿಂದ ಈಗ ಪಾರ್ಲಿಮೆಂಟಿನ ವಿಸರ್ಜನೆಯಲ್ಲಿ ಸಂದು ಗರ್ಭಿಣಿಯಾಗಿರಬೇಕೆಂದು ಇವರೇ ಅನುಮಾನಿಸಿದ್ದಾರೆ ಎಂದೆನಿಸುತ್ತದೆ. ಈ ಅವರು ಮಂತ್ರಿ


"ಅತ್ಯಂತ ಬಡವರು ಕೂಡಾ ಇದು ನಮ್ಮ ದೇಶ ಎಂದು ಭಾವಿಸುವಂತಹ ಪರಿಸ್ಥಿತಿ ನಿರ್ಮಿಸುವ ಬಗ್ಗೆ ನಾನು ಮುಂಚೆಯೆ ತಿಳಿಸಿದ್ದೆ ಉಳ್ಳವರು ಹಾಗೂ ನಿರ್ಧನರ ನಡುವೆ ಅಂತರ ಕೊಡಲು ಎಲ್ಲಾ ಜಾತಿ ಮತ್ತು ಸಮುದಾಯಗಳು ಒಂದಾಗಿ ಬಾಳುವಂತಾಗಬೇಕು"
ಗಾಂಧೀಜಿಯವರ ಕನಸನ್ನು ನನಸಾಗಿಸುವ ಕಾರ್ಯದಲ್ಲಿ ಅಂಚೆ ಮತ್ತು ತಂತಿ ಇಲಾಖೆಯವರು ತಮ್ಮ ಸೇವೆ ಸಲ್ಲಿಸಲು ತುಂಬಾ ಅವಿಮುಗ್ಧರಾಗಿದ್ದಾರೆ.
ಶ್ರೀ ಮಂತ್ರಿಯವರು ಬಿಡುಗಡೆ ಮಾಡಿದ ಅಂಚೆ ಮತ್ತು ತಂತಿ ಇಲಾಖೆ
ನವದೆಹಲಿ 16 ರಿಂದ 22, 1969
ಗಾಂಧೀಜಿಯವರ ಕನಸು
Davp 69/1316

ದಕ್ಷಿಣಿದ್ದಾರೆ, ಮುಂದೆ ಶ್ರೀಸಾಮಾನ್ಯನೇ ಆಗಿ ತ್ತಾರೆ.

ವೀರೇಂದ್ರರಿಗೆ ವೀರ್ಯಬೇಕು

ಸುದಾರಾಷ್ಟ್ರದ ರಾಜ್ಯಕೀಯ ಭಾರಿ ವರ ರಾಜ್ಯಕೀಯದಲ್ಲಿ ಮಹತ್ವದ ಭಾಗ ವಹಿಸುತ್ತವೆ. ಆದ ಪರಿಂದಲೇ ರಾಷ್ಟ್ರ ಪತಿ ಚುನಾವಣೆಯಲ್ಲಿ ಸಿಂಡಿಕೇಟ್ ಪರ ವಿದ್ವಾಗೃಹಸಂತ್ರಿ ಚವನರಷ್ಟು ಶ್ರೀಮತಿ ಗಾಂಧಿಯವರು ಕಾಂಗ್ರೆಸ್ ವಿಭಜನಾ ಬೇಳೆಯಲ್ಲಿ ಹನ್ನಿಸ್ಸು ಒಲಿಸಿಕೊಂಡರು. ಶ್ರೀ ಜಗಜ್ಜೀವನರಾಮು— ಶ್ರೀ ಫಕ್ರುದ್ದೀನ್ ಅಲಿಯವರಲ್ಲಿರುವಷ್ಟು ವಿಶ್ವಾಸ ಅವರಿಗೆ ಚವನರಲ್ಲಿದೆಯೆಂದು ಹೇಳುವಂತಿಲ್ಲ. ಒಟ್ಟಿನಲ್ಲಿ ಪ್ರಗತಿಪರಥದಲ್ಲಿ ಹಿಂದುಳಿದವರನ್ನು ಇಗ ಕೂರ್ಣ ನೆಂಬುವುದು ಕೇಗೆ?

ಶ್ರೀಮತಿ ಗಾಂಧಿಯವರ ಈ ಫಿಲುಬಿ ಕೆಲಪ್ಪ ಮಹಾರಾಷ್ಟ್ರೀಯರಿಗೂ ತಿಳಿದಿದೆ. ತೋರಿಕೆಯ ಸಟ್ಟಿಗೆ ಇಡಿಯಾ ಪುಣಾರಾಷ್ಟ್ರ ಇಂಡಿಕೇಟಿನ ಪರವಿದ್ದರೂ ನಿಜವಾಗಿ ಹಾಗಿಲ್ಲ; ಇಂದಿರಾ ಗಾಂಧಿಗೆ ಮತಾರಿಗಳ ಬೆಂಬಲ ಬೇಕು; ಇದಕ್ಕಾಗಿ ಚವನರು ಬೇಕೇ ಬೇಕು. ಮತಾರಿಗರಿಗೆ ಕರ್ನಾಟಕದ ಬೆಳಗಾಂವಿ, ಕಾರವಾರಾದಿಗಳು ಬೇಕು. ಇಂಡಿಕೇಟ್ ಗಾಂಧಿ ಈಗ ಈ ಅವಿಶ್ವತೋರಿಸಿ ಚವನರನ್ನ ಒಳಗೂ ಮಾಡಿಕೊಂಡಿದ್ದಾರೆಯೆ? ಆದಾಗದೆ ಹೋದರೆ ಚವನರು ಮತ್ತೆ ಕ್ಯಾಬಿನೇಟಿಂದ ಹೊರಗುತ್ತಾರೆ.

ಸಿಂಡಿಕೇಟಿನಿಂದ ಇದಾಗುವಶಕ್ಯವಿಲ್ಲ ವಾದ್ದರಿಂದ ಅವರು ಇಂಡಿಕೇಟ್‌ಗೆ ಹೊಂದಿಕೊಂಡರು. ಕರ್ನಾಟಕವನ್ನ ಒಡೆಯಬೇಕೆನ್ನುವ ಶ್ರೀ ಎಂ. ವಿ. ಕೃಷ್ಣಪ್ಪ ಇದಕ್ಕೆ ಕಡ್ಡಿ ಬಡಿಸಿದಿಲ್ಲ. ಕರ್ನಾಟಕ ಕಳ್ಳ ಸಿಂಡಿಕೇಟ್ ಪರವಾಗಿರುವುದರಿಂದ ತನ್ನ ಸೇಡು ತೀರಿಸಲು ಇಂಡಿಕೇಟಿಗೊಂದು ಸುವರ್ಣಾವಕಾಶವಿದು. ಆದರಿಂದ ಕರ್ನಾಟಕ ಸರಕಾರದ ಶ್ರೀ ವೀರೇಂದ್ರ ಪಾಟೀಲರು ಪರಿಸ್ಥಿತಿಯನ್ನ ಕಣ್ಣಿನಲ್ಲಿ ಎಣ್ಣೆಯಾಕಿ ನೋಡಬೇಕು. ರಾಜ್ಯಕೀಯ ಸ್ವಾರ್ಥಕ್ಕೆ ತುತ್ತಾಗಿ ನವ್ಯರಾಜ್ಯಕ್ಕೆ ಅನ್ಯಾಯವಾಗದಂತೆ ಜಾಗ್ರತವಿರಬೇಕು.

ಬೆಳ್ತಂಗಡಿ ಲೇಂಡ್ ಟ್ರಿಬ್ಯುನಲ್
ಕೋರ್ಟಿನಲ್ಲಿ

R. R. C. 246/69.

ರತ್ನಾವತಿ —ಅರ್ಜಿದಾರಳು.

ಮತ್ತು

ಮೊಂಟು ಹೆಂಗ್ಸು ಸಣ್ಣ —ಎದಿರು.

ಬೆಳ್ತಂಗಡಿ ತಾಲ್ಲೂ ಸುಳ್ಯೋ ಗ್ರಾಮದ ಬಸ್ಸಿ ಬೆಟ್ಟು ಎಂಬಲ್ಲಿರುವ ಮೊಂಟು ಹೆಂಗ್ಸಿನ ಸರ್ವೆ ನಂಬರ್ ಗಳಲ್ಲಿ,

ಮೇಲ್ಕಂಡ ಅರ್ಜಿಯಲ್ಲಿ ಗೇಣಿ ಜಾಕಿ ಬಗ್ಗೆ ವಿಚಾರಣೆಯು ತಾ. 16.12.1969 ಕ್ಕೆ ಇವ್ಯ ಹಾಜರಾತಿ ಬಗ್ಗೆ ಇಟ್ಟಿರುತ್ತದೆ. ಆದುದರಿಂದ ಆ ದಿನ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಅಕೀಲಾದ್ದಿರಿ ಯಾ ಸ್ವಕಹಾ ಹಾಜರಾಗಿ ಪ್ರತಿವಾದಿಸಿದಾದರೂ ಆಕ್ಷೇಪಣೆ ಇದ್ದರೆ ತಿಳಿಸತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮಾ ಕ್ಷಿವಿಲ್ಲದೆ ಮೂಡಿ ಆರ್ಡರ್‌ಯನ್ನು ಮುಂದೆ ಜರಿಗಾದಾದೀತು. ತಿಳಿದಿರಲಿ.

(By Court order)

N. J. KADAMBA,
Advocate for Petitioner

Belthangady, 19—11—69.

ನಾವೇನು ಮಾಡುತಿದ್ದೇವೆ?

ಗ ಂತಾದಲ್ಲೇನು ನಡೆಯಿತ? ಒಂದು ಮತದಪಕ್ಷ ಪ್ರಧ್ರೊಂದು ಮತದವರೊಡನೆ ಹೋರಾಡಿದರು. ದೇಶದ ಸುತೀಯ ಸೌಹಾರ್ದದ ದೊಡ್ಡ ಹೆಸರಿನ ಮೇಲೆ ಡಾವರು ಹಚ್ಚಿದರು. ಮಹಾತ್ಮಾ ಗಾಂಧಿಯವರ ಜನ್ಮ ರಾಜ್ಯದಲ್ಲಿ, ಅದೇ ಮಹಾತ್ಮರ ಶತಮಾನೋತ್ಸವ ದೇಶ— ವಿದೇಶಗಳಲ್ಲಿ ನಡೆಯುತ್ತಿರುವಾಗ, ಯೂ ಪ್ಪದಕ್ಕಾಗಿ ವ ಹಾತ್ಮಾಜಿ ಹನ್ಮ ಜೀವವನ್ನೇ ಬಲಿದಾನ ಮಾಡಿದರೋ, ಅಂಥ ಹ ಮತೀಯ ಸೌಹಾರ್ದ ಕೆಟ್ಟು ರುದ್ರ ಭಯಾನಕ ಹಿಂಸಾತ್ಕಾಂಡ ನಡೆಯಿತು.

ಕೇರಳದಲ್ಲೇನು ನಡೆಯಿತು? ಕಾಂಗ್ರೆಸ್ ವಿರೋಧೀ ಸಾಮಾನ್ಯ ನೀತಿಯಿಂದ ಸಪ್ತರಂಗ ಸರಕಾರವು ಎಡ ಕಮ್ಯುನಿಸ್ಟರ ಧಾಮಕ ಇ. ಎಂ. ಎಸ್. ನಂಬೂದರಿ ಪಾದರ ನೇತೃತ್ವದಲ್ಲಿ ಸರಕಾರ ರಚಿಸಿ ಕಂಟೆತ್ತ ನಾಗಿದಂತೆ ಗಂಯುಂಕ್ತ ರಂಗದ ಅಂಗ ಪಕ್ಷಗಳೇ ಪರಸ್ಪರ ಆ ರೋಪ— ಪ್ರತ್ಯಾರೋಪಗಳ ಮಳೆಗರೆದು, ಜನತೆಗೆ ಮೇಲೆ ಪ್ರಭುತ್ವವನ್ನ ಸ್ಥಾಪಿಸಲು ಹೆಣಗಾಡಿ ಪುತ್ತೆ ನಂಬೂದರಿ ಸರಕಾರವನ್ನೇ ಉರುಳಿಸಿದ್ದರಿಂದ ಬಲ ಕಮ್ಯೂನಿಷ್ಟರ ನೇತೃತ್ವದಲ್ಲಿ ಹೊಸ ಸರಕಾರವು ಅಧಿಕಾರಕ್ಕೆ ಒಂತ. ಅಂದು ಬೇಳಿಸಲು ಮುಂದ ದವರೇ ಇದರಾದನೆ, ಇಂದಿವರೇ ಬೀಳಲು ಸಿದ್ಧರಾಗಿದ್ದಾರೆ. ನಂಬೂದರಿ ಅಚ್ಯುತ ಮೆನನ್ನರನ್ನು ಸಿಂಹ ಪೀಠದಿಂದ ಎಳೆದು ಹಾಕುವ ಪ್ರತಿಜ್ಞೆಯನ್ನೇ ಮಾಡಿದ್ದಾರೆ.

ದೆಹಲಿಯಲ್ಲಿ ಏನು ಸಂಭವಿಸಿತು? ಲಲ ವರ್ಷಗಳಿಂದ ಹೇಗೊ ಹೇಗೊ ಕಡಿಮೆ ಬಂದ ಕಾಂಗ್ರೆಸ್ ಪಕ್ಷದ ಮೇಲೆ ಸಂಪೂರ್ಣ ಹತೋಟಿಯನ್ನ ಬಯಸಿ ಸಿಂಡಿಕೇಟ್ ಇಂಡಿಕೇಟ್‌ಗಳ ಹೋರಾಟ, ಲಜ್ಜೆಗೆಟ್ಟ ವರ್ತನೆ, ತಪ್ಪು ಕಾರ್ಯ ಕ್ರಮಗಳು ಹೊಣೆಗೆಟ್ಟ ಹೇಳಿಕೆಗಳು ಕಾಂಗ್ರೆಸನ್ನು ಒಡೆದೇ ಬಿಟ್ಟವು. ಕೇಂದ್ರದಲ್ಲಿ ಹ ಬ್ಬದ ಈ ಬಿರುಕ ಬಿಹಾರದಲ್ಲಿ ಕಾಣಿಸಿಕೊಂಡು ಯಿಚ್ಚು. ಉತ್ತರ ಪ್ರದೇಶದ ಸಂದಿ ಮುಂದಿನದ್ದು. ಮಧ್ಯ ಪ್ರದೇಶ— ಅಸ್ಸಾಮು, ಕಾಶ್ಮೀರ ಳಿಗೂ ರು ಗಾಳಿ ತಟ್ಟದಿರುವುದು ಸಾಧ್ಯವಿಲ್ಲ. ಮಹಾಜನ ವರದಿಯನ್ನು ಸಂಪೂರ್ಣ ತಿರಸ್ಕರಿಸದೆ ಇದ್ದರೆ, ವಿಶಾಲಾಷ್ಟ್ರದಲ್ಲಿ ಜಂಡಿಗ ಡವನ್ನ ಪಂಜಾಬಿಗೇ ಸೀಮಿದರೆ ಹರ್ಯಾ ಣದಲ್ಲಿ ಇಂಡಿಕೇಟಿಗೆ ಬೆಂಬಲ ಒಡೆದು ಹೋಗುತ್ತದೆ. ತೈಲಶುದ್ಧೀಕರಣ ಕಾರ ಖಾನೆ ತಮಗೆ ದೂರೆಯದೆ ಹೋದರೆ, ಅಸ್ಸಾಮು ಇಂಡಿಕೇಟಿಗೆ ಎದುರು ನಿಲ್ಲುತ್ತದೆ.

ಇದೇ ನಿಘಟನೆಗಳು ಯೂನಿಯನ್— ಯೂನಿಯನ್‌ಗಳ ನಡುವೆ, ಪ್ರದೇಶ— ಪ್ರದೇಶಗಳ ನಡುವೆ, ಭಾಷೆ— ಭಾಷೆಯ ನಡುವೆ ಆಗಾಗ ನಡೆಯುತ್ತಲೇ ಬಂದಿವೆ.

ಬ್ಬರಿನ್ನೊಬ್ಬರನ್ನು ನಿಂದಿಸುತ್ತಾರೆ, ಬಯ್ಯುತ್ತಾರೆ, ಅಪಪ್ರಚಾರಕ್ಕೆ ಗುರಿ ಮಾಡುತ್ತಾರೆ. ವನೆ ಮರಗಳಿಗೆ ಬೆಂಕಿಯಿಡುತ್ತಾರೆ. ವಿತ್ತ— ಜೀವಿತಗಳನ್ನು ಅಪಹರಿಸುತ್ತಾರೆ. ಅವರು ಇವರನ್ನೂ ಇವರು ಅವರನ್ನೂ ಸಂಪೂರ್ಣ ವಿನಾಶಗೊಡಲು ಎಂತಹ ಮಾರ್ಗ— ವಿಧಾನವನ್ನು ಅನುಸರಿಸುವುದಕ್ಕೂ ಮುಂದಾಗುತ್ತಾರೆ. ಸಣ್ಣ ಪುಟ್ಟ ಕಾರಣಗಳಿಗಾಗಿಯೇ ಪರಸ್ಪರ ಹೊಡೆದಾಟವಾರಂಭವಾಗುತ್ತೆ; ಕೊಲೆ— ಸುಲಿಗೆಗಳು ಪಡೆಯುತ್ತವೆ; ಅಶ್ಲೀಲ ಸತ್ಯಾಗ್ರಹ ನಡೆಯುತ್ತದೆ; ಆತ್ಮಬಲಿದಾನದ ಪ್ರಕರಣಗಳೂ ಕಾಣಿಸಿಕೊಳ್ಳುತ್ತವೆ; ಆತ್ಮಹತ್ಯೆಗಳೂ ಜರಗುತ್ತವೆ.

ವಿದ್ಯಾರ್ಥಿಗಳು ಶಿಕ್ಷಣಾಲಯಗಳ ಬಾಗಿಲು ಮುಚ್ಚಿಸುತ್ತಾರೆ; ಬೆಂಚು ಕುರ್ಚಿಗಳನ್ನ ಕೆಡಹುತ್ತಾರೆ; ಶಿಕ್ಷಕರನ್ನು ನಿಂದಿಸುತ್ತಾರೆ; ಪ್ರಶ್ನ ಪತ್ರಿಕೆಗಳನ್ನ ಸುಟ್ಟುಹಾಕುತ್ತಾರೆ. ದಾರಿ ದೀಪಗಳಿಗೆ ಕಲ್ಲೆಸೆಯುತ್ತಾರೆ. ವಾಹನಗಳಿಗೆ ಬೆಂಕಿಯಿಡತ್ತಾರೆ; ಲೇಲ್ವೆ ಪಟ್ಟಿಗಳನ್ನು, ತಂತಿ ಕಂಬಗಳನ್ನು ಕೆಡಿಸುತ್ತಾರೆ, ಜನತಾ ಪ್ರತಿನಿಧಿಗಳೂ ಶಾಸನ ಸಭೆಗಳಲ್ಲೂ ಪರಸ್ಪರ ಕಿತ್ತಾಡತ್ತಾರೆ; ಸಭೆಯ ಘೀತಿ ನಡವಳಿಗಳನ್ನ ನಿರ್ಲಕ್ಷಿಸುತ್ತಾರೆ....

ಈ ಪಟ್ಟಿ ಇನ್ನೂ ಉದ್ದ ಬೆಳೆಯುತ್ತಲೇ ಹೋಗಬಹುದು.

ಈ ಕೋಟಲೆಗಳಿಗೆ ಕಾರಣರಾರು?

ಗೊಂಡಾ ಳ ಜೈವವಾಡವೂ ಇವುಗಳಲ್ಲಿರಿ. ಓದಿದ ಸುಶಿಕ್ಷಿತ ನಾಮುಕರುಗಳ ಬೆಂಬಲವಿದೆ; ಬ ದ್ಧ ಜೀವಿಗಳೆಂದು ಕರೆದುಕೊಳ್ಳುವ ಪ್ರತಿಷ್ಠಿತ ನಾಗರಿಕರ ಸಹಾನುಭೂತಿಯೂ ಇದಕ್ಕೆದ್ದೇ ಇದೆ. ರಾಜ್ಯ ಕೀಯ ಪಕ್ಷಾಂಗಳು, ಅಧಿಕಾರ ಲಿಪ್ಸುಗಳು ಸ್ವಾರ್ಥಸಾಧಕ ನೆಗಳಕ್ಕಾರಗಳು ಇವರಿಗೆ ಒತ್ತಾಸೆ ನೀಡುತ್ತವೆ. ತಾವೇ ಹುಟ್ಟಿಸಿದ ಕಿಡಿಯು ತಮ್ಮನ್ನೇ ಇಂಗ ಬಂದಾಗ ಮಾತ್ರ ಅವರು ಕೈ ಕಾಲು ಬಿಡುತ್ತಾರೆ.

ಮತ— ಪಕ್ಷ— ಯೂನಿಯನ್— ಭಾಷೆ ರಾಜ್ಯ— ವಿದ್ಯಾರ್ಥಿ— ನಾಗರಿಕ ಇವರಿಗೂ ಧಿಂಧ್ಯ ಶ್ರಮಗಳಿಂದ ಒಳಿತಾಗುವುದಿಲ್ಲವೆಂದಿವರು ಯೋಚಿಸಿದ್ದಾರೆಯೇ? ಈ ಬಗೆಯ ಉಪಕ್ರಮ ಬರಿಯ ಉಪದ್ವ್ಯಾಪವನ್ನಿಸಿ ಇವುಗಳಿಂದ ಕರೋಡತೆ, ದ್ವೇಷ ಮತ್ಸ್ಯ ಭಯಗಳು ಹೆಚ್ಚುತ್ತಲೇ ಹೋಗುವುದೆಂಬುದಿವರ ಮನಸ್ಸಿಗೆ ಹೊಳೆವಿದೆಯೇ? ಈ ಬಗೆಯ ಕಂಯು ಚಿತ ಭಾವನೆಗೆ ಸುತ್ತಾಗಿ ಮಾನವ ತನ್ನ ಬುದ್ಧಿಯನ್ನು ವಿಶಾಲ ವೈಚಾರಿಕತೆಯಿಂದ ಎಳೆತಂದು ಕೊಳಕು ದೊಪ್ಪದಲ್ಲಿ ಕಟ್ಟುತ್ತಾನೆಂಬುದರ ಪರಿವೆ ಇವರಿಗಿದೆಯೆ? ಇದರಿಂದ ತನ್ನ ಜಾಗೂನ ತನ್ನ ದೇಶ ವಾಸಿಗಳ ಅನಿಷ್ಟವನ್ನೇ ತಾವು ಸಾಧಿಸುತ್ತೇವೆಂಬುದವರವನಸ್ಸಿಗೆಬಂದಿಯುವುದೇ? ತಮ್ಮ ಹಾಗೂ ದೇಶದ ಸಂಪತ್ತನ್ನು ಶಕ್ತಿಯನ್ನು ಶಮ್ಮಗೊಳಿಸಿ ತನ್ನನ್ನೂ ದೇಶವನ್ನೂ ವಿನಾಶದತ್ತ ಒಯ್ಯುತ್ತಿರುವೆವೆಂಬ ಪ್ರಜ್ಞೆ ಜರಿಗಿಲ್ಲವೆ? ಸ್ವರ್ಗವಾಗಬೇಕಾದ ಬದ ಕನ್ನ ನರಕ ಸದೃಶಗೆಯ್ಯುವ್ಯಯೇ? ತಮ್ಮ ಪರಿಶ್ರಮ ಅನಾವ್ಯಯವಾಗುತ್ತಿದೆ ಯೆಂಬ ದ್ಯನವರು ಬಲ್ಲರೇನು?

ನಾವು ನಮ್ಮ ನ್ಯಾಯಕರೂ ಈ ನಡೆಯುತ್ತಿರುವ ಅಪೂರ್ಣತೆಯಲ್ಲೇ ನಡೆಯುತ್ತ ಹೋದರೆ, ಎತ್ತಿಗೆ ಬಂದು ತಲೆ ಹುಮೆಸೆಂಬುದರ ಊಹೆನಾತೀತ ಪ್ಪನೆಯ ಸುಖಾಪೇಕ್ಷೆಗೊಳಪಟ್ಟು ನಾವು ನಮ್ಮ ಸರ್ವನಾಶವನ್ನೇ ಮಾಡಿಕೊಳ್ಳಲು ಕನ್ನದ್ದಾಗಿದ್ದೇವೆಯೆಂದೇ ಇದರ ಅರ್ಥ. ನಾವು ನನ್ನ ಒಳಿತನ್ನು ಬಯಸುವುದಾದರೆ, ನನ್ನ ವರ್ತನೆಯನ್ನು ಆಮೂಲಾಗ್ರವಾಗಿ ಬದಲಾಯಿಸಿಕೊಳ್ಳಲೇ ಬೇಕು. ಇದು ಕಾನೂನಿನ ಬಲದಿಂದಾಗುವ ಕಾರ್ಯವಲ್ಲ, ಮಾನಸಿಕ ಕ್ರಾಂತಿಯಿಂದಾಗಬೇಕಾದುದು. ಮಾನವತೆಯ ಕಳಹದಿಯಲ್ಲಿ ಮಾನಸಿಕ ಕ್ರಾಂತಿಯೂಗಬೇಕಾದುದು.

ಸುಬ್ರಹ್ಮಣ್ಯ ಷಷ್ಠಿ

ದಕ್ಷಿಣ ಕನ್ನಡ ಜಿಲ್ಲಾ ಸಾಳ್ಳ ತಾಲ್ಲೂ ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಪ್ರಸಿದ್ಧೋ ಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಕೊರ್ವ ಶಿಷ್ಟ ಸುಬ್ರಹ್ಮಣ್ಯ ಸಂಪ್ರದಾಯ ಕ್ರಮ ಕಾರ ಇದೇ ಸೋಮ್ಯ ಸಂವತ್ಸರದ ಕಾರ್ತಿಕ ಬಹುಳ ೧೨ ಯು ರವಿವಾರ ಕಾರ್ತೀಕ 0_12_69ರಂದ ಉತ್ಸವಾರಂಭವಾಗಿ ತಾ. 8_12_69ರಲ್ಲಿ ಲಕ್ಷದೀಪೋತ್ಸವ, ತಾ. 12_12_69 ರಲ್ಲಿ ಹೂವಿನ ತೇರು ಉತ್ಸವ, ತಾ. 13_12_69 ರಲ್ಲಿ ಸಂಜೆಯ ರ ಥೋತ್ಸವ, ತಾ. 14_12_69ರಲ್ಲಿ ಚಂಪಾಷ ಷ್ಠಿ ಮಂಡಾರಥೋತ್ಸವ, ತಾ. 15_12_69 ರಲ್ಲಿ ಅವಭೃತೋತ್ಸವದೊಂದಿಗೆ ವೈಭವದಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ಗಂಗೊಳ್ಳಿಯಲ್ಲಿ ಮಂಜುಗಡ್ಡೆ ಕಾರ್ಖಾನೆಯ ಉದ್ಘಾಟನೆ

ಕರ್ನಾಟಕ ಫಿಶರೀಸ್ ಸಂಸ್ಥೆಯು ಮಧ್ವ ಮಧ್ವರಾಜರ ಧರ್ಮಪತ್ನಿ ಶ್ರೀಮತಿ ಮನೋರಮಾ ಮಧ್ವರಾಜರ ಒಡೆತನದಲ್ಲಿ ಗಂಗೊಳ್ಳಿಯಲ್ಲಿ ಸ್ಥಾಪಿಸಿದ ಮಂಜುಗಡ್ಡೆ ಕಾರ್ಖಾನೆಯನ್ನು ತಾ. 8ರಂದು ಪೌರೋಹಿತ ದುಸ್ಸೈ ಇಲಾಖಾ ಸಚಿವ ಶ್ರೀ ಎಚ್. ಸಿ. ಲಿಂಗಣ್ಣಗೌಡ್ರಿಯವರು ಉದ್ಘಾಟಿಸಿದರು.

ಆರಂಭದಲ್ಲಿ ಶ್ರೀ ಎಂ. ಮಧ್ವರಾಜರು ಸ್ವಾಗತಿಸುತ್ತಾ, ಮತ್ಸ್ಯೋದ್ಯಮ ಜಗತ್ತಾ ವಿಸ್ತರಿಸುವಲ್ಲಿ ಮೀನುಗಾರರ ಜೀವನದಲ್ಲಾಗಿರುವ ಪ್ರಗತಿಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇತ್ತೀಚೆಗೆ ಪೈಸಾರು ಸರಕಾರಿದವರು ಯಾಂತ್ರಿಕದೋಣಿಗೆ ಸಬ್ಸಿಡಿ ನಿಲ್ಲಿಸಿರುವುದಕ್ಕಾಗಿ ವಿಷಾದ ಸೂಚಿಸಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಬಿ. ಗಂಗಾಧರ ದಾಸ್, ಎಸ್. ಎಸ್. ಕೊಲ್ಕೇಬೈಲ್, ಎಪ್ರದೇ ಮಂಜಯ್ಯ ಶೆಟ್ಟಿ, ಭಾಸ್ಕರ ಕಾಮತ್ ಮೊದಲಾದವರು ಸಹಕಾರ ಪರವಾಗಿ ನೂತನ ಸಂಸ್ಥೆಗೆ ರ ಭಕೋರಿದರು. ಸಚಿವರು, ಮತ್ಸ್ಯೋದ್ಯಮದಲ್ಲಿ ಮೈಸೂರು ಸರಕಾರ ಕೈಗೊಂಡಿರುವ ಪ್ರಗತಿಪರ ಧೋರಣೆಯನ್ನು ವಿವರಿಸಿದರು. ಶ್ರೀ ಬೈಲೂರು ನಾರಾಯಣ ಶೆಟ್ಟಿಯವರು ಸ್ಥಳೀಯ ಅಡಚಣೆಗಳ ಕುರಿತು ಮನವಿಯನ್ನು ಸಚಿವರಿಗೆ ಸಲ್ಲಿಸಿದರು.

ಶ್ರೀ ಎಸ್. ಕೆ. ಅಮೀನ್, ಎಂ. ಎಲ್. ಎ. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಈ ಉದ್ದಿಮೆಗೆ ಸರಕಾರದ ನೆರವು ಪಡೆಯಲು ಅವಶ್ಯವೆಂದರಲ್ಲದೆ ಶ್ರೀ ಮಧ್ವರಾಜರ ಪರಿಶ್ರಮ, ಸಾಧನೆಗಳ ಸಂಕಲ್ಪವನ್ನು ಶ್ಲಾಘಿಸಿದರು. ಅಂತ್ಯದಲ್ಲಿ ಶ್ರೀ ಎಂ. ಶೈಕ್ಷಂಜರು ಧನ್ಯವಾದ ಸಮರ್ಪಿಸಿದರು.

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಬೆಲೆ 0_75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.
ಪಾಲುಕೋಟೆ, ಉಡುಪಿ, ದ. ಕ.

ಪುಸ್ತಕ ಪರಿಚಯ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಸಂ: ಕೆ.

ಹೋಮರ್ ಕವಿಯ ಇಲಿಯಡ್—ಅನುವಾದ: ಶ್ರೀ ಜಿ.ಎ.ರೆಡ್ಡಿ, ಎಂ.ಎ., ಪ್ರಕಾಶನ: ಎಸ್. ಎಸ್. ಎಸ್. ಬುಕ್ ಡಿಪೋ, ಸಿಟಿಮಾರ್ಕೆಟ್, ಬೆಂಗಳೂರು-೨ ಪುಟಗಳು: ೬೦೭ ಬೆಲೆ: ಸಾಧಾರಣ ಪ್ರತಿ ರೂ. 5-00 ಕ್ಯಾಲಿಕೋ ಪ್ರತಿ ರೂ. 6-00

ಪ್ರಸಿದ್ಧ ಕವಿ ಹೋಮರ್‌ನ "ಇಲಿಯಡ್" ವಿಶ್ವ ಕಾವ್ಯಗಳ ಸಾಲಿನಲ್ಲಿ ಶ್ರೀಮಂತವಾದುದು. ಇದರ ಕನ್ನಡ ಅನುವಾದವಾದ ಪ್ರಸ್ತುತ ಪುಸ್ತಕದಲ್ಲಿ ಅನುವಾದಕರ ಜಾಣ್ಮೆ ಮೆಚ್ಚುವಂತಹದು. ಭಾರತದಲ್ಲಿ ಪೌರಾಣಿಕ ಕಾಲಕ್ಕೆ ಸಂಬಂಧಿಸಿದ ರಾಮಾಯಣ, ಮಹಾಭಾರತಗಳು ಇತಿಹಾಸಗಳೆಂದು ಹೆಸರು ಪಡೆದಿವೆ. ಇವಕ್ಕೆ ದೇವ ದೇವತೆಗಳ ಪಾತ್ರಗಳು ಮಾನವ ರೂಪದಲ್ಲೇ ಬಂದು, ಮಾನವರ ಪಡುವೆಯೇ ಇದ್ದುಕೊಂಡು ಮಾನವರಂತೆಯೇ ಪಡೆದಂತೆ ವರ್ತಿಸಿರುವುದೇ ಕಾರಣವಿರಬಹುದು.

"ಇಲಿಯಡ್" ಮಹಾಕಾವ್ಯದಲ್ಲಿ ಪರಿಸ್ಥಿತಿ ಹೀಗಿರುವುದಿಲ್ಲ. ಗ್ರೀಕ್ ಮತ್ತು ಟ್ರೋಜನರ ನಡುವಣ ಹೋರಾಟವೇ ಈ ಕಾವ್ಯದ ಮುಖ್ಯ ವಸ್ತು. ಹೋರಾಟಗಾರರು ಮಾನವರಂತೆಯೇ ಅವರಿಗೆ ಉತ್ತೇಜನ, ಒತ್ತಾಸೆಗಳನ್ನು ಕೊಡುವಾಗಿಯೂ ಅದೃಶ್ಯವಾಗಿಯೂ ಗ್ರೀಕ್ ಪುರಾಣಗಳಲ್ಲಿ ಬರುವ ಎಲ್ಲ ದೇವ-ದೇವತೆಗಳು ಮಾಡುತ್ತಾರೆ. ಎರಡೂ ಪಂಗಡಗಳ ಆರಂಭದಲ್ಲೂ ಅರಸು ಮನೆತನದವರಲ್ಲೂ ದೇವ-ದೇವತೆಗಳ ಪುತ್ರ-ಪುತ್ರಿಯರಿರುತ್ತಾರೆ. ಒಪೊಲೋ ತನ್ನ ಇಚ್ಛೆಯನ್ನು ಅನ್ಯಾನ್ಯ ವಿಧಾನಗಳಿಂದ ತೀರಿಸಿಕೊಳ್ಳುತ್ತಾನೆ. ತನ್ನ ಮಕ್ಕಳಿಂದ ದೇವತೆಗಳು ಪರಾಬಲಿ-ನುದ್ಧ ಮೊದಲಾದುವುಗಳ ಅಹುತಿಗಳನ್ನೂ ಧಾರಾಳತೆಗೆದು ಕೊಳ್ಳುತ್ತಾರೆ.

ಯುದ್ಧ—ಮೃತ್ಯು—ಗೋಳಾಟಗಳ ಈ ಕಾವ್ಯವು ಓದುವುದಕ್ಕೆ ಕುತೂಹಲಕಾರಿಯಾದುದೇ ಇದೆ. ಅನುವಾದಕರು ಶ್ರದ್ಧಾಪೂರ್ವಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಪ್ರಾಚೀನ ಗ್ರೀಕ್ ಸಂಪ್ರದಾಯಗಳನ್ನು ನಂಬಿಕೆಗಳನ್ನು ಪ್ರತಿಬಿಂಬಿಸುವ ಈ ಕೃತಿಯನ್ನು ಕುಗ್ಗಿಸಿ ಸಂಗ್ರಹವಾಗಿ ಬರೆದರೆ ಅದು ಇನ್ನೂ ಕುತೂಹಲಕಾರಿಯೂ ಆಗಬಹುದು. ಈ ಕಾರ್ಯವನ್ನು ಇತರರು ಮಾಡಬಹುದು. ಇಂತಹ ಪ್ರಾಚೀನ ಪ್ರಾಚೀನ ಕಾವ್ಯವೊಂದನ್ನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ನೀಡಿದ ಲೇಖಕರೂ ಪ್ರಕಾಶಕರೂ ಅಭಿನಂದನಾರ್ಹರು.

ಎಡೆಯ ದಪ್ಪ (ಕಾದಂಬರಿ)

ಬರೆದವರು: ಶ್ರೀ ಎಚ್. ಸುಬ್ರಾಯ ಭಟ್.

ಪ್ರಕಾಶಕರು: ವಿದೇಶ್ ಸಾಹಿತ್ಯ ಮಂಗಳೂರು-೩.

ಪುಟಗಳು: ೧೪೬. ಬೆಲೆ: ರೂ.-೨.೦೦

ಪ್ರೇಮ—ಪ್ರಣಯಗಳ ಹಿನ್ನೆಲೆಯಲ್ಲಿ ಅದರ್ಶವನ್ನೂ ಎತ್ತಿ ಹಿಡಿಯುವ ಕಾದಂಬರಿ "ಎಡೆಯದಪ್ಪ". ಶ್ರೀಮಂತ ನ್ಯಾಯವಾದಿ ಶ್ರೀಕಂಠಾಯರ ಪುತ್ರಿ ಶಾಂತಿ ವಸ್ತು ಸಾಹಿತ್ಯಿಕ ರವಿಶಂಕರನ ನಡುವಣ ಅನುರಾಗ, ಇದಕ್ಕೆ ರಾಯರಿಂದ ವಿರೋಧ. ಶ್ರೀಮಂತ ಸ್ಪ್ರಲೋಲವ ವಿವಾಹೇಚ್ಛೆ; ಆತನ ತಂಗಿ ಸರೋಜಳ ಕಂತ್ರ; ರವಿಶಂಕರನ ಅದೃಷ್ಟಾತಾಪ—ಇಷ್ಟಾ ಕಾದಂಬರಿಯ ಒಂದು ಗಟ್ಟ. ವೈದ್ಯಳಾಗಿ ಹಳ್ಳಿಯೊಂದರ ಆಸ್ಪತ್ರೆಯೊಂದರಲ್ಲಿ ಶಾಂತಿಯು ದುಡಿತ. ಆ ಆಸ್ಪತ್ರೆಯಲ್ಲೇ ರವಿಶಂಕರನ ವಿಲನ ಎರಡನೆಯ ಗಟ್ಟ. ನಾಯಿ ಮುಟ್ಟಿದ ಮಡಕೆಯಾಗಿದ್ದ ಸರೋಜಳನ್ನು ವೈದ್ಯ ಶಿವಾನಂದ ಎರಡನೆಯ ಪತ್ನಿಯಾಗಿ ಸ್ವೀಕರಿಸುವುದು ಅದರ್ಶನ ಗಟ್ಟ.

ಕಾಲೇಜು ಜೀವನದ ಸರ್ಕಸ-ನಿರಾಸಗಳು ಸರಕಾರಿ ಆಸ್ಪತ್ರೆಯಲ್ಲಿನ ಅನ್ಯಾಯ—ಅತ್ಯಾಚಾರಗಳು ಆತ ಪಾಂಗಿಕವಾಗಿ ಇಲ್ಲಿ ಬಂದು ಗಳಿಸಿರುವ ಬೆಳೆಸಿಕೊಂಡು ಹೋಗುತ್ತವೆ. ಇವರ ನಡುವೆ ಹೆತ್ತವರ ವೇತೃತ್ವದಲ್ಲಿ ವಿವಾಹಿತಳಾದ ಶಾಂತಿ ಮತ್ತು ಆಕೆಯ ಪತಿಯ ಸಮರಸದ ದಾಂಪತ್ಯವೂ ಇಣಿಕಿ ಹಾಸುತ್ತದೆ. ಶಾಂತಿ ರವಿಶಂಕರರ ಎಡೆಯ ದಪ್ಪವೇ ಇಲ್ಲಿನ ಮುಖ್ಯ ವಸ್ತುವಾದರೂ ಕಾದಂಬರಿ ಆದರ್ಶದಲ್ಲಿ ಕೊನೆಗೊಂಡಿದೆ.

ಈಗಾಗಲೇ ತಮ್ಮ ಕಥೆಗಳಿಂದ ಪರಿಚಿತರಾದ ಶ್ರೀ ಭಟ್ಟರು ಶಾಂತಿ ಮತ್ತು ರವಿಶಂಕರರನ್ನು ಅವರವರ ಪಾತ್ರದಲ್ಲಿ ಸಮರ್ಥವಾಗಿ ಚಿತ್ರಿಸಿದ್ದಾರೆ. ಸರೋಜಾ ಪತಿತೆಯಾಗಿ ನಮಂದೆ ಪಾತನೆಗೊಳಗಾಗುತ್ತಾಳೆ. ಶಿವಾನಂದರ ವಿದ್ಯಾರ್ಥಿ ಜೀವನವಾಗಲಿ, ಮುಂದಿನ ಜೀವನವಾಗಲೀ ಸ್ವಾಭಾವಿಕ. ಲೇಖಕರ ಶೈಲಿ ತೀರ ಸರಳವಾಗಿದೆ; ಸರಳತೆಯಲ್ಲೂ ಸುಂದರತೆಯನ್ನು ತರುವ ಪ್ರಯತ್ನ ವಿಲ್ಲಿ ನಡೆದಿದೆ. ಹೊಸ ತಂತ್ರಗಳನ್ನೇ ಹುಡುಕುವವರಿಗೆ ಮಾತ್ರ ತಂಬ ನಿರಾಸೆಯಾಗುತ್ತದೆ. ಸಾಮಾನ್ಯ ಓದುಗರಿಗೆ ಬಲ್ಲವರಿಗೆ ಇದೊಂದು ರುಚಿಕರವಾದ ಕಾದಂಬರಿಯೆ ನ್ನಲಡ್ಡಿಯಿಲ್ಲ.

ಅಬ್ಬಾ ಏನು ಹುಡುಗಿ! (ನಾಟಕ)

ನಾಟಕಕಾರರ: ಶ್ರೀ ಗೋಪಾಲಕೃಷ್ಣ ಪಿ. ನಾಯಕ.

ಪ್ರಕಾಶಕರು: 'ವಿಜಯಭಾರತಿ', ಆಂಕೋಲೆ (ಉ. ಕನ್ನಡ).

ಪುಟಗಳು: ೬೬. ಬೆಲೆ. ರೂ. ೦-೮೫

ನಿಶ್ಚಿತ ಮನೋಧಾನದ ಪುಟಿಕ್ತಿತ ದಿಟ್ಟ ಹೆಣ್ಣುಮಗಳೊಬ್ಬಳು ತನ್ನ ಚರಿತ್ರವನ್ನು ಪರಿಶುದ್ಧವಾಗಿಟ್ಟುಕೊಂಡು, ತನ್ನ ನೇಲೆ ಎರಗಿ ಬರುವ ಕಠೋರರ ಪುತ್ರರನ್ನು ತುದಿ ಬೆರಳಲ್ಲಿ ಕುಡಿಯುತ್ತಲೇ ತನ್ನ ಬಡ ಸಂಸಾರದಲ್ಲೂ ಸುಖದ ಹೊಳೆ ಹರಿಸುವ ಕಥೆಯೇ ಈ ನಾಟಕದ ವಸ್ತು. ಪ್ರಧಾ ಈ ದಿಟ್ಟ ಹ ಡ.ಗಿ. ಉದ್ದೇಶ್ಯಕನ ಕಾರವಾಗಿ ಆಕೆಯು ಪಾತ್ರ ಚಿತ್ರಣದಲ್ಲಿ ನಾಟಕಕಾರರು ಯಶಸ್ವಿಯಾಗಿದ್ದಾರೆ ಆಕೆಯ ತಂದೆ, ಅಣ್ಣ ಡಜಾನನ, ಅತ್ತಿಗೆ, ಶಾಂತ, ಪ್ರಧಾ ತನ್ನ ಪತಿಯೆಂದು ಅನ್ನು ಸದಾನಂದ, ಶ್ರೀಪ ಂತ ಪಶ್ರ ರತ್ನಕಾಂತ ಇವರು ನಾಟಕದಲ್ಲಿ ಬರುವ ಇತರ ಪಾತ್ರಗಳು.

ನಾಟಕವನ್ನ ಯಶಸ್ವಿಯಾಗಿ ಅಭಿನಯಿಸಿದರೆ, ಪ್ರೇಕ್ಷಕರು ಮೆಚ್ಚಬಹುದು. ಮನರಂಜನೆಯೇ ನಾಟಕದ ಉದ್ದೇಶ. ನಾಟಕೀಯತೆಯೇ ಇಲ್ಲಿನ ಜೀವಾಳವೆಂದ ಮೇಲೆ ಪ್ರಧಾಳಂತಹ ಹುಡುಗಿಯರು ಎಷ್ಟಿದ್ದಾರೆಂದು ಲೆಕ್ಕಹಾಕುವುದು ಅನಗತ್ಯ. ಅದರೆ, ರತ್ನಕಾಂತನಂತಹ ರಾಮಣ್ಣರನ್ನು ಸರಿದಂಗೆ ತರಲು ಪ್ರಧಾಳಂತಹ ಹುಡುಗಿಯೇ ಬೇಕು. ನಾಟಕದ ಸಂಭಾಷಣೆ ಶೈಲಿ ಸಹಜವಾಗಿ ಹೊರಹೊಮ್ಮಿದೆ. ಆಭಿನಯಕ್ಕೆ ತಕ್ಕುದಾಗಿದೆ. ಮಾರಿ ನಾಟಕಕಾರ ಶ್ರೀ ಪೊ. ಗ. ರಂಗಡೇಕರರ 'ಬಡೇ ಬಾಪ್ ಕೇ ಬೇಟೆ!' ಯ ರೂಪಾಂತರವಿದ. ಅದರಂತೆ ಸ್ವತಂತ್ರ ನಾಟಕಕ್ಕಿಂತ ಕಡಿಮೆಯಾಗಿಲ್ಲ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾಶ್ಚಿಮಾತ್ಯರಿಗೆ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 7

HOTEL SHIVAPRASAD

High Class Boarding, Lodging & Restaurant

COONDAPUR, S. K.

ವಾಣೀ (ರತ್ನ ಮಹೋತ್ಸವ ಸ್ಮರಣ ಸಂಚಿಕೆ) ಸಂಪಾದಕರು: ಶ್ರೀ ವಿ. ಬಿ. ಹೊಸಮನೆ. ಪ್ರಕಾಶಕರು: ಕಾಡಹಳ್ಳಿ ಉತ್ಸವ ಸಮಿತಿ, ವಾಣೀಮಂದಿರ, ಜೋಡುಮಾರ್ಗ (ದ. ಕ.) ಪುಟಗಳು: ೯೮ ಬೆಲೆ: ರೂ. ೧-೫೦.

ಸಂಸ್ಕೃತ-ಕನ್ನಡ-ಹಿಂದೀ ಭಾಷೆಗಳ ತರಗತಿಗಳು, ವರ್ಸರಿ ಮತ್ತು ರಾತ್ರಿ ತರಗತಿಗಳನ್ನು ನಡೆಸುತ್ತಿರುವ ಜೋಡುಮಾರ್ಗದ ವಾಣೀ ಮಂದಿರದ ಚಟುವಟಿಕೆಗಳು ಅಮಾವಾಸ್ಯೆನವರಿಗೆ ಚಿರಪರಿಚಿತ. ಸಾಡ ಹಬ್ಬದ ದೇಣಿ ತನ್ನ ವಾರ್ಷಿಕೋತ್ಸವನ್ನು ಯುಗಪ್ರವರ್ತಕರ ದಿನವನ್ನೂ ಆಚರಿಸುವ ಸರಿಪ ಟ ಅದಕ್ಕೆ. ಗ್ರಂಥಲಯದಲ್ಲಿ ರತ್ನ ವಂಥಾಕವಿಯನ್ನಿದು ಆಯಸುಕೊಂಡು, ಈ ಅವಸರದಲ್ಲಿ ಜಿಲ್ಲೆಯು ವಿಕೆಯ—ಕಳೆಯು ಸಾಹಿತ್ಯಕರ ಬರೆಹಗಳನ್ನು ಸ್ಮರಣ ಸಂಚಿಕೆಯ ರೂಪದಲ್ಲಿ ಬೆಳಕು ಕಾಣಿಸಿದೆ.

ಸ್ಮರಣ ಸಂಚಿಕೆಯ ಲ್ಲಿ ವಾಣೀ ಮಂದಿರವು ವಿವರಿಸಿದ್ದ ವಿವಿಧ ಕ್ಷೇತ್ರಗಳಲ್ಲಿ ಬಹುಮುಖನಗಳಿಸಿದ, ಪಂಚೀಲಕರಿಂಚಿಸಿ ಜ್ಞಿಗೆ ಪಡೆದ ಹಲವಾರು ಲೇಖನಗಳೂ ಇವೆ. ಈ ಲೇಖನಗಳು ನಮ್ಮ ತರುಣ ವಿದ್ಯಾರ್ಥಿ ಬಳಗದಿಂದ ಬಂದಿದ್ದು, ಇವನ್ನು ಅವರ ಹೆಳಿನಲ್ಲಿ ಜೀರೆಯ ವರು ಖರೆಯಿಲ್ಲ ವೆಂದಾದರೆ, ಪಮ್ಮ ತರುಣ ಪೀಳಿಗೆಯು ಖಚ್ಚೆ ತುಂಬ ಅಭಿನಂದನ ಪಡಲೇದೇಕು.

ಶ್ರೀಗಳಿಂದ ಅಮ್ಮಿಂಬಳ ಮತ್ತು ಶೆಕ್ಯಾಜೆ ರುವರ ಕವಿತೆಗಳು ಕವಿಪರವಾಗಿವೆ. ಶ್ರೀ ಹೊಸಮನೆಯ ವರು ಬಂಟವಾಳ ಪದೋತ್ಪತ್ತಿಯನ್ನು ನೂಡಿಕೊಡ ವ ಪ್ರಯತ್ನ ಮಾಡಿದ್ದಾರೆ. ಕವಿ ಎಸ್ ವಿ. ಪಿ.ಯವರ ಬಹು ಮುಖ ಪ್ರತಿಭೆ ಗು ಸರಿ ಚಯವನ್ನು ಶ್ರೀ ಎ. ವಿ. ನಾವಡರೂ ಈ ಶತಮಾನದ ಕಾವ್ಯಧಾರೆಯು ಅನ್ಯಶಾ ಪೋಷಣೆಯನ್ನು ಶ್ರೀ ಸೂರ್ಯನಾರಾಯಣ ರಾವ್‌ರೂ ಮಾಡಿದ್ದಾರೆ. ಇವು ಮನೋಜ್ಞವಿವೆ.

ವಾಣೀ ಮಂದಿರವು ವಾಣಿಯ ಸೇವೆಯನ್ನು ಮಾಡ ವರ್ಷಟ್ಟೆ ಈ ಹಬ್ಬೆ ಸ್ತುತ್ಯ; ಮತ್ತು ಸಾಹಿತ್ಯ - ಸಂಸ್ಕೃತಿ ಅಭಿವೃದ್ಧಿ ಸಾಧನ. ಇದಕ್ಕಾಗಿ ಅದರ ಕಾರ್ಯಕರ್ತರು ಅಭಿನಂದನಾರ್ಹರು.

—ಗೋರಾ

ಅಮೃತಾಂಜನ

● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ದಯಮಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

NAVAYUGA 27—11—1969
Registered with the Registrar of News Papers for India under No. R. N. 3546/'57

REGD. No: B. G: 176
LICENCE No. 33/
Licensed to Post without Prepayment

ಅಪ್ಪಾಲೆ ತಿಪ್ಪಾಲೆ ದೀಪಮಾಲೆ

ಉಪಗೂಪಕ್ಕೆಂದು ತವರು ಮನೆಗೆ ಬಂದ ನಾದಿನಿಯನ್ನು ಅತ್ತಿಗೆ ಪ್ರೀತಿಯಿಂದಲೇ ಸ್ವಾಗತಿಸಿದಳು. ನಾದಿನಿ ತನಗಾಗಿ ಆಕೆ ತೋರಿಸಿದ ಕೊಣೆಯಲ್ಲಿ ತನ್ನ ಬಿ ದಾರವನ್ನು ಊರಿದಳು. ಮುಂಜಾನವೇ ಮನೆಗೆ ಅತಿಥಿಯಾಗಿ ಬಂದ ನಾದಿನಿಯನ್ನು ಮತಾನ-ಡಿಸುತ್ತ ಕೂತರೆ, ವಧ್ಯಾಹ್ನದ ಅಡುಗೆಗೆ ಕೆಲಸ ಯಾರು ಮಾಡಬೇಕು? "ಪ್ರಯಾಣ ಮಾಡಿ ಭಾರೀ ದಣಿದಿದ್ದೀರಿ, ಸ್ವಲ್ಪ ಆರಾಮವಾಗಿರಿ; ಅಡುಗೆಗೆ ಕೆಲಸ ಮುಗಿಸಿ ಈಗ ಬಂದುಬಿಟ್ಟೆ" ಎಂದು ಅತ್ತಿಗೆ ಪಾಕಶಾಲೆಯ ದಾರಿ ಹಿಡಿದಳು.

ಹಗಲಲ್ಲಿ ಆದರಲ್ಲೂ ಹೆಳ್ಗನ ಹೊತ್ತು ಖಿದ್ದೆ ಮಾಡುವ ಅಭ್ಯಾಸ ಆಕೆಗೆ ಇದ್ದರೆ ತಾನೆ? ಆಕೆಗೂ ಮನೆ-ಮಕ್ಕಳು ಮಗ್ಗಳು-ಮರಿಯಿಳೆವೆ. ಆದರೂ ಅತ್ತಿಗೆ ಊಟನ್ನ ತೆಗೆದು ಹಾಕಲಾಗುತ್ತೆಯೆ? ಒಂದರೆ ತಾಸು ಅಲ್ಲೇ ಹರ್ಲಾಪ್ ಪಿಲ್ಲೊ ಮೇಲೆ ತಲೆಯಿಟ್ಟು ಗಾಢ್ರೆಜ್ ಮಂಚದ ಮೇಲೆ ಒರಗಿದಳು. ಮಕ್ಕಳ ಗಲಭೆ ಅಂಗಳದಲ್ಲಿ ಹೆಚ್ಚಾದಂತೆ ಆಕೆಯ ಅಯಾಸ ಕಾಪಾಗಿಯೇ ದೂರೋಡಿತು.

ತಂದೆಯ ಕಾಲದಲ್ಲಿದ್ದ ಹಳೆ ಮನೆ ಯನ್ನು ನೆಲಸಮ ಮಾಡಿ ಅಣ್ಣ ಈ ಹೊಸ ತಾರ್ತಿಕ ಮನೆ ಕಟ್ಟಿದ್ದ. ಹಳೆ ಮನೆಯ ಹಂಚು ಕೀಳುತ್ತಿರುವಾಗಲೇ ತಾಯಿಯು ಕರುಳು ಕತ್ತರಿಸಿ ಬಂದಿರಬೇಕು. ೧೦ತ್ರೆ ಹಗಲಾಗುವುದರೊಳಗೆ ಆಕೆ ತನ್ನ ದೇಹವನ್ನೇ ಬಿಟ್ಟು ಮಗನ ದೂರಿಡಲು ಪತಿಯತ್ತ ಹೊರಟು ಹೋಗಿ ಬಿಟ್ಟಳು. ಅದಾಗಿ ಮೂರು ವರ್ಷಗಳಿಗೆ ಕಳೆದಿದೆ. ವಂಗಳೂರು ಹಂಚಿನ ಬದಲು ತಾರ್ತಿಸು ತಲೆಯೆತ್ತಿ ನಿಂತಿದೆ. ಮರದ ಕಟಿಕೆ-ಬಾಗಿಲುಗಳ ಬದಲು ಕಾಂಕ್ರೀಟು ಕಟ್ಟಿಗೆಗಳು. ಗೋಡೆಯೂ ಕಲ್ಲಿನದ್ದೋ ಇಟ್ಟಿಗೆಯದ್ದೋ! ನೆಲ ಚಂದ್ರಕಾಂತ ಶಿಲೆಯಂತೆ ಥಕಥಳ. ಎಣ್ಣೆದೀಪಗಳ ಬದಲು ವಿದ್ಯುತ್ತಿನ ದೀಪ. ಬೀಡಿಗೆಗಳ ಬದಲು ಫ್ಯಾನ್ ರೂವಾ ರೂಮಿಗೊಂದು. ಇಷ್ಟು ಮನೆ ಬಾಗಿಲಿಗೆ ಮೂಚಾರ ಪತ್ರ ಬರ್ತಾ, ಪಾಲು—ನೀರು ಎಲ್ಲ ಬರುತ್ತದೆ. ರೇಡಿಯೋ ತನ್ನ ಅಸ್ತಿತ್ವವನ್ನೂ ಎತ್ತಿ ತೋರಿಸುತ್ತದೆ. ತೋಟದ ಬಾವಿಗೆ ಪಂಪು ಇಟ್ಟಿದ್ದಾನೆ ಅಣ್ಣ. ಆಳು—ಕಾಳುಗಳಿಗೆ ದಪ್ಪಹತ್ತು ಹಾಕಬೇಕಿಲ್ಲ. ಇವೆಲ್ಲ ಏನೇ ನೋ ವೈಭವಗಳನ್ನು ಕಂಡ ತಂಗಿಗೆ ತನ್ನ ಹಳ್ಳಿಯ ಮನೆಯ ಸ್ಥಿತಿಗತಿಗಳು ಪೆಚ್ಚು ಹಾಡೊಡನೆಯೇ ಜುಗುಪ್ಸೆ ಬಂತು. ದುಡ್ಡು ಎಷ್ಟಿದ್ದರೇನು, ಅದರಿಂದ ಸುಖ ಅನುಭವಿಸಲು ಬಹಳ ಪುಣ್ಯವಂತಿರಬೇಕು. ತಾನು ಪಾಪಿಷ್ಠೆ; ತಮ್ಮಾರಿಗೆ ಈ ಅಧುನಿಕ ಸೌಲಭ್ಯಗಳೊಂದೂ ಇಲ್ಲ. ತನ್ನ ಅತ್ತಿಗೆ ಪುಣ್ಯಾತ್ಮಗಿತ್ತಿ. ತನ್ನ ಅಣ್ಣನ ಕೈಹಿಡಿದು ಬೇಕಾದಷ್ಟು ಆಕೆ ಏಳೇಳು ಜನ್ಮಗಳಲ್ಲಿಯೇ ಪುಣ್ಯಮಾಡಿರಬೇಕು.

ಸಂಜೆ ಅಣ್ಣ ಬರುವವರೆಗೂ ತಂಗಿ ಯೋಚನೆಯಲ್ಲೇ ಬಿದ್ದಳು. ಸ್ವರ್ಗ, ಅಥವಾ ಇಂದ್ರನಗರಿಯೆಂದು ದೂರವೇಕೆ ಹುಡುಕಬೇಕು? ತನ್ನ ಅಣ್ಣನ ಮನೆಯೇ ಇಂದ್ರನಗರಿ; ಅತನ ತೋಟವೇ ನಂದನವನ—ಅಣ್ಣ ಇಂದ್ರ; ಅತ್ತಿಗೆ ಶಚೀದೇವಿ. ಆಕೆಯು ಮನಸ್ಸಿನಲ್ಲಿ ಯೋಚನಾತರಂಗಗಳು ಅಡೆತಡೆಯಿಲ್ಲದೆ ಎದ್ದು ಬೀಳುತ್ತಿದ್ದವು; ವತ್ತೆ ಏಗುತ್ತಿದ್ದ "ಸುಶೀ" ಎಂಬ ಪ್ರೇಮದ ಕರೆ ಕಿವಿರೆಗೆ ಬಿದ್ದಾಗಲೇ ಆಕೆಗಾದುದು ಎಚ್ಚರ. ಅದು ತನ್ನ ಅಣ್ಣನದೆಂದು ತಿಳಿಯಲು ಹೆಚ್ಚು ಸಮಯ ಬೇಕಾಗಿರಲಿಲ್ಲ. ಆಫೀಸಿನಿಂದ ಮರಳಿದ ಅಣ್ಣನನ್ನು ಆಕೆ ಆಭಿನಂದಿಸಿದಳು.

ಸಂಜೆಯ ಕಾಫಿಸೇವನೆ ವಮಿದ ಬಳಿಕ ಉಭಯ ಕುಶಲೋಪರಿಯಾಯ್ತು; ಮೂತಿವ ಭರದಲ್ಲಿ ಸುಶಿ ಹೇಳಿದಳು: "ಅಣ್ಣಾ, ನಿಜವಾಹ್ಯೂಶ್ಚಿಗೆ ಭಾಗ್ಯವಂತರು ಹಣವೂ ಇದೆ; ಸೌಲಭ್ಯವೂ ಇದೆ ಅದರಿಂದ ಸುಖವೂ ಇದೆ. ನೀನು ಏನೇ ಹೇಳು, ಕರೆಂಟು ಇಲ್ಲವೆಂದಾದರೆ, ಈಗಿನ ಕಾಲದಲ್ಲಿ ಏನೂ ಇಲ್ಲಂತ ಅರ್ಥ."

ಅಣ್ಣ ನಗತ್ತಾ ಹೇಳಿದ: "ಅಯ್ಯೋ, ಸುಶೀ, ಏನನ್ನುತ್ತೀಯ? ಮೊದಮೊದಲು ಹಾವುಹಾಗೆಯೇ ಅಂದು ಕೊಂಡಿದ್ದೆವು. ಆದರೆ, ಈಗ ಕಮ್ಮಿ ಅನಿಸಿಕೆ ಸುಳ್ಳು ನಿಜವಿದೆ."

"ಯಾಕೆ? ಹೇಗೆ?"

"ಹೇಗೇಂತ ಅನ್ನಲಿ? ನೋಡ್ತುಂಬೊಂದೊಂದಕ್ಕೆ ಮುನ್ನೂರು ಮುನ್ನೂರು ರೂಪಾಯಿ ತೆತ್ತು ಫ್ಯಾನ್ ಹಾಕಿಸಿದೆ. ಆದರೆ, ಕರೆಂಟೇ ಇಲ್ಲನೋಡ. ಈ ಸೆಖೆಯಲ್ಲಿ ಜೀವ ಬೇಯುತ್ತಿದ್ದರೂ ಫ್ಯಾನು ತಿರುಗುವುದೇ ಇಲ್ಲ."

"ಹೌದೆ? ಕರೆಂಟಿಗೇನಾಗಿದೆ?"

"ಅದಕ್ಕೆ ಏನಾಗಿದೆ ಅನ್ನುವುದು? ಒಂದು ಮೂತಂತೂ ನಿಜ, ಅದನ್ನು ನಂಬಿಯೂ ಕೆಲಸವನ್ನು ಕೂಡಲೂ ಸಾಧ್ಯವಿಲ್ಲ. ದೆಹಲಿಯು ಬಿಸಿ ಬಿಸಿ ವಾರ್ತೆ ಕೇಳುತ್ತ ಕುಳಿತಂತೆ ರೇಡಿಯೋ ದೀಪ ನಂದಿಹೋಯಿತು. ಸಂಜೆ ದೇವರಿಗೆ ದೀಪ ಹಚ್ಚಿ ಲೈಟ್ ಹಾಕಿಕೊಂಡು ಭಜನೆ ಮಾಡುತ್ತ ಕುಳಿತಂತೆ ಎಲ್ಲೆಲ್ಲೂ ಅಂಧಕಾರ ಹಾಡಿತು. ಎಲೆಯಲ್ಲಿ ಅನ್ನಹಾಕಿ ಸಾರು ಬಡಿಸುತ್ತಿರುವಾಗಲೇ ಮತ್ತೆ ದೀಪ ಹೋಯಿತು. ಹಾಸಿಗೆ ಸುರುಳಿ ಬಿಡಿಸಿ, ಒಟ್ಟೆ ಹಾಕಲು ಕೈ ಎತ್ತುವಾಗಲೇ ಕತ್ತಲಾವರಿಸಿತು. ಇಷ್ಟು ಸೆಖೆಯೆಂದು ಫ್ಯಾನ್ ಹಾಕಿ ಮಲಗಿದರೆ, ಮೊದಲನೆ ಜಾರಿ ಎಚ್ಚರಾಗುವಾಗ ಹಾಸಿಗೆ—ನೈಯೆಲ್ಲಾ ಒದ್ದೆ. ಬ್ಯಾಟರಿ ಮೇಲೆ ಹಾಕಿ ನೋಡಿದರೆ ಫ್ಯಾನು ಬಂದು, ಸುಳಿಯಲ್ಲು ಗಡುಗು ವಿಂಚಿಸಿ; ಗಾಳಿಯೇ ಇಲ್ಲ; ಆದರೆ ಹಣೆಗೆ ಕರೆಂಟೂ ಎಲ್ಲ...."

ಸುಶೀ ಕಣ್ಣಗಳಿಸಿ ಕೆವಿದೆರೆದು ಕೇಳುತ್ತಿದ್ದಳು. ಅಣ್ಣ ಮುಂದುವರಿಸಿದ-'ತೋಟಕ್ಕೆ ನೀರು ಬಿಡೋಣವೆಂದ ಪಂಪು ಸ್ಟಾರ್ಟ್ ಮಾಡಿದೇನು. ಬಾವಿಯಿಂದ ನೀರು ಳೆಯಿಗೆ ಹರಿದು ಗಿಡದ ಬುಡಕ್ಕೆ ಹೋಯಿತ. ಅಷ್ಟರಲ್ಲಿ ಪಂಪು ನಿಶ್ಚಲವಾಗುತ್ತು. ಮೊನ್ನೆ ಸೇವಾ ಸಂಘದಲ್ಲಿ ನೈತ್ಯ ಕಾರ್ಯಕ್ರಮವೊಂದು ಏರ್ಪಟ್ಟಿತ್ತು. ನರ್ತಕಿ ಪೂರ್ಣ ವೇಷದೊಡನೆ ರಂಗಮಂಟಪದ ಮೇಲೆ ಬಂದು ನಿಂತ ಕಾಲು ಗೆಜ್ಜೆ ಕೋಲಾಟಕ್ಕೆ ಕೊಡಗಿದ್ದೇ ತಡ, ಲೈಟ್ ನಂದಿ ಹೋಯಿತ; ಪ್ರೇಕ್ಷಕರೆಲ್ಲರೂ 'ಹೋ' ಎಂದು ಕೂಗತೊಡಗಿದರು. ಮತ್ತೆ ಗ್ಯಾಸ್ ಲೈಟು ಬರುವವರೆಗೆ ಕಾಯಬೇಕಾಯ್ತು. ಮಹಾಪೋಷಕರೊಬ್ಬರು ಬ್ರಹ್ಮ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದಂತೆಯೇ ಕರೆಂಟು ಫೈಲಾದುದರಿಂದ ಅವರ ಆಭಿನಯವನ್ನೇ ಇನ್ನ ಊಹಿಸಬೇಕಾಯ್ತು; ಕತ್ತಲೆಯಲ್ಲಿ ಗುಡಿಯ ಜಾತ್ರೆ ದಿನ ಉತ್ಸವ ನಡೆಯುತ್ತಿದ್ದಂತೆಯೇ ದೀಪವಿಲ್ಲ. ಗಲಭೆಯೋ ಗಲಭೆ. ಕಳ್ಳರಿಗೆ ಕರೆಗೆ ಇದೊಂದು ಒಳ್ಳೆಯ ಅವಕಾಶ—'

'ಅಲ್ಲ, ಇಷ್ಟೆಲ್ಲ ಯಾಕೆ ಹೀಗಾಗುತ್ತೆ?'

"ಯಾಕೆ ಅಂತರೆ ಅದಕ್ಕೆ ಯಾರೂ ಉತ್ತರಿಸೊಡಬೇಕ.?' ಎಂದ, ಹೇಳುತ್ತಿರುವಾಗಲೇ ದೀಪ ಆತು. ಕಗ್ಗತ್ತಲೆ ಆವರಿಸಿತು. ವೆಂಕಟ್ಟಿಯನ್ನು ಹುಡುಕಿ ದೀಪ ಮಾಡಿದ್ದಾಯಿತು. ಐದು ನಿಮಿಷದಲ್ಲಿ ಬರೆಂಟು ಹರಿಯಿತ್ತು. ವಿದ್ಯುದ್ದೀಪ ನಾಣಿ ಮಿಣಿ ಉರಿಯಲಾರಂಭಿಸಿತ್ತು, ಮತ್ತೆ ನಂದಿತು. ಅದು ಮುಂದೆ ಉರಿಯ ಬೇಕಾದರೆ ಹತ್ತು ಏಮು ಪೈಸೆಗಳನ್ನು ತೆಗೆದುಕೊಂಡಿತು. ಒಮ್ಮೆ ಜಗ್ಗನೆ ಉರಿದರೆ, ಮತ್ತೆ ನಸ್ಸತ್ತಗಳಂತೆ ಲಕಪಕ ಹೊಳೆಯಲು ತೊಡಗಿತು. ಟ್ಯೂಬ್ ಲೈಟ್ ಆಪ್ಪಾಲೆ ತಿಪ್ಪಾಲೆ ಆಯಿತ್ತು. ಸಂಜೆ ಆರರಿಂದ ೧೦ತ್ರೆ ಎಂಟರ ನಡುವೆ ಐದೆಂಟು ಸಲವೂ ಕರೆಂಟು ಹೋಗುವುದಂಟು ಎಂದ, ಅಣ್ಣ ಅತ್ತಿಗೆ ದೀಪ ಹೋದೊಡನೆ ನೆಂಬತ್ತೆ.— ಬೆಂಕೆಪೊಟ್ಟಣ ಅಂಗಲ. ಹೋಗಿ ಮೂಗು ಗುದ್ದಿಸಿಗೊಂಡು, ಕಾಲದಂಟು ಮುರಿದು ಕೊಂಡ ಕತೆ ಹೇಳಿದಳು.

ಸುಶೀ "ಇದಕ್ಕೆಲ್ಲ ಪುಣ್ಯ ಬೇಕು. ನೀವು ಪೇಟೆ ಬುಲ್ಲಿ ಕೂತು ಭಾರಿ ಅನ್ಯಾಯವಾಗಿ ಮಾತನಾಡುತ್ತೀರಿ. ಆದರೆಂದಂದಲೇ ನೀವು ಪದೇ ಪದೇ ಅಂಧಕಾರವನ್ನಿಗೆ ಇಳಿಯುತ್ತೀರಿ" ಎಂದಾಗ ಅದನ್ನು ಖಂಡಿಸಲು ಮತ್ತೊಮ್ಮೆ ದೀಪವಾರಿತು. ಅರ್ಥವಾಸವಾದರೂ ಆಂದ ದೀಪ ಬರಲೇ ಇಲ್ಲ.

—ರಾತಿ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ

ಉತ್ತಮ ವಜ್ರಗಳು

ಈಗ ತಾನೇ ಬಂದಿರುವ ಸ್ವೋತಿನಿಂದ
ನಿಮಗೆ ಬೇಕಾದ ಕೊಲಿಟಿ, ಸ್ಯಾಜು, ಕ್ರಯ ಸರಿಹೋಲಿಸಿ
ನೋಡಿ, ಆರಿಸಿ, ಧರ್ಮಕಾಂಟಾ ಕೆರೆಟ್ ತೂಕದಲ್ಲಿ

ನ್ಯಾಯವಾದ ಬೆಲೆಗೆ ನಮ್ಮಿಂದ ಪಡೆಯಿರಿ.

ವ್ಯಾಪಾರದ ಸಮಯ:
ಬೆಂಕೆನ ಸಮಯದಂತೆ.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ, ಉಡುಪಿ. ದ. ಕ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 20887

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden.
Quiet, Calm Atmosphere
Personalised Service.

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 4—12—1969 ಸಂಪುಟ 49 ಸಂಚಿಕೆ 14

ಭವ್ಯ ಪರಂಪರೆಯ ಹೆಗ್ಗಡೆ

ಶ್ರೀ ಧರ್ಮಸ್ಥಳದ ಹಿಂದಿನ
ಧರ್ಮಾಧಿಕಾರಿ
ಶ್ರೀ ವೀರೇಂದ್ರ ಹೆಗ್ಗಡೆ

ಶ್ರೀ ಮಂಜುನಾಥನ ಅನುಗ್ರಹ ಶಕ್ತಿ, ಸರ್ವಜನವೇದ್ಯ. ಅಲ್ಲಿ ಅನುಗ್ರಹಾರ್ಥಿಗಳಿಗೆ ಸಕಲ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಆಡಳಿತ ಹೆಗ್ಗಡೆಯವರದು. ಶ್ರೀ ದೇವಳದ ಎಲ್ಲ ಕಾರ್ಯಕಲಾಪಗಳೂ ನ್ಯಾಸಸ್ಥೆಗಳೂ ಧರ್ಮದರ್ಶಿ ಹೆಗ್ಗಡೆಯವರ ನೇತೃತ್ವದಲ್ಲಿ ನಡೆಯುತ್ತವೆ. ಶ್ರೀ ಮಂಜುನಾಥನ 'ಕುಡುಮ'ದಲ್ಲಿ ನೆಲೆ ನಿಲ್ಲುವಂತೆ ಮಾಡಿದ ಯಶಸ್ಸು ಸುಮಾರು ೨೦ ತಲೆಮಾರಿಗೆ ಹಿಂದಿನವರಾದ ಶ್ರೀ ಬಮ್ಮಣ್ಣ ಹೆಗ್ಗಡೆಯವರದ್ದು. ಅಂದಿನಿಂದಲೂ ಶ್ರೀ ಕ್ಷೇತ್ರವು ಕಾಲಕಾಲಕ್ಕೆ ಅಧಿಕಾರಕ್ಕೆ ಬಂದ ಹೆಗ್ಗಡೆಯವರ ಹಿಂತನದಲ್ಲಿ ಕ್ಷೇತ್ರವು ಉನ್ನತ ದಿಶೆಯತ್ತಲೇ ಮುಂದುವರಿಯುತ್ತ ಬಂದಿದೆ.

ಇತ್ತೀಚೆಗಿನ ಹೆಗ್ಗಡೆಯವರಲ್ಲಿ ಶ್ರೀ ಚಂದಯ್ಯ ಹೆಗ್ಗಡೆಯವರು ಉಲ್ಲೇಖಾರ್ಹರು. ಬದಲಾಗುತ್ತಿರುವ ವಾತಾವರಣವನ್ನು ಗಮನಿಸಿ ಹೊತ್ತಾರ್ಥಿಗಳಿಗಾಗಿ ಸ್ಥಾಪಿಸಿದ್ದ ಹಲವಾರು ಕೊಂದರೆಗಳನ್ನು ದೂರಮಾಡಲು ಇವರು ಹತ್ತಾರು ಪ್ರಯತ್ನಗಳನ್ನು ಮಾಡಿ ಸಫಲರಾದರು. ಇವರ ನಂತರ ಬಂದ ಶ್ರೀ ಮಂಜಯ್ಯ ಹೆಗ್ಗಡೆಯವರು ಇಲ್ಲೂ ಒಂದು ಹೆಜ್ಜೆ ಮುಂದುವರಿದು ಧರ್ಮ ವಾತ್ಸಲ್ಯ ಸಾಹಿತ್ಯ ಸಮ್ಮೇಳನಗಳನ್ನೂ ನಿರಂತರ ಧರ್ಮ ಪ್ರಚೋದನೆಯ ದಾರಿಯನ್ನು ಬಹಳ ಹಿಂದೆಯೇ ತೋರಿಸಿಕೊಟ್ಟರು.

ಶ್ರೀ ಮಂಜಯ್ಯ ಹೆಗ್ಗಡೆಯವರ ಬಳಿಕ ಚಂದಯ್ಯ ಹೆಗ್ಗಡೆಯವರ ಪುತ್ರ ಶ್ರೀ ರತ್ನವರ್ಮ ಹೆಗ್ಗಡೆಯವರು ಪಟ್ಟಕ್ಕೇರಿದರು. ಶ್ರೀ ಹೆಗ್ಗಡೆಯವರ ಮುಂದೆ ಹತ್ತು ತೀರ್ಥರೂಪರ ಹಾಗೂ ಪೂರ್ವಜರ ಭವ್ಯ ಪರಂಪರೆಯಿತ್ತು. ಆದುದರಿಂದ, ಧರ್ಮಕ್ಕೆ ಯಾವ ರೀತಿಯಲ್ಲೂ ಚ್ಯುತಿ ಅಥವಾ ಅಪಚಾರವಾಗದಂತೆ ಎಚ್ಚರಿಕೆಯನ್ನು ವಹಿಸಿ ಅವರು ಶ್ರೀ ಕ್ಷೇತ್ರಕ್ಕೆ ಅಧುನಿಕ ಮೆರುಗನ್ನು ಕರಲು ಪ್ರಯತ್ನಿಸಿದರು. ಯಾತ್ರಾರ್ಥಿಗಳು ಉಳಕೊಳ್ಳಲು ಹೆಚ್ಚಿನ ಅನುಕೂಲವಾಗುವಂತೆ ಅವರು ದೊಡ್ಡ ದೊಡ್ಡ ಛತ್ರಗಳನ್ನು ಕಟ್ಟಿಸಿದರು. ಅದರಲ್ಲಿ ಸಕಲ ಸೌಕರ್ಯಗಳೂ ದೊರೆಯುವಂತೆ ವಿಚಾರಿಸಿ ಮಾಡಿದರು. ನಿಲ್ಯಾಡಿ ಬೀಡಿನ ಪುನಾರಚನೆ, ಅತಿಥಿ ಶಾಲೆ ಮತ್ತು ಚಂದ್ರಸಾಥ ಚತುರಿಯ ವಿಸ್ತರಣೆ, ಧರ್ಮಸ್ಥಳ ಮಹಾದ್ವಾರ .... ಹೀಗೆ ಹಲವಾರು ಮಹಾ ಕಾರ್ಯಗಳನ್ನು ಅವರು ಮಾಡಿ ತೋರಿಸಿದರು. ಮಲೆನಾಡಿನ ವಾತಾವರಣದ ಉಜರೆಯಲ್ಲಿ ಶ್ರೀ ಮಂಜಯ್ಯ ಹೆಗ್ಗಡೆಯವರು ಸ್ಥಾಪಿಸಿದ ಸಿದ್ಧವನ ಮತ್ತು ಮಂಜುನಾಥೇಶ್ವರ ಹೈಸ್ಕೂಲುಗಳ ಜತೆಗೆ ಕಾಲೇಜೊಂದನ್ನು ಶ್ರೀ ರತ್ನವರ್ಮ ಹೆಗ್ಗಡೆಯವರು ಆರಂಭಿಸಿದರು. ಹಾಗಾಗಿ ಮಲೆನಾಡಿನ ವಿದ್ಯಾರ್ಥಿಗಳು ದೂರ ಹೋಗುವುದು ತಪ್ಪಿ, ಮನೆಯಾಗಿಲ್ಲೇ, ಅಥವಾ ಅತಿ ದೂರದಲ್ಲಿಯೇ ಸರ್ವ ಸೌಲಭ್ಯಗಳೊಂದಿಗೆ ಉಚ್ಚ ವಿಶ್ವವಿದ್ಯಾಲಯವನ್ನು ಪಡೆಯುವುದು ಸಾಧ್ಯವಾಯಿತು.

ಶ್ರೀ ಧರ್ಮಸ್ಥಳದ ಹಿಂದಿನ
ಧರ್ಮಾಧಿಕಾರಿ
ದಿ ಡಿ. ರತ್ನವರ್ಮ ಹೆಗ್ಗಡೆ

ಶ್ರೀ ರತ್ನವರ್ಮ ಹೆಗ್ಗಡೆಯವರ ಅಧಿಕಾರಾವಧಿ ಅತ್ಯಲ್ಪ, ಹದಿಮೂರೇ ವರ್ಷಗಳು ಮಾತ್ರ. ಅವರಿಂದ ಆಗಬೇಕಾದ ಕಾರ್ಯಗಳೆಲ್ಲವನ್ನೂ ಮಾಡಿಸಿಕೊಂಡು ವಿಧಾತನು ತನ್ನ ಬಳಿಗೆ ಕರೆದುಕೊಂಡು ಹೋದನು.

ಶ್ರೀ ವೀರೇಂದ್ರ ಕುಮಾರ ಹೆಗ್ಗಡೆಯವರು ಧರ್ಮದರ್ಶಿಗಳಾಗಿ ಕಳೆದ ವರ್ಷ ಪಟ್ಟಾಭಿಷಿಕ್ತರಾದರು. ಶ್ರೀ ಹೆಗ್ಗಡೆಯವರು ಇಷ್ಟೂ ವರ್ಷಗಳಾದರೂ ತಾರುಣ್ಯದೊಡನೆಯೇ ಅವರ ಪಾಲಿಗೆ ದೊಡ್ಡ ಅಧಿಕಾರ ವರ್ಷ, ಅದಕ್ಕಿಂತ ಹೆಚ್ಚಿನ ಹೊಣೆಗಾರಿಕೆಗಳೂ ಬಂದಿವೆ. ಅದರೆ, ಹೆಗ್ಗಡೆ ಪರಂಪರೆಗೆ ಅನುಗುಣವಾದ ಒಂದು ಅಪೂರ್ವ ಶಕ್ತಿ, ದೈವಾನುಗ್ರಹ ಇವರಿಗೂ ಇದೆ; ಅದುದರಿಂದಲೇ ಶ್ರೀ ವೀರೇಂದ್ರ ಕುಮಾರ ಹೆಗ್ಗಡೆಯವರು ಒಂದು ವರ್ಷದ ಆಡಳಿತವನ್ನು ಸುಸೂತ್ರವಾಗಿ ಸಾಗಿಸಿಕೊಂಡು ಬಂದಿದ್ದಾರೆ. ಶ್ರೀ ಕ್ಷೇತ್ರದ ಯೋಜನೆ ಸಂಪ್ರದಾಯ — ಸೇವೆ-ನಿಯಮಗಳಿಗೂ ಲವಲೇಶವೂ ಚ್ಯುತಿ

(ಇನ್ನೆರಡನೇ ಪುಟ ನೋಡಿ)



ಶ್ರೀ ಮಂಜುನಾಥ ಸ್ವಾಮಿ

ಗೋಪಾಲಕೃಷ್ಣ ಗೋಖಲೆ

ಲೇಖಕರು : ಎಚ್. ಡಾ॥ ಎನ್. ಕುಂಟ್ಯೂರು.

ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪುನರುಜ್ಜೀವನ ಕಾಲದ ಧ್ರುವ ತಾರೆಗಳೆನಿಸಿದ ರಾಜಾರಾಮ ಮೋಹನ ರಾಯ್ ಮತ್ತು ದಾದಾಭಾಯಿ ನವರೋಜಿಯವರ ಪರಂಪರೆಗೆ ಸೇರಿದವರು ಗೋಪಾಲಕೃಷ್ಣ ಗೋಖಲೆ. ಬದುಕಿನುದ್ದಕ್ಕೂ ಜ್ಞಾನಾರ್ಜನೆಗಾಗಿ ಪರಿತಪಿಸಿದ ಗೋಖಲೆಯವರು ಒಂದು ಪ್ರಜ್ಞಾಪೂರ್ವಕ ಶಕ್ತಿಯಾಗಿದ್ದರು. ದೇಶ ಪ್ರೇಮ ಅವರ ಉಸಿರಾಗಿತ್ತು. ದೀನದಲಿತರ ಉದ್ಧಾರ ಗೋಖಲೆಯವರ ಜೀವನದ ಧ್ಯೇಯವಾಗಿತ್ತು.

ಲೋಕಮಾನ್ಯ ತಿಲಕ ಮತ್ತು ಅಗರಕರ ಮುಂತಾದ ಪುರೋಗಾಮಿಗಳಿಂದ ಸ್ಥಾಪನೆಗೊಂಡ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯ ಸದಸ್ಯರಾಗಿ ಶ್ರೀ ಗೋಖಲೆ ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದರು. ಬಹುಮುಖ ಪ್ರತಿಭೆಯ ಸತ್ಚಾರಿತ್ರ್ಯದ ಮೇಧಾವಿ ರಾನಡೆಯವರ ಸಂಪರ್ಕವನ್ನು ಗೋಖಲೆಯವರು ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿಯೇ ಪಡೆದರು. ರಾನಡೆಯವರ ಅಡಿಯಲ್ಲಿ ಹನ್ನೆರಡು ವರ್ಷ ಪರ್ಯಂತ ಕುಳಿತು ಗೋಖಲೆಯವರು ತಮ್ಮ ಭವಿಷ್ಯದ ಆಸ್ತಿವಾರವನ್ನು ರಾಕಿಕೊಂಡರು. ರಾನಡೆಯವರ ನೇತೃತ್ವದಲ್ಲಿ ಸಾರ್ವಜನಿಕ ಪ್ರಶ್ನೆಗಳನ್ನು ಕೂಲಂಕಷವಾಗಿ ಚರ್ಚಿಸಲು, ಮಧ್ಯರಾತ್ರಿ ಸರಿದಿದ್ದರೂ ಗುರುಶಿಷ್ಯರ ಸಂಭಾಷಣೆ ಸಾಗಿಯೇ ಇರುತ್ತಿತ್ತು. ವಿದ್ಯಾವಂತ ಭಾರತೀಯರೆಲ್ಲ ಸಾರ್ವಜನಿಕ ಪ್ರಶ್ನೆಗಳನ್ನು ಕಾರ್ಯರೂಪಕ ಅಧ್ಯಾಯ ಮಾಡಬೇಕು ಎಂದು ಗೋಖಲೆ ತಮ್ಮ ಜೀವನದುದ್ದಕ್ಕೂ ಉಪದೇಶಿಸಿದರು. ಭಾರತದ ಸಾಮಾನ್ಯ ಸ್ತ್ರೀಪುರುಷರೆಲ್ಲ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಹೊಂದಿರಬೇಕೆಂದು ಗೋಖಲೆ ಅಪೇಕ್ಷಿಸಿದರು. 1904ರಲ್ಲಿ ಮದ್ರಾಸಿನಲ್ಲಿ ಮಾತನಾಡುತ್ತ ಗೋಖಲೆಯವರು "ಭಾರತದ ಸಾಮಾನ್ಯ ಸ್ತ್ರೀಪುರುಷರ ಜೀವನ, ವಿಚಾರ ಮತ್ತು ಕೃತಿಗಳಲ್ಲಿ ಭಾರತದ ಬಲ ಅಡಗಿದೆ!" ಎಂದು ಕೇಳಿದರು. 1904ರಲ್ಲಿ ಮುಂಬೈಯ ಸಭೆಯೊಂದರಲ್ಲಿ ಮಾತನಾಡುತ್ತ, "ಭಾರತದ ಎಲ್ಲ ಜನತೆಯು ಶಕೆ ಶೀಲಗಳ ಸಾಮಾನ್ಯ ಸಾಮರ್ಥ್ಯದ ಮೇಲೆ ಪ್ರಜಾತಾತ್ವಿಕ ಸ್ವತಂತ್ರ ಸರಕಾರವು ನೆಲೆಯಾಗಿ ನಿಲ್ಲಬಲ್ಲದು" ಎಂದು ಘೋಷಿಸಿದರು.

ಸರ್ವಾನ ದೃಷ್ಟಿಕೋನ

ಸಂವಿಧಾನಾತ್ಮಕ ರೀತಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ದೊರಕಿಸಬೇಕು ಎಂದು ಗೋಖಲೆ ಬಯಸಿದರು. ಇದಕ್ಕಾಗಿ ಜನರು ವಿದ್ಯಾವಂತರಾಗಬೇಕಾದುದು ಅವಶ್ಯ ಎಂದು ಗೋಖಲೆ ಪ್ರತಿಪಾದಿಸಿದರು. ದೇಶದ ಹಿತದೃಷ್ಟಿಯಿಂದ ಹಿಂಸೆಯನ್ನು ಎಲ್ಲಿಯೂ ಜಳಕ ಬಾರದು ಎಂದು ಗೋಖಲೆ ಸಾರಿದರು. ಈ ವಿಷಯದಲ್ಲಿ ಗಾಂಧೀಜಿ ಮತ್ತು ಗೋಖಲೆಯವರ ಪಡುವೆ ಸ್ಪಷ್ಟ ಸಮಾನ ದೃಷ್ಟಿ ಕೋನ ಎದ್ದು ಕಾಣುತ್ತಿತ್ತು. ಆ ಕಾಲದ ಮುಂದಾಳುಗಳ ಪೈಕಿ ಗೋಖಲೆಯವರು ಪ್ರತಿಪಾದಿಸಿದ ಸಂವಿಧಾನಾತ್ಮಕ ಚಳುವಳಿ ಹೆಚ್ಚು ವ್ಯಾಪಕ ಅರ್ಥದಿಂದ ಕೂಡಿತ್ತು. 1907ರಲ್ಲಿ ಮುಂಬೈಯಲ್ಲಿ ಮಾತನಾಡುತ್ತಾ ಗೋಖಲೆಯವರು, ಗಾಂಧೀಜಿಯವರು ಟ್ರಾನ್ಸ್‌ವಾಲ್ [ಆಫ್ರಿಕಾ]ದಲ್ಲಿ ನಡೆಸಿದ ಅಹಿಂಸಾತ್ಮಕ ಚಳುವಳಿಯಲ್ಲಿ ಭಾಗವಹಿಸಿದ ಬಗ್ಗೆ ಅಭಿಮಾನದ ರಂಗಿತ ಎಂದು ಸಾರಿದರು, ಗೋಖಲೆಯವರಿಗೆ ಮಹಾತ್ಮಾ ಗಾಂಧೀಜಿಯವರ ಬಗ್ಗೆ ಅಪಾರ ಗೌರವ ವಿತ್ತು. ಮಹಾತ್ಮಾ ಗಾಂಧೀಜಿಯವರಲ್ಲಿ ಭಾರತೀಯ ರಾಷ್ಟ್ರೀಯತ್ವದ ಜೀವನ ಸೀಮೆಯನ್ನು ಗೋಖಲೆ ಗುರುತಿಸಿದ್ದರು.

ದಕ್ಷಿಣ ಆಫ್ರಿಕೆಯಲ್ಲಿ

ವಿದೇಶಗಳಲ್ಲಿನ ಭಾರತೀಯ ಸಂಜಾತರ ಕಷ್ಟಕಾರ್ಪಣ್ಯಗಳ ಬಗ್ಗೆ ಗೋಖಲೆಯವರ ಸತತ ಪ್ರಯತ್ನದ ಫಲವಾಗಿ ನಾತಾಳ, ಫಿಜಿ, ಜಮೈಕಾ, ಟ್ರಿನಿಡಾಡ ಮತ್ತು ಗಯಾನಾಗಳಲ್ಲಿ ಭಾರತೀಯರಿಗೆ ವಿರುದ್ಧವಾಗಿದ್ದ ಅನೇಕ ಕಾನೂನುಗಳು ಹಿಂತೆಗೆದು ಕೊಳ್ಳಲ್ಪಟ್ಟವು. ಗಾಂಧೀಜಿಯವರ ಆಗ್ರಹದ ಮೇರೆಗೆ ಗೋಖಲೆಯವರು 1912ರಲ್ಲಿ ದಕ್ಷಿಣ ಆಫ್ರಿಕೆಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡರು. 1912 ಡಿಸೆಂಬರ್ ತಿಂಗಳಲ್ಲಿ ಮುಂಬೈಯಲ್ಲಿ ಮಾತನಾಡುತ್ತ, "ದಕ್ಷಿಣ ಮತ್ತು ಪೂರ್ವ ಆಫ್ರಿಕೆಯನ್ನು ಸುತ್ತಿ ಬಂದೆ. ಈ ಸುತ್ತಾಟದಲ್ಲಿ ನನ್ನ ಕಾರ್ಯಾಧಿಕ್ಯವಂತೆ ಗಾಂಧೀಜಿ ಕೆಲಸ ಮಾಡಿದರು. ಆದರೆ ನಿಜವಾಗಿ ಹೇಳಬೇಕೆಂದರೆ, ಅವರು ನನಗೆ ಮಾರ್ಗದರ್ಶಕರಾಗಿದ್ದರು, ಗೆಳೆಯರಾಗಿದ್ದರು. ಅಷ್ಟೇ ಅಲ್ಲ ಆಧ್ಯಾತ್ಮ ಬೋಧಕರಾಗಿದ್ದರು" ಎಂದು ನುಡಿದರು ಆಫ್ರಿಕೆಯಲ್ಲಿ ಗೋಖಲೆಯವರನ್ನು ಸನ್ಮಾನಿಸಿ ಮಾಡಿಕೊಡುತ್ತ ಗಾಂಧೀಜಿ, "ಇವರು ನನ್ನ ರಾಜಕೀಯ ಗುರು" ಎಂದು ಘೋಷಿಸಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಗೋಖಲೆಯವರು ಸಾರ್ವಜನಿಕರಿಗೆ ಮನವಿ ಮಾಡಿ ಆ ಕಾಲಕ್ಕೆ ಒಂದೂವರೆ ಲಕ್ಷ ರೂ. ಗಳ ಹಂಚಿಗೆ ಕಾಡಿಸಿ ಗಾಂಧೀಜಿಗೆ ಕಳುಹಿಸಿಕೊಟ್ಟರು. ಗಾಂಧೀಜಿ ದಕ್ಷಿಣ ಆಫ್ರಿಕೆಯಲ್ಲಿ ಸತ್ಯಾಗ್ರಹ ಮುಂದುವರಿಸಿ ಜಯಶೀಲರಾಗಿ ತಾಯ್ನಾಡಿಗೆ ಮರಳಿದರು.

ತರಬೇತಿ ಹೊಂದಿದ ಜನರು ಸಾರ್ವಜನಿಕ ಪ್ರಶ್ನೆಗಳನ್ನು ನೋಡಿಕೊಳ್ಳುವ ಕಾಲವನ್ನು ಹಿತವಾಗಿದೆ ಎಂದು 1904ರಲ್ಲಿಯೇ ಗೋಖಲೆ ವ್ಯಕ್ತಪಡಿಸಿದರು. ಭಾರತ ಸೇವಕ ಸಮಾಜವನ್ನು ಪ್ರಾರಂಭಿಸಿದ ಕೀರ್ತಿ ಗೋಖಲೆಯವರಿಗೇ ಸಲ್ಲುತ್ತದೆ. ಈ ಸಮಾಜದ ಸದಸ್ಯರು ಜಡತನವನ್ನು ಅವಲಂಬಿಸಿ, ಎಲ್ಲ ಭಾರತೀಯರನ್ನು ಸಮಾನ ದೃಷ್ಟಿಯಿಂದ ಕಂಡು, ರಾಷ್ಟ್ರೀಯ ಕೆಲಸವನ್ನು ಕೈಕೊಳ್ಳಬೇಕು ಎಂದು ಗೋಖಲೆ ಘೋಷಿಸಿದರು. ನಿಮ್ಮ ವರ್ಗದ ಉನ್ನತಿಗೆ, ಅವರ ಶಿಕ್ಷಣಕ್ಕೆ ಹೆಚ್ಚಾಗಿ ಗಮನ ಕೊಡಬೇಕು ಎಂದು ಗೋಖಲೆ ಯತ್ನಿಸಿದರು. ಈ ದೃಷ್ಟಿಯಲ್ಲಿ ಗೋಖಲೆ—ಗಾಂಧೀಜಿಯವರಲ್ಲಿ ಒಂದೇ ದೃಷ್ಟಿಕೋನವಿತ್ತು ಎಂಬುದು ಯೋಗಿಗೂ ತಿಳಿಯುವ ವಿಷಯ.

ಜನತೆಯ ಕಷ್ಟ ನಿವಾರಣೆಗೆ

ದೇಶದ ಸ್ವಾತಂತ್ರ್ಯಕ್ಕಾಗಿ ಗೋಖಲೆಯವರು ಎಷ್ಟು ಪರಿತಪಿಸಿದರೋ, ದೇಶದ ಜನಸಮುದಾಯದ ಏಳ್ಗೆಗೂ ಅವರು ಅಷ್ಟೇ ಪರಿತಪಿಸಿದರು. 1902ರಲ್ಲಿ ಸುಪ್ರೀಮ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಪ್ರಥಮ ಬಾರಿಗೆ ಮಾತನಾಡುತ್ತ, ಗೋಖಲೆಯವರು "ಭಾರತದಲ್ಲಿ ಜಡತನ ಬೇರು ಬಿಡುತ್ತಿದೆ. ಬೇಸಾಯ ಹಾಳಾಗುತ್ತಿದೆ. ಉಪ್ಪಿನ ಕರಭಾರ ನಿಲ್ಲಬೇಕು. ಶಿಕ್ಷಣಕ್ಕೆ ಪ್ರಾಶಸ್ತ್ಯವಿರಬೇಕು.." ಎಂದು ಮನಮಿಡಿಯುವಂತೆ ಉತ್ತಾಯಿಸಿದರು. 1906ರಲ್ಲಿ ಗೋಖಲೆಯವರು ಹೆಚ್ಚು ನೀರಾವರಿ ಯೋಜನೆಗಳು, ಬೇಸಾಯಗಾರರಿಗೆ ಸುಲಭದ ವಸ್ತು, ಗ್ರಾಮ ಸ್ವೈಚ್ಛೆಯ, ತಾಂತ್ರಿಕ ಶಿಕ್ಷಣ- ಈ ಎಲ್ಲ ವಿಷಯಗಳನ್ನು ಅಧಿಕಾರಯುಕ್ತವಾಣಿಯಿಂದ ಪ್ರತಿಪಾದಿಸಿದರು. ಸ್ವಾತಂತ್ರ್ಯ ಮತ್ತು ಸಮೃದ್ಧಿ ಒಟ್ಟಿಗೇ ಹೋಗುವ ವಿಷಯಗಳು ಎಂದು ಗೋಖಲೆ ಸಾರಿದರು. ಗೋಖಲೆಯವರ ಈ ವಿಚಾರ ಸರಣಿ ಗಾಂಧೀಜಿ ಗೋಖಲೆಯವರಿಗೆ ತಾಳುವಂತೆ ಮಾಡಿತು. ಅವರಿಬ್ಬರಲ್ಲಿ ಮತಭೇದವಿಲ್ಲವೆಂದಲ್ಲ, ಆದರೆ ಮತಭೇದ ಅವರಿಬ್ಬರಿಗೂ ಗೌಣ ವಿಷಯವಾಗಿತ್ತು. "ಸಾರ್ವಜನಿಕ ಜೀವನ ಆಧ್ಯಾತ್ಮವಾಗಿರಬೇಕು" ಎಂಬ ಗೋಖಲೆಯವರ ಭಾರತ ಸೇವಕ ಸಮಾಜದ ಘೋಷಣೆಯ ಉಕ್ತಿಯನ್ನು ಗಾಂಧೀಜಿ ಮುಕ್ತಕಂಠದಿಂದ ಒಪ್ಪಿದರು. ಗೋಖಲೆಯವರು ಬದುಕಿದ್ದಿದ್ದರೆ ಅವರ ಜತೆ ನಾವು ಕೆಲಸ ಮಾಡಲು ಸಿದ್ಧನಿರುತ್ತಿದ್ದೆ ಎಂದು ಗಾಂಧೀಜಿ 1921ರಲ್ಲಿ ಹೇಳಿದರು. ಈ ಮಾತಿನ ಇತ್ಯರ್ಥ ಮಾಡಲು ಸಾಧ್ಯವಿಲ್ಲ. ಆದರೆ ಇಷ್ಟು ಮಾತ್ರ ನಿಜ—ಗೋಖಲೆಯವರು ಇನ್ನಷ್ಟು ದಿನ ಬದುಕಿದ್ದಿದ್ದರೆ ಗೋಖಲೆ ಗಾಂಧೀಜಿ ಕೂಡಿಯೇ ದೇಶದ ಮುಂದಾಳುತನವಹಿಸುತ್ತಿದ್ದರು. ಆಗ ಬಹುಶಃ ಸತ್ಯಾಗ್ರಹದ ಚಳುವಳಿ ಬೇರೆ ರೂಪ ಧರಿಸುತ್ತಿತ್ತೋ ಏನೋ!

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಆತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ದಯವಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಫೋನ್ : 526

1921 ಸ್ಥಾಪನೆ

ಸಂಪುಟ ೪೯
ಸಂಚಿಕೆ ೧೪
VOL: 49
No. 14

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೪—೧೨—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಶ್ರೀಸಾಮಾನ್ಯನಿಗೆ ವಂಚನೆ

ಸುಬ್ರಹ್ಮಣ್ಯಂ ಕಾಂಗ್ರೆಸ್ ಮತ್ತು ನಿಜಲಿಂಗಪ್ಪ ಕಾಂಗ್ರೆಸ್ ಎಂಬಿರಡು ಹೋಳುಗಳನ್ನು ಇಂಡಿಕೇಟ್ ಮತ್ತು ಸಿಂಡಿಕೇಟ್ ಎಂದು ಕರೆಯಬಹುದಾದರೂ ಇಡೀ ಇಂದಿರಾ ಕಾಂಗ್ರೆಸ್ ಮತ್ತು ಮುರಾರ್ಜಿ ಕಾಂಗ್ರೆಸ್ ಎಂದು ಹಲವರ ಅಭಿಪ್ರಾಯ. ಇದನ್ನು ಇಬ್ಬಣದವರೂ ಒಪ್ಪುವುದಿಲ್ಲ. ವ್ಯಕ್ತಿಗತ ನೆಲೆಯಲ್ಲಿ ಈ ಹೋಳಾಗಿಲ್ಲ; ಪ್ರತಿನಿಧಿಕ ನಿಲುವುಮಯಿಂದಾಗಿಯೇ ಆದುದು ಎಂದು ಇಂದಿರಾ ಗಾಂಧಿ ಮತ್ತವರ ಅನುಯಾಯಿಗಳು ಮುಕ್ತಕಂಠದಿಂದ ಘೋಷಿಸುತ್ತಾರೆ. ಆದರೂ ಇಬ್ಬಣಗಳೂ ಕಾಂಗ್ರೆಸ್ಸಿನ ಪ್ರಣಾಳಿಕೆಯಲ್ಲಿ ತಮ್ಮ ಅಚಲ ವಿಶ್ವಾಸವನ್ನು ವ್ಯಕ್ತಪಡಿಸಿರುವಾಗ ಭಿನ್ನಾಭಿಪ್ರಾಯಕ್ಕೆ ಕಾರಣವಾದ ನೀತಿ-ನಿಲುವು ಯಾವುದು ಎಂದು ಶ್ರೀಸಾಮಾನ್ಯ ತಲೆಕುಮಿಕೊಳ್ಳಲೇಬೇಕು. ಕಾಂಗ್ರೆಸಿನ ಇಬ್ಬಣಗಳು ಪ್ರಜಾಸಮಷ್ಟಿವಾದಿ, ಸೋಶಿಯಲಿಸ್ಟ್, ಜಾತ್ಯತೀತ ಕ್ರಾಂತಿದಳ, ಎಸ್. ಎಸ್. ಪಿ., ಲೋಕ ಕ್ರಾಂತಿಕ ಪಕ್ಷ, ಬಂಗ್ಲಾ ಕಾಂಗ್ರೆಸ್ ಹೀಗೆ ಭಾರತದಲ್ಲಿ ಹುಟ್ಟಿನ ಪಕ್ಷಗಳೆಲ್ಲವೂ ಸಮಾಜವಾದದ ಜಪವನ್ನೇ ಹಾಡುತ್ತ ಬಂದಿವೆ; ಬರುವ ಉಗ್ರಡಣಿಯನ್ನೂ ಮೂಡುತ್ತಿವೆ. ಆದರೆ, ಇವೆಲ್ಲವೂ ಗ.ರಿ ಸಾಧಿಸಲು ಅದಾವ ವ್ಯತಿರಿಕ್ತ ದಾರಿಯನ್ನು ಹೊಂದಿನೆಯೋ ಆಹೂ ಪಕ್ಷೀಯರೀನೇ ಟೀಕಾಣಿಯಿದ್ದಂತಿಲ್ಲ. ಇಲ್ಲವಾದರೆ, ಅಸೆಲ್ಲವೂ ಒಂದಾಗಿ ಪ್ರಬಲವಾದ ಸಮಾಜವಾದಿ ಧ್ಯೇಯದ ಪಕ್ಷವೆನಿಸುವುದಿಲ್ಲವೆ?

ಪಕ್ಷವನ್ನು ಉಳ್ಳವರಿಟ್ಟುಕೊಂಡ ಕಾಂಗ್ರೆಸ್ಸು ರಾಜ್ಯ ರಾಜ್ಯಗಳಲ್ಲಿಯೂ ತಂತಮ್ಮ ಬಣಗಳನ್ನು ಬಿಟ್ಟುಕೊಳ್ಳುವ ತವಕದಲ್ಲಿದೆ. ಸಿಂಡಿಕೇಟ್ ಬೆಂಬಲದ ವಿಧಾನಸಭಾ ಕಾಂಗ್ರೆಸ್ಸನ್ನು ಇಂಡಿಕೇಟ್ ಗುಂಪು ರದ್ದುಮಾಡಿ ಆಡಳಿತ ಹಾರ್ ಸಮಿತಿಯನ್ನು ನೇಮಿಸುತ್ತ ಬಂದು ಚೆಂಡನ್ನು ಅತ್ತ ಎಸೆಯಿತು. ಬೆಂತು ತಮ್ಮ ಪಕ್ಕಕ್ಕೆ ಬಂದು ಬಿದ್ದಾಗ, ಸಿಂಡಿಕೇಟ್ ಸುಮ್ಮನಿರುವುದು ಸಾಧ್ಯವೆ? ಅದೂ ಇಂದಿಕೇಟ್ ಬೆಂಬಲದ ರಾಜ್ಯ ಕಾಂಗ್ರೆಸ್‌ಗಳನ್ನು ಅವಜ್ಞತ್ತುಗೊಳಿಸಿ ತನ್ನ ಸಾಮರ್ಥ್ಯವನ್ನು ತೋರಿಸಿಕೊಟ್ಟಿತು. ಈ ಆಟ ಇಲ್ಲಿಗೇ ಮುಕ್ತಾಯಗೊಳ್ಳುವುದಿಲ್ಲ. ಪ್ರತಿ ರಾಜ್ಯ ರಾಜ್ಯದಲ್ಲೂ ಸಿಂಡಿಕೇಟ್ — ಇಂಡಿಕೇಟ್ ಕಾಂಗ್ರೆಸ್ ರಚಿತವಾಗುವವರೆಗೂ ಮುಂದುವರಿಯುವುದು. ರಾಜ್ಯ ರಾಜ್ಯದಲ್ಲೂ ಒಂದೊಂದು ನಮೂನೆ ಕಾಂಗ್ರೆಸ್ಸು ಉದಯವಾದ ಮೇಲೆ, ಅಸ್ತಿ-ವಾಸ್ತಿಗಳ ಹಂಚಿಕೆಗಾಗಿ ಪ್ರಯತ್ನ ಅನಿವಾರ್ಯ. ಬಿಹಾರದಲ್ಲಿ ಈ ವಿವಾದವು ಹೈಕೋರ್ಟಿನಲ್ಲಿದೆ. ಮೈಸೂರಲ್ಲೂ ಏನೋ; ಉಳಿದೆಡೆ ಕಾಲಕ್ರಮದಲ್ಲಿ ಏರಬೇಕಷ್ಟೆ. ಜಂತರ್ ಮಂತರ್ ಆಣತ್ತೋಲಯವನ್ನು ತಮ್ಮ ಕಾಂಗ್ರೆಸ್ಸು ವಶಪಡಿಸಿಕೊಳ್ಳುವುದಿಲ್ಲವೆಂದು ಸಿ. ಸು. ಹೇಳಿದ್ದಾರಾದರೂ ಅವರ ಪರ ಕೈಯೆತ್ತುವವರು ಕೆಲವುಕೊಳ್ಳಲೇಕೆ ತರಾತುರಿ ತೋರಿಸುತ್ತಾರೆಯೋ ತಿಳಿದುದು. ಅಂತೂ ಸಂಸಾರ ವಿಭಜನೆ ಅನಿವಾರ್ಯವಾದಂತೆಯೇ ಅಲ್ಲಿ ವಾದ—ವಿವಾದಗಳೆದ್ದಂತೆಯೇ ಅವು ನ್ಯಾಯೂಲಯಗಳ ಮೆಟ್ಟಿಲೇರುವಂತೆಯೇ ರಾಷ್ಟ್ರೀಯ ಪಕ್ಷವೊಂದರ ಇತಿಶ್ರೀ ಆಯಿತು ಎಂಬುದು ಸಕ್ಕತ್ತಾಗಿ ಹತ್ತಿರಿಸಿದ ಮಾತು.

ಪಕ್ಷೀಯ ತಳಹದಿಯಲ್ಲಿ ಹಡೆಯುವ ನಮ್ಮ ಆಡಳಿತ ಪದ್ಧತಿಯಲ್ಲೂ ಹೊಸ ಬಿರುಕು ಕಾಣಿಸಿಕೊಂಡಿದೆ. ಉತ್ತರ ಪ್ರದೇಶದ ಗುಪ್ತ ಸರಕಾರವನ್ನು ಉರುಳಿಸಿ ತಮ್ಮ ಬೆಂಬಲಿಗರನ್ನು ಗದ್ದುಗೆಗೇರಿಸಲು ಇಂದಿರಾ ಗಾಂಧಿ ತೀವ್ರ ಉತ್ಸಾಹ ತೋರಿಸುತಿದ್ದಾರೆ. ಸಿಂಡಿಕೇಟಿಗೆ ಅಧಿಕ ಬೆಂಬಲವಿರುವ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವನ್ನು ಇಂಡಿಕೇಟ್ ಗುಂಪೂ ಇಂಡಿಕೇಟ್ ಬೆಂಬಲಿಗರ ಕಾಂಗ್ರೆಸ್ ಸರಕಾರವನ್ನು ಸಿಂಡಿಕೇಟ್ ಗುಂಪೂ ಉರುಳಿಸುವುದು ಅಧಿಕಾರ್ಹವಾಗುತ್ತದೆ. ಶ್ರೀ ಸಾಮಾನ್ಯನ ಒಳಿತಾಗಿ, ಸಮಾಜವಾದದ ಹೆಸರಿನಲ್ಲಿ ಇದು ಅವಶ್ಯಕ ಕ್ರಮ. ಪ್ರಜಾಸತ್ತೆ ತಾನು ಸತ್ತೆನೆಂದು ಹೇಳಬೇಕಾದರೆ, ಇಂತಹ ಕ್ರಮ ಜರೂರೇ ಸರಿ. ಸಿ. ಸು. ಮತ್ತು ಎಸ್ಸೆನ್ನಾರವರೂ ಅವರ ಕಾರ್ಯಾಲಯದ ಸಿಬ್ಬಂದಿಗೂ ತಾವೊಲ್ಲದವರನ್ನು ಹೊರದೂಡುವ ಹಮಗೆ ಬೇಕಾದವರನ್ನು ಪದ್ದುಗೆಗೇರಿಸುವ ಕೆಲಸ ಗದ್ದುಗೇಜಿಲ್ಲರುವವರು ತಮ್ಮ ಪದ್ದುಗೆಯಿಂದ ಕೆಳಗಿಳಿಯುವ ಅಧಿಕಾರ ನಿವಾಗಿಲ್ಲವೆಂದು ಹೇಳಿಕೆ ಕೊಡಿಸಿ ತೃಪ್ತರಾಗುತ್ತಾರೆ. ಹಳೆಯ ಗದ್ದುಗೆ ಸಿಸಬಾಕ್ಕು, ಹೊಸತೊಂದು ಎಂಥ ತಮಂಗ; ಅಲ್ಲಿಂದ ಮತ್ತೆ ಮುಯ್ಯಿಗೆ ಮುಯ್ಯ ಕಾರ್ಯಾಚರಣೆ. ಈ ಕಿಂಡಿಯಲಿರುವ ಎರಡೂ ಎಂಜಿನ್ ಪೂರ್ವಾಧಿವೇಶನದಲ್ಲಿ ತಂತಮ್ಮ ಬಣಬಲವನ್ನು ಮುಂದಿನ ಬಗ್ಗೆ ಚಿಂತಿಸದಿದ್ದರೂ ಅದುವರೆಗೆ ಸೇಡು ತೀರಿಸಿಕೊಂಡಿಡಲು ಕ್ರಮವನ್ನು ಅನುಸರಿಸಿಯೇ ಬಿಡುತ್ತವೆ.

ಪಕ್ಷದ ಈ ಜೂಜಾಟದಲ್ಲಿ ಸರಕಾರದ ಅಧ್ವರ್ಯುಗಳೂ ಫಿರಕಿಯಾಗಿದ್ದಾರೆ. ಅವರ ಕೃಪಾಪ್ತಿಗಾಗಿ ಕಾನೇ ಇದೆಲ್ಲಾ ಹಾರಾಟ! ಹಾಗಾಗಿ ಜನತಾ ಸರಕಾರ ಜನ ಹತ್ಯೆಯನ್ನು ಸೂತ್ರ ಮೊಡಬಹುದು; ಜನತಾ ಪ್ರತಿನಿಧಿಗಳು ಗುಲ್ಲು ಎಬ್ಬಿಸ ಬಹುದು. ಪ್ರಧಾನಿ ಇಂದಿರಾ ಗಾಂಧಿಯವರು ತಮಗೆ ಸೋಲು ತರುವಂತಹ ಯಾವ ಕ್ರಮವನ್ನೂ ಕೈಕೊಳ್ಳುವುದಿಲ್ಲ. ಸ್ಥಾನ ಬದ್ಧತೆಯ ಶಾಸನಕ್ಕೆ ಮತ್ತೆ ಜೀವದಾನ ಮಾಡುವ ಇಂಗಿತ ಅವರಿಗಿತ್ತು; ಪ್ರಸಕ್ತ ಲೋಕಸಭಾಧಿವೇಶನದ ಕಾರ್ಯ ಕಲಾಪಗಳಲ್ಲಿ ಅದಾ ಸೇರಿತ್ತು. ಇದರಿಂದ ತನ್ನ ಸರಕಾರ ಉರುಳುವುದು ಕಂಡಿತವೆಂದು ಆಕೆಗೆ ಪುನರವರಿಕೆಯಾಯಿತು; ಈಗ ಇಂದಿರಾಗಾಂಧಿ ತನ್ನ ಅತ್ಯಾಪ್ತರಿಗೆ ವಿರೋಧವಾಗಿ ಈ ಕಲಾಪವನ್ನು ಮುಂದೆ ತಾರದಿರಲು ನಿರ್ಧರಿಸಿದ್ದಾರೆ. ಇದಕ್ಕೆ ಅಧಿಕಾರದ ಮೋಹವಾಗಲೀ, ಜನುಮತದ ಆಧಾನವಾಗಲೀ ಕಾರಣವೆಂದು ಅವರು ಹೇಳಬಾರದು; ಎಲ್ಲವೂ ಶ್ರೀ ಸಾಮಾನ್ಯನ ಕಲ್ಯಾಣಕ್ಕಾಗಿ; ಜನುಮತದ ಬಲವಿಲ್ಲದ್ದರಿಂದಾಗಿ.

ಇಂದಿರಾಗಾಂಧಿಯವರು ಎಡ—ಬಲ ಕಮ್ಯುನಿಷ್ಟರನ್ನು ದ್ರಾವಿಡ ಮುನ್ನೇತ್ರ ಕಳ್ಳಗಂರನ್ನೂ ಭಾರತೀಯ ಕ್ರಾಂತಿ ನಳಾದಿಗಳನ್ನೂ ಅರಂಭದಲ್ಲಿ "ಪ್ರಗತಿ ಸಾಧನೆ"ಯಲ್ಲಿ ತಮ್ಮ ಬೆಂಬಲಕ್ಕಾಗಿ ನಂಬಿದ್ದರು; ಮುಂದೆಯೂ ನಂಬುತ್ತ ಬರಬಹುದು. ಆದರೆ, "ಪ್ರಗತಿ" ಎನ್ನುವುದು ಕಾಗದ ಪತ್ರಗಳಲ್ಲಿ ನಾಲಿಗೆಯು ತುದಿಯಲ್ಲಿ ಮಾತ್ರ ರಾರಾಜಿಸುವ ಪದವೆಂಬಾದು ಅವರಿಗೂ ಅನುಭವಕ್ಕೆ ಬಂದಿದ್ದವರಿಗೂ ಅರಿವಿಗೆ ಗೊತ್ತು. ಫಿಜವಾಗಿ ಗಾಂಧಿಯವರು ಪ್ರಗತಿಶೀಲರಾದರೆ, ಸಿಂಡಿಕೇಟ್ ಕಾಂಗ್ರೆಸ್ಸಿಗೆ ಇತರ ಎಡಪಕ್ಷಗಳೂ ಬಯಸಿದ ರಾಜಧಕ್ಷ ರದ್ದತಿಯ ಬಗ್ಗೆ ಶ್ರೀಮತಿ ತೀರ್ಮಾನವೇಕೆ ಕೈಕೊಳ್ಳುವುದಿಲ್ಲ? ಫಿಂದಾಬಂದ ಕಾಂಗ್ರೆಸ್ ಅಧಿವೇಶನದಿಂದಲೂ ಇದು ಜೀವಂತವಿರುವ ಪ್ರಶ್ನೆ. ಜ್ಯಾಂಕಿರ್ ರಾಷ್ಟ್ರಪತಿಗಳಾಗಿರುವಂತಹ ರಾಜಧನ ರದ್ದತಿಯನ್ನು ಮೊದಲೇ ಕೈಕೊಂಡಿದ್ದರೆ, ಸಮಾಜವಾದದ ಬಗೆಗೆ ದೊಡ್ಡ ಸಾಧನೆಯಾಗುತಿತ್ತು. ಆಗ ಸಿಂಡಿಕೇಟ್ ತಕ್ಕ ಕೈಯೆಳೆಯುತಿತ್ತು ಎನ್ನುವ ಇಂದಿರಾ ಗಾಂಧಿ ತನ್ನ ಕೋರಿಕೆಯು ಎಐಸಿಸಿಯಲ್ಲಿ ಈ ಸಂಬಂಧ ಆಚರಿಸಿದ ನಿರ್ಣಯ ಮಾಡಿ ಪಾರ್ಲಿಮೆಂಟಿನಲ್ಲಿ ಶಾಸನ ಇಷ್ಟರಲ್ಲೇ ಮಂಡಿಸಬಹುದಿತ್ತು. ಆರ್ಥಿಕ ನೀತಿ-ನಿಯಮಾವಳಿಯನ್ನು ಘೋಷಿಸಿದೆ ಸಮಾಜವಾದ ವತ್ತು ಪ್ರಗತಿ ಪದಗಳನ್ನೇ ಪುನರ್ಪರಣೆ ಮಾಡಿ ಕುಳಿತರು ಫಲವು ಪ್ರತಿಗಾಮಿತನ; ಅಂಜುರುಳಿತನ. ಕಾಂಗ್ರೆಸ್ ಸಂಸ್ಥೆ ತನ್ನ ಕಪಿ ಮುಷ್ಟಿಯಲ್ಲೇ ಬರಬೇಕು; ಸಂಸ್ಥೆಗಿಂತ ಪಾರ್ಲಿಮೆಂಟರಿ ಪಕ್ಷವೇ ಮೇಲು ಎಂಬ ತನ್ನ ಅತ್ಯಸಾಧ್ಯವು ವಾದವನ್ನು ಸಮರ್ಥಿಸುವುದಕ್ಕಾಗಿಯೇ ಇಂದಿರಾ ಗಾಂಧಿ ಕಾಂಗ್ರೆಸ್ ಹಾಲಿಪಲ್ಲಿ ಳುಣಿಸೆ ಹಣ್ಣು ಕೊಳೆ ಬರು. ಎಂದರೆ, ತಪ್ಪೇನಿದೆ?

ಶ್ರೀ ಸಾಮಾನ್ಯನು ಶ್ರೀಮತೀಜಿಯವರು ಊಹಿಸಿರುವಷ್ಟು ಅಜ್ಞನಲ್ಲ. ಕುರಿತೋಗದಿದ್ದರೂ ಅತ ಪಣತಪತಿ. ಇಂದಿರಾ ಇಂತಿತ ಆಳ್ವಿಗೆಗೂ ಸರಿಹೊಗಿ ಗೊತ್ತು. ಭವಿಷ್ಯವಾಣಿಯೊಬ್ಬರು ಹೇಳಿದಂತೆ ಮುಂದಿನ ವರ್ಷವೇ ಮಧ್ಯಾವಧಿ ಚುನಾವಣೆಗಳು ನಡೆದು, ಆಗ, ಇಂದಿರಾ ಗಾಂಧಿಗೂ ಅವನು ಪಾರ ಹೇಳಿ ಕೊಟ್ಟೇ ತೀರುತ್ತಾನೆ. ಸಳೆ ಬಾಟಲಿಯು ಹಳೆ ಔಷಧಿ ಸಾಕು ಎನ್ನುತ್ತಾನೆ.

ವಿದ್ಯಾರ್ಥಿ ಪ್ರದರ್ಶನ

"ವಿಶ್ವದ ಬೇರೆ ಬೇರೆ ಭಾಗದಲ್ಲಿನ ವಿದ್ಯಾರ್ಥಿಗಳು ತಮ್ಮ ದೇಶದಲ್ಲಿನ ಸಾಮಾಜಿಕ ಅನ್ಯಾಯ, ಹಾನಿಕಾರಕ ಯುದ್ಧಗಳು, ಪಾರ್ಶ್ವಕ್ರಮದ ಶಸ್ತ್ರಸಜ್ಜೆಗಳು ಮೊದಲಾದುವುಗಳ ಬಗ್ಗೆ ಪ್ರದರ್ಶನ ನಡೆಸುತ್ತಿರುವಾಗ, ನಮ್ಮ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಸುಲಭದಲ್ಲಿ ಡಿಗ್ರಿಗಳಿಸಿ ಹೊಂದಲು, ಪಾಶ್ಚಕ್ರಮದ ಮಟ್ಟ ಇಳಿಸಲು ಅಥವಾ ಸಿಥವಾ ಇಲ್ಲವೇ ಸಾರಿಗೆ ಬಸ್ಸುಗಳಲ್ಲಿ ಬಿಟ್ಟಿ ಪ್ರಯಾಣಕ್ಕಾಗಿಯಷ್ಟೇ ಪ್ರದರ್ಶನ ನಡೆಸುತ್ತಿರುವುದು ಶೋಚನೀಯ" —ಇದು ಜೋಧಪುರ ವಿಶ್ವವಿದ್ಯಾಲಯದ ಉಪ ಕುಲಪತಿ ಶ್ರೀ ವಿ. ವಿ. ಜಾನ್ ರವರ ಅಭಿಪ್ರಾಯ. ಇಂದಿನ ವಿದ್ಯಾರ್ಥಿಗಳ ವರ್ತನೆಯನ್ನು ನೋಡುವಾಗ ಇದನ್ನು ಅನುಮೋದಿಸಲೇ ಬೇಕಾಗುತ್ತದೆ. ವಿದ್ಯಾರ್ಥಿ ಸಮಾಜದಲ್ಲಿ ಇಂತಹ ಪ್ರವೃತ್ತಿ ಹಲವು ಕಾಲದಿಂದ ಕಂಡು ಬರುತ್ತಲೇ ಇರುವುದಾದರೂ ಇದನ್ನು ಎದುರಿಸುವಲ್ಲಿ ವಿಶ್ವವಿದ್ಯಾಲಯಗಳೂ ಸರಕಾರವೂ ಯಾವುದೇ ಕ್ರಮ ಕೈಕೊಂಡಿಲ್ಲ ಪ್ರಗತಿಗಾಮಿಗಳೂ ಈ ದಿಸೆಯನ್ನುಲ್ಲಿ ಪ್ರತಿಗಾಮಿಗಳಾಗಿಯೇ ಉಳಿದಿದ್ದಾರೆ. "ಬೆಕ್ಕಿನ ಕುತ್ತಿಗೆಗೆ ಗಂಟೆ ಕಟ್ಟಲು ಇನ್ನೇನಾ ಹೊರಲಾರೆನೆಂದು ಮರಿ ಇಲಿ ಉಚ್ಚೈಸಿದರೆಶ ಧಾನ್ ಎಂದು ಇತರ ಇಲಿಗಳು ನೆಚ್ಚಿಕೊಳ್ಳುವುದಿಲ್ಲ. ಆದರೆ, ತಾಯಿ ಇಲಿ ತಡೆಯದಿದ್ದೀತೆ?

ನವಯುಗಕ್ಕೆ
ಚಂದಾದಾರರಾಗಿ ಪ್ರೋತ್ಸಾಹಿಸಿ
ವಾರ್ಷಿಕ ಚಂದಾ ರೂ. ೧೦.

ಡೊಂಬರಾಟದ ಬಯಲು — ನವದೆಹಲಿ

ಕೋರಿಕೆಯು ಎಐಸಿಸಿ ಅಧಿವೇಶನದ ದಿನದಲ್ಲಿ ನಡೆಯಿತು. ಶ್ರೀ ಸಿ. ಸುಬ್ರಹ್ಮಣ್ಯಂರವ್ಗೆ ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರೆಂದು ಅಯ್ಕೆಮಾಡಿದ್ದು ಶ್ರೀ ನಿಜಲಿಂಗಪ್ಪ ವ.ತ್ಯವರ ಸಿಂಡಿಕೇಟನ್ನು ವಾಜಾಬ ಗೊಜರವಾಗಿ ಅಂದುಕೊಂಡದ್ದು, ಇಂಡಿಕೇಟ್ ನಾಯಕರು ತಮ್ಮ ಗಾದ ಸ್ಥಾನಚ್ಯುತಿಗಾಗಿ ಕರುಬಿ ಕಣ್ಣೀರು ಬಿಟ್ಟದ್ದು, ಮುಂದಿನ ಅಧ್ಯಕ್ಷರ ಆಯ್ಕೆ ಮತ್ತಿತರ ಸಂಗತಿಗಳ ಬಗ್ಗೆ ನಿರ್ಣಯಿಸಲು ದಶಂಬರ ಕೊನೆಯಲ್ಲಿ ಮುಂಬಯಿಯಲ್ಲಿ ಸಂಪೂರ್ಣ ಎಐಸಿಸಿ ಸಭೆ ಶರವಂಬಲು ನಿರ್ಧರಿಸಿದ್ದು — ಇವನ್ನೆ ಬಿಟ್ಟರೆ ಅದು ಮಹತ್ವವುದರ ಗೋಜಿಗೂ ಹೋಗಲಿಲ್ಲ. ಅವಡಿಸಿದ ಸವೋಜವಾದ, ಭುವನೇಶ್ವರದ ದಶಾಂಶ ಆರ್ಥಿಕ ನೀತಿಗಳನ್ನು ಮತ್ತೊಮ್ಮೆ ಮೆಲುಗಳ ಹಾಕಿ ಕಾಂಗ್ರೆಸ್ಸು ಈ ಫೀಲ್ಡಿಯಿಂದ ಹೊರಬರುವಂತಿಲ್ಲ, ಇದನ್ನು ಸಾಧಿಸಿಯೇ ಬಿಡುತ್ತೆವೆ ಎಂದರು ಇಂಡಿಕೇಟ್ ನಾಯಕರು.

ಕೋರಿಕೆಯು ಎಐಸಿಸಿಯನ್ನು ನಿಜಲಿಂಗಪ್ಪನವರ ಕಾಂಗ್ರೆಸ್ ಅದು ಕಾಂಗ್ರೆಸ್ ಅಧ್ಯಕ್ಷರ ಮೇಲೆ ಅವಿಶ್ವಾಸ ಸೂಚಿಸುವ ಸಾಧ್ಯತೆ; ಅವಿಶ್ವಾಸ ಸೂಚಿಸಲು ಸಂವಿಧಾನ ಅನುಮತಿ ನೀಡುವುದಿಲ್ಲ; ಅದುದರಿಂದ ಅದು ಸಂವಿಧಾನ ವಿರೋಧಿಯೆಂದು ತಿರಸ್ಕರಿಸಿತ್ತು. ಅಧಿವೇಶನ ಇಂಡಿಕೇಟಿನ ನೇತೃತ್ವದಲ್ಲಿ ನಡೆದ ಸೆಂಟಿ ಸಿಂಡಿಕೇಟಿನ ಊಹೆ ಸಂಪೂರ್ಣ ಸತ್ಯಹೊಂಬುದ ಗೊತ್ತಾಯಿತು. ಇದಕ್ಕಿಂತ ಹೆಚ್ಚಿನದು ದೆಹಲಿಯಲ್ಲೇನೂ ನಡೆಯಲಿಲ್ಲ.

ಕಾಂಗ್ರೆಸ್ಸಲ್ಲಿ ಹೊಸ ರಕ್ತ ತುಂಬುವುದು ಇಂಡಿಕೇಟಿನ ಉದ್ದೇಶ; ಜೀವನ್ಮರಣಾವಸ್ಥೆಯಲ್ಲಿರುವ ಕಾಂಗ್ರೆಸಿಗೆ ಸತ್ಜೀವಿನಿ ಚುಚ್ಚುವುದು ಕೋರಿಕೆಯ ಎಐಸಿಸಿಯ ಉದ್ದೇಶವೆಂದು ಹೇಳಲಾಯ್ತು. ಆದರೆ, ಅಲ್ಲಾದ ಗೊತ್ತುವಳಿಗಳ ಔಷಧದ ಗುಣವನ್ನೇ ಹೊಂದಿಕೊಂಡಿರಲಿಲ್ಲ. ಇಂಡಿಕೇಟ್ ಕಾಂಗ್ರೆಸ್ಸಿನ ಅಧ್ಯಕ್ಷ ಸುಬ್ರಹ್ಮಣ್ಯಂರ ಕಾರ್ಯಕಾರಿ ಸಮಿತಿಗೆ ಹತ್ತು ಜನರನ್ನು ಎಐಸಿಸಿ ಆರಿಸಿತು. ಆ ಯ್ಕೆಗೊಂಡವರು ಯಾರು? ಸಿಂಡಿಕೇಟ್ ಕಾಂಗ್ರೆಸ್ಸಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಕಾರ್ಯಕಾರಿ ಸಮಿತಿಯನ್ನು ಬಹಿಷ್ಕರಿಸಿದ ಮಹಾನಾಯಕರೇ, ಇದನ್ನು ಹೊಸ ರಕ್ತವೆನ್ನಬಹುದೆ? ಬಹಿಷ್ಕರಿಸಿದ್ದನ್ನೇ ಹೊಸತನವೆನ್ನಬೇಕೆ?

ಶ್ರೀ ಸಿ. ಸು. ನಾಮಕರಣ ಮಾಡಿದ ಹತ್ತು ಸದಸ್ಯರಾದರೂ ಯಾರು? ಇವರಲ್ಲಿ ಮೂವರು ರಾಜ್ಯಸಭೆಯ ಪರೆಗೆ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಸದಸ್ಯರಾಗಿದ್ದವರು, ಏಕೈಕ ನಾಯಕರಾಗಿದ್ದ ಪಂಜಾಬಿನಲ್ಲಿನ ಕಾಲದಲ್ಲಿ ತಿರಸ್ಕೃತರಾಗಿದ್ದವರು ಅವರ ಸುಗಳ ಕಾಲದಲ್ಲಿ ಅಗ್ರ ಪೂಜೆಗೆ ಅರ್ಹತೆ ಗಳಿಸಿದ್ದಾರೆ. ಮತ್ತೊಬ್ಬ ಮಾಜಿ ಮಹಾರಾಜರು, ರಾಜಧಘಟ್ಟಿತಿಯನ್ನು ಈ ಮಹಾರಾಜರು ಒಪ್ಪಿದ್ದಾರೆಂದು ಶ್ರೀ ಸಿ. ಸು. ಹೇಳಿದ್ದಾರಾದರೂ ಅವರು ಉಳಿದ ರಾಜ—ಮಹಾರಾಜರನ್ನು ಇದಕ್ಕೆ ಒಪ್ಪಿಸಲು ಸಾಧ್ಯವಿಲ್ಲ. ಅಂದರೆ, ಇಂಡಿಕೇಟ್ ಪೊಳಗೇ ಇದ್ದು ಇಂಡಿಕೇಟನ್ನು ಮುರಿಯುವ ಯೋಜನೆ ಈ ಮಹಾರಾಜರದ್ದು, ಕವ್ಯನಿಶ್ಚರದ್ದ ಏಕೆಶಬಾರದೆ?

ಬಳವಣ್ಣನವರೊಂದು ವಚನ ಹೇಳಿದ್ದಾರೆ— ತೆಂಗಿನ ಮರದ ಕೆಳಗೆ ಹಾಲ ಕುಡಿದವೆಂಬರೆ, ಹಾಲ ಕುಡಿದ ನೆನ್ನೆ ರಯ್ಯಾ, ಮಹಾತ್ಮಾ ಗಾಂಧಿಯವರೂ ತನ್ನ ಬಾಲ್ಯದ ಅನುಭವವನ್ನು ವಿವರಿಸಿತ್ತ ಬರೆದಿದ್ದಾರೆ—ಪಂಜೆಯ ಶ್ರೀ ಗಡಿಯೂರವಿಲ್ಲಿಲ್ಲ, ಅಕಾರದಲ್ಲಿ ಮೋಡ ಕವಿದು ಸಮಯ ಗೊತ್ತಾಗಲಿಲ್ಲ. ವ್ಯಾಯಾಮ ಕರಬೇತಿಗೆ ಹೋದಾಗ ತರಬೇತಿ ಮುಗಿದು ಹೋಗಿತ್ತು. ತಪ್ಪಿದ್ದಕ್ಕೆ ನಿಜಕಾರಣ ತಿಳಿಸಿದರೂ ಅದು ಮುಖ್ಯೋಪಾಧ್ಯಾಯರಿಗೆ ಸರಿಕಾಣಲಿಲ್ಲ; ನಿಗದಿತ ದಂಡನೆ ವಿಧಿಸಿಯೇ ಬಿಟ್ಟರು. ಸತ್ಯವಾದಿಗೆ ಚಾರಿತ್ರಶುದ್ಧತೆಯೂ ಅನಿವಾರ್ಯ. ಇಂಡಿಕೇಟ್ ಸತ್ಯವಾದಿಯಿರಬಹುದು; ಆದರೆ, ಅದು ಚರಿತ್ರ ಪವಿತ್ರವಿಲ್ಲವೆಂಬುದಕ್ಕೆ ಈ ಉದಾಹರಣೆಗಳು ಸಾಕು.

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡನ್ನು ಶ್ರೀ ಸಿ. ಸು. ರಚಿಸಿಕೊಂಡರು ಜವರಿಗಾರ ವರೆಗೆ ಎಲ್ಲಾ ಚುನಾವಣೆಗಳ ಫಲ ಹಡೆಹಿಡಿದುದಾಂದ ಬೋರ್ಡಿಗೆ ಹೆಚ್ಚಿನ ಕೆಲಸವಿಲ್ಲವೆಂದು ಅವರು ತನ್ನನ್ನೂ ಸೇರಿಸಿ ಬರೇ ಐದು ಸ್ಥಾನಗಳನ್ನು ಶಂಬಿ ಮೂರನ್ನು ಬಿಟ್ಟಿದ್ದಾರೆ. ಈ ಇತರ ನಾಲ್ವರು ಯಾರು? ಪ್ರಧಾನಿ ಇಂದಿರಾ ಗಾಂಧಿ, ಗೃಹಸಚಿವ ವೈ. ಬಿ. ಚವನ್, ಪ್ರಧಾನಿ ಬಿಟ್ಟಗೈ-ಎಡಗೈ ಬಂಟರಾದ ಜಗಜ್ಜೀವನರಾಮ ಮತ್ತು ಫಕ್ರುದ್ದೀನ್ ಆಲಿ ಅಹಮ್ಮದ್— ನಾಲ್ಕೂ ಹಲೆಯದರಲ್ಲಿ ಹಲೆಯ ಮುಖಗಳು! ಈ ಮುಖಗಳಲ್ಲಿ ಹೊಳಪು ಸಂಜೀವಿನಿ ಶಕ್ತಿ ಆವಿರ್ಭವಿಸುವುದು ಹೇಗೆ ಸಾಧ್ಯ?

ಕಳೆದ ಆಗಸ್ಟದಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯ ವೇಳೆ ಗೃಹವಂತ್ರಿ ಚವಣರು ಸಿಂಡಿಕೇಟಿನ ಸದಸ್ಯರಾಗಿದ್ದರು. ಅವರನ್ನು ಕೈಬಿಟ್ಟರೆ, ತಾವೇ ಅಧಿಕಾರದಿಂದ ಕೈತೊಳೆದುಕೊಳ್ಳಬೇಕಾಗುತ್ತದೆಂದು ತಿಳಿಯುವಷ್ಟು ಮೂಢೆ ಇಂದಿರಾಗಾಂಧಿಯಲ್ಲ. ತನ್ನ ರಾಜ್ಯ ಉತ್ತರ ಪ್ರದೇಶದಲ್ಲಿ ತನಗೆ ಬಹುಜನದ ಬೆಂಬಲ ದೊರಕಿಸಿಕೊಳ್ಳಲು ಅಶಕ್ತರಾದ ಪ್ರಧಾನಿ ಮಹಾಜನನವರದಿಯನ್ನು ಸುಟ್ಟುಗುರುಹುವ ಅವಿವೇಕ ತೋರಿಸಿ ಮಹಾರಾಷ್ಟ್ರವನ್ನು ಜಗಲಿಗೆ ಠಾಕಿಕೊಂಡರು. ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಉಳಿಯುವವರೆಗೆ ವರಿಗರ ಅನ್ಯಾಯದ ಬೇಡಿಕೆಗೆ ಅಂಗೀಕಾರ ದೊರೆಯುವುದಿಲ್ಲವೆಂದ ಚವಣರಿಂದ ಗೊತ್ತು.

ಚವನನು ಗೃಹಮಂತ್ರಿ, ಸಾಮಾನ್ಯವಾಗಿ ಪ್ರಧಾನಿಯು ನಂತರದ "ಸ್ಥಾನೆ ಮೂರ" ಅವರದು. ಆದರೆ, ಇಂದು ಇಂದಿರಾ ಚವನ್‌ನ್ನು ಹೇಗೆ ಕಾಣುತ್ತಾರೆ? ಚವನರು ಸಿಂಡಿಕೇಟ್ ಕಾಂಗ್ರೆಸ್ಸನ್ನ ಫಿಂಡಿಸಿ ಮೊತಾಡಬಹುದು; ಹೇಳಿಕೆ ಹೊರಡಿಸಬಹುದು. ಆದರೆ, ಅವರ ಮತು—ಹೇಳಿಕೆಗಳು ಉದರ ವೈರಾಗ್ಯಶಾಸ್ತ್ರ—ನಂಟರ ಮೇಲೆ ಮುನಿಸು, ಹಣದ ಮೇಲೆ ಆಸೆ ಎಂಬಂತೆ ಅವರ ಪಾಡು. ಇಂದಿರಾ ಗಾಂಧಿಯನ್ನು ಧಿಕ್ಕರಿಸಿದರೆ, ವ ಹಾರಾಷ್ಟ್ರಕ್ಕೆ ಬೆಳಗಾಂವಿ ಕಂಡಿತಕ್ಕೂ ಸಿಗುವುದಿಲ್ಲ; ಕಾವಾಗ ಮರಾಠಿಗರ ನಡುವೆ ಹಲ್ಲಿಲ್ಲದ ಸಿಂಹವಾಗಿ ಬಿಡುತ್ತಾರೆ!

ಚವನರ ಈ ದುರ್ಬಲತೆಯನ್ನು ಇಂದಿರಾ ಸರಿಯಾಗಿ ಅರಿತ ಕೊಂಡಿದ್ದಾರೆ. ಕೋರಿಕೆಯ ಎಐಸಿಸಿಯಲ್ಲಿ ಚವನ್‌ಗೇನು ಪ್ರಮುಖ ಸ್ಥಾನವನ್ನೇ ದಕ್ಕಿಸಿಕೊಳ್ಳಲಿಲ್ಲ. ಜಗಜ್ಜೀವನರಾಮ—ಫಕ್ರುದ್ದೀನ್ ಸಾಹೇಬರಿದ್ದೇ ಸಂಪೂರ್ಣ ಕಾರ್ಯಭಾರ. ಚವನರನ್ನು ಯೂರೋಪ್ಯರೂ ತಲೆಹಾಕ್ಕುವುದಕ್ಕೆ ಬಿಡಲಿಲ್ಲ. ಅವರು ಮೂಲೆ ಸೇರಿ ತಲೆಕೆರೆದುಕೊಳ್ಳುತ್ತಿದ್ದರು. ಇತರಿಂದ ಚವನರಿಗೆ ಅಕೃತ್ಯಿಯ ದಿಯೆಂದು ಸಕ್ರಿಕೆಗಳು ವರದಿ ಮಾಡಿದವು; ಇಂಡಿಕೇಟು ಆಗ ಚವನರನ್ನ ಬಡಿದೆಬ್ಬಿಸಿತ — "ಇಲ್ಲ, ಎಲ್ಲವೂ ಸರಿಯಾಗೇ ಇದೆ" ಎನ್ನಿಸಿತು. ಚವನರೀಗ ಇಂದಿರಾ ಕೈಯ ಗೊಂಬೆಯಾಗಿದ್ದಾರೆ. ಗೊಂಬೆಯ ದರ್ಬಲತೆಯನ್ನು ಸರಿಯಾಗಿ ಬಲ್ಲ ಸೂತ್ರಧಾರ ತನಗೆ ಬೇಕಾದ ಆಟವನ್ನು ಬೇಕಾದಂತೆ ಆಡಿಸಿಕೊಳ್ಳಬಲ್ಲ, ಬೇಕಾದ ಕಾಲಬಲ್ಲಿ.

ಕಾಂಗ್ರೆಸ್ಸಿನ ಬೂಸ ಬಿಸಿ ಗಳ್ಳದ ನಾಯಕರಾದ ಡಾ| ಚಂದ್ರಶೇಖರರೂ ಕಾರ್ಯಕಾರಿ ಸಮಿತಿಯ ಸಾಮರಸ್ಯದ ಸಂಬಂಧ ಅಸಮರ್ಥವಾದ ತೋರಿಸಿದ್ದಾರೆ. ಬಿಸಿರಕ್ತಕ್ಕೆ ಸಕ್ಕ ಪ್ರತಿಕ್ರಿಯೆ ವಿಲ್ಲವೆಂದಲ್ಲ ಅವರ ದೂರು. ಆದರೂ ಪೂರ್ಣಾಧಿವೇಶನದ ನಂತರ ಎಲ್ಲವೂ ಸರಿಯಾಯಿತೆಂಬ ಸಮ್ಮತಿಸಿದ್ದಾರೆ.

ಕೋರಿಕೆಯು ಎಐಸಿಸಿಯ ಯೂಥ ಆರ್ಥಿಕ ನೀತಿಯನ್ನೂ ಖಂಡಿಸದೆ ಇದ್ದುದರಿಂದ ಇದು ಬರಿಯ ಪರ್ವತ ಶ್ರಮವ ವೆಂದು ಹೆಚ್ಚಿನವರು ತಿಳಿದಿದ್ದಾರೆ. ಇಂಡಿಕೇಟ್ ನಾಯಕತೆಯ ಸವಿೂಪವರ್ತಿಗಳು ವಂತ್ರ ಅಧಿವೇಶನದ ಸಾಫಲ್ಯವನ್ನು ಕೊಂಡಾಡುತ್ತಾರೆ; ಸಾಮಾನ್ಯ ಎಐಸಿಸಿ ಪ್ರತಿನಿಧಿಗೆ ಪೂರ್ಣ ನಿರಾತಕೆಯೆನಿಸಿದೆ. ಒಸ್ಸಾದ ಎಂಟು ಜನರ ಉದ್ಗಾರವೇ ಇದಕ್ಕೆ ಸಾಕ್ಷಿ.

ಈ ಆಧಿವೇಶನದಲ್ಲಿ ಭಾಗವಹಿಸಿದವರು ಎಷ್ಟು? ನಿಖರವಾಗಿ ಏನೂ ಹೇಳುವಂತಿಲ್ಲ. ನಿಜವಾಗಿ ಭಾಗವಹಿಸಿದ ಇಪ್ಪತ್ತರ ಹೆಸರುಗಳನ್ನು ಕಾಂಗ್ರೆಸ್ಸಿನ ಪತ್ರಿಕಾ ಕಛೇರಿಯವರು ಪಟ್ಟಿಯ ಪ್ರತಿಯೆಂದು ಎರವಿ; ಭಾಗವಹಿಸಿದವರಲ್ಲಿ ಅಧಿಕ ಸಂಖ್ಯಾಕರು ಎಐಸಿಸಿ ಸದಸ್ಯರೇ ಅಲ್ಲ ಎಂಬುದು ಇನ್ನೊಂದು ವರದಿ. ಅಂತೂ ಬೀದಿ ಬಳಿಯು ಜೆಂಗುಟ್ಟಿಕ್ಕಿಂತ ಇದೇನೂ ಹೆಚ್ಚಿನದಲ್ಲವೆಂದು ಬೇರೆ ಕೆಲವರ ಅಂಬೋಣ.

ಕಾಂಗ್ರೆಸಿನ ಪಕ್ಷಾಧಿಮಿಕ ಸದಸ್ಯರೂ ಅಲ್ಲದ ಸುಬ್ರಹ್ಮಣ್ಯಂ ಇಂಡಿಕೇಟ್ ಕಾಂಗ್ರೆಸಿನ ಅಧ್ಯಕ್ಷರು. ಸಿಂಡಿಕೇಟ್ ಉಚ್ಚಾಟಿಸಿದ ಇಂದಿರಾಗಾಂಧಿ ಹೆಳಂತೆ ಅಲಯ..ವುದೇ ಇದು ಥೈರ್ಯ. ಕಾಂಗ್ರೆಸ್ಸನ್ನು ಪೊದಲು ಸಿಂಡಿಕೇಟು ಆಳುತಿತ್ತು ಎಂದು ದೂರುತಿದ್ದ ಇಂದಿರಾಗಾಂಧಿ ಈಗ ಅದನ್ನು ತನ್ನ ಬೈಚಳ್ಳಿಯೇ ಹಿಡಿದು ಕೊಳ್ಳಲು ಹೊರಟಿದ್ದಾರೆ. ಗೇಲು ಬೀಜ ಮೊರೆಯುದಿದ್ದರೇನು, ಹಣ್ಣಾದರೂ ಕೈಗೆ ಬಂದಿತಲ್ಲ!

ಈಗ ದೇಶದಲ್ಲಿ ಎರಡು ಕಾಂಗ್ರೆಸ್ಸು ಳು—ಸಿಂಡಿಕೇಟ್; ಇಂಡಿಕೇಟ್. ಇಬ್ಬರು ಅಧ್ಯಕ್ಷರು — ನಿಜಲಿಂಗಪ್ಪ, ಸುಬ್ರಹ್ಮಣ್ಯಂ, ಎರಡು ಕಾರ್ಯಾಲಯಗಳು—೨ ನಪಥ, ವಿಸ್ಸರ್ ಗಾರ್ಡನ್ ಎರಡಾದು ಮೂರಾಂಗಡಿಯವರಿದೆನ್ನುವವರಿದ್ದಾರೆ. ಈ ಮೂರನೆಯ ಅಂಡಿಕೇಟಿಗೆ ನಾಮಕರಣ ಮಾಡಿರುವವರ್ಯಾರೆ? ಗೃಹಮಂತ್ರಿ ಚವನರ ಹೆಸರೇ ಅಪ್ಪಿತ್ತಿವಾಗಿ ಕೇಳಿಬರುತ್ತಿದೆ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.
Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden
Quiet, Calm Atmosphere
Personalised Service.

ಸಂಗ್ರಾಹ್ಯ ಸಂಕಲನಗಳು

ಶಿಲ್ಪಿ	1—50
ಪ್ರತಿಜ್ಞಾ ಪೂರ್ತಿ	1—00
ನೀತಿ ವಿನೋದ ಕತೆಗಳು	1—00
ಕಥಾವಳಿ	2—00
ಪರಿಚಯ ಪ್ರಬಂಧಗಳು	1—00
ಹಾಟೆಕ ಪ್ರಪಂಚ	1—50
ಜೀವನಕಲೆ	1—00
ಅನುವಾದಿತ ಕತೆಗಳು	1—20
ರಂಜ ಸುಮನ	1—20
ಪೆಂಗುಸರ ಕಪಿಪಳು	2—00
ನುಡಿಮುತ್ತುಗಳು	1—50

ಪವಭಾರತ ಪುಸ್ತಕ ಭಂಡಾರ್, ಉಡುಪಿ.

ಚಿತ್ತನಿರ್ಮಾಣದಿಂದ ಚರಿತ್ರನಿರ್ಮಾಣ

ನಮ್ಮ ಮಹಾ ಸಮಸ್ಯೆಗಳು ಅಧಿಕಾರ ಮತ್ತು ಸಾರ್ವಜನಿಕವಲಯಗಳಲ್ಲಿವೆ. ದೇಶದ ಹಿರಿಯ ರಾಜ್ಯಕೀಯ ಪಕ್ಷ ಕಾಂಗ್ರೆಸ್ಸೂ ಇಬ್ಭಾಗವಾಗಿ ಒಡೆದುಹೋಯಿತು. ಇದಕ್ಕೆ ಈ ಸಮಸ್ಯೆಗಳನ್ನು ಎದುರಿಸಲು ಬೇರೆ ಬೇರೆ ದಾರಿಗಳು ಎರಡು ಗುಂಪುಗಳಲ್ಲಿ ಕಾಣಿಸಿದ್ದೇ. ಅದರೆ ನಿಜವಾಗಿ ನವ್ಮ ಸಮಸ್ಯೆ ಚರಿತ್ರ ನಿರ್ಮಾಣ ವತ್ತು ಭ್ರಷ್ಟಾಚಾರ. ಇವು ಆರ್ಥಿಕ ವಕ್ತು ಸಾಮಾಜಿಕ ರಂಗಗಳಿಗಿಂತ ಪೂರ್ಣ ದೂರ ನಡೆದು ನಿಲ್ಲಲಾರವು. ಆದರೂ ಚರಿತ್ರ ನಿರ್ಮಾಣ ಮತ್ತು ಭ್ರಷ್ಟಾಚಾರ ನಿವರ್ಣಗಳನ್ನು ನಾವು ಸಾಧಿಸಿಕೊಂಡರೆ, ಉಳಿದ ಯಾವುದೇ ಸಮಸ್ಯೆ ಕ್ಷಣ ಸಮಾನವೇ ಆಗುವುದು.

ಗಳಿಬರಿಂದಲೂ ಕೇಂದ್ರದಲ್ಲಿ ಒಂ ದಲ್ಲಿ ಒಂದು ಶಾಖೆಯ ಮಂತ್ರಿಯಾಗಿ ಉಳಿದು ಬಂದಿರುವ ಶ್ರೀ ಜಗಜ್ಜೀವನ ರಾಮರು ಜವಾಹರಲಾಲರ ಕೊನೆಯ ದಿನಗಳಲ್ಲಿ ಒಲ್ಲದ ಮನಸ್ಸಿನಿಂದಲೇ ಕಾ ಮಂ ಜೀಕರಣಕ್ಕೆ ಒಲಿಯಾದರು ಮುಂ ದೆ, ಜವಾಹರ್‌ರು ಬಹುಕಾಲ ಬದುಕದಿ ದ್ದುದರಿಂದ ಅವರು ಮತ್ತೆ ಮಂತ್ರಿಯಾ ಗ ವುದು ಸಾಧ್ಯವಾಯ್ತು. ಈಗ ಪ್ರಧಾ ನಿ ಇಂದಿರಾ ಗಾಂಧಿಯವರು ಹಾಕಿದ ಹೂಮಾಲೆ ಸರ್ವಾನಾಗಿ ಅವರನ್ನು ಕಚ್ಚ ಲಿರುವುದು ಕಂಡಿತವೇ. ಇಂಡಿಕೇಟ್ ಕಾಂಗ್ರೆಸ್ಸಿನ ಮುಂಬಯಿ ಅಧಿವೇಶನದಲ್ಲಿ ಅದರ ಅಧ್ಯಕ್ಷರೆಂದು ಅವಿರೋಧವಾಗಿ ಆಲಂಕಾರ ಪೀಠವೇರಲು ಸಮ್ಮತಿಸಿ ಅ ವರು ಪ್ರಕ್ಕಕ್ಷ ರಾಜ್ಯಕೀಯದಿಂದ ತಮ್ಮ ನಿವೃತ್ತಿಗೇ ಸಮ್ಮತಿಸಿದ್ದಾರೆ. ಹಿರಿಜನ ನಾಯಕರೆಂದೇ ಶ್ರೀ ರಾಮರು ಈ ಇಪ್ಪ ತ್ತೈದು ವರ್ಷಗಳಲ್ಲಿ ಕಾಂಗ್ರೆಸ್ಸಿನ ಒಂದು ಕಣ್ಣಾಗಿದ್ದರು. ರಜತೋತ್ಸವವನ್ನು ಆಚ ರಿಸಿದ ಬಳಿಕ ಗೂ ಅದಕ್ಕೆ ವೆಂದಲೇ ಆ ವರೂ ತನ್ಯಾಸ ಸ್ವೀಕರಿಸುವುದು ತೀರ ಅನಿವಾಯ ವಾಗುತ್ತದೆ. ಸ್ವದ ನಿಲು ಈ ರಾಜ್ಯಕೀಯ ನಾಟಕದಲ್ಲಿ ಇದು ರೆ ಗೆ ಅವರಿಗೆ ಕಾಯಕಲ್ಪ ಪಾತ್ರವಾತ್ರ, ಇ ಷ್ಟು ಮುಂದೆ ಅವರು ಖಲನಾಯಕರಾ ಗುವುದು ಅವಶ್ಯ ಪಕ್ಷ ಮತ್ತು ಚರಾವರ ಗಳಲ್ಲಿ ಸರಕಾರಗಳೇ ಪತನಗೊಂದು ದೃ ಢವಾಗಿ ನಂಬಿರ ವ ಇಂದಿರಾ ಕಾಂಗ್ರೆಸ್ಸಿ ನಲ್ಲಿ ಪಕ್ಷದ ಅಧ್ಯಕ್ಷ ಪೀಠವಾಯ ತ್ತೀ ಆಗಳಿಯ ಬೇಕು ತಾನೆ? ಶ್ರೀ ರಾಮರು ಇವಸ್ಥೆ ಸಮ್ಮತಿಸಿದರು ಎಂದು ಹೇಗೆ? ಆ ರು ಪ್ರಧಾನಿ ಪಂಥದ ಕ್ರಮಲ ಕಾರ್ಯಕ್ಷ ರು ತಾನೆ?

ಶ್ರೀ ಫಕ್ರುದ್ದೀನ್

ಶ್ರೀ ಜಗಜ್ಜೀವನ ರಾವರ ಕೈಗಳ ಜಪಮಾಲೆಯಿತ್ತು ರಂಜಿಸ ವಲ್ಲಿ ಶಕ್ತರಾದ ಸ್ವಧಾನಿ ಗಂಧಿಯವರ ಮುಂದಿನ ಬೇಟೆ ಫಕ್ರುದ್ದೀನ್ ಆಲಿ ಅಳ ಕ್ಕಾದರು ಜವಾಹರಲಾಲರ ಕೊನೆಗಾಲ ದಲ್ಲಿ ದಿಲ್ಲಿ ಸಿಂಹಾಸನದ ಸುತ್ತ ವಂಡಿ ರಾದವರಲ್ಲಿ ಇವರೂ ಒಬ್ಬರು. ದೂರದ ಅಸ್ಸಾಮಿನಿಂದ ಲೋಕ ಸಭೆಗೆ ಆಯ್ಕೆ ಯಾಗಿ ಬಂದು, ಅಲ್ಪ ಸಂಖ್ಯಾಕರ ಪ್ರತಿ ನಿಧಿಯೆಂದು ಮಂತ್ರಿಯಾದವರು. ಪ್ರಧಾನಿ ಇಂದಿರಾ ಗಾಂಧಿಯು ಸಿಂಡಿಕೇಟ್ ಜ್ಯಾಟನಾ ಸಮಾದದಲ್ಲಿ ಇವರು ಎಡಗ್ಯೆ. ಇವರನ್ನೂ ಸಕ್ಕ ಸ್ಥಾನದಲ್ಲಿಯೇ ಇರಿಸಿ ಪ್ರಧಾನಿ ಗಾಂಧಿ ಸರಕಾರಕ್ಕೆ ಅಗತ್ಯ ಅದುದಾಂದ ಈಗಾ ಗಲೇ ವಿಶ್ವಾಸತ್ತರ ಕಕ್ಷರ ಹತ್ತಿರ ಬಂದಿ ರುವ ಈ ಅಲಿ ಸಾಹೇಬರನ್ನು ರಾಜ್ಯಪಾ ಲರಾಗಿಯೋ ರಾಯ ಧೂರಿಹೊಗುವೋ ನೇಮಿಸುವ ಸಂಭವವನ್ನ ರಳ್ಳಿಹಾಕು ವಂತಿಲ್ಲ ಹೇಗೂ ಸಂಖ್ಯಾಬಲದ ತೆಗ ನಾದ ರಾಜ್ಯಬಲ ಕದವಿಯಿಂ; ಇಲ್ಲ, ಯಾವುದಾದರೊಂದು ಆರಬ ರಾಜ್ಯದ

(ಪುನ್ನೆಚನೆ ಪು.೫ ನೋಡಿರಿ)

ದೆಹಲಿಯ ಗಾಂಧೀ ದರ್ಶನ ಪ್ರದರ್ಶನದಲ್ಲಿ ಗಾಂಧೀಜಿಯು ಹರಿಜನ ಮಗ ಮೊಂದಕ್ಕೆ ಪ್ರೀತಿಸುವ ಪ್ರತಿಮೆ ಇದು.

ಸಮುದ್ರ ಸ್ನಾನ

ಲೇಖಕರು: ಶ್ರೀ ಕು. ಗೋ.

ಬೆಳಕು ಹರಿಯುವ ಮುನ್ನವೇ ಬಾಗಿಲು ತಟ್ಟುವ ಶಬ್ದ ಕೇಳಿ ಒದ್ದು ಬಾಗಿಲು ತೆರೆದಾಗ ಅಚ್ಯುತಾನಂತ ಗೋವಿಂದರ ದರ್ಶನವಾಗಿ "ಎಲ್ಲಿಂದ ಬರ್ತಾ ಇದೀ ಸವಾರಿ" ಎಂದೆ.

"ಸವಾರಿ ಬರ್ತಾ ಇರುವುದಿಲ್ಲ, ಸಮುದ್ರ ಸ್ನಾನಕ್ಕೆ ಹೋಗ್ತಾ ಇದ್ದೆ. ನೀನೂ ಹೊರಡು" ಅಚ್ಯುತ ನುಡಿದ.

"ಫಿನ್ನ ಹೆಂಡತಿ ಊರಲ್ಲಿ ಇಲ್ಲ ಅಂತ ತಿಳಿಯಿತು. ಫೀನು ಸೋಮಾರಿಯಾಗಿ ಬಿದ್ದಿರುವುದು ಬೇಡ ಅಂತ ಫಿನ್ನಪ್ಪ ಕರೆದುಕೊಂಡು ಹೋಗಲು ಬಂದವು" — ಅನಂತ ಹೇಳಿದ.

"ಹಿ ಹ್ಹಿ ಹ್ಹಿ" ಎಂದ ಗೋವಿಂದ.

"ಬನ್ನಿ ಫಿನ್ನೆ" ಎಂದೆ. ಅಷ್ಟರಲ್ಲಿ ಹುಡುಗಿ ಹಾಲು ಕೂಡಾ ತಂದು ಕೊಟ್ಟಿತು. 'ಕಾಫಿ ತಯಾರಿಸಿ. ನಾನು ಮುಖ ತೊಳೆದುಕೊಂಡು ಬರುತ್ತೇನೆ. ರಾತ್ರಿ ಎಷ್ಟೊತ್ತಿಗೆ, ಏನು ಕತೆ?" ಎಂದು ಟೀ ಟೂತ್ ಬ್ರಶ್ ಕೈಗೆ ತೆಗೆದು ಪೂಂಡೆ.

"ಒಳ್ಳೇ ಕೂಪ ಮಂಡೂಕ ವ್ಯವಹಾರ ಯು ನೀನು. ಹೊರಗೆ ಏನು ನಡೀತಿದೆ ಅಂತ ರೂಢಾ ಗೊತ್ತಿಲ್ಲ ನಿನಗೆ—" ಹೀಯಡುಳಿದ ಅನಂತ.

'ನಿನ್ನೆ ರಾತ್ರಿ ಧವ...ಸ್ಥಳ ಮೇಳದ ಟಿಕೆ ಇತ್ತು ಮದರಾಯ್ಯ ಅಡಿಯುಡುಪು ಸೈದಾನಿಫಲ್ಲ" —ಅಚ್ಯುತ ಹೇಳಿದ.

"ಹಿಹ್ಹಿ ನಾವು ಆಫೀಗೇ ಹೋಗಿದ್ದೆವು. ಲಟ್ ನೋಡಿ ನೀವ ಸಮುದ್ರಕ್ಕೆ ಹೋಗೂ ಸವರು ನಿನ್ನ ನೆನಪು ಹುಟ್ಟಿ ಇಲ್ಲಿಗೆ ಬಂದೆವು. ಹಿಹ್ಹಿ" —ಗೋವಿಂದ ನಕ್ಕ.

'ಇವತ್ತೇನು ವಿಶೇಷ ಸಮುದ್ರದಲ್ಲಿ' ಬಾಯುಳ್ಳಿದ್ದ ನೊರೆಯನ್ನು ಉಗುಳಿ ಒಂದು ಕೇಳಿದೆ.

"ಬ್ಯಾರಿ ಕರ್ಮ, ನೀನೊಬ್ಬ ಹುರೇಹಿತರ ಮಗ. ಇವತ್ತು ಎಳ್ಳಮಾವಾಸ್ಯೆ ಅಂತ ಕೂಡ ಗೊತ್ತಿಲ್ಲವಲ್ಲಾ ನಿನಗೆ!" ಅಚ್ಯುತ ಬೈದ.

ರಾತ್ರಿಯಿಂದ ಟ್ಯಾಕ್ಸಿ ಸ್ಪೆಷಲ್ ಬಾದಳು ಓಡಾಡ್ತಾ ಇವೆ. ಜನರು ಸಾಲುಸಾಲಾಗಿ ಹೋಗ್ತಾ ಇದ್ದಾರೆ"-ಅವಂ ಕಷೆಂದ.

"ಹಿಹಿ, ನಾರಾಯಣನಿಗೆ ಪಾಪ ಅವಳದೇ ಚಿಂತೆಯೋ ಏನೋ? ಇದು ಒಂದೂ ಗೊತ್ತಿಲ್ಲ ಹಿಹ್ಹಿ" ಗೋವಿಂದ ಹಲ್ಲು ತೋರಿಸಿ ನಕ್ಕ.

"ಹಾಗೇನೂ ಇಲ್ಲ. ರಾತ್ರಿಯಿಂದಲೂ ಇನ ಹೋಗ್ತಾ, ಇದ್ದದ್ದು ಗೊತ್ತಿತ್ತು. ಮಂಜ ಮೂವಪ ಹತ್ತಿರ ಕೇಳೋಣ ಅಂತ ಇದ್ದೆ. ಈಗ ಗೊತ್ತಾಯ್ತು. ಇವತ್ತು ಎಳ್ಳಮವಾಸ್ಯೆ ಅಂತ. ನಾನು ಈ ವರೆಗೆ ಸಮುದ್ರ ಸ್ನಾನ ಕೂಡಲೇ ಇಲ್ಲ—" ಎಂದೆ ನಾಚಿ.

"ಅದಕ್ಕೇ ನಾವು ಬಂದದ್ದು, ಸಮುದ್ರ ಪಲ್ಲಿ ಫಿನ್ನನ್ನು ಮಾಳುಗಿಸಲು—" ಅನಂತ ಹೇಳಿದ.

"ಸರಿ, ಸರಿ. ನೀವು ಕರೆದುಕೊಂಡು ಹೋಗುವುದಾದರೆ ನನಗೇನಾಗಬೇಕು. ನಾನೂ ಬರ್ತೀನೆ"—ಎಂದು ಹೇಳಿ ಬಚ್ಚಲು ಮನೆಯತ್ತ ತೆರಳಿದೆ.

ಗೋವಿಂದ ಸ್ಟೌವ್ ಮೇಂಕಿ ಹತ್ತಿಸಿ ಕಾಫಿ ತಯಾರಿಸಿದ. ಡಬ್ಬದಲ್ಲಿದ್ದ ಅವಲಕ್ಕಿ ತೆಗೆದ. ಉಪ್ಪಗರಿ ಮಾಡಿದ. ನಾಲ್ವರೂ ಸೇರಿ ಎಲ್ಲವನ್ನೂ ಖಾಲಿ ಮಾಡಿ ಮನೆಯಿಂದ ಹೊರಬಿದ್ದೆವು.

ಅಬ್ಬಾ ಎನು ಜನ! ತಂಡೋಪತಂಡವಾಗಿ ಹುಡುಗರು ಮಕ್ಕಳು ಮದುಕರು ಮುದುಕಿಯರು ವಡಭಾಂಡೇಶ್ವರದತ್ತ ತೆರಳುತ್ತಿದ್ದರು. ಕೆಲವರು ನಡಿಗೆಯಲ್ಲಿ, ಕೆಲವರು ಗಾಡಿಯಲ್ಲಿ, ಇನ್ನು ಕೆಲವರು ಸೈಕಲುಗಳಲ್ಲಿ ಮತ್ತು ಕೆಲವರು ಟ್ಯಾಕ್ಸಿ ಕಾರುಗಳಲ್ಲಿ, ಹಬ್ಬಿಹವರು ಬಸ್ಸುಗಳಲ್ಲಿ ಹೋಗುತ್ತಿದ್ದರು. ಫಾನ ಕೇಳಿದೆ- ನಾವು ಬಸ್ಸಿನಲ್ಲಿ ಹೋ ಗು ವು ದಾ, ಆಲ್ಲ....'

"ಅಲ್ಲಕೇ ಸರಿ. ಬಸ್ಸಾ ಮಣ್ಣೀ! ನೀ ದಾ ನಡೆ ್ಯಾಂಡೇ ಹೋಗುವ. ಮೂರು ನಾಲ್ಕು ಮೈಲು ನಡೆಯಲು ಗಮ್ಮತ್ತೇ ಆಗುತ್ತೆ. ನಡೀರಿ ನೋಡುವ, ಲೈಫ್ ರೈಟ್..." ಆರ್ಡರ್ ಕೊಟ್ಟ ಅಚ್ಯುತ. ಗೋವಿಂದ ಹಿಹ್ಹಿ ಎಂದ. ಅನಂತ ಒಂದು ಸಿಗರೇಟು ಹೊತ್ತಿಸಿ ಹೊಗೆ ಬಿಟ್ಟ.

ಬಸ್ಸು ಟ್ಯಾಕ್ಸಿಗಳು ಬಸುರಿ ಹೆಂಗಸರಂತೆ ಹೊಟ್ಟೆಯೂದಿಸಿಕೊಂಡು ಧೂಳೆಬ್ಬಿಸುತ್ತಾ ಗಲಾಟೆ ಮಾಡುತ್ತಾ ಓಡುತ್ತಿದ್ದವು. ಅನೇಕ ದಾರಿಹೋಕರ ಪರಿಚಯ ಆಚ್ಯುತಾನಂತ ಗೋವಿಂದರಿಗಿದ್ದುದರಿಂದ ಮಾತಿಗೇನೂ ಬರವಿರಲಿಲ್ಲ. ಮಳೆ ಬೆಳೆ ಆಟ ನಾಟಕ ರಾಜಕೀಯ ಎಲೆಕ್ಷನ್, ಮುನಿಸಿಪಾಲಿಟಿ ಹಗರಣ, ಕಾಲ್ಲೂರು ಬೋರ್ಡು ಚನಾವಣೆ, ಊಟ, ಮುಷ್ಕರ, ಉಪವಾಸ, ನನ್ಸಲ್‌ಬಾರಿ, ಚೀನ, ಪಾಕಿಸ್ತಾನ, ಕೇರಳ, ತೆಲಂಗಾಣ ಗಣಕೇರಣ, ದೇವರು, ಧರ್ಮ—ಒಂದೇ ಎರಡೇ ಎಲ್ಲ ವಿಚಾರವೂ ಬಂತು ಮಾತಿನಲ್ಲಿ. ಆಚ್ಯುತನಿಗೆ ನೆಲದ ಹಸಿರು ನೋಡುವ ಹುಚ್ಚು. ಅನಂತನಿಗೆ ಸಾಂದರ್ಯದರ್ಶನವಿಲ್ಲದಿರುವುದನ್ನು ನೋಡುವ ಹುಚ್ಚು ಗೋವಿಂದನಿಗಾದರೋ ಜನರನ್ನು ಬಸಿರನ್ನು ಸೀಳುವ ಕೆಚ್ಚು, ಒಟ್ಟಿನಲ್ಲಿ ಗುಂಪಿನಲ್ಲಿ ಒಂದು ರೀತಿಯ ಮನರಂಜನೆ. ಟ್ಯಾಕ್ಸಿಗಳೆಲ್ಲ ಪರ್ಮಿಟ್ ಇಲ್ಲದಿದ್ದರೂ ಎಂಟು ಹತ್ತು ಹೆಂಡೈದು ಜನರನ್ನು ತುಂಬಿಸಿಕೊಂಡು ಓಡುತ್ತಿದ್ದವು. ದಾರಿಯಲ್ಲಿ ಕೈ ಎತ್ತಿದ ಪೋಲೀಸರ ಸೈಗೆ ಡ್ರೈವರುಗಳ ಕೈ ತಾಕಿ ನೋಟಿನ ಕಂತೆ ಬೀಳುತ್ತಿತ್ತು. ಏನೋ ನಾಲ್ಕು ಕಾಸು ಹೀಗೆ ಸಂಪಾದಿಸಿದ್ದೇ ಬಂತು ಪಾಪ!

"ಕೊಡುವ ಕೈ ಕೊಳ್ಳುವ ಕೈ ಎರಡನ್ನೂ ಕತ್ತರಿಸಿ ಹಾಕಬೇಕು." — ಎಂದ ಅನಂತ.

"ಅಸಾಧಾರಣ ಯಂತ್ರಗಳ ಸಹಾಯದಿಂದ ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಬಳಿಕ ಅನಂತ ಹೇಳಿದ— 'ಹಿಹ್ಹಿ, ಆ ಬೆಲ್ಲಕ್ಕಿಂತ ಸಮುದ್ರದಲ್ಲಿ ಸ್ನಾನಮಾಡುವ ಹೆಂಗಸರ ತೆಪ್ಪಡೆ, ಮೊಲೆಗಳನ್ನು ನೋಡುತ್ತಾ ನಿಲ್ಲುವುದೇ ವಾಸಿ. ಹಿಹ್ಹಿ ...'

ಅನಂತನ ಬಾಯಲ್ಲಿ ನೀರಿಳಿಯಿತು. ಗೋವಿಂದ ಈಚೀಚೆಗೆ ತುಂಬಾ ರಸಿಕನಾಗುತ್ತಿದ್ದಾನೆ ಅಂದ. 'ಹಿಹ್ಹಿಹ್ಹಿ ಹಾಗೇನೂ ಇಲ್ಲಪ್ಪಾ' ಎಂದು ನಕ್ಕ. ಹೋ ವಿಂದ.

ಫಾವು ವಡಭಾಂಡೇಶ್ವರವನ್ನು ಸೇರುವಾಗ ಘಂಟೆ ಇನ್ನೂ ಎಂಟಾಗಿರಲಿಲ್ಲ. ಜನಗಳ ಚಾತ್ರೆಯೇ ಆಗಿತ್ತು. ಅಲ್ಲಿಲ್ಲಿಯ ವಾಹನಗಳು ನಿಂತಿದ್ದುವು ಚಲಿಸುವ ಅಂಗಡಿಗಳು ಬಿಡಾರ ಬಿಟ್ಟಿದ್ದುವು. ಒಂದೆರಡು ಹೋಟೇಲುಗಳು ವೇಲೆದ್ದಿದ್ದುವು. ಸಂತೆಯ ಸಣ್ಣ ಪುಟ್ಟ ಅಂಗಡಿಗಳೆಲ್ಲಾ ಅಲ್ಲಿ ಒಟ್ಟಾಗಿದ್ದುವು. ವ್ಯಾಪಾರಿಗಳ ಕೂಗಾಟ, ಜನರ ಪರದಾಟ, ಹುಡುಗರ ನುಗ್ಗಾಟ—ಗಲಾಟೆಯೇ ಗಲಾಟೆ. ಮಳೆರಂಜನೆಗೆಂದು ಬಂದವರೇ ಹೆಚ್ಚು. ಧರ್ಮಶ್ರದ್ಧೆಯಿಂದ ಬಂದವರು ಎಲ್ಲೋ ಇದ್ದಲ್ಲ!

"ಸೃಷ್ಟಿ ಸೌಂದರ್ಯ ಅಪೂರ್ವವಾದುದು. ಈ ಹೆಂಗಸರಲ್ಲಿ ಎಷ್ಟು ಸೌಂದರ್ಯವನ್ನು ವಿಧಾತನಿದ್ದಾನೆ ದೇವರು"—ಅನಂತ ತನ್ನಲ್ಲೇ ಗುಣುಗುಣು ಎಂದ.

"ನೇರವಾಗಿ ಹೇಳು ಮಹರಾಯ. ನೀನು ಬಂದದ್ದು ಬರೀ ಹೆಂಗಸರ ಚೆಂದ, ಅವರ ತೊಡೆ ವೆಂಡಲೆಗಳನ್ನು ನೋಡಲಿಕ್ಕೆ ಅಂತ. ದಾಕ್ಷಿಣ್ಯ ಬೇಡ. ಹುಹ್" ಗೋವಿಂದ ಚುಚ್ಚಿದ.

[ಹನ್ನೊಂದನೇ ಪುಟ ನೋಡಿ]

ಫೋನ್ : 526

1921 ಸ್ಥಾಪನೆ

ಸಂಪುಟ ೪೯

ಸಂಚಿಕೆ ೧೫

VOL. 49

No. 15

ನವಚೈತನ್ಯ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೧—೧೨—೧೯೬೯

ಸ್ಥಾಪಕರು:
ದಿ| ಎ. ಬಿ. ಶೆಟ್ಟಿರು

ಸಂಪಾದಕರು
ಕೆ. ಹೊನ್ನಯ್ಯ ಶೆಟ್ಟಿ

ಕಾಣದ ಕೈಗಳ ಹವಾಡ

ಗುಜರಾತಿನಲ್ಲಿ ಕೋಮುವಾರು ಗಲಭೆ ನಡೆಯಿತು; ಕೆಲವಿನಗಳ ತನಕ ಆದರ ಜ್ವಾಲೆ ಉರಿದು ಬೂದಿಯಾಯಿತು. ಖಂಡಿಕೇಟ್ ಕಾಂಗ್ರೆಸ್ಸಿನ ಅವಹೇಳನೆಗೆ ಇದಷ್ಟು ಬಳಕಾಯ್ತು. ಸರ್ವಪಕ್ಷ ಶಿಷ್ಟಮಂಡಲವನ್ನು ಕಳಿಸಲಾಯಿತು. ಪ್ರಧಾನಿ ಮಂತ್ರಿಯರ ಖಂಟರು, ತಮ್ಮ ವಿವಂಚನೆಯನ್ನು ಗೋಗರೆದರು. ಎಲ್ಲ ಪಕ್ಷೀಯರೂ ಜಾತೀಯ ಗಲಭೆಗಳು ದೇಶಕ್ಕೆ ಮಾರಕವೆಂದು ಒಕ್ಕೊರಲಿನಿಂದ ಅಭಿಪ್ರಾಯಿಸಿದರು; ಇನ್ನು ಕಡೆಗಟ್ಟುವ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಆದರೆ, ಅದಾವ ಪರಿಹಾರವನ್ನು ಯಶಸ್ವಿಯಾಗಿ ಕಂಡುಹಿಡಿಯಲು ಇವರು ಸಶಕ್ತರಾದರೆ? ಇಲ್ಲವೆಂದೇ ಹೇಳಬೇಕು. ಅಲ್ಪ ಸಂಖ್ಯಾಕರು ಮತ್ತು ಬಹುಸಂಖ್ಯಾಕರ ನಡುವಣ ಈ ಗಲಭೆಯು ಯಾವ ಕಾರಣವೂ ಇಲ್ಲದೆ ಅಥವಾ ತೀರ ಕೃಷ ಸಮಾನ ಕಾರಣಗಳ ಮೇಲೆ ಆರಂಭವಾಗುತ್ತಿರುವುದು ಕಂಡುಬರುತ್ತಿದೆ. ಸರ್ವಪಕ್ಷ ಸರ್ವೇಕ್ಷಣವು ಜಾತೀಯ ಗಲಭೆಗಳನ್ನು ಕಡೆಗಟ್ಟಲು ನಿರ್ಧರಿಸಿದ ಕೆಲವೇ ದಿನಗಳಲ್ಲಿ ಉತ್ತರ ಪ್ರದೇಶದ ವಾರಣಾಸಿಯಲ್ಲಿ ಇಷ್ಟಹೊತ್ತಿಗೇ ಗಲಭೆ ನಡೆಯಿತು.

ಪಡನಾಡ ಗಾಂಧಿಯವರೂ ನೇರಿ ಮಹಾನ್ ನಾಯಕರೆನ್ನುವಂತೆ ಅಲ್ಪ ಸಂಖ್ಯಾಕ ಪಕ್ಷ ಬಹುಸಂಖ್ಯಾಕರಲ್ಲಿರುವ ಸಂಶಯವೇ ಈ ಗಲಭೆಗಳಿಗೆ ಮೂಲ ಕಾರಣ. ಪರಸ್ಪರರನ್ನು ಗೌರವಿಸುವ ಭಾವನೆ ಉಭಯರು ಜಾಗಗಳಲ್ಲಿಯೂ ಮೂಡಿ ಬರಬೇಕೆಂದು ಅವರ ಅಭಿಪ್ರಾಯ. ಬಹುಸಂಖ್ಯಾಕರು ಅಲ್ಪಸಂಖ್ಯಾಕರನ್ನು ತಮ್ಮ ಸಮಸ್ಕಂದರೆಂದು ತಿಳಿಯಬೇಕ ;ಅದರಿಕ ಬೇಕು,ಅಲ್ಪಸಂಖ್ಯಾಕರೂ ತಾವೆಭಾರತೀಯರು, ಭಾರತದ ನೆಲದಲ್ಲಿ ನೆಲೆಯವರು ಎಂದು ತಿಳಿದುಕೊಂಡು, ಪ್ರತ್ಯೇಕತಾ ಮನೋಭಾವನೆಯನ್ನು ದೂರಮಾಡಬೇಕು. ಆದರೆ, ಮನೋಭಾವದಲ್ಲಿ ಸಮಸ್ಯೆಯು ರಾತ್ರೆ ಬೆಳಗಾಗುವುದರೊಳಗೆ ಅಸಾಧ್ಯ; ಇದಕ್ಕೆ ದೀರ್ಘಾವಧಿ ಅಭ್ಯಾಸ. ಆದರೂ ಎರಡೂ ಜಾತಿಗಳ ನಾಯಕರು ಪರಸ್ಪರರನ್ನು ಪ್ರೀತಿಸುವ, ಕೂಡಿ ಬಾಳುವ ಉದ್ಯೋಗಕ್ಕೆ ಮನಸ್ಸು ಮಾಡಿದರೆ, ಒಳ್ಳೆಯದಾಗುತ್ತಲೇ ಬರಬಹುದು. ಜಾತೀಯ ಸೌಹಾರ್ದವನ್ನು ಸಾಧಿಸುವುದು ದೇಶದ ಅಂತರಿಕ ರಾಜಕೀಯ ಅತ್ಯಂತಾವಶ್ಯಕವೆಂದು ಎಲ್ಲರೂ ಒಪ್ಪುತ್ತಾರೆ. ಭಾರತೀಯ ಜಾತ್ಯತೀತ ತತ್ವ ಇದಕ್ಕೆ ಅನುಗುಣವಾಗಿಯೇ ಇದೆ. ಆದರೆ, ಜಾತೀಯವಾದಿಗಳು ಇದನ್ನು ಅವಾರ್ಥಕ್ಕೆ ತುರಿಮಾಡಿಸಿ ಉದಾಹರಣೆಗಳೂ ಇಲ್ಲದಿಲ್ಲ.

ಸಂಶತ್ತು ಕಟ್ಟುನಿಟ್ಟಾದ ಶಾಸನವನ್ನು ಮಾಡಿ ಜಾತೀಯ ಗಲಭೆಗಳನ್ನು ಪ್ರೇರೇಪಿಸುವವರಿಗೆ, ಅವುಗಳಲ್ಲಿ ಭಾಗವಹಿಸುವವರಿಗೆ ಉಗ್ರ ದಂಡನೆಯನ್ನು ವಿಧಿಸಬಹುದು. ಕಾದುದೆ-ಕಾನೂನುಗಳಿಂದಲೇ ಶ್ರೀಸಾಮಾನ್ಯನನ್ನು ತಿದ್ದುವುದು ಸಾಧ್ಯವಾದರೆ, ಕಳ್ಳತನ, ವಂಚನೆ, ಮದ್ಯಪಾನ, ಜುಗಾರಿ, ಹಾದರಾದಿ ದುರ್ವ್ಯವಹಾರಗಳು ಈ ದೇಶದಿಂದ ಎಂದೊ ಹಾರಿಹೋಗಬೇಕಾಗಿತ್ತು. ಆದರೆ, ದಿನೇ ದಿನೇ ದುರ್ವ್ಯವಹಾರಗಳು ಬೆಳೆಯುತ್ತಿರುವದರ ಬಗ್ಗೆ ಯಾರಿಬ್ಬರಿಗೂ ಸಂದೇಹ ಇಳಿದಿಲ್ಲ. ಸರಕಾರದಲ್ಲೇ ಮದ್ಯಪಾನಕ್ಕೆ ಮತ್ತೆ ಮುಕ್ತ ಅವಕಾಶ ಒದಗಿಸಿಕೊಟ್ಟಿದ್ದನ್ನು ಹಾವು ಎಂತು ಮರೆತೀರಿ? ಮಹಾತ್ಮಾ ಗಾಂಧಿಯವರು ಮದ್ಯಪಾನವನ್ನು ವಿರೋಧಿಸಿದರು. ಅದರಿಂದಾಗುವ ಕೆಡುಕು ಹಾನಿಗಳನ್ನು ವಿವರಿಸಿ ಹೇಂಡದ ಅಂಗಡಿಗಳ ಮುಂದೆ ಆ ಕಾಲದಲ್ಲಿ ಪಿಕೆಟಿಂಗ್ ನಡೆಯುತಿತ್ತು. ಜನತೆಯುಲ್ಲಿ ಕೆಲವರಿಗಾದರೂ ಇದರಲ್ಲಿನ ನಗಣ್ಯ ಗೌರವವಿತ್ತು. ಆದರೆ, ಇಂದೇನು ನಡೆಯುತ್ತಿದೆ? ಜಾಹೀರಾತುಗಳಲ್ಲಿ ಈ ಯುಗದಲ್ಲಿ "ಇದರಲ್ಲಿ ವಿಷವಡಗಿಸಿ" ಎಂದು ಲೇಬಲ್ ಹೊತ್ತು ಸಿಗರೇಟು, ವ್ಯಾಕ್ ತಯಾರಾಗಿತ್ತಿವೆಯಿಡಗಿದೆ, ಕೆಲವು ದೇಶಗಳಲ್ಲಿ. ಶಾಸನದ ಮೂಲಕ ಧೂಮಪಾನವನ್ನು ನಿಷೇಧಿಸುವುದು ಅಸಾಧ್ಯವಷ್ಟಲ್ಲದೇ ಅಪಾಯಕಾರಿಯೂ ಹೌದು. ಮತ್ತೆ ಈ ಲೇಬಲ್ ಏಕೆ? "ವಿಷವೆಂದು ತಿಳಿಸುವುದು, ಜನತಾ ಸರಕಾರದ ಕರ್ತವ್ಯ, ತಿಳಿದೂ ತಿಳಿದೂ ವಿಷ ಸೇವನೆ ಮಾಡಲು ನುಂದಾಗುವುದಾದರೆ; ಸರಕಾರವೇನು ಮಾಡಲು ಸಾಧ್ಯ?

ನಮ್ಮ ದೇಶದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನ ಇರಲಿಲ್ಲ. ಜಾತೀಯ ವೈಷಮ್ಯದ ಫಲ ಘೋರ ಪರಿಣಾಮವನ್ನು ನಾವು ಅನುಭವಿಸಿದ್ದೇವೆ. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕವೂ ಹಾವು ಹಲವಷ್ಟು ಜಾತೀಯ ಗೊಂದಲಗಳ ದುಷ್ಪರಿಣಾಮವನ್ನು ಕಂಡಿದ್ದೇವೆ; ಕಾಣುತ್ತಿದ್ದೇವೆ. ಈ ದಶಕದ ಪೂರ್ವಾರ್ಧದಲ್ಲಿ ನಡೆದ ಜಾತೀಯ ಗಲಭೆಗಳ ಸಂಖ್ಯೆಯಲ್ಲಿ ಪರಿಣಾಮ ಇಳಮವಾಯಿತ್ತು. ನೆಮ್ಮದಿ ಜನತೆ ದೇಶದ ಜಾತ್ಯತೀತ ಧೋರಣೆಗೆ ಹೊಂದಿಕೊಳ್ಳಲು ಆರಂಭವಾಯಿತೆಂದು ತಿಳಿಯಲು ಅವಕಾಶವಿದ್ದಂತೆ. ಆದರೆ, ಉತ್ತರಾರ್ಧಕ್ಕೆ ಬರುವಾಗ ನಮ್ಮ ತಿರುವಳಿಕೆ ತಲೆಕೆಳಗಾಯಿತು. ಇತ್ತೀಚೆಗಿನ ವರ್ಷದಲ್ಲಿ ಮತ್ತೆ ಜಾತೀಯ ಗಲಭೆಗಳು ವಿಷ ವಿಷರ ತೊಡಗಿವೆ. "ಜಾತಿಯ ಗಲಭೆಗಳು ನಡೆಯದಂತೆ ಸರಕಾರ ತೀವ್ರ ಕ್ರಮ ಕೈಗೊಳ್ಳುತ್ತದೆ', 'ಕಾರಣಕರ್ತರನ್ನು ಕಂಡು ಹಿಡಿದು ಉಗ್ರವಾಗಿ ವ್ಯವಹರಿಸುತ್ತದೆ' ಎಂದು ಮುಂತಾದ ಮಂತ್ರಿವರ್ಯರ ಹೇಳಿಕೆಗಳಿಗಿಂದು ಬೆಲೆಯಿಲ್ಲದಾಗಿದೆ. ಕೆಲವೆಡೆ ರಾಜ್ಯಕೀಯ ನಾಯಕರೇ ಇಂತಹ ಗೊಂದಲಗಳ ಹಿಂದೆ ಅಡಗಿರುವುದೂ ಇಲ್ಲದಿಲ್ಲ. ನಿಜವಾದ ಕಾರಣಕರ್ತರನ್ನು ಕಂಡುಹಿಡಿಯುವಲ್ಲಿ ಸಫಲವಾಗುವುದೂ ತೀರ ಪ್ರಯೂಸ್ಕ, "ಕಾಣದ ಕೈಗಳ ಪವಾಡ"ವನ್ನು ಸರಕಾರವು ದಮನಿಸಿಶುತ್ತದೆಂಬ ವಿಶ್ವಾಸ ಕಳೆದು ಹೋಗುತ್ತಿದೆ. ಏಕೆಂದರೆ, 'ಸರಕಾರಿ ಪಕ್ಷವೇ ಗೊಂದಲವನ್ನು ಪ್ರೇರೇಪಿಸಿಶುತ್ತದೆ' ಎಂಬ ಆರೋಪವನ್ನು ಹೊರಬೇಕಾಗಿದೆ. ಇದರಲ್ಲಿ ಪೂರ್ಣ ಸತ್ಯವಿರಬಹುದು; ಇಲ್ಲದಿರ ಬಹುದು; ಆದರೆ, ಆರೋಪವಿದ್ದ ಮೇಲೆ ತಿಲಾಂಶ ವಾದರೂ ಹುರುಳಿಲ್ಲದೆನ್ನುವುದು ಕಷ್ಟ.

ಜಾತೀಯ ಗಲಭೆಗಳನ್ನು ನಿರ್ಮೂಲವ ಮಾಡಲು ನಾನೂಹಿಕ ಕೃಷಿಗಳೇ ಆಗಬೇಕು. ರಾಜ್ಯಕೀಯ ಪಕ್ಷಗಳು ಜಾತೀಯ ತಳಹದಿಯಲ್ಲಿ ಸೀಟುಗಳನ್ನು ಹಂಚುವಾಗ ಅವುಗಳ ಪೈಪ್ಟಿ ಜುನಾವಣೆಗಳ ವೇಳೆ ಮಾತ್ರ. ಜನತೆಯು ಮೇಲೆ ಬೀಳ ಬೇಕೆಂದು? ಧಾರ್ಮಿಕ, ಜಾಗರಿಕ ಮತ್ತು ಸಾಮಾಜಿಕ ಶಿಕ್ಷಣದಿಂದಷ್ಟೇ ಇದು ಸಾಧ್ಯವಾಹೀತು. ಸರ್ವಮತ ಸಮನ್ವಯದ ದೃಷ್ಟಿಯನ್ನು ಆರಂಭದಿಂದಲೇ ನುಂಡಿಸುವುದು ಅಗತ್ಯವೆನಿಸೀತು; ಈ ರಂಗಗಳಲ್ಲಾ ಪ್ರತಿಗಾವಿ ತನನ್ನು ಪ್ರಗತಿಗಾಮಿತನವೆನ್ನುವ ಮೆಟ್ಟಿ ಫಿಲ್ಲುವಂತಾದರೆ, ಜಾತೀಯ ಸೌಹಾರ್ದ ನೆಲಸೀತು. ಶೋಷಣೆಗಳು ಸಮಸ್ಯೆಗಳನ್ನು ಜೋಪಿಸುತ್ತವೆಯೇ ಹೊರತು, ಪರಿಹರಿಸುವುದಿಲ್ಲ. ಸಾಮಾಜಿಕ ಸಮಾನತೆಯನ್ನು ಸರಕಾರಕ್ಕೆಂತ ಉತ್ತಮ ರೀತಿಯಲ್ಲಿ ಸಮಾಜವೇ ಸ್ಥಾಪಿಸಬಲ್ಲುದು. ಸರಕಾರವು ಇದಕ್ಕೆ ಮಾರಕ ಮಾತ್ರ ಆಗಬಾರದು.

ಭಾರೀ ಶೋಚನೀಯ

ನಿವೃತ್ತಿಯಾದ ಮರು ತಿಂಗಳಿಂದಲೇ ಪಿಂಚಣಿ ನೌಕರರಿಗೆ ನಿವೃತ್ತಿ ವೇತನ ದೊರೆಯವಂತೆ ಮಾಡುವ ವ್ಯವಸ್ಥೆ ತಾವು ಮಾಡಿರುವುದಾಗಿ ಶ್ರೀ ಎಸ್ಸೆನ್ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಹೇಳಿದ್ದುಂಟು. ಈ ವ್ಯವಸ್ಥೆಯನ್ನು ಸರಕಾರ-ಅತ ಸರಕಾರಗಳ ಸಿಬ್ಬಂದಿ ಅಪಸವ್ಯ ಜೊಕ್ಕುವಾಗಿ ವ್ಯವಹರಿಸಲು ತರುತ್ತಿದೆ ಎಂಬುದಕ್ಕೆ ಕೋಲಾರದಿಂದ ಒಂದು ಉದಾಹರಣೆ ದೊರೆತಿದೆ. ನೌಕರನು ನಿವೃತ್ತನಾಗಿ ವ್ಯಾಪಟ್ಟ ಮೇಲೆ ಅವನ ಸೇವಾ ಕರಿಯನ್ನು ಖಾಯಂ ಗೊಳಿಸಿದರಂತೆ. ಮತ್ತೊಬ್ಬನ ನೌಕರನನ್ನು ನಿವೃತ್ತಿಯ ನಂತರ ಖಾಯಂಗೊಳಿಸಲಾಯಿತಂತೆ. ನೀವು ಕೊಟ್ಟರೂ ಪೂರಿ ಬಿಡ ಎಂ ಖಂಡೆ ನೌಕರರು ಒಂದಲ್ಲ ಒಂದು ರೀತಿಯಿಂದ ಅಜೀವ ಶೋಷಣೆಗೆ ಒಳಗಾಗುತ್ತಿರುವುದಕ್ಕೆ ಅಡಳಿತ ಯಂತ್ರವೇ ಹೊಣೆ. ಇಂತಹ ಘಟನೆಗಳು ಕರ್ನಾಟಕದಲ್ಲಿ ಮಾತ್ರವಲ್ಲ, ಭಾರತದ ಬಹುತೇಕ ಕಡೆಯಲ್ಲಿಯೂ ನಡೆಯುತ್ತಿವೆ. ಈ ಶೋಚನೀಯ ಪರಿಸ್ಥಿತಿಯೆಂದು ದೂರವಾದೀತು?

ಶಿಕ್ಷಕರ ಚಳುವಳಿ

ಕಾಮನ್‌ವೆಲ್ತ್ ರಾಷ್ಟ್ರ ಗೇಟ್ ಬಿಟನ್ನಿನಲ್ಲಿ ಶಿಕ್ಷಕರು ಸಾರ್ವತ್ರಿಕ ಮತ್ತಾ ಗ್ರಹ ಹೂಡಿದ್ದಾರೆ. ಅವರ ಬೇಡಿಕೆಗಳು ಹಲವಿದ್ದರೂ ಮುಖ್ಯವಾಗಿ ಉತ್ತಮ ಮಟ್ಟದ ವೇತನ. ಶಿಕ್ಷಕರ ವೇತನ ಪ್ರಮಾಣ ಪ್ರಾಯಃ ಎಲ್ಲೆಡೆ ಬಹಳ ಕಡಿಮೆ ಇಗೇ ಇದೆ. "ಸಮ್ಮಾನದ ಗೌರವದ ಹುದ್ದೆ" ಯೆನ್ನುವ ಶಿಕ್ಷಕ ವೃತ್ತಿಯನ್ನು ಉಪಯೋಗಿಸಿ ಇತರರು ಹಣ ಮಾಡುತ್ತಿದ್ದ ಸಕಾಯೆ ಇದ್ದ ಕಾಲ ಪೊಂದಿತ್ತು. ಆದರೆ, ತನ ಗಂತೆ ಕಡಿಮೆ ಅರ್ಹತೆಯುಳ್ಳವರು ಸಮಾಜದ ಹಿತ್ತು ಪಲು ವೇತನ ಪಡೆಯುತ್ತಿರುವಾಗ ಶಿಕ್ಷಕರು ಕಣ್ಣು ಕಟ್ಟುವುದಿಲ್ಲ; ಅವರ ಸಮ್ಮ 'ಗೌರವ'ದ ಪದವನ್ನು 'ಅಗೌರವ'ದಿಂದಲಾದರೂ ಏಳಾಯಿಸಿಕೊಡ ಬೇಗುವುದಕ್ಕೆ ಸಂಘಟಿತ ಪ್ರಯತ್ನ ಮಾಡಿಯಾರು? ಬ್ರಿಟನ್ನಿನ ಶಿಕ್ಷಕರ ಚಳುವಳಿ ಉಳಿದೆಡೆಯ ಶಿಕ್ಷಕರಿಗೆ ಪ್ರೇರಕವಾದೀತು. ಅಧಿಕಾರ ಬಿಟ್ಟಿಂದಿ ಕಕ್ಕೆ ಕಡಿಮೆಯಾಗಿ ಕಾಣುವ ಕರ್ತವ್ಯದೃಷ್ಟಿ ಮುಂದಾದರೂ ಏ ಎಜನೆಗೊಂಡೀತೆ?

ಮೈಸೂರು ವಾಣಿಜ್ಯ ಪರೀಕ್ಷೆ

ಉಡುಪಿ: ದಿ.4: ಕಳೆದ ಜೂನ್ತಿಂಗಳಲ್ಲಿ ನಡೆದ ಮೈಸೂರು ವಾಣಿಜ್ಯ ಪರೀಕ್ಷೆಯಲ್ಲಿ ಉಡುಪಿಯ ಶ್ರೀ ಕೃಷ್ಣ ಸ್ಕೂಲ್ ಆಫ್ ಕೊಮರ್ಸಿಯಲ್ ವಿದ್ಯಾರ್ಥಿ ಶ್ರೀ ಕೆ. ಶ್ರೀನಿವಾಸ ಆಚಾರ್ಯರವರು ಸೀನಿಯರ್ ಟೈಪ್‌ರೈಟಿಂಗ್ ಪರೀಕ್ಷೆಯಲ್ಲಿ 15ನೇ ಸ್ಥಾನ ಪಡೆದಿರುವರು. ಜೂನಿಯರ್ ಟೈಪ್‌ರೈಟಿಂಗ್ ಪರೀಕ್ಷೆಯಲ್ಲಿ ಈ ಶಾಲೆಗಿನ ವಿದ್ಯಾರ್ಥಿಗಳು ರ್ಯಾಂಕ್ ಪಡೆದಿದ್ದಾರೆ ಅವರು, ಶ್ರೀಮತಿ (10ನೇ ರ್ಯಾಂಕ್) ವಿಸ್ ವಿ ವಿ ಮೂರ್ತಿರಾವ್ (16ನೇ ರ್ಯಾಂಕ್) ಕು.ಮಂ. ಮಲಸ, ಎ. (16ನೇ ರ್ಯಾಂಕ್) ಕುಮಾರಿ.ರ ಕುಂಳಳ (39ನೇ ರ್ಯಾಂಕ್) ಮಿಸ್ ಎಲಿನ್ ವಕಂತ (35ನೇ ರ್ಯಾಂಕ್).

ಶ್ರೀ ಧನ್ವಂತರೀ ಜಯಂತಿ

ನಂಜನಗೂಡಿನ ಸಜ್ಜೌಷಧಾಲಾ (ಫ್ರೈವೇಟ್) ಲಿಮಿಟೆಡ್‌ನವರು ತಮ್ಮ ಧನ್ವಂತರೀ ವಿಲಾಸದಲ್ಲಿ ತಾ ೯.10.69ರಂದು ಶ್ರೀ ಧನ್ವಂತರೀ ಜಯಂತಿಯನ್ನು ವಿವಿಧ ಕಾರ್ಯಕ್ರಮಗಳಿಂದ ಯಥಾರ್ಥವಾಗಿ ಆಚರಿಸಿದರು. ಇದೇ ಸಂದರ್ಭದಲ್ಲಿ ಸಾಹಿತ್ಯದಲ್ಲಿ ಆಯುರ್ವೇದ ಎಂಬ ಕುರಿತು ಶ್ರೀ ಎಂ. ರಾಮರಾಯರು ಭಾಷಣ ಗೈದರು ಸಂಗೀತ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿತ್ತು

ಮೂಲು

ಗೇಹರಾಜ್ಯದಲ್ಲಿ

ನಾವು ಸುಗತಿಗಾಮಿಗಳು

'ಓ, ಹೋ! ಹೋ! ಹೋ ... ಏನಿದು? ಭಾರೀ ಆಂತಮವಾಗಿದ್ದಂತೆ ತೋರುತ್ತೆ!'

'ಏನು, ಈ ಮೂರು ತಿಂಗ್ಳು ದ.ಡ್ಡು ಮಡ್ಡು ಸುಖಾ ಗಿರೀತಾವಾಗ ಒಂದು ಸೊತ್ತು ಆಯ್ಯವ್ಯಾಂತ ಉಸಿರಾಡೋ ಕೇಂತ ಕೂತೆ...."

"ಹಾಗಲ್ವೆ, ಆತ್ತ ಬಾಕೆಂದು ಕೈವಿಡಿದು ಕಾಲೆಳೆದು ಕರೆದರೂ ದೊರೆಯುದ ಪುರುಸೋತವ ನವರಿಗೆ ಇಂದೇಳು ಏ ಕಾನಿಕೆಯೂಗಿ..."

"ಅಯ್ಯೋ, ನೀಪೊಂದು. ಹೀಗೇ ಕಳೀತು ನಿಪ್ಪ ಆಯುಷ್ಯ—"

"ಏನೇ ಆದು ಅಭದ್ರ ಅನ್ನೋದು? 'ಸಾರ್ಥಜಿಯೇಂಗೆ ಸಾರ್ ಮರೀಂಗೆ' ಅಂತ ಗಣಂ ಗುಣಾ ಅನ್ನುತಿದ್ದವಳೀಗ,'

"ಅಯ್ಯೋ, ಅಲ್ಲಿ, ನಿಮಗೇನೂಂತ?"

'ನನಗೇನಂತೆ?'

"ಫೀವೇ ಆಂದ್ರಂದು, ವಾಚ್ಯಾರ್ಥ, ಲಕ್ಷಣಾರ್ಥ, ಧ್ವನ್ಯರ್ಥ ಎಂದು ಅರ್ಥಗಳು ವ ಸಾರುಂತೆರಂ."

"ಸರಿ. ಯಾರಲ್ಲಾಂತಾರೆ?"

"ಮತ್ತೆ ನನ್ನ ಮೂತಿಗೆ ವಿಪರೀತಾರ್ಥ ಕಟ್ಟಿಕೊಂಡು...."

"ಏನಿ,....ಹಾಗೆಲ್ಲ ಮುಖ ಬೆಂದ ಬದನೇಕಾಯಿ ಮಾಡಿಕೊಳ್ಳುವ್ದರ್...ನೋಡೋಣ, ಹೆಣ್ಣಂ ನಿನ್ನ ಹೀರೇಕಾಯಿ ಮುಖ ಕಂಡ್ರೆ...."

"ಸಾಕು ಬಿಡೀಂದ್ರೆ...."

"ಅಲ್ವೆ, ನಿನ್ನೊಡನೆ ಇಷ್ಟೊಂದು ಆರಾಮವಾಗಿ ಕೂತು ಮಾತಾಡ್ತಿದೆ ನಿನ್ನ ನೂರು ಕಳೆಯಿತು ತಾನೆ?"

"ಸಾಪ ನನಗೂ ಬಿಡುವೆಲ್ಲಿ ಇಡೀ ಮಫೆ ಕೆಲಸ ಮಾಡಿ ಮಾಡಿ, ಸೊಂಟ ಸೋಬಾಫೆಯೂಯ್ತು...."

'ಮತ್ತೆ ನಾನು ಸುಮ್ಮನಿದ್ದೇನೇನು?'

'ಇಲ್ಲಾನ್ನಿ...'

'ಅಂತೂ ಇಂದಿಗೆ ಮೂರು ದಿನ ಕಳೆಯಿತೂನ್ನ....'

'ಯಾಕೆ?'

'ಅಲ್ವೆ, ನಮ್ಮ ಗಾಂಧಿ ಶತಾಬ್ದಿಯ ಆಚರಣೆ ಇವ್ನಿಗೆ ಮುಕ್ತಾಯವಾಪ್ತುತ್ತೆ.'

'ಓ, ಹಾಗೆ. ಅಲ್ವೆ, ನನಗೆ ಮರ್ತೇ ಬಿಸುಗಿತ್ತು....'

"ಏನು? ಗಾಂಧಿ ಶತಾಬ್ದಿಯನ್ನು ಹೇಗೆ ರಚನಾತ್ಮಕವಾಗಿ ಆಚರಿಸಬೇಕೆಂದು ನಾನು ಕೇಳಿದ್ದಾಗ...."

"ನಾನಂದಿದ್ದೆ—ಧೂರು ದಿನ ಕಾಯಕಕಷ್ಟ ಪಡಬೇಕು; ಮೂಳೆ ಕಡಿನೆ ಮೂಡಿ, ಕೃತಿ ದಾಸ್ತಿಯೂಡಬೇಕೂಂತ...."

"ನನಗಾಗ ಏನೋ ಒಂದು ಥರಾ ಆಗ್ತಾ ಇತ್ತು."

'ನಿಂಶದ್ದು ಕಪ್ಪು ಕೂತದ್ದೂ ತಪ್ಪು ಅಂತ ಗೊಣಗುವವರಿಗೆ ಸೇವಾ ವ್ರತ ಹೇಗೆ ಮೈಗೂಡೀತು?'

'ಮತ್ತೆ ಫೀನು ಚಿಪ್ಪರೆಯುವೈನು?'

'ಫೀವು ನೋಟಾಗಿರುವಾಗ ನಾವ್ಯಾಕೆ ಚಿಪ್ಪರೆಯೂಗಿರಬೇಕು?'

'ಹಾಗೆ ಬಾ ಮತ್ತೆ, ಅಲ್ಲ, ನೋಟು ಅನ್ನುವಾಗ ತುಸು ಹೆದರಿಕೆಯೂಗುತ್ತೆ....'

'ಓ, ಕೊಯಂಬುತ್ತೂರು ನೋಟೂಂತೆ...'

'ಹೆಣ್ಣಂ ಇದ್ದರೂ ಇರ್ಬಹುದ ....'

'ನೀವ್ತ ತ್ರಾಸಿಕದ ನೋಟಾದರೆ, ನಾನೂ ಅಲ್ಲಿನವಳೇ....'

'ಆಯ್ತವ್ಮ ಆಯ್ತು. ಅಂತೂ ಹೊಟ್ಟೆ ನೋಟಲ್ಲಾಂತ ಸರ್ಟಿಫಿಕೇಟು ಖಂತು ತಾನೆ!'

'ಬಂತೂನ್ನಿ. ಈಗ ಫೋಡಿ, ಈ ನೂರು ದಿನಗಳಲ್ಲಿ ಲೋಕದಲ್ಲಿ ಏನೇನೆಲ್ಲ ವಡೆಯಿತು ನೋಡಿ....'

"ಏನು ನಡೆದರೆಯೇನು? ಪ್ರಗತಿ ಸೃಷ್ಟಿಯ ಮೂಲ ಋಣ ತಾನೆ?"

"ಅದೂ ಸರೀನ್ನಿ. ಆಮೆರಿಕನ್ನರು ಚಂದ್ರ ಲೋಕದಲ್ಲಿ ಇಳಿದು ಮರಳಿ ಬಂದರು...."

"ಅಲ್ಲಿಂದ ಕೆಲವಾರು ಶಿಲೆಗಳನ್ನೂ ಹೊತ್ತು ತಂದರು."

'ಮತ್ತೆ ನೋಡಿ, ಆ ಶಿಲೆಗಳನ್ನು ಪರೀಕ್ಷೆಗೆ ಗುಂಪೂಡಿದರು...."

"ಪರೀಕ್ಷೆಣ ಕೈಚೀಲದಲ್ಲಿ ತೂತು ಬಿದ್ದಿತಂತೆ..."

"ಇದರಿಂದ ವಿಜ್ಞಾನಿಗೆ ವಿಶ್ರಾಂತವಾಸ ದೊರೆಯಿತಂತೆ...."

"ಆ ಶಿಲೆಯಲ್ಲಿ ವಿಶೇಷವಾದರೂ ವೈಜ್ಞಾನಿಕ ತತ್ವ ಅಡಗಿರಬಹುದು...."

"ಪರಿಶೀಲನೆಗೊಂದು ಮಹತ್ವದ ತತ್ವ ದೊರೆಯಿತಲ್ಲಾ...."

"ಅಲ್ವೆ, ಅದು ಅವೆರಿಕೆಯಲ್ಲಿ. ಇಲ್ಲಿ ವಿಶಾಖದಲ್ಲಿ?'

"ಭಾತಾಕದಲ್ಲಿ?'

'ಹ್ಞೂಂ—'

"ಮಹಾತ್ಮಾಗಾಂಧಿಯವರ ಜನ್ಮ ಶತಾಬ್ದಿಯನ್ನು ಆಚರಿಸಲಾಯಿತು...."

"ಹ್ಞೂಂ.. ಗಾಂಧಿ ಚಿತ್ರಕ್ಕೆ ಇಲ್ಲದ ಆವರಣ ಹೊದಿಸಿ ಅವಾವರಣ ನೂಡಿದರು, ಒಲ್ಲದ ಹೂವೂಲೆ ಹಾಕಿದರು; ಕೆಲುವು ಹಿಡಿದ ಅಂತರಂಗೀಯರು ವೇದಿಕೆಯ ಮೇಲಿಂದ ಗಾಂಧೀ ತತ್ವಗಳನ್ನು ಉಪದೇಶಿಸಿದರು.. ಸಭಾ ಸದಸ್ಯರು ಅಗತಲೆದೂರುತಿದ್ದರು.. ಬೀದಿ ಬೀದಿಯಲ್ಲಿ, ಪಾರ್ಕ್ ಪಾರ್ಕ್‌ನಲ್ಲಿ ಗಾಂಧಿ ವೂರ್ತಿಯನ್ನು ಪ್ರತಿಷ್ಠಾಪಿಸಿದರು. ಬೀದಿಗಳಿಗೆ ಗಾಂಧಿ ಹೆಸರು ಕೊಟ್ಟರು. ಆಂಚೆ ಕಾರ್ಡ್‌ಗಳ್ಲೂ ಗಾಂಧಿ ಚಿತ್ರ ಆಚ್ಚಾಯಿತು."

"ಇನ್ನೂ ಇವೆ ನೋಡಿ, ಗಾಂಧಿ ತತ್ವ ದರ್ಶನ್ನು ಸಂಪೂರ್ಣ ಸನ್ಮಾನಿ ಮೂಡಿದರು..."

"ಯಾಕೆ ಇಷ್ಟಾಗನ್ಮುತ್ತೀಯ?'

'ಅಲ್ಲ, ಹುಡಾತ್ಮರ ಯಾವ ರಚನಾತ್ಮಕ ಕಾರ್ಯವನ್ನು ಮೂಡಿದ್ದಾರೆ? ಬರೀ ಗುಲ್ಲು ಎಬ್ಬಿಸುತ್ತಲೇ ಇಂದಿದ್ದಾರೆ."

'ಅದೂ ಹೌದೂನ್ನಿ. ಕಾಂಗ್ರೆಸ್‌ನ ಮಹಾಮೇಧಾವಿಗಳು ಗಾಂಧಿಯ ಮೂರು ಮಂಗಗಳನ್ನೇ ನಮಂಗ ಮೂಡಿ ಬಿಟ್ಟರು."

"ಓ, ಅದೇ, ಕೆಟ್ಟದ್ದನ್ನು ಆಡಬೇಡ, ಕೆಟ್ಟದ್ದನ್ನು ಮೂಡಬೇಡ, ಕೆಟ್ಟದ್ದನ್ನು ನೋಡಬೇಡ ಅನ್ನುವ ಮಂಗಗಳನ್ನು ತಾನೆ!'

"ಹೆಣ್ಣಂ, ಒಬ್ಬರು ಇಮ್ಮೊಬ್ಬರಿಗೆ ಮೊದಮೊದಲಿಗೆ ಕೆಟ್ಟದ್ದನ್ನು ಆಡಿದರು; ಮತ್ತೆ ಮೂಡಬಹುದಾದ ಕೆಟ್ಟದ್ದನ್ನು ಮೂಡಿದರ.. ಈಗ ತಮ್ಮೊಡನೆ ಬಟ್ಟಕಣ್ಣಿಗಳಿಂದ ಕೆಟ್ಟದ್ದನ್ನು ನೋಡುತ್ತ ಕುಳಿತಿದ್ದಾರೆ."

'ವಂದೇನು ಕೆಟ್ಟದ್ದನ್ನು ಮೂಡಲು ಸಾಧ್ಯವಿಲ್ಲವೇಂತ ಹೋಚಿಸುತಿದ್ದಾರೆ....'

"ಆಗಲಿ, ಗಾಂಧಿ ನೆಟ್ಟಿದ ಕಾಂಗ್ರೆಸ್ಸೇ ಗಾಂಧಿಯವರ ಮಾರ್ಗವನ್ನು ಒಂದಲ್ಲ ಒಂದು ನೆವ ಮುಂದೆ ಮೂಡಿ, ತಿರುಗಿಸಿ ಬಿಟ್ಟಿದೆ.. ಇನ್ನು ಆದು ಯಾವ ರೀತಿ ಹೋದರೂ ಡೊಂಕೆ ತಾನೆ?"

"ಕಲ್ಲಿ ಬಿಡೀಂದ್ರೆ....ರಾಜ್ಯಕೀಯದಲ್ಲಿ ಎಲ್ಲಾ ಹಾಗೆಯೇ ಅಧಿಕಾರದ ಮೇಲೆ ಮೋಹ ನೂಡಿತೆಂಡರೆ, ಯದ್ವಾ ತದ್ವಾ...."

"ಹ್ಞೂಂ ಮತ್ತೀಗ ಏನು ಮೂಡೋಕೆದೆ?"

"ಪ್ರಗತಿಯು ಜಪ ಪೂಲೆ ಹಿಡಿದು ಇಂದಿರಾಗಾಂಧಿ ಮೂಡ ತ್ತಿರುವ ಡೊಂಬರಾಟವನ್ನು ನೋಡುತ್ತ ಕುಳಿತಿರುವುದು."

"ಅಲ್ರಿ, ನೀನೇನು ಪ್ರತಿಗಾಮಿಗಳಂತೆ?"

"ಛೆ-ಛೆ.. ನಾವು ಪ್ರತಿಗಾಮಿಯೂ ಅಲ್ಲ ಪ್ರಗತಿಗಾಮಿಯೂ ಅಲ್ಲ. ಕಾಂಗ್ರೆಸ್ಸಿನ ಎಳಹೂಡ ಬಡಗಳಲ್ಲಿ ಎರಡೂ ಬಗೆಯ ಗಾಮಿಗಳಿದ್ದಾರೆ. ನಾನು ಮೂರನೆಯ ಗಾಮಿ...."

"ಅದು ಯಾವ ಗಾಮಿ ಕತ್ತೆ, ಇದು ತನಕ ಧೂರ ತಿಲೆಗೂ ಹೊಳೆಯದ್ದು?"

'ಸುಗತಿಗಾಮಿ ....'

"ಅಂದರೆ?'

"ಗತಿವಿಹೀನರಿಗಳಕಟ ನೀನೇ ಗತಿ ಎಲ್ಲೆ ಗೋವಿಂದ" ಎಂದು ಗತಿಯು ಹುರಿ ಹೋಗುವರು ಗತಿಗಾಮಿಗಳು..."

'ಇದು ಭಾರೀ ನಿರಾಶಾವಾದ ವಾಗುತ್ತೆ.'

'ಅಲ್ವೆ, ತಂತಮ್ಮ ಕರ್ತವ್ಯಗಳನ್ನು ಮರೆತು ತಮ್ಮ ಪಟ್ಟ ಭದ್ರ ಹಿತದ ಸಂರಕ್ಷಣೆಗಾಗಿ ವಂಡಬಾರದೆ ಮೂತಲಾರದ ಕೆಲಸಗಳನ್ನು ನೂಡುವುದು ಪ್ರಗತಿಗಾಮಿತನವಾದರೆ, ಅಂತಹ ಪ್ರಗತಿ ಯಾರಿಗೆ ಬೇಕು?'

'ಅದೂ ಹೌದೂನ್ನಿ....'

'ಪ್ರತಿಗಾಮಿತನ ನಮಗಾಗದು; ಆತರಿ, ತಾವೆ ಮೂಡದ್ದೇ ಪ್ರಗತಿ ಎಂದು ಸಾಧಿರತ್ತ ಕೂರುವ ಸ್ವಾರ್ಥಿಗಳು...."

'ಹ್ಞೂಂ....ಗುರಾವಿಡಿ ಅನ್ನುನ್ನ...."

'ಅಲ್ವೆ, ಆವ್ರೆಲ್ಲಾ ಈ ಗಾಂಧಿ ಶತಾಬ್ದಿಯಲ್ಲಿ ಪವ್ಮ ಹಾಗೆ ವ್ಯತಾಚರಣೆ ಮೂಡುತಿದ್ದರೆ?'

"ಕಾಂಗ್ರೆಸ್ಸು ಒಡೆಯುತ್ತಿರಲಿಲ್ಲ;ಲಕ್ಷ ಲಕ್ಷ ರೂಪಾಯಿಗಳ ಅಪಾವ್ಯಯವಾಗತ್ತಿರಲಿಲ್ಲ. ಇಕ್ಕಡೆಯೂ ಕೋಪವೂ ತಜ್ಞಾಗಾಗುತಿತ್ತು....ರಾಜಿ ಸಾಧ್ಯವಾಗುತಿತ್ತು...."

"ದೇಶದಲ್ಲಿ ಬೀಸಿದ ಈ ಬಿಳುಗಾಳಿಯ ವೇಳೆ ಸಾವಿ ಗಾಂಧಿ ಹೆಸರಿನಲ್ಲಿ ವಾಸ್ತವ ವ್ಯತಾಚರಣೆ ಮೂಡಿದ್ದರಿಂದ"

"ಓ, ಇವಸ್ತು ಒಂದಾಗಿ ಅರಾವಿವಾಗಿ ಪಂಚಾತಿಕೆಗೆ ಕೂತಿದ್ದೀಪೆ. ಇಲ್ಲವಾದರೆ..."

"ಒಂದು ಸಿಂಡಿಕೇಟ್ ಮತ್ತೊಂದು ಇಂಡಿಕೇಟ್ಸಾಗುತಿತ್ತು..."

"ಮತ್ತೆ ಕೋರ್ಟ್ ಮೆಟ್ಟಿಲು ತುಳೀಬೇಕಾಗುತಿತ್ತೊ ಏನೋ!"

"ಅದು ಸರೀನ್ನಿ.... ಗಾಂಧಿ ತತ್ವ ಎಷ್ಟೊಂದು ಉನ್ನತವಾದದ್ದು!'

"ಯಾರಿಗೆ!'

"ಪ್ರಗತಿಗಾಮಿಗಳಿಗೂ ಅಲ್ಲ, ಪ್ರತಿಗಾಮಿಗಳಿಗೂ ಅಲ್ಲ...."

"ಮತ್ತೆ?"

"ಸಂಗತಿಗಾಮಿಗಳಿಗೆ ಮೂತ್ರ..."

'ಹೆಣ್ಣಂ....ಅದು ನೂರಕ್ಕೆ ನೂರು ಸತ್ಯ.'

—ಗೇಹರಾ

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಪೂರ್ಣ ಭೋಜನ, ಸಕಲ ವಿಧದ ತಿಂಡಿತಿಪಸು
ಪಾರ್ಸಿಯುವರ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 72

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಾನವಜನ್ಮ ದೊಡ್ಡದೇ ನಿಜ

ಲೇಖಕರು : ಶ್ರೀ "ನವಗಿರಿನಂದ"

ಪ್ರಪಂಚದೊಳ್ಗಿನ ಪ್ರಾಣಿವರ್ಗಗಳ ಆಹಾರ ವಿಷಯವನ್ನು ನೋಡುವಾಗ, ಶಾಕಾಹಾರಿ ಪ್ರಾಣಿಗಳು, ಮಾಂಸಾಹಾರಿ ಪ್ರಾಣಿಗಳು ಎಂಬ ಎರಡು ಬಗೆಗಳು ಕಾಣಿಸುತ್ತವೆ. ಅವುಗಳ ಸ್ವಾಭಾವಿಕವಾದ ಆಹಾರಗಳೇ ಹಾಗಿರುತ್ತವೆ.

ಆದರೆ ಮನುಷ್ಯನದೇ?

ಮನುಷ್ಯ ಕೂಡಾ ಇತರ ಪ್ರಾಣಿಗಳ ಹಾಗೆಯೇ ಒಂದು ಪ್ರಾಣಿ ಎಂದು ಜೀವಶಾಸ್ತ್ರವು ಹೇಳುತ್ತದೆ. ಹುಟ್ಟು, ಬೆಳವಣಿಗೆ, ಸಂತಾನೋತ್ಪತ್ತಿ, ನಿದ್ದೆ, ಸಾವು ಇವುಗಳು ಇತರ ಪ್ರಾಣಿಗಳ ಹಾಗೆಯೇ ಮನುಷ್ಯನಿಗೂ ಇರುವುದರಿಂದ ಅವನೂ ಒಂದು ಪ್ರಾಣಿಯೇ.

ಮನುಷ್ಯನ ಇತರ ಪ್ರಾಣಿಗಳಿಗಿಂತ ಬೇರೆಯಾಗಿ ಕಾಣುವುದು ಸಂಪೂರ್ಣ ಶರೀರಕ್ರಿಯೆಯಲ್ಲಿಯೇ. ಆ ಶರೀರಕ್ರಿಯೆಯನ್ನು ಕಳೆದು ಬಿಟ್ಟರೆಂದರೆ ಅವನಿಗೂ ಇತರ ಪ್ರಾಣಿಗಳಿಗೂ ವ್ಯತ್ಯಾಸವೇ ಕಾಣಿಸದು. ಉದಾಹರಣೆಗೆ ಒಟ್ಟೆಯಿರಿಗಳ ವಿಷಯ ಒಂದೇ ಸಾಕು.

ಬಟ್ಟೆಗಳೊಂದಿಗೆ ಕಾಣಿಸುವ ಮನುಷ್ಯ ಪ್ರಾಣಿಯು ಸ್ವಾಭಾವಿಕವಾದ ಆಹಾರ ಯಾವುದು?

ಆದಿಕಾಲದ ಮನುಷ್ಯರು ಮೃಗದಳ ಬೇಟೆಯಾಡಿ, ಗಿಡ ಹಣ್ಣು ತಿನ್ನುತ್ತ ಮೃಗಗಳೊಂದಿಗೆ ಮೃಗವಾಗಿದ್ದನೆಂದು ಗೊತ್ತಾಗಿದೆ. ಅನಿಯಿಲ್ಲದೇ ಆನಪಲ್ಲಿದ್ದ ವಿಶೇಷತೆಯೆಂದರೆ ಆಲೋಚನೆ ಮಾಡತಕ್ಕ ಬುದ್ಧಿಶಕ್ತಿ. ಅಂತಹ ಬುದ್ಧಿಶಕ್ತಿ ಇಲ್ಲದಿರ ಕ್ಷಿಪ್ರರೆ ಬೇಟೆಯೂ ಅವನಿಂದ ಸಾಧ್ಯವಾಗುತ್ತಿರಲಿಲ್ಲ. ಅವನಿಗೆ ಮಾಂಸಾಹಾರಿ ಪ್ರಾಣಿಗಳಿಗಿರಬಹುದಾದ ಉಗುರುಗಳೂ ಕಲ್ಲುಗಳೂ ಇಲ್ಲ. ಜಗ್ಗುವೂ ವೈದುನೇ. ಬರಿಯ ವೈಕೈ ಕಾಲುಗಳಿಂದ ಇತರ ಮೃಗಗಳ ಹಾಗೆ ಬೇಟೆಯಾಡಲು ಅವನಿಂದಾಗಿರಲಿಲ್ಲ. ಆದಕ್ಕೇ ಆ ಬುದ್ಧಿಶಕ್ತಿಯನ್ನು ಕೃಷ್ಟಿಸಿಕೊಂಡ. ಅದಕ್ಕೆಲ್ಲ ಅವನ ಆಲೋಚನೆಗೆ ಅಬ್ಬಿತನೇ ಕಾರಣ! ಬುದ್ಧಿಶಕ್ತಿಯಿಲ್ಲಗ ಪ್ರಾಚೀನ ಪ್ರಾಣಿಗಳು ಕ್ರಮ ಕ್ರಮವಾಗಿ ಅಂತರಿಸಿ ಹೋದುವೇ ಹೊರತು ಅಭಿವೃದ್ಧಿಗೆ ಬರಲಿಲ್ಲವಷ್ಟೆ? ಅಂತಹ ಬುದ್ಧಿಶಕ್ತಿಯೆಂದರೇ ಎಂತೆಂತಹದನ್ನೋ ಕಂಡುಹಿಡಿದು ಈ ದಿನಗಳ ವರೆಗೆ ಬಂದಿದ್ದಾನೆ ಮನುಷ್ಯ. ಇದನ್ನೀಗ ನಾವರಿತಿರುವುದು ಯುಗವೆಂದು ಹೇಳುತ್ತೇವಾದರೂ, ಇನ್ನೊಂದು ನೂರು ವರ್ಷಗಳ ನಂತರ, ಇದೂ ಅನಾಗರಿಕವೆಂಬಷ್ಟು ಅಗಿನ ನಾಗರೀಕತೆ ರಾಕೆಟ್ ಯುಗವೆಂದು ಹೆಸರಿಟ್ಟಿದೆ.

ಇತರ ಪ್ರಾಣಿವರ್ಗಗಳ ಆಹಾರ ವಿಷಯದಲ್ಲಿ ಬದಲಾವಣೆ ಏನೂ ಕಾಣಿಸದಿದ್ದರೂ ಮನುಷ್ಯನಲ್ಲಿ ಕಾಣಿಸುತ್ತ ಇದೆ. ಅವನ ಸ್ವಾಭಾವಿಕವಾದ ಆಹಾರ ಏನೆಂಬುದನ್ನು ಕಂಡುಹಿಡಿಯ ಬೇಕಾದರೆ, ಕಾಡಾಡಿ ಮನುಷ್ಯನ ಕಾಲಕ್ಕಿಂತಲೂ ಹಿಂದೆ ಹೋಗಬೇಕಾದೀತು.

ಕೋತಿಯಿಂದ ಮನುಷ್ಯನು ಪರಿಣಮಿಸಿದನೆಂಬುದು ನಿಜವೋ ಸುಳ್ಳೋ? ಕೋತಿಯಿಂದ ಮನುಷ್ಯಾವತಾರವಾಗಿ ಪರಿಣಮಿಸಿದ್ದು ನಿಜವೇ ಆದರೆ, ಕೋತಿಯ ಜಾತಿಯೇ ಕಾಡೆಸಬಾರದಿತ್ತು ಆ ಕೋತಿಯಂತೂ ಶಾಕಾಹಾರಿ ಪ್ರಾಣಿ. ಮೃದವಾದ ವೈಕೈಗಳ ಮನುಷ್ಯ ಕೂಡಾ ಆದಿಕಾಲದಲ್ಲಿ ಗೆಡ್ಡೆ ಗೆಣಸು, ಎಲೆ ಚಿಗುರು ಬೇರುನಾರುಗಳನ್ನೇ ತಿಂದುಕೊಂಡಿದ್ದಿರಬೇಕು.

ಆದರೆ ಬುದ್ಧಿಶಕ್ತಿಯೊಂದು ಅವನಿಗಿರುವ ಸಂಪ್ರಾಪ್ತಯುದ್ಧಗಾಗಿಪ್ಪೆಗೆ ಅದು ಯೋಚನೆಯನ್ನು ಸ್ಫುರಿಸಿಕೊಂಡೇ ಇತ್ತು, ಮೃಗ ಪಕ್ಷಿಗಳಿಗನ್ನು ನೋಡುತ್ತ, ಅವುಗಳು ತಿನ್ನುವ ಆಹಾರವನ್ನು ತಾನೂ ಏಕೆ ತಿನ್ನಬಾರದು, ಎಂದು ಕೊಂಡ, ತಕ್ಕ ಆಯುಧಗಳನ್ನು ಸೃಷ್ಟಿಸಿಕೊಂಡು ಅವುಗಳ ಬೇಟೆಗೆ ತೊಡಗಿದ. ಹಾಗೆ ಮೆಟ್ಟಿನೆಲ್ಲನೆ ಮಾಂಸಾಹಾರಿಯೂ ಆದ. ಜೊತೆ ಸೀರುಗಳ ಉಪಯೋಗಗಳನ್ನು ಕಂಡು ಹಿಡಿದ, ಅನೇಕ ರೋಗಗಳನ್ನು ಶಮನಗಿಸಿಕೊಂಡ. ಬೇಯಿಸಿಯೂ ಮಾಂಸವನ್ನು ಬೇಕಾದ ಹಾಗೆ ಮಾಡಿಕೊಳ್ಳಲು ತೊಡಗಿದ.

ಮಾಂಸಾಹಾರಿಗಳಾದಂತೆ ಅವರ ಗುಣಗಳೂ ಬದಲಾಗತೊಡಗಿದುವು. ಆದಕ್ಕೆ ನೇರ್ಚ್ಚದನರು ಶಾಕಾಹಾರಿಗಳಾಗಿಯೇ ಪ್ರಕೃತಿ ಹಿಡಿದವರಂತೆ ಇರತೊಡಗಿದರು. ಹೀಗೇ ಮನುಷ್ಯರಲ್ಲಿ ಶಾಕಾಹಾರಿ ಮಾಂಸಾಹಾರಿ ಎಂಬ ಬೇಧಗಳು ಕಾಣಿಸಿದುವು. ಒಟ್ಟಿನಲ್ಲಿ "ಪ್ರಾಣಿ" ಎಂಬ ದೃಷ್ಟಿಯಲ್ಲಿ ನೋಡುವಾಗ "ಮನುಷ್ಯ" ಸರ್ವಭಕ್ಷಕ ಪ್ರಾಣಿ ಎಂಬುವಂತಾಯಿತು. ಸ್ವಲ್ಪ ಒಳ್ಳೆಯ ರೀತಿಯಲ್ಲಿ ಬೇಕಾದರೆ "ಸ್ವೇಚ್ಛಾಹಾರಿ" ಎನ್ನಿಣಾ. ವರ್ಣನೆ ಮಾಡಬೇಕಾದರೆ "ಇಷ್ಟಾಹಾರಿ", "ಮಿಶ್ರಾಹಾರಿ" ಎಂದೂ ಹೇಳಬಹುದು. ಏಕೆಂದರೆ ಮಾಂಸಾಹಾರಿಯೂ ಮನುಷ್ಯ ಶಾಕಾಹಾರವನ್ನೂ ಬಳಸುತ್ತಾನೆ. ಶಾಕಾಹಾರಿಯೂ ಮಾಂಸವನ್ನು ಬಿಟ್ಟಲ್ಲಿ ಇಲ್ಲವೆಯೇ ಹೋಗುವುದೇನಿಲ್ಲ. ಎಲ್ಲಾ ಅವನ ಇಷ್ಟ.

ಉಳಿದ ವಿಷಯಗಳಲ್ಲಿ ಹೀಗಿಲ್ಲ. ಹುಲಿಯು ಮೊಸರಿಗೆ ಗಾಳ ಹೊಡೆದು ಎಂದಿಕ್ಕಿನಲ್ಲಿ ಒಂದು ಜಿಂಕೆ ಮೇಯುತ್ತಿದ್ದರೆ, ಮಾಂಸವೆಯಿಂದಲೇ ತನ್ನ ಆಹಾರವು ಸಮೃದ್ಧವಾಗಿ ದಲ್ಲಿದೆ ಎಂದು ಹುಲಿಗೆ ಗೊತ್ತಾಗುತ್ತದೆ. ಹುಲಿಗೆ ತಾನು ವಿಷವಾದ ಆಹಾರ ಎಂಬ ಪ್ರಜ್ಞೆ ಜಿಂಕೆಗೂ ಇರುತ್ತದೆ.ಎಷ್ಟು ತಪ್ಪಿಸಿಕೊಳ್ಳಲು ನೋಡುತ್ತೆ.

ಹಾಗೆ ಮಾನವನೊಂದಿಗೆ ಜಿಂಕೆ,ದನ, ಮೇಕೆ ಮೊದಲಾದ ಸಾಧು ಪ್ರಾಣಿಗಳು ವಶವಾಗುವುದಿಲ್ಲ. ಮಾನವನೂ ಬಲ್ಮಗಳನ್ನು ಪ್ರಾಣಿಯಿಂದ ಗುರ್ತಿಸುವುದೂ ಇಷ್ಟೆ.

ಮನುಷ್ಯನಲ್ಲಿ ಸ್ವಾಭಾವಿಕವಾಗಿಯೇ ಆಕರ್ಷಿಸುವಂತಹವೆಂದರೆ ಕಣ್ಣು ಕಾಯಿ ಹಲ್ಮಧಾನ್ಯ ಮುಂತಾದುವುಗಳೇ.

ಕೃಷಿಕರೆಯ ಜೀವಿತ ಮೊದಲಲ್ಲೇ ಮೊದಲನೇ ಹೆಜ್ಜೆ ಇಟ್ಟು ಮನುಷ್ಯ ತನ್ನ ಬುದ್ಧಿ ಶಕ್ತಿ ಯೋಚನೆ ವಿಚಾರಗಳಿಂದ ಆಹಾರ ವಿಹಾರಗಳಲ್ಲಿ ನೂರಾರು ಬಗೆಗಳನ್ನಾಗಿಸಿಕೊಂಡಂತೆಯೇ ರೋಗ ರುಜಿನಗಳನ್ನೂ ಅವನಲ್ಲಿ ಹೆಚ್ಚಿಸಲೇ ಬಂದಿವೆ. ಬೇರೆ ಯಾವ ಪ್ರಾಣಿಗಳಿಗೂ ಮನುಷ್ಯರಿಗಿರುವ ರೋಗ ರುಜಿನಗಳಿಲ್ಲ. ಇದ್ದರೂ ಮನುಷ್ಯರು ತಮಗಾಗಿ ಸಾಕುವ ಪ್ರಾಣಿಗಳಲ್ಲಿ ಮಾತ್ರ ಮನುಷ್ಯರಿಗೂ ಕೆಲವು ರೋಗಗಳು ಕಾಣಿಸಿ, ಅವುಗಳಿಗೆ ವಿಷಯ ಡಾಕ್ಟರರೂ ಇದ್ದಾರೆನ್ನಿ. ರೋಗಗಳು ಹೆಚ್ಚಾದಷ್ಟು ರೋಗ ಯೋಧರೆನಿಸುವ ವೈದ್ಯರುಗಳೂ ಡಾಕ್ಟರುಗಳೂ ಬೆಳೆಯಲೂ ಹೆಚ್ಚತ್ತಲೇ ಇವೆ. ಇವೆಲ್ಲ ಹೀಗೆ ಇರಬೇಕಾದ್ದೇ. ಪ್ರಕೃತಿಯನ್ನೆಗೆಳ್ಳುವುದೇ ಬುದ್ಧಿಯ ಗುಣ. ಪ್ರಕೃತಿಗೂ ಮನುಷ್ಯ ಬುದ್ಧಿಯೊಂದಿಗೆ ಹುರ್ರಿ ಮಾಡುತ್ತಲೇ ಇರಬೇಕು. ಎಂದೆಂದಿಗೂ ಶಕ್ಯವಾದ ಹೋರಾಟವಿದ.

ಬೇರೆ ಯಾವ ಪ್ರಾಣಿಗಳಲ್ಲಿಯೂ ಇಲ್ಲದ ಇನ್ನೂ ಕೆಲವು ಗುಣಗಳ ವಿಶ್ಲೇಷಣೆಯನ್ನು ಮಾನವನ ತನ್ನ ಬುದ್ಧಿಶಕ್ತಿ

(ಎಂಟನೇ ಪುಟ ನೋಡಿರಿ)

ಕ್ಷಯರೋಗದ ಚಿಕಿತ್ಸೆ

ಕ್ಷಯರೋಗವು ಗುಣವಾಗುವ ಕಾಯಿಲೆ ಮತ್ತು ಅದಕ್ಕೆ ನಿರ್ದಿಷ್ಟ ಔಷಧಿಗಳಿವೆ ಎಂಬುದು ಮುಖ್ಯವಾಗಿ ತಿಳಿಯಬೇಕಾದ ವಿಷಯವಾಗಿದೆ. ಇಪ್ಪತ್ತೈದು ವರ್ಷಗಳ ಹಿಂದೆ ಈ ರೋಗದೊಡನೆ ಹೋರಾಡಬೇಕಾದರೆ ರೋಗಿಯು ತನ್ನ ದೃಢಪಡಿಸಲಾದ ರೋಗನಿರೋಧಕ ಶಕ್ತಿಯ ಮೇಲೆ ಹೊಂದಿಕೊಂಡಿರಬೇಕಿತ್ತು. ಒಬ್ಬ ವ್ಯಕ್ತಿಯ ದೇಹದೊಳಗೆ ಸೇರಿಕೊಂಡಿರುವ ಈ ರೋಗಾಣುಗಳನ್ನು ಆತನ ದೇಹಕ್ಕೆ ಹಾನಿಯಾಗದಂತೆ ಕೊಲ್ಲುವ ಉತ್ತಮ ಔಷಧಿಗಳಲಿಲ್ಲ. ಇಂದು ಹಲವು ಉತ್ತಮ ಔಷಧಿಗಳು ದೊರಕುವುದರಿಂದ ಚಿಕಿತ್ಸೆಯು ಪರಿಣಾಮಕಾರಿಯಾಗಿರುವುದಲ್ಲದೆ ಸಾಮಾನ್ಯ ಎಲ್ಲಾ ರೋಗಿಗಳಿಗೂ ಎಟಕುವಂತಾಗಿದೆ.

ಈಗ ಈ ರೋಗದ ಚಿಕಿತ್ಸೆಗೆ ದೊರಕುವ ಔಷಧಿಗಳಲ್ಲಿ ಕೆಲವು ಇಂಜೆಕ್ಷನ್ ಮೂಲಕ ಕೊಡುವುದಾದರೂ ಬಾಯಿಯಿಂದ ತಕ್ಕೊಳ್ಳುವ ಎನೇಕ ಔಷಧಿಗಳೂ ಚಿಕ್ಕೇ ಪರಿಣಾಮಕಾರಿಯಾಗಿಯೂ ಶಕ್ತಿಯುತವಾಗಿಯೂ ಇರುವುವು. ಚಿಕಿತ್ಸೆಯು ಫಲಕಾರಿಯಾಗಬೇಕಾದರೆ ಯಾವ ಔಷಧಿಯನ್ನು ತಕ್ಕೊಳ್ಳುವುದು ಎಂಬುದು ಮುಖ್ಯವಲ್ಲ. ಡಾಕ್ಟರರು ನಿರ್ದೇಶಿಸಿದ ಔಷಧಿಯನ್ನು ಬಿಡುವಿಲ್ಲದೆ ಕ್ರಮವಾಗಿ ತಕ್ಕೊಳ್ಳುವುದು. ಒಮ್ಮೆ ಔಷಧಿಯನ್ನು ತಕ್ಕೊಳ್ಳಲು ಆರಂಭಿಸಿದರೆ ಕನಿಷ್ಟ ಸಕ್ಕ 1½ರಿಂದ 2 ವರ್ಷಗಳ ವರೆಗಾದರೂ ಮುಂದುವರಿಸಬೇಕು. ಹಳೆಯ ಕಾಯಿಲೆಯಾದರೆ ಇನ್ನೂ ಹೆಚ್ಚು ಕಾಲ ಚಿಕಿತ್ಸೆ ಮಾಡಿಕೊಳ್ಳಬೇಕು.

ಈಗ ದೊರಕುವ ಔಷಧಿಗಳು ಬಹಳ ಪರಿಣಾಮಕಾರಿಯಾಗಿರುವುದರಿಂದ 4ರಿಂದ 8 ವಾರಗಳೊಳಗೆ ಜ್ವರ, ಕೆಮ್ಮು, ಇತ್ಯಾದಿ ರೋಗದ ಚಿಹ್ನೆಗಳು ತೊರೆದೆ ಹೋಗುವುವು. ಇದರಿಂದ ರೋಗಿಯಲ್ಲಿ ತಾನು ಗುಣವಾದೆನೆಂಬ ತಪ್ಪು ಭಾವನೆ ಏರ್ಪಡುವುದು. ಈ ಹಂತದಲ್ಲಿ ರೋಗಿಯು ವಾಕ್ಚರ ಸಲಹೆಗೆ ವಿರುದ್ಧವಾಗಿ ಅಕಾಲಿಕವಾಗಿ ಚಿಕಿತ್ಸೆಯನ್ನು ನಿಲ್ಲಿಸಿಬಿಟ್ಟರೆ ಚಿಕಿತ್ಸಾಕ್ರಮವು ವಿಫಲವಾಗುವುದು ಯಾ ರೋಗವು ಮತ್ತೊಮ್ಮೆ ತಲೆದೋರಬಹುದು.



ಕ್ಷಯರೋಗ ಮುಕ್ತಿಗಳ ಮಾರಾಟ ಚಳವಳಿಯು ಈ ದಿನಗಳಲ್ಲಿ ನಡೆಯುತ್ತಿರುವುದು. ನಿಮ್ಮ ಟಪ್ಪಾಲುಗಳಲ್ಲಿ, ಶುಭಸಂದೇಶಗಳಲ್ಲಿ, ದಾನವಾಗಿ ಕಳುಹಿಸುವ ಕೆಕ್ಕಿನುಗಳಲ್ಲಿ ದಯಮಾಡಿ ಇವುಗಳನ್ನು ಉಪಯೋಗಿಸಿರಿ. ಈ ರೋಗದ ವಿರೋಧವಾಗಿ ಹೋರಾಡಲು ಇದು ನಿಮ್ಮ ನೇರ ಕಾಣಿಕೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಕ್ಷಯರೋಗ ಸಂಘ. ಮಂಗಳೂರು ಮತ್ತು ಅದರ ಇತರ ಶಾಖೆಗಳಲ್ಲಿ ಈ ಮುದ್ರೆಗಳು ದೊರಕುತ್ತವೆ.

ಈ ಸ್ಥಳದ ದಾನಿಗಳು

Lucas Electrical Tractor Service Ltd, Madras

ಭಾರತದ ಇಬ್ಬರು ಮಹಾನುಭಾವರು

ಟಿಳಕ್ ಮತ್ತು ಗಾಂಧೀಜಿ

ಲೇಖಕರು: ಶ್ರೀ ಆರ್. ಆರ್. ದಿವಾಕರ್

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನವ ಚೈತನ್ಯವನ್ನು ತುಂಬಿ ಮುನ್ನಡೆಸಿದ ಇಬ್ಬರು ಮಹಾನುಭಾವರೆಂದರೆ ಟಿಳಕ್ ಮತ್ತು ಗಾಂಧೀಜಿ. ಭಾರತೀಯರು ರಾಷ್ಟ್ರೀಯವಾದ ಬಲವತ್ತರವಾಗಿತ್ತು. ಅದನ್ನು ಒಂದು ಪ್ರಬಲವಾದ ಜನಾಂದೋಲನವನ್ನಾಗಿ ಪರಿವರ್ತಿಸಿದ ಶ್ರೇಯಸ್ಸು ಇವರಿಬ್ಬರಿಗೇ ಸಲ್ಲುತ್ತದೆ. ಟಿಳಕ್ ಮತ್ತು ಗಾಂಧೀಜಿ ಇಬ್ಬರೂ ಕಿಸಿದ್ದಕ್ಕೂ ಸಮರ್ಥನೆಯು ಪ್ರತೀ ಕವಾಗಿದ್ದರು. ಭಾರತೀಯರಲ್ಲಿ ದಕಾಲದ ಬಗ್ಗೆ ಅಭಿಮಾನವನ್ನು ಮೂಡಿಸುವುದರ, ಸಂಸ್ಕೃತಿಯ ಬಗ್ಗೆ ಪೆಮ್ಮೆ ತಳೆಯುವಂತೆ ಮಾಡುವುದೂ ಅವರ ಘನವಾದ ಉದ್ದೇಶವಾಗಿದ್ದಿತು. ಸ್ವಯಮಾಡಳಿತ ಅಥವಾ ಸ್ವರಾಜ್ಯ ಸಾಧನೆಗೆ ಅತ್ಯವಶ್ಯವಾಗಿ ಇರಬೇಕಾದ ಮೂಲಭೂತ ಗುಣಗಳನ್ನು ವೃದ್ಧಿಗೊಳಿಸುವುದು ಅವರ ಇನ್ನೊಂದು ಉದ್ದೇಶವಾಗಿದ್ದಿತು. ಲೋಕಮಾನ್ಯ ಟಿಳಕ್ ಮತ್ತು ಗಾಂಧೀಜಿ ಅಸಾಧಾರಣ ಸಾಮರ್ಥ್ಯದ ಹಾಗೂ ಚಾರಿತ್ರ್ಯದ ವ್ಯಕ್ತಿಗಳಾಗಿದ್ದರು. ಅವರ ಸಮಗ್ರತೆ ಹಾಗೂ ಪ್ರಾಮಾಣಿಕತೆ ಸುವಿಖ್ಯಾತವಾಗಿದ್ದಿತು. ಭಾರತದ ಪುನರುದ್ಧಾರಕ್ಕಾಗಿ ಹಾಗೂ ಭಾರತೀಯರ ಸರ್ವತೋಮುಖ ಏಳಿಗೆಗಾಗಿ ಅವರು ಹಗಲಿರುಳೆಶ್ಟೇ ಶ್ರಮಿಸಿದರು.

ರಾಷ್ಟ್ರಗಳ ಹಾಗೂ ಅದೇ ರೀತಿ ವ್ಯಕ್ತಿಗಳ ಜೀವನ ಶ್ರೇಯಸ್ಸನ್ನು ನಿರ್ಣಯಿಸುವ ಸಾರ್ವಜನಿಕ ಜೀವನದ ಶ್ರೇಷ್ಠ ಮೌಲ್ಯಗಳ ಬಗ್ಗೆ ಜನರಿಗೆ ಕಂಬುಗೆ ಇದ್ದಿತು. ಜನರಲ್ಲೂ ಅವರಿಗೆ ವಿಶ್ವಾಸವಿದ್ದಿತು. ಈ ಗುಣಗಳೇ ಅವರನ್ನು ಸ್ವರಾಜ್ಯ ದಾಗೂ ಪ್ರಜಾಸ್ವಭುತ್ವದ ನಿರ್ಭೀತ ಯೋಧರನ್ನಾಗಿ ಮಾಡಿದವು.

ಟಿಳಕ್ ಮತ್ತು ಗಾಂಧೀಜಿ ಇಬ್ಬರೂ ಒಂದು ಘನವಾದ ಧ್ಯೇಯವನ್ನು ಸಾಧಿಸುವ ಸಂಕಲ್ಪದಿಂದಲೇ ಸಾರ್ವಜನಿಕ ಜೀವನವನ್ನು ಆರಂಭಿಸಿದರು. ಸೇವೆಯಲ್ಲಿ ಅವರು ಎಲ್ಲೂ ತಕ್ಷಲ್ಲಿಲ್ಲ. ಸೋವುಗಳನ್ನು ಅನುಭವಿಸಲು ಅವರು ಎಂದೂ ಹಿಂಜರಿಯಲಿಲ್ಲ. ತ್ಯಾಗಕ್ಕೆ ಅವರು ಸದಾ ಸಿದ್ಧರಾಗಿದ್ದರು. ಆತ್ಮಾರ್ಪಣೆಗಾಗಿ ಅವರು ಸಿದ್ಧರಾಗಿದ್ದರು. ಟಿಳಕ್ ಮತ್ತು ಗಾಂಧೀಜಿ ಅವರಿಗೆ ಜನರೆಂದರೆ ಅಪಾರ ಪ್ರೀತಿ. ಜನರ ಹಿತಾಸಕ್ತಿಗಳನ್ನು ಅರಿತುಕೊಂಡು ಅವರೊಂದಿಗೆ ಒಂದಾಗಿ ಕಡೆಯುತ್ತಿದ್ದರು. ಈ ಗುಣಗಳೇ ಅವರಿಗೆ ಸ್ವಾತಂತ್ರ್ಯ ಸಂಕಲ್ಪದ ಸಾಧನೆಗೆ ಬೇಕಾದ ಶಕ್ತಿ-ಸಾಮರ್ಥ್ಯಗಳನ್ನು ತಂದು ಕೊಟ್ಟವು.

ಏಕಮೇವ ಆದರ್ಶ

ಟಿಳಕ್ ಕ್ರಿಸ್ತಶಕ 1856ರಲ್ಲಿ ಜನಿಸಿದರು. ಸ್ವರಾಜ್ಯಕ್ಕಾಗಿ ಹೋರಾಡುತ್ತಲೇ ಮಡಿದರು. ಗಾಂಧೀಜಿಯವರು ಟಿಳಕರು ಜನಿಸಿದ ಹದಿನಾರು ವರ್ಷಗಳ ಬಳಿಕ ಜನಿಸಿದರು 1947ರಲ್ಲಿ ಸ್ವರಾಜ್ಯದ ಗುರಿ ಸಾಧ್ಯವಾದುದನ್ನು ಕಂಡರು. "ಅಹಿಂಸೆಯ ಮೂಲಕವೇ ಸತ್ಯ"ವನ್ನು ಕಂಡುಕೊಂಡ ಅವರು 1948ರಲ್ಲಿ ಹಂತಕನೊಬ್ಬನ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಮಾತ್ರವಲ್ಲ, ಕಾಲದ ಪ್ರಕಾರ ಟಿಳಕ್ ಹಾಗೂ ಗಾಂಧೀಜಿ ಕ್ರಿಸ್ತಶಕ 1915ರ ವರೆಗೆ ಮಾತ್ರ ಸಮಕಾಲೀನ ವ್ಯಕ್ತಿಗಳೆಂದು ಹೇಳಬಹುದು. ಆಗ ಅವರಿಬ್ಬರೂ ದೇಶದ ಬೇರೆ-ಬೇರೆ ಭಾಗಗಳಲ್ಲಿ ಕಾರ್ಯತತ್ಪರರಾಗಿದ್ದರು. ಜನತೆಯನ್ನು ಹೋರಾಟಕ್ಕೆ ಸಜ್ಜುಗೊಳಿಸಿದಾಗ ಟಿಳಕ್ ಹಾಗೂ ಗಾಂಧೀಜಿ ಇಬ್ಬರು ಸ್ಥಳ ಹಾಗೂ ಕಾಲ ಇವೆರಡರ ದೃಷ್ಟಿಯಿಂದ ಸಮಕಾಲೀನರಾಗಿದ್ದರು.

ಟಿಳಕ್ ಮತ್ತು ಗಾಂಧೀಜಿ ಇಬ್ಬರೂ ಒಟ್ಟಾಗಿ ಶ್ರೀಯೂತಶೀಲರಾಗಿದ್ದರು. ಮುಂದೆ 1920ರ ಆಗಸ್ಟ್ 1ರಂದು ಟಿಳಕರು ನಿಧನ ಹೊಂದಿದ ಬಳಿಕ ಈ ಕ್ಷೇತ್ರದಲ್ಲಿ ಗಾಂಧೀಜಿಯವರ ಏಕಾಕಿಯಾಗಿದ್ದರು. ಭಾರತದ ರಾಜಕೀಯ ಕ್ಷೇತ್ರದಲ್ಲಿ ಟಿಳಕ್ ಮತ್ತು ಗಾಂಧೀಜಿ ಒಂಬೈ ಸಮಾನೆ ಐದು ವರ್ಷ ಹಾಗೂ ಏಳು ತಿಂಗಳುಗಳ ಕಾಲ ಒಂದಾಗಿ ಕೆಲಸ ಮಾಡಿದರು.

ಭಾರತದ ಈ ಇಬ್ಬರು ಸಮಕಾಲೀನ ವ್ಯಕ್ತಿಗಳು ಒಟ್ಟಾಗಿ ಕೇವಲ ಮೂಡಿದ ಈ ಅವಧಿ ಅಲ್ಪಾವಧಿಯಾಗಿ ಕಂಡುಬಂದರೂ, ಆದುನಿಕ ಭಾರತದ ಇತಿಹಾಸದಲ್ಲಿ 1915—1920ರ ಪರಿಗಿಸಿ ಈ ಅವಧಿ ಅನೇಕ ಕಾರಣಗಳಿಂದಾಗಿ ಅತ್ಯಂತ ಮಹತ್ವಪೂರ್ಣ ಕಾಲವಾಗಿದ್ದಿತ್ತು.

ಮೊದಲನೆಯ ವಿಶ್ವ ಸಮರದ ಕಾರಣದಿಂದಾಗಿ ಇಡಿ ವಿಶ್ವದಲ್ಲಿ ಬಿಕ್ಕಟ್ಟಿನ ಸ್ಥಿತಿ ತಲೆದೋರಿದ್ದ ಈ ಅವಧಿಯಲ್ಲೇ ಭಾರತದಲ್ಲೂ ಅಸಾಧಾರಣವಾಗಿ ಜಾಗೃತಿಕಂಡು ಬಂದಿತು. ಇದು ಸ್ವಾತಂತ್ರ್ಯ ಹೋರಾಟದ ವಿಧಾನದ ಪರಿವರ್ತನೆಯ ಕಾಲವೂ ಆಗಿದ್ದಿತು. ಭಾರತದಲ್ಲಿ ಇಬ್ಬರು ಮಹಾನ್ ವ್ಯಕ್ತಿಗಳು ಸ್ವಾತಂತ್ರ್ಯ ಸಾಧನೆಗಾಗಿ ಶ್ರಮಿಸುತ್ತಿದ್ದರು.

ಟಿಳಕ್ ಮತ್ತು ಗಾಂಧೀಜಿ ಅವರ ಗುರಿ ಒಂದೇ. ಭಾರತಕ್ಕೆ ಸ್ವರಾಜ್ಯ ತಂದು ಕೊಡುವುದು ಹಾಗೂ ಭಾರತದ ಜನರು ತ್ಯಾಗ ಸಾಧಿಸುವುದೇ ಈ ಗುರಿ ಸಾಧನೆಗೆ ಟಿಳಕ್ ಹಾಗೂ ಗಾಂಧೀಜಿ ಅನುಸರಿಸಿದ ಹಾಗೂ ಸಮರ್ಥಿಸಿದ ಸಂಘಾರಕ್ಕೆ ಸೂಚಿಸಿದ ಮಾರ್ಗಗಳಲ್ಲಿ ಸಾಕಷ್ಟು ಭಿನ್ನತೆಯಿದ್ದಿತು. ಇದು ಎಲ್ಲರಿಗೂ ಗೊತ್ತಿದ್ದ ವಿಷಯ. ಸ್ವಯಂ ಟಿಳಕ್ ಹಾಗೂ ಗಾಂಧೀಜಿ ಅವರೇ ತಮ್ಮ ಅಭಿಪ್ರಾಯಗಳು ಭಿನ್ನವಾಗಿದ್ದವೆಂಬ ವಿಷಯವನ್ನು ಸ್ಪಷ್ಟಪಡಿಸಿದ್ದರು. ತಮ್ಮ ವಿಚಾರ—ಆದರ್ಶಗಳ ಫಲವಾಗಿ ಮೂಡಿಸಿದ ಕಾರ್ಯಾಚರಣೆಯಲ್ಲಿ ಭಿನ್ನತೆಯಿದ್ದರೂ, ಸಂಘರ್ಷ ವಿವಾದಕ್ಕೆ ಕಾರಣವಾಗದಂತೆ ಅವರು ಎಚ್ಚರಿಕೆ ವಹಿಸಿದ್ದರೂ. ಇಲ್ಲಿ ನಾವು ಅವರ ನಿಜವಾದ ಹಿರಿಮೆಯನ್ನು ಕಾಣುತ್ತೇವೆ. ತಮ್ಮ ನಡುವೆ ವಿವಾದ ಉಂಟಾದರೆ ಅದು ವಿನಾಶಕಾರಿ ಎಂಬುದನ್ನು ಗಾಂಧೀಜಿ ಹಾಗೂ ಟಿಳಕ್ ಇಬ್ಬರೂ ಚೆನ್ನಾಗಿ ಅರಿತುಕೊಂಡಿದ್ದರು. ಈ ವಿಶೇಷವನ್ನು ಅವರು ತೋರಿಸಿದ ಸಂಯಮ ಅವರ ಆಂತರಿಕ ಸಂಸ್ಕೃತಿ ಹಾಗೂ ರಾಜಕೀಯ ಪ್ರಬುದ್ಧತೆಯ ದ್ಯೋತಕ.

ಮಹಾಸಾಗರ ಮತ್ತು ಗಂಗಾ

ಟಿಳಕ್ ಮತ್ತು ಗಾಂಧೀಜಿ ಅವರು ಪರಸ್ಪರ ವಿಚಾರದಲ್ಲಿ ಅತ್ಯಂತ ಗೌರವ ಆದರಗಳನ್ನು ತೋರಿಸುತ್ತಿದ್ದರು. ಗಾಂಧೀಜಿ ಅವರು ದಕ್ಷಿಣ ಆಫ್ರಿಕೆಯಲ್ಲಿ ನಡೆಸಿದ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಲೋಕಮಾನ್ಯ ಟಿಳಕರು ತಮ್ಮ "ಕೇಸರಿ" ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಗಾಂಧೀಜಿ ದಂಗತಿಗಳಿಗೆ ವೈಯಕ್ತಿಕವಾಗಿ ಗೌರವ ಸಲ್ಲಿಸುವ ಸಂದರ್ಭ ಬಂದಾಗ ಅವರನ್ನು ಕಂಡು ಗೌರವ ಸಲ್ಲಿಸುತ್ತಿದ್ದರು.

ಆಗಿನ ಮುಂಬಯಿ ಸರ್ಕಾರದ ಪೋಲೀಸ್ ವರದಿಗಳ ಪ್ರಕಾರ, "1915ರ ಜನವರಿ 13ರಂದು ಗಾಂಧೀಜಿ ದಂಪತಿಗಳನ್ನು ಸ್ವಾಗತಿಸಲು ಮುಂಬಯಿನ ಹಿರಾಬಾಗ್‌ನಲ್ಲಿ ನ್ಯಾಶನಲ್ ಯೂನಿಯನ್ ಸಭೆ ನಡೆಯಿತು. ಟಿಳಕ್ ಅವರಿಗೆ ಭಾಷಣ ಮಾಡಲು ಆಹ್ವಾನವಿರದಿದ್ದರೂ ಅವರು ಈ ಸಂದರ್ಭದಲ್ಲಿ ಮಾತನಾಡುತ್ತ, "ದೂರದ ದೇಶದಲ್ಲಿ ಭಾರತದ ಗೌರವ ರಕ್ಷಣೆಗಾಗಿ ಹೋರಾಡಿದ ಗಾಂಧೀಜಿ ದಂಪತಿಗಳನ್ನು ಗೌರವಿಸುವುದು ಭಾರತೀಯರ ಕರ್ತವ್ಯ." "ಭಾರತದಲ್ಲಿ ಗಾಂಧಿಜಿ ದಾಪತಿಗಳಂತಹ ಶೂರರು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಜನಿಸಬೇಕು" ಎಂದು ಹೇಳಿದರು. ಗಾಂಧೀಜಿಯವರು ಲೋಕಮಾನ್ಯ ಟಿಳಕ್ ಅವರ ಪ್ರಭಾವಕ್ಕೆ ಉತ್ತರವಾಗಿ ಮಾತನಾಡುತ್ತ, ಮುಂಬಯಿಯಲ್ಲಿ ಟಿಳಕರನ್ನು ಕುರಿತು ತಮಗೆ ಹಂತೈಷವಾಗಿದೆಯೆಂದೂ, ಪೂನಾದಲ್ಲಿ ಮತ್ತೊಮ್ಮೆ ಅವರನ್ನು ಭೇಟಿಯಾಗುತ್ತೇನೆಂದೂ ಹೇಳಿದರು. ಪೂನಾದಲ್ಲಿ ಭೇಟಿಯಾದಾಗ ಗಾಂಧೀಜಿ ಟಿಳಕರನ್ನು "ಒಂದು ಮಹಾಸಾಗರ" ವೆಂದು ಕರೆದರು. ನೋಪಾಖಾಲಿಯ ಗೋಲಿಬಾರಿನ ವರದಿಗಳನ್ನು ಗಾಂಧೀಜಿ "ಗಂಗಾನದಿ"ಗೆ ಹೋಲಿಸಿದ್ದರು.

ಗಾಂಧೀಜಿ ಟಿಳಕರೊಂದಿಗೆ ತೊಡಗಾಡುತ್ತಿದ್ದಾಗ ಅವರ ಆರೋಗ್ಯದ ಬಗ್ಗೆ ಪತ್ರ ವ್ಯವಹಾರ ನಡೆದಿದ್ದಾಗ, ಅವರನ್ನು "ಟಿಳಕ್ ಮಹಾರಾಜ್" ಎಂದೇ ಉಲ್ಲೇಖಿಸುತ್ತಿದ್ದರು. ಅಹ್ಮದಾಬಾದ್ ಆಶ್ರಮದ ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತಾ, ಗಾಂಧೀಜಿ ಅವರು "ಭಾರತದಲ್ಲಿ ಇಂದು ಲಕ್ಷ—ಲಕ್ಷ ಜನ ಒಬ್ಬ ನಾಯಕನ ಬಗ್ಗೆ ಸಂಪೂರ್ಣ ವಿಶ್ವಾಸವಿಟ್ಟಿದ್ದಾರೆ ಅವರಿಗಾಗಿ ಏನೆಲ್ಲವನ್ನು ತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ಆ ನಾಯಕ ಯಾರೆಂದರೆ—ಟಿಳಕ್ ಮಹಾರಾಜ್ ....ಎಂದು ಹೇಳಿ ಟಿಳಕರ ಜನಪ್ರಿಯತೆಯನ್ನು ಮೆಚ್ಚಿಕೊಂಡಿದ್ದಾರೆ.

ಯುದ್ಧದ ವಿಷಯ ಭಾರತ ಮಂತ್ರಿಗಳ ಮಟ್ಟದಲ್ಲಿ ಟಿಳಕ್ ಅವರಿಗೆ ಸಾಕಷ್ಟಾದರೂ ಮುಂಬಯಿ ಸರ್ಕಾರದ ಅನುಮತಿ ಕೊಡಲಿಲ್ಲ. ಗಾಂಧೀಜಿ ಅವರು ಮುಂಬಯಿ ಗವರ್ನರರ ಈ ವರ್ತನೆಯನ್ನು ಖಂಡಿಸಿದರಲ್ಲದೇ ಟಿಳಕ್ ಅವರಿಗೆ ಈ ರೀತಿ ಮಾಡಿದ್ದಕ್ಕಾಗಿ ಸಾರ್ವಜನಿಕ ಕ್ಷಮೆ ಯಾಚಿಸಬೇಕೆಂದು ಮುಂಬಯಿ ಗವರ್ನರರಿಗೆ ಗಾಂಧೀಜಿ ಹೇಳಿದರು. "ಯೆಂಗ್ ಇಂಡಿಯಾ" ಪತ್ರಿಕೆಯಲ್ಲಿ ಟಿಳಕ್‌ರ ನಿಧನದ ಬಗ್ಗೆ ಗಾಂಧೀಜಿ ಅವರು ಪ್ರಕಟಿಸಿದ ಶ್ರದ್ಧಾಂಜಲಿ ಅಪೂರ್ವವಾಗಿದ್ದಿತಲ್ಲದೇ ಹೃದಯ ಸ್ಪರ್ಶಿಯಾಗಿದ್ದಿತು. ಅದರಲ್ಲಿ ಟಿಳಕರ ಶೌರ್ಯ—ಸಾಹಸದ ಗುಣಗಳನ್ನು ತಂಬ ಮೆಚ್ಚಿಕೊಂಡಿದ್ದರು.

ಗಾಂಧೀಜಿ ಸಕ್ರಿಯವಾಗಿ ಭಾರತದ ರಾಜಕೀಯ ರಂಗವನ್ನು ಪ್ರವೇಶಿಸಿದಾಗ, ಲೋಕಮಾನ್ಯ ಟಿಳಕರು ರಾಜಕೀಯ ರಂಗದಲ್ಲಿ ಪ್ರಖ್ಯಾತರಾಗಿದ್ದರು. ಭಾರತದ ರಾಜಕೀಯ ಕ್ಷೇತ್ರದಲ್ಲಿ ಹೊಸದಾಗಿ ಉದಯವಾದ ನಕ್ಷತ್ರದ ಅರ್ಪತೆಯನ್ನು ಕಂಡುಕೊಳ್ಳುವ ಅಂತರ್‌ದೃಷ್ಟಿ ಟಿಳಕ

ಉನ್ನತಸ್ಥಿತಿ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ

111 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ

ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ

"ಜೀವನ-ನಿಧಿ"ಯಲ್ಲಿ

ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1931)

ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು—3.

ಆಡಳಿತ ಕಛೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, ನೇಸ್ ಕೋರ್ಸ್ ರೋಡ್, ಬೆಂಗಳೂರು-1

ಕಾಂಗ್ರೆಸ್ ಮುನ್ನಡೆ ಮತ್ತು ಇಂದಿನ ಪರಿಸ್ಥಿತಿಯ ಹಿನ್ನೆಲೆ

ಕಾಂಗ್ರೆಸ್ ಸಂಸ್ಥೆ ಇಂದು ಅತ್ಯಂತ ಜಟಿಲ ಪರಿಸ್ಥಿತಿಯಲ್ಲಿ ನಿಂತಿದೆ.

85 ವರ್ಷಗಳ ಕಾಲ ದೇಶದಲ್ಲಿ ಅನೂನ ರಾಷ್ಟ್ರೀಯ ಸಂಸ್ಥೆ ಎನಿಸಿ, ಜಗದ್ವಿಖ್ಯಾತ ಪಡೆದು, ಭಾರತ ಸ್ವಾತಂತ್ರ್ಯ ಸಾಧಿಸಿ ವಿಶ್ವದ ಅತ್ಯಂತ ಮಹೋನ್ನತ ಪ್ರಜಾಸತ್ತೆಯನ್ನು ರೂಪಿಸಿತು ಕಾಂಗ್ರೆಸ್.

ಸ್ವಾತಂತ್ರ್ಯ ಸಾಧನೆಯಾಗಿ 20 ವರ್ಷಗಳ ಕಾಲ ಭಾರತದಲ್ಲಿ ಭದ್ರವಾದ ಪ್ರಜಾಸತ್ತೆಯನ್ನು ಬೆಳೆಸಿ, ಭದ್ರಪಡಿಸಿಕೊಂಡು ಕಾಂಗ್ರೆಸ್ ಸಂಸ್ಥೆ ಮುಪ್ಪಡೆಯಿತು. ಕಾಂಗ್ರೆಸ್ ಸರಕಾರಗಳು ದೇಶದ ಜನಕೋಟಿಯ ಏಳಿಗೆಗಾಗಿ ಸಂಕಲ್ಪಭದ್ಧವಾಗಿ ಯೋಜನೆಗಳನ್ನು ರೂಪಿಸಿ, ಅವುಗಳನ್ನು ಕಾರ್ಯಗತಗೊಳಿಸಿದವು. ಇಂದು ದೇಶ ಎಲ್ಲಾ ರೀತಿಯಿಂದಲೂ ಮುನ್ನಡೆಯುತ್ತಿದೆ, ಅಭಿವೃದ್ಧಿ ಪೊಂದುತ್ತಿದೆ.

ಆದರೆ, ಪ್ರಜಾಸತ್ತಾತ್ಮಕ ಆಡಳಿತೆಯಲ್ಲಿ ಪ್ರಗತಿಪರ ಸಾಧನೆಗಳಿಲ್ಲ ಜನತೆಯು ಸಹಕಾರದಿಂದಲೇ ಸಾಗಬೇಕಾಗುತ್ತದೆ. ಸರಕಾರಿ ಆಜ್ಞೆಗಳನ್ನು ಆದಳಿತ ಶಾಪ ಕಾರ್ಯರೂಪ ಮಾಡಬೇಕಾಗುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತರೂ ನನ್ನು ಆಡಳಿತ ಶಾಹಿ ಬ್ರಿಟಿಷರು ಸಾಮ್ರಾಜ್ಯ ಶಾಹಿ ಬ್ರಿಟಿಷರು ಎಂದು, ಆದು ಹಳೆಯ ಜಾಡಿನಲ್ಲೇ ಪಡೆಯುತ್ತದೆ. ಎಂಬಲೇ ಯೋಜನೆ ಕಾರ್ಯಗತವಾಗುವುದು ನಿಧಾನವಾಗುತ್ತದೆ. ಅನೇಕ ವೇಳೆ ಆಡಳಿತ ಶಾಹಿಯು ಜನನೆಯ ಪಡೆಗೂಡಿ ಅವರೊಡನೆ ಬೆರೆತು ಸಹಕರಿಸಿ ದುಡಿಯುತ್ತಿಲ್ಲ. ಆದೂ ಪ್ರಜಾಸತ್ತೆಯಲ್ಲಿ ಸರ್ವಾಧಿಕಾರಿಗಳಂತೆ ಬಲಾತ್ಕಾರ, ಒತ್ತಾಯಗಳು, ಹೆದರಿಕೆ, ಬೆದರಿಕೆಗಳಿಂದ ಕೆಲಸ ಮಾಡಿಸುವುದೂ ಸಾಧ್ಯವಿಲ್ಲ. ಅಧಿಕಾರಿಗಳಲ್ಲೋ ಪೌಕರರಲ್ಲೋ ಪಲಬಂದಂತೆ ಶಿಕ್ಷೆಗಳು ಸಾಧ್ಯವಿಲ್ಲ. ಆಡಳಿತ ಪಕ್ಷ, ಜನತಾ ಪ್ರತಿನಿಧಿಗಳು, ಸರಕಾರೀ ನೌಕರರು ಹಾಗೂ ಜನತೆ ಹೊಂದಿಕೊಂಡು ಸಹಕರಿಸಿ ದೇಶದ ಹಾಗೂ ಜನತೆಯ ಉಜ್ವಲ ಸಾಧಿಸಬೇಕು. ಭಾರತ ಸರಕಾರ ಈ ಹಾದಿಯಲ್ಲಿ ಮುನ್ನಡೆದಿದೆ. ಕಾಂಗ್ರೆಸ್ ಪಕ್ಷ ಸಂಸ್ಥೆಯು ಈ ನಡೆಯನ್ನು ನಿರ್ಣಯಿಸಿದೆ

ಪ್ರಜಾಸತ್ತೆಯಲ್ಲಿ ವ್ಯವಸ್ಥಿತವಾದ ಸಫಲವಾದ ಸಾಧನೆಗಳು ನಿಧಾನವಾಗಿ ಪದು ಸಹಜ, ಆದರೆ ಈ ನಿಧಾನವನ್ನು ಖಂಡಿಸಿ, ನಾಗಾಲೇಟುಬಂದ ಮುನ್ನಡೆಯಬೇಕೆಂದು ಕಪಸು ಕಾಣುವವರಿಗೂ ಕಡಿವೆಯಿಲ್ಲ ಜನತೆ ಶೀಘ್ರ ಫಲ ಬೇಡತ್ತಾರೆ. ಅವರ ಬೇಡಿಕೆಗೆ ಉಗ್ರಗಾಮಿಗಳೂ, ತೀವ್ರಗಾಮಿಗಳೂ ಪ್ರಚೋದನೆ ನೀಡುತ್ತಾರೆ. ಇದರಿಂದಾಗಿ ಅತೃಪ್ತಿಯೂ ಹೆಚ್ಚುತ್ತದೆ.

ಹೀಗೆ ಅತೃಪ್ತಿಯನ್ನು ಬೆಳೆಸಲು ಕಾರಣವಾದವರೆಂದರೆ 1) ಪ್ರಜಾಸತ್ತೆಯಲ್ಲಿ ನಂಬಿಕೆಯಿಲ್ಲದವರು, 2) ಸರ್ವಾಧಿಕಾರ ಬಯಸುವ ಕಮ್ಯೂನಿಸ್ಟರು 3) ಆಡಳಿತೆಯ ಅರಿವು ಅನುಭವವಿಲ್ಲದವರು 4) ಜೆಗಿಂದರೂ ಮಾಡಿ ಜನ ಬೆಂಬಲ ಗಳಿಸಲು ಬಯಸುವವರು ಹಾಗೂ 5) ಕೊನೆಯದಾಗಿ ನಿರುದ್ಯೋಗಿಗಳು ಅರ್ಥಾತ್ ಹೊಣೆಗಾರಿಕೆಯಿಲ್ಲದವರು.

ವಾಸ್ತವವಾಗಿ ಉಕ್ಕು, ಬಿತ್ತಿ, ಬೆಳೆ ಬೆಳೆದ ಫಲಕಾಣುವ ರೈತನಿಗೆ, ಬೆಳೆ ಬೆಳೆಗೆ ಬರಲು ಅವಿನ್ನು ನಿಧಾನವಾಗುತ್ತದೆ ಎಂಬುದು ಗೊತ್ತಿದೆ. ಕಾರ್ಮಿಕನಿಗೂ ಅಂತಹ ಅರಿವು ಇದೆ. ಕೆಲಸ ನೂಡಿದ ಕೂಡಲೇ ಫಲಕಾಣುವವರಿಗೆ ಈ ಅನುಭವ ಹಾಗೂ ಸಹನೆ ಇಲ್ಲದಿರಬಹುದು. ಆದರೆ, ಪ್ರಚೋದಕರ ಪ್ರಚೋದನೆಯಿಂದ ಅರಿವಿದ್ದವರೂ ಗಲಿಬಿಲಿಗೊಳ್ಳುತ್ತಾರೆ.

ಇಂಥ ಇಂತಹ ಪರಿಸ್ಥಿತಿ ದೇಶದಲ್ಲಿ ಉಂಟಾಗಿದೆ.

ಭದ್ರವಾದ ಕಳಕಳಿಯು ಮೇಲೆ ಪ್ರಜಾಸತ್ತೆಯನ್ನು ನಿರ್ಮಿಸಿ ಸ್ವಯಸ್ಥಿತವಾಗಿ ಯೋಜನಾ ಬದ್ಧವಾಗಿ ಸಂಪದಭಿವೃದ್ಧಿ ಸಾಧಿಸಿ, ಸಾಧಾರ್ಥಕ ಹಾಗೂ ಶಾಂತಿಯುತವಾಗಿ ಪ್ರಜಾಸತ್ತಾತ್ಮಕ ಸಮಾಜವಾದ ರೂಪಿಸಲು ಕಾಂಗ್ರೆಸ್ ಸಂಸ್ಥೆ ದುಡಿಯುತ್ತಿದೆ.

ಈ ವೇಗ ಸಾಲದು, ಒಡನೆಯೇ ಎಲ್ಲವೂ ಆಗಬೇಕು ಎಂಬ ಉತ್ಪ್ರೇಕವನ್ನು ಹರಡಿ, ವಿರೋಧ ಪಕ್ಷಗಳು ಜನತೆಯನ್ನು ಪ್ರಚೋದಿಸುತ್ತ ತಮ್ಮ ಬೆಂಬಲ ಬೆಳೆಸಿಕೊಳ್ಳುತ್ತ ಸಾಗಿವೆ. ಇದರಿಂದಾಗಿ ಆಡಳಿತೆ ಬಗೆಗೆ ಅತೃಪ್ತಿ, ಕಾಂಗ್ರೆಸ್ ಬಗೆಗೆ ಅಪಪ್ರಚಾರ, ಜನತೆಯಲ್ಲಿ ಅಶಿಸ್ತು, ಹಿಂಸಾಚಾರ, ಗೂಂಡಲ್ಲ, ಪೋರಾಟ ಪ್ರವೃತ್ತಿ ಬೆಳೆದು ಬರುತ್ತಿದೆ. ಇದರಿಂದ ವ್ಯವಸ್ಥಿತ ಮುನ್ನಡೆಗೆ ಅಡ್ಡಿ ಬೆಳೆದಿದೆ.

ಇಂತಹ ಪರಿಸ್ಥಿತಿಯಲ್ಲಿ 1967ರ ಮಹಾ ಚುನಾವಣೆಗಳು ನಡೆದವು.

ಅಕಸ್ಮಿಕ ಲಾಭ, ಸುಲಭವಾದ ಸೌಲಭ್ಯ, ಶೀಘ್ರ ಫಲಗಳನ್ನು ನಂಬಿ ಮೋಸ ಹೋಗುವವರಿಗೆ ಕಡಿಮೆಯಿಲ್ಲ. ದಿನನಿತ್ಯ ಈ ರೀತಿ ಕೇಳುತ್ತೇವೆ. ಆಕಾಶಪೆಡೆಗೆ ಕೈತೋರಿಸಿ ಜೇಬು ಕತ್ತರಿಸುವಂತೆಯೂ ವೈದ್ಯೋ ಆದ್ಭುತ ಸ್ವರ್ಗ ತರುವ ಕಥೆ ಹೇಳಿ ವಿರೋಧ ಪಕ್ಷಗಳು ಮತ ಪಡೆದವು. ಅನೇಕ ಕಡೆಗಳಲ್ಲಿ ಕಾಂಗ್ರೆಸ್ ಬಹುಮತ ಇಳಿಸಿದವು ಕೆಲವೆಡೆ ಕಾಂಗ್ರೆಸ್ಸೇತರ ಸರಕಾರಗಳೂ ಒಂದವು.

ಈ ಪಕ್ಷಗಳು ಹಿಂದೆ ಆಡಳಿತ ಪಡೆಸಿಲ್ಲ ಮುಂದೆ ಪಡೆಯುವ ನಂಬಿಕೆಯನ್ನು ಹೊಂದಿರಲಿಲ್ಲ. ಆದುದರಿಂದ ಮನಬಂದಂತೆ ಭರವಸೆ ನೀಡಿದವು. ಆಕಿ ತೋರಿಸಿದವು, ಬಿಡ್ಡವು.

ಕೆಟ್ಟ ನೂಸು ಪಡೆಸಿಕೊಂಡು ಬಂದ ವರಾಗಿ ಆಡಳಿತೆಯ ಅನುಭವವಿರುವವರಿಗೆ, ಹಾಗೂ ಭರವಸೆ ಈಡೇರುವ ವಿಧಾನವಿರುವವರಿಗೆ, ಮನಬಂದಂತೆ ಭರವಸೆ ಕೊಡಲು ಸುಳ್ಳು ಕತೆ ಹೇಳಲು ಸಾಧ್ಯವಿಲ್ಲ. ಕಾಂಗ್ರೆಸ್ ಸಂಸ್ಥೆ ಪಡೆದ ಬಹುಮತ ಹೇಳಿ, ನಡೆದ ದಮ್ಮು ಆಗ ಮಾಡುವ ಭರವಸೆ ನೀಡಿ ಪರಾಭವಗೊಂಡಿರುವ ಹಲವು ರಾಜ್ಯಗಳಲ್ಲಿ ಬಹುಮತ ಕಳೆದುಕೊಂಡಿತಾದರೂ, ಕೇಂದ್ರ ಸರಕಾರದಲ್ಲಿ ಬಹುಮತ ಗಳಿಸಿತು.

ಅಲ್ಲಿಂದೀಚೆಗೆ— 1967ರ ಚುನಾವಣೆಯ ನಂತರ— ದೇಶದ ರಾಜಕೀಯ ಪರಿಸ್ಥಿತಿಯಲ್ಲೇ ತೀವ್ರ ಬದಲಾವಣೆಯಾಯಿತು.

ವ್ಯವಸ್ಥಿತ ಆಡಳಿತೆ, ನಿರ್ದಿಷ್ಟ ಯೋಜನೆ- ಪ್ರಜಾಸತ್ತಾತ್ಮಕ ಧ್ಯೇಯದಿಂದ ಮುನ್ನಡೆದ ಕಾಂಗ್ರೆಸ್ ಸಂಸ್ಥೆ ಮತ್ತು ಅದರ ಸರಕಾರಗಳು ಒಂದುಕಡೆ.

ತಮ್ಮ ಅದ್ಭುತ ಪ್ರಚಾರದಿಂದಾಗಿ ಕೆಲವೆಡೆ ಆಡಳಿತೆ ನಡೆಸುವ ಅವಕಾಶಗಳನ್ನು ಗಳಿಸಿಕೊಂಡ ವಿರೋಧ ಪಕ್ಷಗಳು, ಅವೇ ತಂತ್ರವನ್ನು ಬಳಸಿ ನಡೆಸುವ ಪ್ರಚಾರ, ಘೋಷಣೆಗಳ ನೆರೆತ, ಹೇಗಾದರೂ ಮಾಡಿ ಆಡಳಿತೆಯನ್ನು ಕಾಂಗ್ರೆಸ್ ನಿಂದ ಕಸಿದುಕೊಳ್ಳಬೇಕೆಂಬ ಪ್ರಯತ್ನ ಇನ್ನೊಂದೆಡೆ.

ದಿನೇ ದಿನೇ ಈ ಪ್ರಯತ್ನ ಬೆಳೆಯಿತು. ಕಾಂಗ್ರೆಸ್ ಸಂಸ್ಥೆಯಲ್ಲಿ ಕೂಡಾ ಆಡಳಿತೆಗೆ ಅಂಟಿಕೊಳ್ಳಬಯಸಿದವರು, ಜನ ಬೆಂಬಲಗಳಿಸಲು, ಅಗ್ಗದ ಜನಪ್ರಿಯತೆ ಪಡೆಯಲು ವಿರೋಧ ಪಕ್ಷಗಳ ಮಾರ್ಗ ಕ್ಷಿಯ ಬಯಸಿದರು.

ಜನಕೋಟಿಯ ಈ ರೋಗಕ್ಕೆಲ್ಲಾ ಶೀಘ್ರ ಪರಿಹಾರ ನಮ್ಮಲ್ಲಿದೆ ಎಂದರು ವಿರೋಧ ಪಕ್ಷಗಳವರು.

ನಾವೂ ಅಂತಹ ಔಷಧ ತಯಾರಿಸಬಲ್ಲೆವು ಎಂದು ಕಾಂಗ್ರೆಸ್‌ನ ಕೆಲವರು ವಾದಿಸಿದರು.

ಹೊಸ ಮತ್ತು ಹಳೆಯ ವೈದ್ಯರ ಹೋರಾಟದಂತಾಯಿತು ಪರಿಸ್ಥಿತಿ. ಅನೂನ ಭವಿಗಳಾದ ಕಾಂಗ್ರೆಸ್ ನಾಯಕರು ಅಂತಹ ಶೀಘ್ರ ಗುಣಕಾರಿ ಔಷಧ ಮದ್ದು ನವ್ಮ ದೇಶವನ್ನು, ಜನಕೋಟಿಯನ್ನು ಆರೋಗ್ಯವಂತ ಎಂದು ಎಚ್ಚರಿಸಿದರು. ಅನುಭವವಿಲ್ಲದವರನ್ನು ನಾವು ಅನುಕರಿಸಬಾರದೆಂದರು.

ಅನೇಕ ಭವದ ಮೂಸೆ, ಅನುಭವದಲ್ಲಿ ದವರಿಗೆ ಹಾಗೂ ವಿರೋಧ ಪಕ್ಷಗಳ ಪ್ರಭಾವ ಮೆಚ್ಚಿಕೊಂಡವರಿಗೆ ಕಹಿಯಾಗಿ ತೋಡಗಿತು.

ಇದರ ಪರಿಣಾಮವೇ ಕಾಂಗ್ರೆಸ್‌ಗೆ ಇಂದಿನ ಬಿಕ್ಕಟ್ಟು.

ಒಂದೆಡೆ— ಈ ದೇಶದ ಹಾಗೂ ಜನಕೋಟಿಯ ಎಲ್ಲಾ ಸಮಸ್ಯೆಗಳನ್ನು ಅರಿತ, ಅವುಗಳನ್ನು ನಿಧಾನವಾಗಿ ಬಗೆಹರಿಸತ್ತಾ ಬಂದ ಅನುಭವಗಳ, ಶಾಂತಿ, ಸಹನೆ ಸೌಹಾರ್ದತೆ ಪ್ರಜಾಸತ್ತೆಗಳ ಬೆಂಬಲಿಗರು.

ಇನ್ನೊಂದೆಡೆ— ಎಲ್ಲಾ ರೋಗಗಳನ್ನು ತೀವ್ರವಾಗಿ ಶೀಘ್ರವಾಗಿ, ಶಕ್ತಿಚಿಕಿತ್ಸೆಯಿಂದಲೂ ದರ, ಇಂದಿನ ವ್ಯವಸ್ಥೆ ಎಲ್ಲಾ ತಲೆಕೆಳಗಾಗಿ ಹೊಸ ಭವಿಗಳ ಹೊಸ ಸರ್ವಾಧಿಕಾರಿ ವ್ಯವಸ್ಥೆಯನ್ನು ಅಳವಡಿಸಬೇಕೆಂಬ ಆತುರ.

ಇವೆರಡರ ಸರಿ ಹುಸರು ?

ಇದನ್ನೀಗ ತೀವ್ರ ಚಿಂತಿಸುವ ಕಾಲ ಬಂದಿದೆ. ಪ್ರಜಾರಥದ ಪ್ರಭಾವಕ್ಕೆ, ಶೀಘ್ರ ಫಲದ ಪಾಶಕ್ಕೆ ಕೆಂಪಂಚೆ ಬಲಿಯಾಗಿ ವಾಲಿದರೂ ಈ ದೇಶ ಗೊಂಬಲಗುಂಡಾಗಿ ಅಸ್ತವ್ಯಸ್ತವಾಗಿ ಅರಾಜಕವಾದೀತು. —ವಾರ್ತೆ

ರಲ್ಲಿದ್ದಿತು. ಭಾಗೀರಥಿಯ ರಾಜಕೀಯ ಕ್ಷೇತ್ರಕ್ಕೆ ಗಾಂಧೀಜಿ ಆಗ ಹೊಸಬರು. ರಾಜಕೀಯ ಮತ್ತು ಜೀವನದ ಬಗ್ಗೆ ಸಮಸ್ಯೆಗಳನ್ನು ಎದುರಿಸುವ ವಿಧಾನದ ಬಗ್ಗೆ ಗಾಂಧೀಜಿಯವರಿಗೆ ತಮ್ಮದೇ ಆದ ಪೂರ್ವ ವಿಚಾರಗಳಿದ್ದವು. ಟಿಳಕರು ಹಿರಿಯ ರಾಜಕಾರಣಿ, ಗಾಂಧೀಜಿಯವರಲ್ಲಿ ಅಡಕವಾಗಿದ್ದ ಅದ್ಭುತ ಶಕ್ತಿಯನ್ನು ಅವರು ಗುರುತಿಸಿದರು. ಅಂತಹ ಔದಾರ್ಯ ಹಾಗೂ ವಿಶಾಲದೃಷ್ಟಿ ಅವರಿಗಿದ್ದಿತು. ಗಾಂಧೀಜಿ ತಮ್ಮ ಸಹೋದ್ಯೋಗಿ ಎಂದು ಹೇಳಿ ಟಿಳಕರು ಅವರನ್ನು ಬರಮಾಡಿಕೊಂಡರು.

ಟಿಳಕರು ಗಾಂಧೀಜಿಯವರನ್ನು ಮೊದಲ ಬಾರಿಗೆ ಭೇಟಿ ಮಾಡಿದ ಬಳಿಕ ಕರ್ನಾಟಕದ ಸಂಗಾಧರರಾವ್ ಅವರೊಂದಿಗೆ ವ್ಯಕ್ತಪಡಿಸಿದ್ದ "ಗಾಂಧೀಜಿ ಇತರ ರಾಜಕಾರಣಿಗಳಂತೆ ಹೆಜ್ಜೆ ಮುಂದೆ ಹೋಗುತ್ತಾರೆ" ಎಂದು ಹೇಳಿ ಮೆಚ್ಚುಗೆ ವ್ಯಕ್ತಪಡಿಸಿದರು. ಟಿಳಕರ ಹಾದಿಗೆ ನಿಜವಾಯಿತು. ಗಾಂಧೀಜಿ ಮಹಾತ್ಮರಾದರು, ಭಾರತದ ಧಾರ್ಮ್ಯವಿಧಾತರಾದರು.

ನೂರಾರು ಕಾಯಿಲೆಗಳಿಗೆ ಮನೆಯಲ್ಲೇ ಮದ್ದು ಮಾಡುವ ವಿಧಾನ ವಿವರಿಸುವ

ಮನೆ-ಮದ್ದು

ಗೃಹಸೌಖ್ಯ — ರೂ. 2 - 00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ

ಗೀತೆಯ ಕೈಗನ್ನಡಿ

ಗೀತೆಯ ಸಮೂಲ ಭಾಷಾಂತರ

ರೂ. 1 - 50

ತಮ್ಮಪ್ಪಕ್ಕೆ ತಾವೇ ಇಲ್ಲಿಷ್ ಕಲಿಯಲು ಅನುಕೂಲವಾದ

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2-00

ಸುಲಭದಲ್ಲಿ ಪತ್ರಲೇಖನ

Letter Writing Made Easy

ಇಂಗ್ಲಿಷಿನಲ್ಲಿ ವಿಶ್ವಸ್ಥನಹಾರ ಪತ್ರಗಳು

ಸಹಕಾರಿಯಾದ ವಿವಿಧ ಪತ್ರ

ಸಂಕಲನ— ಬೆಲೆ ರೂ. 1-50

ಪಟ್ಟಿಗಳು ಮತ್ತು ಪತ್ರಿಕೆ

ರಿಯಾಯಿತಿ ಇದೆ

ನವಭಾರತ ಪುಸ್ತಕ ಭಂಡಾರ

ಉಡುಪಿ, ದ. ಕ.

ಮಾನವಜನ್ಮ ದೊಡ್ಡದೇ ನಿಜ

(ಐದನೇ ಪುಟದಿಂದ)

ಯಿಂಗಲೇ ಕಂಡುಹಿಡಿದಿದ್ದಾನೆ. ಆಮಿಷಗಳಲ್ಲಿ ನಾಮ್ಮುವಾರದು ಆತ್ಮಸಾಕ್ಷಿ. ಅಂದರೆ ಮನಸ್ಸು ಕನ್ನಿಷ್ಠ ಪ್ರಕಾರ ಮಾಡುವ ದನ್ನೆಲ್ಲ ನೋಡುತ್ತಾ ಇರುವ ಆತ್ಮಸಾಕ್ಷಿ. ಇದನ್ನು ಮನಃಸಾಕ್ಷಿ ಎಂಕಲೂ ಹೇಳುತ್ತಾರೆ. ಅದು ಅವನು ಮಾಡುವ ಕೆಡುಕುಗಳನ್ನು ಚುಚ್ಚುತ್ತಾ ಇರುವಾಗ, ಅದ ತ್ಯಾನಸ್ಸಿಗೂ ಒಂದು ಒಳ ಹೋರಾಟ ನಡೆಯುತ್ತೆ. ಹೇಗಾದರೂ ಆ ಧ್ವನಿ ಸಾಕ್ಷಿಯನ್ನು ಸವರಿಧಾನ ಪಡಿಸಿದಿದ್ದರೆ ಲಾಭಿಗೆ ಶಾಂತಿ ಎನ್ನುವುದಿಲ್ಲ. ಆದಕ್ಕಾಗಿ ಅನೇಕಾನೇಕ ದೇವಮಂಗಳನ್ನು ನಂಬಿಸಿ ಮಾಡಿದ ಪಾಪಗಳಿಗೆ ಪ್ರಾಯಶ್ಚಿತ್ತ ರೂಪದಲ್ಲಿ ಸೂಜಿ ಮಾಡಿಸಿ, ಕಾಣಿಕೆ ಸಲ್ಲಿಸಿ, ತನ್ನ ಆತ್ಮಸಾಕ್ಷಿಯನ್ನು ತಾನೇ ವಂಚಿಸುವವರೂ ಅವನ ಮನಸ್ಸಿನ ಶಕ್ತಿ ಮುಂದುವರಿದಷ್ಟೆ ಆತ್ಮಸಾಕ್ಷಿಗೆ ಪರಿಹಾರ ಹುಡುಕುವುದೇ ದೈನಂದಿನ ಎಂಬ ಭ್ರಮೆಯೇ ಬಹುತೇಕ ಮಾನವರಲ್ಲಿದೆ.

"ಆತ್ಮಸಾಕ್ಷಿಯೇ ದೇವರಪ್ಪಾ. ಅದನ್ನ ನೋಸಮಾಡುವುದಕ್ಕಾಗಿ ಬೇರೆ ಬೇರೆ ದೇವರಿಗೆ ಕಾಣಿಕೆ ಸುರಿದು ನಿನ್ನ ದೇವರಿಗೆ ನೀನೇ ಮೋಸ ಮಾಡಬಾರದಪ್ಪಾ; ಸ್ವಾರ್ಥ ಮೂಲವಾದ ಭಕ್ತಿಗೆ ಯಾವ ದೇವರೂ ಮೆಚ್ಚುವುದಿಲ್ಲಪ್ಪಾ" ಎಂದು ಸತ್ಯವ್ರತ ಮುಕ್ತಿಯರು ಎಷ್ಟು ಹೇಳಿದರೂ ಜನರಿಗೂ ನಾಟುವುದಿಲ್ಲ. ದೇವರ ಸನ್ನಿಧಾನಗಳಲ್ಲಿಯೂ ವ್ಯಾಪಾರೀ ದೃಷ್ಟಿಯ ಜೋರಾಗಿ ಹುಲದಂಥವರು ಸೇರಿಕೊಂಡು, ಧರ್ಮಾ ವಿಧವಾಗಿ ಪ್ರಚಾರ ಮಾಡುತ್ತಾರೆ. ಸದುದ್ದೇಶಗಳು ಕತ್ತಲೆ ಮೂಲೆ ಸೇರುವು ಹೊಸ ಹೊಸ ದೇವಾಲಯಗಳೂ ಗುಡಿ ಗೋಪುರಗಳೂ ಭಕ್ತಾದಿಗಳನ್ನ ಆಕರ್ಷಿಸಿಕೊಂಡೇ ಇವೆ. ಕಳೆದ ವರ್ಷವನ್ನೂ ಇಲ್ಲದ ಸ್ಥಳದಲ್ಲಿ ಮುಂದಿನ ವರ್ಷ ಬುಟ್ಟಿಗುಡಿಯೊಂದು ಕಾಣಿಸಿ ಬಿಕೆಯಾ ತೊಡಗುತ್ತದೆ. ಭಕ್ತಿ ಪೂಜೆ ಪ್ರಸಾದಗಳು ವ್ಯಾಪಾರೀ ಚಾರ್ಯಸಾಗಿ ನಡೆಯುತ್ತಲೇ ಇವೆ. "ಜಾಥಾಶಕ್ತಿಯ' ಅರ್ಥವನ್ನೂ ಕೇಳುವವರಿಲ್ಲ.

ಕಲವರೇನೋ ಹೇಳುತ್ತಾರೆ, "ಜನರಲ್ಲಿ ದೇವರ ನಂಬುಗೆ ಇಷ್ಟು ಧರ್ಮ ಶ್ರದ್ಧೆ ಇಲ್ಲ; ಆಚಾರವಿಲ್ಲ, ನಾಸ್ತಿಕ ಭಾವ ಹೆಚ್ಚುತ್ತಿದೆ ಇದೆ, ಹಾಗೆ ಹೀಗೆ—" ಅಂತ. ಈ ಮಾತಿಗೂ ಅರ್ಥವಿಲ್ಲ. ದೇವರಿಗೆ ಧಿಂಬುಗೆ ದಾಷ್ಟನೆಲ್ಲೂ ಇವೆ ಎಂಬುದಕ್ಕೆ ದೇವಾಲಯಗಳಲ್ಲಿ ಭಕ್ತಕೋಟಿಗಳೂ ಕಾಣಿಕೆಗಳೂ ಹೆಚ್ಚುತ್ತಿರುವುದೇ ಸಾಕ್ಷಿ. ನಾಸ್ತಿಕರೊಂದು ಅಭಿಪ್ರಾಯ. ಅಲ್ಲಿಯ ಮಾತು ಆಕೌಂಟೆಂಟ್ ಆಚಾರ ವಿಚಾರಗಳ ಲೆಕ್ಕಾಗ್ಯ. ಮತ ಮುದ್ರೆಗಳನ್ನು ಧರಿಸಿಕೊಂಡೇ ಆಫೀಸಿಗೆ ಬರುತ್ತಾನೆ. ಪ್ರತಿ ತಿಂಗಳೂ ತಪ್ಪದೆ ದೇವಸ್ಥಾನಕ್ಕೆ ಹೋಗುತ್ತಾನೆ. ಭಕ್ತಾದಿಗಳಿಗೆ ದಾನಧರ್ಮ ಅತಿಥಿ ಸತ್ಕಾರ ಎಲ್ಲ ಇವೆ. ದೇವಾಲಯಗಳಿಗೂ ಕಾಣಿಕೆ ಹಾಕುತ್ತಾನೆ. ಕ್ಷೇತ್ರಾಟನ ಮಾಡುತ್ತಾನೆ. ಅಂತಹ ಭಕ್ತ ಧರ್ಮಭೀರು ಆಫೀಸಿನ ಜಾಗದಲ್ಲಿ ಒಂದು ಲಕ್ಷದ ವರೆಗೆ ಅಪಹರಿಸಿದ್ದಾನೆಂದು ಸಿಕ್ಕಿ ಬೀಳುವುದೂ ಉಂಟು; ತಪ್ಪಿಸಿಕೊಳ್ಳುವುದೂ ಉಂಟು. ಉದಾಹರಣೆಗೆ ಬೇಕಾದಷ್ಟಿದೆ. ದೊಡ್ಡ ದೊಡ್ಡ ದೇವಾಲಯಗಳಿಗೆ ಬರುವ ಕಾಣಿಕೆಗಳ ಏರಿಕೆಗಳನ್ನು ಗಮನಿಸಿದರೆ ಭಕ್ತರು ದಿನೇ ದಿನೇ ಜಾಸ್ತಿ ಆಗ್ತಿದ್ದಾರೆಂದೇ ಕಾಣುತ್ತದೆ. ಹೆಚ್ಚಾಗಿ ಆತ್ಮಸಾಕ್ಷಿಯನ್ನು ಸವರಿಧಾನಗೊಳಿಸುವಂತಹ ಭಕ್ತರು.

ಮೊದಲಿನ ಕಾಲದಲ್ಲಿ ವಿಜಯವಾದ ಧರ್ಮಕರೂ ಮಹಾಪ್ರಭುಗಳೂ ಇತರರಲ್ಲಿ ಭಕ್ತಿ ಶ್ರದ್ಧೆಗಳು ಹುಟ್ಟುವಂತಹ ಕೆಲಸಗಳಿಗೇ ದೇವಾಲಯಗಳನ್ನು ಕಟ್ಟಿ ದಾನ ಧರ್ಮಗಳನ್ನು ಬಿಟ್ಟುಹೋದರು. ಆ ಸದುದ್ದೇಶಗಳು ಈಗ ಆತ್ಮಸಾಕ್ಷಿಗೆ ಲಂಚಕೊಡುವ ರೂಪಕ್ಕೆ ತಿರುಗಿತು—ಆಷ್ಟೇ. ಭಕ್ತರಂತೂ ಹಿಂದೆಯೂ ಇದ್ದರು, ಈಗಲೂ ಇದ್ದಾರೆ, ಬಹಳ ಶುಂಬ ಇದ್ದಾರೆ.

ಯಾರು ಭಕ್ತ, ಯಾರು ಭಕ್ತ ನಲ್ಲ ಎಂಬುದನ್ನು ನಂಬುವುದೇ ಕಷ್ಟ. ಬ್ಯಾಂಕಿಗಳಲ್ಲೂ ಒಂದರ ಮೇಲೊಂದಕ್ಕೆ ಕೋಪ ಬರುವುದುಂಟು, ಜಗಳ ಬರುವುದುಂಟು. ಅವೆಲ್ಲ ಪ್ರಶ್ನೆಯಲ್ಲೇ ನಡೆಯತ್ತವೆ. ಮುಚ್ಚುವುದೂ ಉಂಟು.

ಮನುಷ್ಯನಲ್ಲಾದರೋ, ಒಬ್ಬನ ಮನಸ್ಸಿನಲ್ಲಿ ಏನಿದೆ ಎಂಬುದು ಇನ್ನೊಬ್ಬನಿಗೆ ತಿಳಿಯದು. ಅವನು ಶಾಕಾಹಾರಿಯೂ ನಿಜ, ಮಾಂಸಾಹಾರಿಯೂ ನಿಜ. ಅವರಡೂ ಅಲ್ಲದ ಧನಾಹಾರಿಯೂ ಹೌದು. ಎಲ್ಲಾ ವಿಧವಾದ ಆಹಾರ ತುಂಬ ಹೊಟ್ಟೆಯೂ ಅವನಿಗೇ ವಿಷಲ. ಅದರಿಂದಾಗುವ ಗುಣದೋಷಗಳನ್ನು ತಾಳಿಕೊಳ್ಳುವ, ಪರಹರಿಸಿ ತಲೆಯೆತ್ತಿಕೊಳ್ಳುವಂತಹ ಬುದ್ಧಿ ಶಕ್ತಿ ಇರುವುದೂ ಅವನಿಗೇ. ಮನುಸಾಕ್ಷಿ ಇರುವುದೂ ಅವನಿಗೇ, ಆ ವ್ಯಕ್ತಿಸಾಕ್ಷಿಯ ಮೂಗಿಗೆ ದಾರ ಹಾಕಿ ತಕ್ಷಿಷ್ಟಾನುಸಾರ ತಿರುಗಿಸುವ ಶಕ್ತಿಯೂ ಅವನಿಗೇ. ಹೆಚ್ಚಿನಿಂದ ಕಚ್ಚುವ ಹೊಟ್ಟೆಗೆ ದೂಡದೆ ಇನ್ನೊಬ್ಬ ವ್ಯಾಘ್ರನನ್ನು ಕೊಂಗಿ ಮಾಯ ಮಾಡುವ ಅದ್ಭುತ ಶಕ್ತಿಯೂ ಮನುಷ್ಯನಿಗಿದೆ. ದೇವರೂ ಅವನೇ, ದೆವ್ವವೂ ಅವನೇ, ರಾಕ್ಷಸನೂ ಅವನೇ. ಅದಕ್ಕೇ "ಮಾನವ ಜನ್ಮ ದೊಡ್ಡದೂ" ಅಂತ ದಾಸರು ಕೂಡ ಹಾಡಿ ಹೋಗಿದ್ದಾರೆ. ದೊಡ್ಡದೇ ನಿಜ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden.

Quiet, Calm Atmosphere

Personalised Service.

"ದೇವರು . . . ಗುರುನಾನಕರ ದೃಷ್ಟಿಯಲ್ಲಿ"

ಲೇಖಕರು: ಶ್ರೀ ಎಸ್. ಗುರುನಾಮಸಿಂಗ್

ಸತ್ಯಶೋಧನೆಯೇ ಜೀವಕದ ಅಂತಿಮ ಗುರಿಯೆಂಬುದೇ ಗುರು ನಾನಕರು ಹೇಳಿದ್ದಾರೆ. "ಸತ್ಯಕ್ಕಾಗಿ ಪಡೆಯುವ ಇಂತಹ ಯಾವುದೇ ಶೋಧನೆ ಕೇವಲ ಸೈದ್ಧಾಂತಿಕವಾಗಿದ್ದರೆ ಸಾಲದು, ಮಾಕ್ಕೆ ಪೂರಕವಾಗಿರಬೇಕು. ಏಕೆಂದರೆ ಭಾವನೆಗಳ ಮೇಲೆ ನಿಯಂತ್ರಣವಿಲ್ಲದೆ ಜೀವನ ಯಾವುದೇ ಗೊತ್ತು ಗುರಿಯಿಲ್ಲದೇ ಅಸ್ತವ್ಯಸ್ತವಾಗಿ ಬಿಡುವುದು. ಹಾನಕರ್ ಹೇಳಿದ್ದಾರೆ.

ಸತ್ಯ ಮಾರ್ಗದಲ್ಲಿ ನಡೆಯುವುದರಿಂದ ಮಾತ್ರ ಮಾನವಜೀವಿಗಳಿಗೆ ಮೋಕ್ಷ ಸಾಧ್ಯವೆಂದು ಗುರು ನಾನಕರು ದೃಢವಾಗಿ ನಂಬಿದ್ದರು. ಒಂದು ಕಡೆ ಅವರು—

ಸತ್ಯವೇ ಶ್ರೇಷ್ಠ
ಸಕಲ ಲೋಕಗಳಲಿ
ಅದಕಿಂತ ಮಿಗಿಲಹುದು
ಸತ್ಯಯುತ ಜೀವನವು.

ಎಂದು ಹೇಳಿ ಜೀವನದಲ್ಲಿ ಸತ್ಯದ ಹಿಂಮೆ ಯನ್ನೂ ಸಾರಿದ್ದಾರೆ. ಸತ್ಯಕ್ಕಾಗಿ ಶೋಧನೆಮಾಡಿದಾಗಲೇ ಜೀವನದಲ್ಲಿ ಶಿಸ್ತು ಬರುತ್ತದೆ. ಜೀವನಕ್ಕೆ ಒಂದು ಹೊಸ ದಾರಿ ದೊರೆಯುತ್ತದೆ ಈ ದಾರಿಯಲ್ಲಿ ನಡೆಯುವವನೇ ನಿಜವಾದ ಶಿಷ್ಯ—ಅಂದರೆ ಸಿಕ್ಖ್. ಅವನ ಜೀವನವೇ ಸಾರ್ಥಕ. ಆವನು ಗುರುವಿನಿಂದ ಮಾರ್ಗದರ್ಶನ ಪಡೆಯಬಹುದು. ಶೋಕ್ಷ ಸಾಧನೆಯ ಮಾರ್ಗದಲ್ಲಿ ಅವನಿಗೆ ಸಂಗಡಿಗರ ಸಹಕಾರ ಲಭಿಸುತ್ತದೆ.

ಸತ್ಯದ ಸ್ವರೂಪ

ಹಾಗಾದರೆ ಎಲ್ಲರೂ ಸಾಧಿಸಿ ಜಯಿಸುವ ಈ ಸತ್ಯದ ಸ್ವರೂಪವೇನು? ಧಾರಣೆ ಗ್ರಹಣಶಕ್ತಿ, ಈ ಪ್ರಶ್ನೆಗೆ ಉತ್ತರ ಕೊಡಲು, ನಡೆದ ಯತ್ನಗಳ ಒಂದು ಇತಿಹಾಸ. ಉಪನಿಷತ್‌ಗಳಲ್ಲಿ ಈ ಪರಮ ಸತ್ಯವನ್ನೇ ಬ್ರಹ್ಮನ್ ಅಥವ ಆತ್ಮನ್ ಎಂದು ಕರೆಯಲಾಗಿದೆ.

ಗುರುನಾನಕರು ಸತ್ಯವೇ ದೇವರು, ದೇವರೇ ಸತ್ಯವೆಂದು ಸಾಧಿಸಿದ್ದಾರೆ. ಆ ಪಜಪು ಆರಂಭದ ಮೂಯಾಮಂತ್ರದಲ್ಲಿ ಆಗರು ದೇವರ ಬಗ್ಗೆ ತಮ್ಮ ಕಲ್ಪನೆಯನ್ನು ಈ ರೀತಿ ವಿವರಿಸಿದ್ದಾರೆ.

"ಏಕ್ ಓಂಕಾರ ಸತ್ನಂ ಕರ್ತಾ ಪುರುಷ ನಿರ್ಭಯಂ ನಿರ್ವೈರ್, ಅಕಾಲಮೂರತ ಅಜೂನಿ ಸ್ವೈ ಭಂಗ್ ಗುರು ಪ್ರಸಾದ್".

ಅಂದರೆ, ಎಲ್ಲಾ ಲೋಕಗಳಲ್ಲೂ ಒಬ್ಬನೇ ದೇವರು. ಅವನೇ ಸತ್ಯಂ, ಸೃಷ್ಟಿ ಕರ್ತ, ನಿರ್ಭಯ, ವೈರಸ್ಫೂರ್ತಿದಾಯಕ, ಚಿರಂಜೀವಿ, ಅಜಿತ, ಸ್ವಯಂಭೂ. ಭಕ್ತಿಯಿಂದ ಮಾತ್ರ ಪ್ರಾಪ್ತನಾಗಬಲ್ಲ."

ಆಪಜಪುಜಿ ನಾನಾಂಕಿ ಪದ್ಯಪಾಠದ ಮೂಲ ಮಂತ್ರದಲ್ಲಿ ಗುರು ನಾನಕರು ದೇವರ ಅಖಂಡ ಸ್ವರೂಪವನ್ನು ಒತ್ತಿ ಹೇಳಿದ್ದಾರೆ. ದೇವರ ಹೆಸರು ಸತ್ಯ ಅವನ ಸೃಷ್ಟಿ ಸತ್ಯ. ಅವನೇ ಎಲ್ಲರ ಸೃಷ್ಟಿಕರ್ತ. ಸತ್ಯವೇ ಅವನ ಕೀರ್ತಿ. ಅವನ ಹಿಂದೆಯೂ ಇದ್ದ. ಈಗಲೂ ಇದ್ದಾನೆ. ಮುಂದೆಯೂ ಇರುವನು. ಅವನೇ ಸರ್ವಶ್ರೇಷ್ಠ, ಸರ್ವವ್ಯಾಪಿ, ದಯಾಸಿಂಧು, ಸ್ವಯಂಭೂ, ಸಕಲ ಪರಿಪೂರ್ಣ, ಕರುಣಾಸಾಗರ, ಸಕಲ ಪೌಷ್ಟಿಕಗಳ ಸಾರ; ಸಕಲ ಜೀವಿಗಳ ಮೂಲ. ಭಾವ ಶುದ್ಧಿಯಿಂದ ಮಾತ್ರ ಗೋಚರಿಸಬಲ್ಲವ ಎಂದು ಮುಂತಾಗಿ ಸ್ತುತಿಸಿದ್ದಾರೆ.

ಪರಮಾತ್ಮ, ಪರಂಜ್ಯೋತಿ, ಜಗನ್ನಾಥ ಎಲ್ಲವೂ ಅವನೇ ಎಂದು ಪುಂಖವಾರೆ ಹಾಡಿದ್ದಾರೆ. ದೇವರೇ ನಮ್ಮ ಎಲ್ಲ ಕಾರ್ಯ ಚಟುವಟಿಕೆಗಳ ಆಶ್ರೀ ಏಕೆ ಇಡೀ ವಿಶ್ವದ ಕಾರ್ಯ ಚಟುವಟಿಕೆಗಳ ಮಾತ್ರ ಧಾರ ಎಂದು ಹೇಳಿದ್ದಾರೆ.

"ಭಕ್ತ ವತ್ಸಲನಾತನು
ನಿನ್ನ ಬಾಯಿಕನು
ಹೃದಯ ಪೀಗ ಸೂಳು
ನೆಲೆಯಿಕ್ಕೋ ಅವನ."

ಎಂದು ಹೇಳಿ, ಭಕ್ತರು ದೇವನನ್ನು ತಮ್ಮ ಹೃದಯದ ಪೀಠದಲ್ಲಿ ಪ್ರತಿಷ್ಠಿಸಿಕೊಳ್ಳಬೇಕೆಂದು ಗುರುನಾನಕರು ಬೋಧಿಸಿದ್ದಾರೆ.

ಒಬ್ಬನೇ ಈ ಜಗಕೆ
ಇನ್ನೊಬ್ಬರಿಂಟೇ ?
ಈಗಲೂ, ಆಗಲೂ, ಮುಂದೆಯೂ
ಈ ಜಗದ ಒಡೆಯನವನಷ್ಟು.

ಎಂದು ಹೇಳಿ ದೇವರ ಅಖಂಡತ್ವವನ್ನು ಸಾರಿದ್ದಾರೆ. ಭಕ್ತನಾದ ದೇವನೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿರಬೇಕೆಂದು ಒತ್ತಿ ಹೇಳಿದ್ದಾರೆ.

ಮೋಕ್ಷದ ರಹಸ್ಯ

ಗುರುನಾನಕರು ಹೃದಯಾಂತರಂಗದಿಂದ ದೇವರ ಸ್ತುತಿಮನ್ನು ಮಾಡುತ್ತಿದ್ದರು. ಈ ಪರಿಪೂರ್ಣತೆಯಿಂದಲೇ ದೇವರ ಸಂದೇಶ ಪ್ರಕಟವಾಗುತ್ತಿತ್ತು. ನಾನಕರು ಭಕ್ತಿ ಮಾರ್ಗದಿಂದಲೇ ಮೋಕ್ಷ ಸಿಗುತ್ತದೆಂದು ಹೇಳಿದರು. ನಾನಕರ ಈ ಭಕ್ತಿ ಮಾರ್ಗವನ್ನು ಯಾರು ಬೇಕಾದರೂ ಅನುಸರಿಸಿಕೊಳ್ಳಬಹುದಾಗಿತ್ತು. ಏಕೆಂದರೆ ಜಾತಿ—ವಿ

ಸ್ವಾವಲಂಬನೆಯ ಸುಹಸದ ಪ್ರತೀಕ —

ಐ. ಟಿ. ಐ.

ಲೇಖಕರು: ಶ್ರೀ ಯು. ಶಂಕರ್,
ಮ್ಯಾನೇಜಿಂಗ್ ಡೈರೆಕ್ಟರ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿ.

ದೇಶೀಜನ್ಯ ವಸ್ತುಗಳತ್ತ ಉಪಯೋಗಿಸಿ ತನ್ನ ಉತ್ಪಾದನೆಯನ್ನು ವಿವಿಧ ರೂಪಗಳಲ್ಲಿ ವಿಂಗಡಿಸಲು ಎಂದಿಂದಲೂ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್—ಐ.ಟಿ.ಐ. ಎಂದು ಇಂದಿಗೆ ಸಂಸ್ಥೆಯ ಹೆಸರು—ಪ್ರಯತ್ನಿಸುತ್ತಿದೆ. ಪ್ರತಿದಿನ ಭಾಗಗಳಲ್ಲಿ 25,000 ಎಕ್ಸ್‌ಚೇಂಜ್ ಲೈನುಗಳನ್ನು ಉತ್ಪಾದಿಸಬೇಕೆಂಬ ಗುರಿಯನ್ನು ಹೊಂದಿ ಆರಂಭಗೊಂಡ ಈ ಕಾರ್ಖಾನೆ ತನ್ನ ಉತ್ಪಾದನೆಯನ್ನು ದೇಶದ ಅಗತ್ಯಗಳನ್ನು ಪೂರೈಸಲೆಂದು ಅಧಿಕಗೊಳಿಸಬೇಕಾಯಿತು.

ಮೊದಲು ಇರಿಸಿಕೊಂಡಿದ್ದ ಗುರಿಗಳಿಗಿಂತ ಈ ಕಾರ್ಖಾನೆಯು ಈಗ ವಿವಿಧ ವಸ್ತುಗಳನ್ನು ತಯಾರಿಸುವ ಸಜ್ಜಿನಲ್ಲಿದೆ. ಭಾರತ ದೇಶದ ಅಂಚೆ-ತಂತಿ ಶಾಖೆಯು ಎಲ್ಲ ವಿಧದ ಸಲಕರಣೆಗಳನ್ನು ಸಿದ್ಧಪಡಿಸಬಲ್ಲುದು. ಜೊತೆಗೆ ದೇಶದ ರಕ್ಷಣಾ ಬಲ, ರೈಲ್ವೆಗಳು, ಸಾರಿಗೋತ್ತರ ಸಂಪರ್ಕ ಸೇವೆಗಳಿಗೆ ಬೇಕಾದ ಸಲಕರಣೆಗಳನ್ನೂ ಒದಗಿಸಬಲ್ಲುದು. ಇಂದು ಈ ಕಾರ್ಖಾನೆಯಲ್ಲಿ ಆಟೊಮ್ಯಾಟಿಕ್ ಟೆಲಿಫೋನ್ ಸ್ವಿಚಿಂಗ್ ಸಿಸ್ಟಮ್ಸ್, ಸ್ಟ್ರೋಜೇಜರ್ ಮತ್ತು ಕ್ರಾಸ್‌ಬಾರ್, ಟೆಲಿಪ್ರಿಂಟರ್ ಎಕ್ಸ್‌ಚೇಂಜ್, ದೂರ ಅಂತರದ ಟ್ರಾನ್ಸ್‌ಮಿಷನ್ ಸಿಸ್ಟಮ್ಸ್, ಮಂತಾದ ಸಾಂಕೃತಿಕೂಕ್ಷ್ಮ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಉತ್ಪಾದಿಸಲಾಗುತ್ತಿದೆ.

ಮಹತ್ವದ ಘಟನೆ

ಸ್ವಲ್ಪ ಅಂತರದ ಹಳ್ಳಿ ಗಾತ್ರದ ಟ್ರಾನ್ಸ್‌ಮಿಶನ್ ಉಪಕರಣಗಳನ್ನು ಸಿದ್ಧಗೊಳಿಸಿ ಐ.ಟಿ.ಐ. ಒಂದು ಮಹತ್ವದ ಸಾಧನೆ ಸಾಧಿಸಿದೆ. ಭಾರತೀಯ ತಂತ್ರಜ್ಞರೇ ಇದನ್ನು ಇಡಿಯಾಗಿ ವಿನ್ಯಾಸಗೊಳಿಸಿದ್ದಾರೆ. ಕೆಲವು ಅಂಶಗಳಲ್ಲಿ ಆಮದು ಮಾಡಿಕೊಂಡ ಇಂತಹ ಉಪಕರಣಕ್ಕಿಂತ ಐ.ಟಿ.ಐ. ಕಾಣಿಕೆ ಹೆಚ್ಚು ಪ್ರಯೋಜನಕಾರಿಯೂ ಆಗಿದೆ.

ಐ.ಟಿ.ಐ. ಕಾರ್ಖಾನೆಗಳು ದೇಶದ ಅಂಚೆ—ತಂತಿ ಶಾಖೆಗೆ ಮೈಕ್ರೊವೇವ್ ಅಂಕೆಗಳನ್ನೂ, 960—ಜಾನೆಲ್ ಕೊಎಕ್ಸೆಲ್ ಕೇಬಲ್‌ಗಳನ್ನು ಒದಗಿಸಿದೆ. ಇವುಗಳೆಲ್ಲವೂ ಫಲಿಸಿದ್ದಿವಾಗಿ ಮಹತ್ವದ ಘಟನೆಗಳೇ. ಸಂಪೂರ್ಣವಾಗಿ ನಮ್ಮ ದೇಶದ ತಂತ್ರಜ್ಞರೇ ಇವುಗಳನ್ನ ರೂಪಿಸಿದ್ದಾರೆ. ಇದಲ್ಲದೇ ಈ ಕಾರ್ಖಾನೆ ಎಲೆಕ್ಟ್ರಾನಿಕ್ ಎಕ್ಸ್‌ಚೇಂಜ್‌ಗಳು, ಪುಶ್ ಬಿ. ಹೆಚ್. ಎಫ್. ಸಿಸ್ಟಮ್ಸ್ ಸೂ ದಲಾದುವುಗಳ ಉತ್ಪಾದನೆ ಈಗ ಕೈಗೊಂಡಿದೆ.

ಕ್ರಾಸ್ ಬಾರ್

ಬೆಲ್ಜಿಯಂ ದೇಶದ ಬೆಲ್ ಟೆಲಿಫೋನ್ ಮ್ಯಾನುಫ್ಯಾಕ್ಚರಿಂಗ್ ಕಂಪೆನಿಯ ಸಹಯೋಗದೊಂದಿಗೆ, ಐ.ಟಿ.ಐ. ಕ್ರಾಸ್ ಬಾರ್ ಆಟೋಮ್ಯಾಟಿಕ್ ಎಕ್ಸ್‌ಚೇಂಜ್ ಉಪಕರಣ ಉತ್ಪಾದನಾ ಘಟಕವನ್ನು ಪ್ರಾರಂಭಿಸಿದೆ. 1968—69ರ ಸಾಲಿನಲ್ಲಿಯೇ ಇಂತಹ 4.08 ಕೋಟಿ ರೂ. ಮೌಲ್ಯದ ಉಪಕರಣಗಳನ್ನು ಇಲ್ಲಿ ಸಿದ್ಧಪಡಿಸಲಾಯಿತು. ಚಿಕ್ಕ ಥರ್ ಯೋಜನೆಯ ವಧ್ಯದ ವೇಳೆಗೆ ಕ್ರಾಸ್ ಬಾರ್ ಉಪಕರಣಗಳನ್ನಿಟ್ಟು ಒಂದೂವರೆ ಲಕ್ಷ ಲೈನುಗಳ ವರೆಗೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕ್ರಾಸ್ ಬಾರ್ ವ್ಯವಸ್ಥೆಯಿಂದ ದೇಶದಲ್ಲಿ ಜಂದಾದಾರರ ಡೈಲಿಂಗ್ ಪದ್ಧತಿಯನ್ನು ಶೀಘ್ರವಾಗಿ ಕರಲು ಸಹಾಯಕವಾಗುವುದು.

ಸಂಶೋಧನೆಗೆ ಮಹತ್ವ ಸ್ಥಾನ

ಎಲೆಕ್ಟ್ರಾನಿಕ್ಸ್ ಮತ್ತು ಸಂಪರ್ಕ ವ್ಯವಸ್ಥೆಯಲ್ಲಿ ದಿನೇದಿನೇ ನೂತನ ಸಂಶೋಧನೆಗಳು ಪ್ರಸಿದ್ಧವಾಗುತ್ತಿರುವ ಈ ಕಾಲದಲ್ಲಿ ಐ.ಟಿ.ಐ. ಕಾರ್ಖಾನೆ ಕೂಡಾ ಈ ದಿಸೆಯಲ್ಲಿ ಹಿಂದೆ ಬಿದ್ದಿಲ್ಲ. ಇದಕ್ಕೆ ತನ್ನದೇ ಆದ ಸಂಶೋಧನಾಲಯ ಮತ್ತು ಅಭಿವೃದ್ಧಿ ಶಾಖೆ ಇದೆ. ಕಾರ್ಖಾನೆ ಸಿದ್ಧಪಡಿಸುವ ವಸ್ತುಗಳು ಕೂಳ್ಳವಾಗಿ ಮತ್ತು ನಂಬಿಕೆಗೆ ಪಾತ್ರವಾಗಿ ಇರುವಂತೆ ಈ ಸಂಶೋಧನಾಲಯವು ಸತತ ಪ್ರಯತ್ನಿಸುತ್ತಿದೆ.

ಕಳೆದ ಹತ್ತೊಂಬತ್ತು ವರ್ಷಗಳಲ್ಲಿ ಐ.ಟಿ.ಐ ಅಭಿವೃದ್ಧಿಗೊಳಿಸಿದ ಸೂಕ್ಷ್ಮ ಉಪಕರಣಗಳ ಪೈಕಿ ಕೆಲವು ಇಂತಿವೆ:—

ಸೂಕ್ಷ್ಮ ವೈಕ್ರೊವೇವ್ ಉಪಕರಣ, ರೈಲ್ವೆಗಳಿಗೆ ಬೇಕಾದ ಟೆಲಿಪೆಟ್ರಿ ಮತ್ತು ಎಲೆಕ್ಟ್ರೋಫಿಕ್ ಟ್ರ್ಯಾಕ್ ಮತ್ತು ಅಂಚೆ ತಂತಿ ಶಾಖೆಗೆ ಬೇಕಾದ ಸುಧಾರಿಸಿದ ಟೆಲಿಫೋನ್ ರಿಪೀಟರುಗಳು.

ದೇಶಿ ಮೂಲವಸ್ತುಗಳು

1964ರಿಂದ ಈ ಕಾರ್ಖಾನೆ ವಿದೇಶಗಳಿಂದ ಕಚ್ಚಾ ಮೂಲ ಮತ್ತು ಉಪಕರಣಗಳ ಆಮದು ಮಾಡಿಕೊಳ್ಳುವಲ್ಲಿ ಗಮನಾರ್ಹ ಇಳಿತಾಯ ಸಾಧಿಸಿದೆ. 1965ರಿಂದ 67ರ ವರೆಗೆ ಸುಮಾರು ಒಂದು ಕೋಟಿ ರೂ. ಮೌಲ್ಯದ ಕಚ್ಚಾ ಮೂಲ ವಸ್ತು ವಿದೇಶಗಳಿಂದ ತರಿಸುವುದನ್ನು ಈ ಕಾರ್ಖಾನೆ ತಪ್ಪಿಸಿದೆ.

ದೇಶದ ಸಂರಕ್ಷಣಾ ಅಗತ್ಯತೆಗಳನ್ನು ಪೂರೈಸಲು ಮತ್ತು ಆದಿಶೆಯಲ್ಲಿ ಸ್ವಾವಲಂಬಿಯಾಗಲು ಮ್ಯಾಗ್ನೆಟೋ ಜನರೇಟರ್ಸ್, ಸ್ವಿಚ್ ಬೋರ್ಡ್ ಪ್ಲಗ್ಸ್ ಮೊದಲಾದ ಇನ್ನೂ ಹದಿನೈದು—ಇಪ್ಪತ್ತು ಸೂಕ್ಷ್ಮ ವಸ್ತುಗಳನ್ನು ಈಗಿನ್ನಿ ತಯಾರಿಸಲಾಗುತ್ತಿದೆ.

ಐ.ಟಿ.ಐ. ಇದ ವರೆಗೆ 2.30 ಕೋಟಿ ರೂ. ಮೌಲ್ಯದ ಉಪಕರಣಗಳನ್ನು ವಿದೇಶಗಳಿಗೆ ಮಾರಿದೆ. 1968—69ನೇ ಸಾಲಿನಲ್ಲಿ 72 ಲಕ್ಷ ರೂಪಾಯಿಗಳ ಮೌಲ್ಯದ ಉಪಕರಣಗಳನ್ನು ಈ ಕಾರ್ಖಾನೆ ರಫ್ತು ಮಾಡಿದೆ

ಜಾತಿ ಎಂಬ ಭೇದವಿರಲಿಲ್ಲ. ಲಿಂಗಭೇದವಿರಲಿಲ್ಲ. ದೇವರು ಅನುಗ್ರಹಿಸಿದ ಶಕ್ತಿಯಿಂದಲೇ ಅವರ ಅನುಗ್ರಹಕ್ಕೆ ಪಾತ್ರರಾಗಿ ಈ ಜಗತ್ತಿಲ್ಲಿ ಬದುಕಬೇಕೆಂದು ತಮ್ಮ ಅನುಯಾಯಿಗಳಿಗೆ ಉಪದೇಶ ಮಾಡಿದ್ದಾರೆ. ದೇವರ ಮಹಿಮೆಯನ್ನು ಅರಿತುಕೊಂಡು ಅವನಿಗೆ ಸಂಪೂರ್ಣ ಶರಣಾಗದಿರಲಾಗುವುದು, ಕೇಡಿಗೆ, ಅಂಜಬೇಕಿಲ್ಲ ಎಂದು ಗುರುನಾನಕರ್ ಹೇಳಿದ್ದಾರೆ. ದೇವರ ನಾಮವನ್ನು ಜಪಿಸುವುದರಿಂದ ಮೂತ್ಯ ಈ ಭವಬಂಧನದಿಂದ ಪಾರಾಗಲು ಸಾಧ್ಯ. ದೇವರ ಹೆಸರೇ, ಪವಿತ್ರ ಹೃದಯ ಪರಿವರ್ತನೆ ಮಾಡುವುದು, ಮುಕ್ತಿಮಾರ್ಗವನ್ನು ತೋರಿಸುವುದು ಎಂದು ಸಾರಿದ್ದಾರೆ.

ಸದಾ, ದೇವರ ಸ್ಮರಣೆ ಹಾಗೂ ಸೇವೆಯಲ್ಲಿ ತೊಡಗಿರಬೇಕೆಂದು ಗುರುನಾನಕರು ಭಕ್ತರಿಗೆ ಉಪದೇಶಿಸಿದ್ದಾರೆ. ದೇವರ ವಿಷಯದಲ್ಲಿ, ಅವಿಶ್ವವಾದ ಭಕ್ತಿ ಮತ್ತು ಅವನ ಸಾನ್ನಿಧ್ಯವನ್ನು ಸಂಪಾದಿಸಲಿಕ್ಕೆಗೊಳಿಸುತ್ತವೆಯಲ್ಲದೇ, ಅವನನ್ನು ದೇವರ ಸಮೀಪಕ್ಕೆ ತರುತ್ತದೆ. ಹೀಗೆ ಜ್ಞಾನೋದಯವಾದ ಭಕ್ತನೇ ಸಿಕ್ಖ್-ಗುರುಮುಖಿಯಾಗಿ ಮೋಕ್ಷ ಪಡೆಯುತ್ತಾನೆ.

ಸಂಗ್ರಾಮ ಮಾಡಿದೀತು..... ಆದರೆ ಜೀವನ ಸಂಗ್ರಾಮ?
ಸಾಗುತ್ತಲೇ ಇರುತ್ತದೆ
ಅಂತಹ ನವಿನ "ಜೀವಪಥ ಸಂಗ್ರಾಮ" ಚಿತ್ರವೊಂದನ್ನು ಚಿತ್ರಿಸಿದ
ನವೀನ ಸಾಮಾಜಿಕ ಸಾಮಕಥನ—

ಜೀವನ ಸಂಗ್ರಾಮ

ಲೇಖಕರು: ಶ್ರೀ ಪಿ. ಶೀನ ಶೆಟ್ಟಿ.

ಆಭಿರುಯಾಲಿಸ್ಟ್ಸ್, ಓದಲಿಕ್ಕೂ ಕತ್ಕದಾದ ಜೊತ್ತ ಪುಸ್ತಕ.

ಬೆಲೆ: ೧—೫೦ (ಟಿ. ಖರ್ಚು ಬೇರೆ)

ವಿಕ್ರಯಾಧಿಕಾರಿಗಳು:—
(1) ಕರಿಯರ ಪುಸ್ತಂಜೆ, ಉಡುಪಿ.
(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸ ಕಟ್ಟಡದ ಉದ್ಘಾಟನೆ ಮತ್ತು ಲೋಕ ಸೇವಾ ವಿದ್ಯಾ ಸಂಸ್ಥೆಗಳ ವರ್ಧಂತ್ಯುತ್ಸವ

ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಪೂರ್ವಾಶ್ರಮದ ತಂದೆ ಪೇಜಾವರ ಸದಾಶಿವ ರಾಯರ ಸ್ಮರಣಾರ್ಥ ಸ್ಥಾಪಿತವಾದ ಲೋಕ ಸೇವಾ ವಿದ್ಯಾ ಸಂಸ್ಥೆಗಳ ವರ್ಧಂತ್ಯುತ್ಸವ ಮತ್ತು ಹೊಸ ಕಟ್ಟಡದ ಉದ್ಘಾಟನೆ ಮೊನ್ನೆ ನವೆಂಬರ್ 15 ರಂದು, ಲೋಕ ಸೇವಾ ಪ್ರೌಢಶಾಲೆಯ ಆವರಣದಲ್ಲಿ ಸಂಜೆ ಕಟ್ಟಿಸಿದ ನೂತನ ಕಟ್ಟಡದ ಉದ್ಘಾಟನೆಯನ್ನು ಮಂಗಳೂರು ಗವರ್ನರ್ಸ್ ಮೆಂಟ್ ಕಾಲೇಜ್ ಆಫ್ ಎಜ್ಯುಕೇಶನ ಪ್ರಿನ್ಸಿಪಾಲ್ ಶ್ರೀ ಕೆ. ಮಲ್ಲಪ್ಪ, ಇವರು ನೆರವೇರಿಸಿದರು.

ಒಬಳಕ ರೂ. 5000—ಕ್ಕಿಂತ ಹೆಚ್ಚು ಹಣವನ್ನು ಉದಾರ ದಾನ ಮಾಡಿದ ಉಪಸ್ಥಿತರ ಹೆಸರಿನಲ್ಲಿ ಕಟ್ಟಿಸಿದ ಕೋಷ್ಠಗಳನ್ನು ಶ್ರೀ ಮಲ್ಲಪ್ಪನವರೇ ಉದ್ಘಾಟಿಸಿದರು.

ಅದೇ ದಿನ ಲೋಕ ಸೇವಾ ನಿಧಿ ಸಂಸ್ಥೆಗಳ ಜತೆ ವರ್ಧಂತ್ಯುತ್ಸವದ ಅಧ್ಯಕ್ಷತೆಯನ್ನು ಮೂಡಿಗೆರೆ ತಾಲೂಕು ಶ್ರೀ—ಅಭಿನವ ವಿದ್ಯಾನಿಧಿಯ ಅಧ್ಯಕ್ಷರೂ ಸಮಸ್ತ ಕೃಷಿಕರೂ ಆದ ಶ್ರೀಯುತ ಬಿ. ಬೈರೇ ಗೌಡರು ವಹಿಸಿದ್ದರು.

ಶ್ರೀ ಬಿ. ಯನ್. ನರಸಿಂಹ ಮೂರ್ತಿ ಇವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೆ. ಬಿ. ಸುಬ್ರಾಯ ಇವರು ಸಂದೇಶ ವಾಚನ ಗೈದರು. ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿನಿ ಕುಮಾರಿ ಸುಶೀಲ ಪಿ. ನಾರಾಯಣ ರಾವ್, ಇವರು ಹೈಯರ್ ಪ್ರೈಮರಿ ಶಾಲೆಯ ವರದಿಯನ್ನು ತಾಲೂಕು ಪ್ರಾಥಮಿಕ ವಿದ್ಯಾಧಿಕಾರಿಯವರಾದ ಶ್ರೀ ಕೆ. ಸಂಜೀವ ಶೆಟ್ಟಿಯವರು ಓದಿದರು.

ನಂತರ ಶ್ರೀ ಮಲ್ಲಪ್ಪನವರಿಂದ ಹೊಸ ಕಟ್ಟಡದ ಉದ್ಘಾಟನಾ ಉಪನ್ಯಾಸವಾಯಿತು. ಲೋಕಸೇವಾ ಸಂಸ್ಥೆಯ ಸೇವಾಕಾರ್ಯಗಳನ್ನು ಪರೀಕ್ಷಿಸಿದ ಅವರು ತಮ್ಮ ಮೆಚ್ಚುಗೆಯನ್ನು ಸೂಚಿಸಿದರು.

ರೂ. 1000ಕ್ಕಿಂತ ಹೆಚ್ಚು ಧನವನ್ನು ದಾನ ನೀಡಿದ ಮಹಾಪುರುಷರುಗಳ ತೈಲ ಚಿತ್ರಪಟಗಳನ್ನು ಪ್ರಾಂಪ್ಟರ್ ಕೀಬಿ ಇ. ಸ್ಟೀವ್ ಗಾಡ್ಸ್ ಅನಾವರಣ ಗೈದರು.

ಶ್ರೀ ವಿದ್ವಾನ್ ವಾಸುದೇವಾಚಾರ್ಯ ಭಟ್ಟ ಎಡಪ್ಪಾಡಿಯವರು ಪ್ರಾರ್ಥನೆ ಹಾಡಿದರು. ಶಾಲಾ ವಿದ್ಯಾರ್ಥಿನಿ ಕುಮಾರಿ ವಿ. ಗೋಪಿಯವರು ಭಟ್ಟರು ಸ್ವಾಗತಿಸಿದವರಿಗೆ ಉತ್ತರ ವಿತ್ತರು.

ಲೋಕಸೇವಾ ಪ್ರಾಂಪಿಯ ಅಧ್ಯಕ್ಷರಾದ ಶ್ರೀ ಮಡಿಯಾಲ ನಾರಾಯಣ ಭಟ್ಟರು ಸ್ವಾಗತಾರ್ಹ ಸಂಸ್ಥೆಯ ಈ ಬಹು ಮುಖ ಚಟುವಟಿಕೆಗಳಲ್ಲಿ ತನು, ಮನ, ಧನಗಳಿಂದ ಸಹಕರಿಸಿದ ಸರ್ವರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಜಿ.ಬಿ. ಬೈರೇ ಗೌಡರು ಮಾತನಾಡುತ್ತ ಭಾರತದಲ್ಲಿ ನಿಜ ದೇಶಭಕ್ತರಿಂದಾಗಿ ಕೃಷಿಯನ್ನು ಪಡೆದ ಬಹಳ ಜನ ಪ್ರಾಮುಖ್ಯ ವಿದ್ಯಾರ್ಥಿಯರುಗಳ ಅದರ್ಶವನ್ನು ಅವಲಂಬಿಸಿಕೊಂಡು ಶ್ರೀ ನಾರಾಯಣ ಭಟ್ಟು ಮತ್ತು ಅವರ ಸಹೋದ್ಯೋಗಿಗಳು ಪ್ರಶಂಸನೀಯ. ರಾಷ್ಟ್ರ ಪ್ರೇಮದಿಂದ ಭಾರತದ ಸಾಂಸ್ಕೃತಿಕ ಮತ್ತು ಧರ್ಮವನ್ನು ಎತ್ತಿ ಹಿಡಿಯುವ ಈ ಪವಿತ್ರ ಕಾರ್ಯವನ್ನು ಪ್ರಗತಿ ಪಥದಲ್ಲಿ ಮುಂದುತ್ತಿರುವುದು ನಿಜವಾಗಿಯೂ ಅದ್ಭುತ ಕಾರ್ಯಸಾಧನೆಯೆಂದರು.

ಅಂತ್ಯದಲ್ಲಿ ಮನರಂಜನಾ ಕಾರ್ಯಕ್ರಮಗಳಾದುವು.

ವಾರ್ಷಿಕೋತ್ಸವ

ಶಿರ್ವಸ್ಥಳೀಯ ಹಿಂದೂ ಹಾಯರ್ ಸೆಕೆಂಡರಿ ಶಾಲಾ ವಾರ್ಷಿಕೋತ್ಸವವು ಶನಿವಾರ, 29-11-69ರಂದು ಜಿಲ್ಲಾಧಿಕಾರಿ ಶ್ರೀ ಬಿ. ರಾಮಕೃಷ್ಣರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಎಸ್. ಎ. ರಾಮಕೃಷ್ಣ ರಾವ್‌ರವರು ಬಹುಮಾನ ವಿತರಣೆ ಗೈದರು.

ಶಾಲಾ ಕರೆಸ್ಪಾಂಡೆಂಟರಾದ ಶ್ರೀ ಪಿ. ಶಿವಾಜಿ ಶೆಟ್ಟಿ, ಸ್ವಾಗತ ಭಾಷಣವನ್ನು ಶ್ರೀ ಕೆ. ವಾಸುದೇವ ಶೆಟ್ಟಿ, ಶಾಲೆಯ ವರದಿಯನ್ನು ಮುಖ್ಯೋಪಾಧ್ಯಾಯ ಶ್ರೀ ಬಿ. ಜಯರಾಮ ಶೆಟ್ಟಿ, ಶಾಲೆಯ ಪಗತಿಪರ ವಿವರಣೆಗಳನ್ನು ಮಾಡಿದರು. ಶ್ರೀ ಎನ್. ಭಾಸ್ಕರ ಹೆಬ್ಬಾರ್ ಸ್ವಾಗತಾರ್ಹರೆಂದರು.

ಪೂರ್ವಾಹ್ನ ಡಾ| ಎನ್. ಬಿ. ಶೆಟ್ಟಿ ಧ್ವಜಾರೋಹಣವನ್ನು, ಶ್ರೀ ಎಸ್. ರಂಗಯ್ಯರವರು ಕಲಾವಿದ್ಯಾ ಸ್ಪರ್ಧೆಗಳ ಉದ್ಘಾಟನೆಯನ್ನು ನೆರವೇರಿಸಿದ್ದರು. ಶ್ರೀ ಪಿ. ಚಂದ್ರಹಾಸ ಹೆಗ್ಡೆಯವರ ಸಹಿತಂತೆ ವಿವಿಧ ಸ್ಪರ್ಧೆಗಳನ್ನು ನಡೆಸಿಕೊಟ್ಟ ಶಿಕ್ಷಕ ವೃಂದದವರು ಧನ್ಯವಾದವಿತ್ತರು.

ಧರ್ಮಸ್ಥಳದಲ್ಲಿ

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಕಳೆದ ೩೬ಗಳಿಂದಲೂ ನಡೆದು ಬರುತ್ತಿರುವ ಧರ್ಮ ಸಮ್ಮೇಳನದ ೩೭ನೆಯ ಸಮ್ಮೇಳನವು ತಾ. ೭ರಂದು ನಡೆಯಿತು. ಅಸ್ಪೃಶ್ಯತಾ ನಿವಾರಣೆ, ವಿಚಾರಕ್ಕೆ ಧರ್ಮವೇ ಪ್ರಧಾನವೆಂದೂ ಕಲ್ಯಾಣ ಸಾಧನೆಗೆ ಧರ್ಮವೇ ಪ್ರಧಾನವೆಂದೂ ಸಮ್ಮೇಳನದಲ್ಲಿ ಭಾಗವಹಿಸಿದ್ದ ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟರು.

ಸಮ್ಮೇಳನದಲ್ಲಿ ಭಾಗವಹಿಸಲಿರುವ ಅತಿಥಿಗಳನ್ನು ಮೆರವಣಿಗೆಯಲ್ಲಿ ಸಮ್ಮೇಳನ ಮಂಟಪಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಶ್ರೀ ಬಿ. ಎಸ್. ರಾಮೋಜಾರ್ ಅವರಿಂದ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸ್ವಾಮಿ ಶರಣ ಹೆಂಜ ಭಾಸ್ಕರಂ ಶೇಷಾಚಾರ್ಯರು ಸಮ್ಮೇಳನವನ್ನು ಉದ್ಘಾಟಿಸಿದರು. ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಅಧ್ಯಕ್ಷರು. ರಾಜ್ಯದ ನ್ಯಾಯ, ಕಾರ್ಮಿಕ ಮಂತ್ರಿ ಶಂಕರೀಪ್ರಸಾದ ವೈವಹಾರಗಳ ಸಚಿವರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಉದ್ಘಾಟಕರಾಗಿಯೂ ಮೈಸೂರಿನ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಟಿ. ಕೆ. ತುಕೋಳರು ಅಧ್ಯಕ್ಷರಾಗಿಯೂ ಆಗಮಿಸಿದ್ದರು. ಇವರಿಬ್ಬರಿಗೂ ಕ್ರಮವಾಗಿ ಶ್ರೀ ಸುರೇಂದ್ರ ಕಾಮಕರ್ ಮತ್ತು ಶ್ರೀ ಜನಾರ್ದನ ಶಾಸ್ತ್ರಿಯವರು ಮಾನಪತ್ರಗಳನ್ನು ಓದಿ ಅರ್ಪಿಸಿದರು.

ಉದ್ಘಾಟಕರಾದ ಮಾನ್ಯಮಂತ್ರಿಗಳು ಮಾತನಾಡುತ್ತ, ಶ್ರೀಕ್ಷೇತ್ರದ ಹಿರಿಮೆ, ಮಹಿಮೆಗಳಕ್ಕೂ, ಧರ್ಮಸಮ್ಮೇಳನ ನಡೆಯಲು ಶ್ರೀಕ್ಷೇತ್ರವಿರುವ ಅರ್ಹತೆಯನ್ನೂ ಪ್ರಸ್ತಾಪಿಸಿ, ಧರ್ಮಸ್ಥಳದಲ್ಲಿ ಧರ್ಮ ಸಮ್ಮೇಳನ ನಡೆದು ಬಂದ ದಾರಿಯನ್ನು ಮುಕ್ತಕಂಠದಿಂದ ಸಮರ್ಥಿಸಿದರು. ಧರ್ಮಸ್ಥಳದಲ್ಲಿ ಸದ್ಯ ರಾಜ್ಯ ಮಟ್ಟದಲ್ಲಿ ನಡೆಯುತ್ತಿರುವ ಈ ಸಮ್ಮೇಳನ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 89/1969.

ಸಿಂಧು ಹೆಗ್ಗಡೆ —ವಾದಿಳು.

ಮತ್ತು

ಕೆದಿಲಾಯ ಗೋವಿಂದ ರಾವ್ ಕೂಡಾ-ಪ್ರತಿವಾದಿರು.

ಇದರಿಂದ

1ನೇ ಪ್ರತಿವಾದಿ ಕೆದಿಲಾಯ ಗೋವಿಂದ ರಾವ್—ಎಲ್ಲಾ ತಾಲ್ಲೂಕು ಕಾಲ್ಲು ತೆಂಕ ಗ್ರಾಮ—ಯವರಿಗೆ ತಿಳಿಸುವುದೇನೆಂದರೆ.

ವಾದಿಗೆ ಪ್ರತಿವಾದಿಂದ ಬರಲಕ್ಕ ಸ್ಥಿರಾಸ್ತಿ ಯಿಡಿನ ಅಸಲು ಬಡ್ಡಿಗೆ ದಾವೆಯಿದೆ. ಮೇಲ್ಕಂಡ ದಾವೆಯು ತಾ. 22.12.69ಕ್ಕೆ ಯಿಡೋಣಾಗಿರುವುದೆ. ಆ ಕುರಿತು 1ನೇ ಪ್ರತಿವಾದಿಗೆ ಅಕ್ಕೀಪತ್ರ ಹೇಳಿ ಕಳ್ಳಿಸಲು ಯಿದ್ದೆ ಸದ್ರಿ ದಿವ್ಸ ಮೇಲ್ಕಂಡ ಕೋರ್ಟಿಗೆ ಪೂರ್ವಾಹ್ನ 11 ಗಂಟೆಗೆ ಹಾಜ್ರಾಗಿ ಜಾಹೀರು ಪೂರ್ತಿಕೊಳ್ಳಕ್ಕಲ್ಲದ್ದೆಂತ ಯೂ ಮೂಲ್ಕ ತಿಳಿಸೋಣಾಗಿಯಿದೆ.

N. V. Kamath
Advocate for Plff.

ಉಡ್ಪಿ ತಾ. 9.12.69.

ಧರ್ಮಸಮ್ಮೇಳನ

ವು ರಾಷ್ಟ್ರೀಯ ಮಟ್ಟದಲ್ಲೂ ನಡೆಯಲು ಅಂತಾಗಬೇಕು ಎಂದು ಹಾರೈಸಿದರು. "ಕರ್ನಾಟಕವು ಸರ್ವಧರ್ಮ ಸಮನ್ವಯಕ್ಕೆ ಹೆಸರಾದ ರಾಜ್ಯ. ಧಾರ್ಮಿಕದಲ್ಲಿರುವ ಎಲ್ಲ ಧರ್ಮಾಚಾರ್ಯರೂ ಕರ್ನಾಟಕದಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಇಲ್ಲಿ ಅನಾದಿಯಿಂದಲೂ ಪರಧರ್ಮ ಸಹಿಷ್ಣುತೆಗೂ ದತ್ತಗತವಾಗಿ ಬಂದ ಋಣವಿದೆ. ರಾಷ್ಟ್ರೀಯ ಮಟ್ಟದ ಧರ್ಮ ಸಮ್ಮೇಳನವು ನಮ್ಮ ರಾಜ್ಯದಲ್ಲೇ ನಡೆಯಬೇಕು. ಶ್ರೀ ಧರ್ಮಸ್ಥಳವು ಒಂದು ಧರ್ಮಪಂಥೀಯರ ಕ್ಷೇತ್ರವಾಗಿ ಉಳಿದಿಲ್ಲ. ಇದು ಸರ್ವ ಧರ್ಮಾವಲಂಬಿಗೂ ಏಕ ಪ್ರಕಾರದ ಪೂಜನೀಯವಾಗಿದೆ. ಆದುದರಿಂದ ಶ್ರೀ ಕ್ಷೇತ್ರದಲ್ಲಿ ವೇದಿಕ ಸಮ್ಮೇಳನ ನಡೆಯುವುದು ಉಚಿತವಾಗಿದೆ" ಎಂದು ಹೇಳಿದ ಸೂನ್ಯ ಸಚಿವರು ಉಕ್ತಾಸಿಗಳೂ ಶ್ರಿಯಾಪಟುಗಳೂ ಯುವಕರೂ ಆದ ಶ್ರೀ ವೀರೇಂದ್ರರ ಮೂರನು ಇಂತಹುಹ್ರಹತ್ ಸಮ್ಮೇಳನವನ್ನು ಸಂಘಟಿಸುವರೆಂಬ ಸದಾಶಯವನ್ನು ತಾಳಿದರು.

ಶ್ರೀ ಬಿ. ಶಾಂತ ರಾಜಯ್ಯನವರು ಸಮ್ಮೇಳನಕ್ಕೆ ಶುಭಕೋರಿ ಬಂದಿರುವ ಹಲವಾರು ಸಂದೇಶಗಳನ್ನು ಓದಿದ ಬಳಿಕ ಶ್ರೀ ತುಕೋಳರು ತಮ್ಮ ಅಧ್ಯಕ್ಷ ಭಾಷಣವನ್ನು ಮಂಡಿಸಿದರು.

"ಜಗತ್ತಿನಲ್ಲಿ ಧರ್ಮಗಳೆಲ್ಲವೂ ಅಶಾಂತ್ಯನ್ನತಿ ಮತ್ತು ಏಕ್ಯತೆಗಳ ತಾತ್ವಿಕರು, ತತ್ವಗಳನ್ನು ಬೋಧಿಸಿದ ವಿಧಾನಗಳು ಬೇರೆಬೇರೆಯೂ ಆಗಿದ್ದರೂ ತತ್ವಗಳು ಸಮರಸ, ಸತ್ಯ, ಶಾಂತಿ ಮತ್ತು ಅಹಿಂಸೆಗಳ ಮೂಲ ರೂಪ. ವಿಶ್ವಭ್ರಾತೃತ್ವ ಭಾವನೆಯಿಂದ ಪ್ರೇರಿತ. ಕೊಲೆ ಸುಲಿಗೆ ರಕ್ತಪಾತಗಳು ಧರ್ಮದ ಹೆಸರಿನಲ್ಲಿ ನಡೆಯುತ್ತಿದೆಂದು ಹೇಳುವುದು ತಪ್ಪು. ಈ ಬಗೆಯ ಉತ್ಪಾತಗಳಿಗೆ ಮೂಲವನ್ನು ಅಜ್ಞಾನ, ಆರ್ಥಿಕ ಮತ್ತು ರಾಜ್ಯಕೀಯ ಕಾರಣಗಳೇ ಪ್ರೇರಕ. ಯಾವ ಧರ್ಮ ಪುರುಷರೂ ತಾನೇ ಸರ್ವೋತ್ಕೃಷ್ಟವೆಂದೂ ತನ್ನ ಧರ್ಮವೇ ಸರ್ವಶ್ರೇಷ್ಠವೆಂದೂ ಹೇಳಿಕೊಳ್ಳಲಿಲ್ಲ. ಎಲ್ಲ ಧರ್ಮಗಳ ವಿದ್ವಾಂಸರೂ ಕಲೆತು ಭಿನ್ನತೆಯಲ್ಲಿ ಏಕತೆಯನ್ನೂ ವೈವಿಧ್ಯತೆಯಲ್ಲಿ ಸಮಷ್ಟಿಯನ್ನೂ ಕಾಣುವ ಈ ಸಮ್ಮೇಳನದ ಉದ್ದೇಶ ಫಲವಾದುದು" ಎಂದು ಶ್ರೀ ತುಕೋಳರು ತಮ್ಮ ಭಾಷಣದಲ್ಲಿ ಹೇಳಿದರು.

ಮುಂಬೈ, "ಸಹೋದರ ವಿಕಲವೈತ್ಯಕ್ಕೆ ಮಾತೆಧರ್ಮಗಳ ಕೊಡಗೆ" ಎಂಬ ವಿಷಯದ ಮೇಲೆ ಶ್ರೀಗಳಂದಡಿ ಎ. ಸುಬ್ಬರಾಮ್, ಎ. ಎಸ್. ಧರಣೇಂದ್ರಯ್ಯ, ಅಲ್ಲಾಬಾಜ್ ಮೌಲಾನ ಸಯ್ಯದ್ ಅಬ್ದುಲ್ ಹೈ, ರೆವೆರೆಂಡ್ ಫಾದರ್ ಮೈಕೇಲಪ್ಪ, ಕೆ. ಎಸ್. ಧರಣೇಂದ್ರಯ್ಯ, ಶ್ರೀ ಸ್ವಾಮಿ ವೀರಭದ್ರ ಶಿವಾಚಾರ್ಯ, ಹಂ. ಪ. ನಾಗರಾಜಯ್ಯ ಮತ್ತು ಕೆ. ಪಿ. ನಾಡಗಾಡ ಮೊದಲಾದವರೂ ಮಾತನಾಡಿದರು.

ಶ್ರೀಮತಿ ಗೌರಮ್ಮ ಬಾದರಾಜ್ ಅವರಿಂದ ಕಾನ್ಯವಾಚನವೂ ಇತ್ತು. ಕೊನೆಯಲ್ಲಿ ಶ್ರೀ ಎಸ್. ಪ್ರಭಾಕರ್ ಅವರು ಧನ್ಯವಾದವರ್ಪಿಸಿದರು.

ಶ್ರೀಕ್ಷೇತ್ರದಲ್ಲಿ ಪ್ರತಿವರ್ಷ ನಡೆಯುವ ಈ ಸಮ್ಮೇಳನದ ಮೇಳೆ ಸಮೂಹೇತರಕೊಳ್ಳುವ ಈ ಸಮ್ಮೇಳನದ ಹಿಂದಿನ ದಿನ ಕುಮಾರಿ ಪುಷ್ಪ ರಾಜ್ ಮತ್ತು ಹುಂಡಲಿ ಅವರಿಂದ ಸಂಗೀತ ಮತ್ತು ನೃತ್ಯಗಳ ಕಾರ್ಯಕ್ರಮವನ್ನೂ ಕಲಾವಿದರಿಂದ ನಾಟಕಾಭಿನಯವನ್ನೂ ಏರ್ಪಡಿಸಲಾಗಿತ್ತು. ದೀಪೋತ್ಸವ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಲು ರಾಜ್ಯದ ಮೂಲೆ ಮೂಲೆಗಳಿಂದಲೂ ಸಹಸ್ರ ಸಹಸ್ರ ಸಂಖ್ಯೆಯ ಶ್ರದ್ಧಾಳುಗಳು ಸೇವಾಗ ಮಿಸಿದ್ದರು.

ತಾ. ೮ರಂದು ಸಾಹಿತ್ಯ ಸಮ್ಮೇಳನವೂ ಶ್ರೀ ಕ್ಷೇತ್ರದಲ್ಲಿ ನಡೆಯಿತು.

(ವಿವರಕ್ಕು ಮುಂದಿನ ವಾರ)

ಕೊರಂಗ್ರಪಾಡಿ ನಾರಾಯಣ ಶೆಟ್ಟರ ನಿಧನ

ಉಡುಪಿ ತಾಲೂಕು ಕೊರಂಗ್ರಪಾಡಿ ದೊಡ್ಡ ಮನೆ ನಾರಾಯಣ ಶೆಟ್ಟರು ಮುಂಬೈಯ ತಮ್ಮ ನಿವಾಸದಲ್ಲಿ ದಿನಾಂಕ 27.11.69 ರಲ್ಲು ತಮ್ಮ 78ನೇ ವರ್ಷ ಪ್ರಾಯದಲ್ಲಿ ನಿಧನರಾದರು. ಇವರು ಮಂಗಳೂರಿನಲ್ಲಿ ಕಾಲೇಜು ವಿದ್ಯಾಭ್ಯಾಸವನ್ನು ಪಡೆದು ಕೆಲವು ವರ್ಷ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದು ಅನಂತರ ಸುಮಾರು 50 ವರ್ಷಗಳ ಹಿಂದೆ ಮುಂಬಾಯಿಗೆ ಹೋಗಿ ಅಲ್ಲಿ ಪ್ರಸಿದ್ಧವಾದ ಬಾಸೆಲ್ಸ್ ಲಿಮಿಟೆಡ್ ಸಂಸ್ಥೆಯಲ್ಲಿ ಹಲವು ವರ್ಷ ಉದ್ಯೋಗದಲ್ಲಿದ್ದು ತುಂಬಾ ಜನಾನುರಾಗ ಗಳಿಸಿದ ಸದ್ಗೃಹಸ್ಥರು. ಇವರಿಗೆ ಮೂವರು ಹೆಣ್ಣು ಮಕ್ಕಳು. ಇವರ ಕೊನೆಯ ಪುತ್ರಿ ಡಾ। ರೋಜಾ ಎಸ್. ಶೆಟ್ಟಿಯವರು ಈಗ ಲಂಡನ್ನಿನಲ್ಲಿ ಉಚ್ಚ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವರು. ದಿವಂಗತರು ತಮ್ಮ ಅಳಿಯನಿಗೆ ವೈದ್ಯಕೀಯ ವೃತ್ತಿಯಲ್ಲಿ ಉಚ್ಚ ಸಂಸ್ಕಾರ, ಉದಾರ ಧೋರಣೆ, ಸ್ನೇಹಪೂರ್ಣ ನಡತೆಯಿಂದ ಬಾಳಿ ಬೆಳಗಿದ ಬಂಟ ಸಮಾಜದ ಹಿಂದಿನ ತಲೆಮಾರಿನ ಅಗ್ರ ವ್ಯಕ್ತಿಗಳು. ಇವರ ನಿಧನದಿಂದ ಪತ್ನಿ ಪುತ್ರಿಯರಲ್ಲದೆ ಹಲವಾರು ಮಂದಿ ವಿದ್ಯಾರ್ಥಿಗಳು ಮತ್ತು ವಿಶಾಲ ಬಂಧು ಮಿತ್ರ ವರ್ಗವು ಪಡುವ ಕಂತಾಪದಲ್ಲಿ ನಮ್ಮ ಸಹಾನುಭೂತಿಯಿದೆ.

ಕಟೀಲಿಗೆ ಹೊಸ ಧ್ವಜಸ್ತಂಭ

ಕಟೀಲು ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ದೇವಾಲಯಕ್ಕೆ ಆಕ್ಷಯಕ್ಕೋ ಪಯೊಗಿರುವ ವಿನೂತನ ಧ್ವಜಸ್ತಂಭವೊಂದರ ಅಗತ್ಯವಿತ್ತು, ಎನ್ನುವಾಗಲೇ ಮಂಕ್ತೂರಿನ ಶ್ರೀ ಪಿ. ಎಸ್. ನಾಯಕರ ಪುತ್ರ ಶ್ರೀ ರಾಮುದಾಸ ನಾಯಕ್ ಹಾಗೂ ಸಹೋದರರು ಆ ಅಭಿಗಳಿಗೆ ಸುಸ್ಥಿತಿ ಉದ್ದಗಲಕೆಯ ಸಾಗಾಸರಂ ಒಡಿಗೂ ಮಿಕ್ಕಿದ ಸುತ್ತಳತೆಯ ಕೇಗಿನ ಮರವೊಂದನ್ನು ಕೊಡುಗೈಯಿಂದ ದಯಪಾಲಿಸಿದರು. ದೂತ್ಯವಲ್ಲದೆ ಆದನ್ನು ಸಾಗಿಸಿ ಸಮಿಪದ ಅರಂತೋಡಿನ ಮಲೆಯಿಂದ ಸಾಗಿರುರು ರೂಪಾಯಿ ವೆಚ್ಚಗೈದು ವೈಭವದೊಂದಿಗೆ ಕಟೀಲಿಗೆ ತಂದೊಪ್ಪಿಸಿದರು. ತಾರೀಕು ೨೯-೧೧-೬೯ರಂದು ಜರಗಿದ ಈ ಸಂಭ್ರಮದ ಸಮಾರಂಭವು ಅತ್ಯಸಾರ್ಥಕ ರೀತಿಯಲ್ಲಿ ಸ್ಮರಣಾರ್ಹವೆನ್ನುವಂತೆ ನೆರವೇರಿತು.

ಶ್ರೀ ದೇವಿಯ ಮಂಗಳಾರ್ಚನೆಯ ನೆರವೇರಿಸಿದ ದೇವಳದ ಪ್ರಧಾನಾರ್ಚಕ ಶ್ರೀ ಕೆ. ಗೋಪಾಲಕೃಷ್ಣ ಆಸ್ರಣ್ಣರು ಅಡಳ್ತೆ ವೊಕ್ಕೇರ ಸರ್ ಡಾ. ಕೆ. ಗಣಪತಿ ಶೆಟ್ಟರ ಸಮಕ್ಷಮದಲ್ಲಿ ಪ್ರಸಾದ ವಿತರಣೆ ಗೈಯುತ್ತಾ ಶ್ರೀ ಪಿ. ಎಸ್. ನಾಯಕ್ ಹಾಗೂ ಸಾಮಾನ್ಯರ ಭಕ್ತಿ ಪುರಸ್ಸರವಾದ ಧ್ವಜಮರದ ಕೊಡುಗೆಯನ್ನು ಕೊಂಡಾಡಿ ಮೂಸರೆನ್ನು ಶ್ರೀದೇವಿಯು ಪರಮಾನುಗ್ರಹದಿಂದ ನಡೆಸಿಕೊಂಡು ಹೋಗಲೆಂದು ಸಂಪ್ರಾರ್ಥಿಸಿದರು. ಕೊಡತ್ತೂರು ಅನಂತಪದ್ಮನಾಭ ಉಡುಪರು ಅಭಿನಂದನಾ ಭಾಷಣಮಾಡಿದರು.

ಈ ಸಂಭ್ರಮದಲ್ಲಿ ಮಂಗಳೂರು ಬಂಡರ ಯೋಜನಾ ಮತ್ತು ಹಿಂದೂ ರಿಲೀಜಿಯಸ್ ಎಂಡೋಮೆಂಟಿನ ಪ್ರಧಾನಾಧಿಕಾರಿ ಶ್ರೀ ರಾಮಕೃಷ್ಣನ್ ಅವರು ಸಮುಪಸ್ಥಿತರಿದ್ದು, ಈ ಸಮಾರಂಭಕ್ಕೆ ಕಳೆಕೊಟ್ಟರಲ್ಲದೆ ಸಮುಚಿತ ಮಾರ್ಗದರ್ಶನವಿತ್ತು ಸ್ಥಾನೀಯ ಇತಿಹಾಸ್ಯ ತಿಶಯ ಸಮುನ್ನತಿಗಾಗಿ ಯಥಾಶಾಧ್ಯ ಸಹಕಾರವನ್ನೀಯುವ ಆಶ್ವಾಸನೆಯನ್ನಿತ್ತರು.

ಪುತ್ತೂರಿನಿಂದ ಕಟೀಲಿನತನಕದ 60 ಕ್ಕೂ ಮಿಕ್ಕಿದ ವ್ಯೋಮದ್ದಡೆಯ ಮೆರವಣಿಗೆಯ ಸಂಭ್ರಮದಲ್ಲಿ ಹತ್ತು ಸಹಸ್ರಕ್ಕಿಂತಲೂ ಮಿಕ್ಕಿದ ಹಣ್ಣು ಕಾಯಿಗಳನ್ನು ಧ್ವಜಮರಕ್ಕೆ ಸಮರ್ಪಿಸಲಾಗಿತ್ತೆ ಎನ್ನಲಾಗಿದೆ.

ಜೀವ ವಿಮಾ ವ್ಯವಹಾರ ಸ್ಪರ್ಧೆ

ಸಿರಸಿ, 1.7.69 To 31.8.69ನೇ ಅವಧಿಯ ಜೀವ ವಿಮಾ ವ್ಯವಹಾರದ ಸ್ಪರ್ಧೆಯ ಫಲಿತಾಂಶ ಇದೀಗ ಪ್ರಕಟವಾಗಿದ್ದು, ಧಾರವಾಡ ಯುನಿಟಿಗೆ "A" ಗ್ರೂಪಿನಲ್ಲಿ ಸಿರಸಿಯ ಶ್ರೀ ವಿ. ಆರ್. ಭಾಗವತರು 410000 ವ್ಯವಹಾರ ಮಾಡಿ ಪ್ರಥಮ ಸಂಖ್ಯೆ ಪಡೆದಿರುತ್ತಾರೆ. ಶ್ರೀ ಭಾಗವತರು ನಮ್ಮ ಉಡುಪಿ ವಿಭಾಗದಲ್ಲಿ 17 ಡ್ರಾಯಿಂಗುಗಳಿಗೂ, 30.9.69 ಅರ್ಧ ವಾರ್ಷಿಕ ವ್ಯವಹಾರದಲ್ಲಿಯೂ ಸಾಲ ಮೊದಲನೇ ನಂಬರದಲ್ಲಿ ಇದ್ದಾರೆ. ಇವರು ಈಗ 6.6 ವರ್ಷಗಳಿಂದ ಸತತವಾಗಿ ಜೀವ ವಿಮಾ ವ್ಯವಹಾರದಲ್ಲಿ ಪ್ರಥಮ ಸ್ಥಾನದಲ್ಲಿದ್ದು ಸಿರಸಿ ಜೀವ ವಿಮಾ ಶಾಖೆಗೂ ಜಿಲ್ಲೆಗೂ ಕೀರ್ತಿತಂದಿದ್ದಾರೆನ್ನಲು ಬಹುದು.

ವಿದೇಶ ಪ್ರವಾಸಾನುಭವ

ಉಡುಪಿಯ ರೋಟರಿ ಕ್ಲಬ್‌ನಲ್ಲಿ ತಾ. 2.12.69ರಂದು ರಾಷ್ಟ್ರ ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟರು ತಮ್ಮ ವಿದೇಶಗಳ ಪ್ರವಾಸಾನುಭವಗಳನ್ನು ವಿವರಿಸುತ್ತಾ, ವಿದೇಶಗಳಲ್ಲಿ ಜನರು ತಮ್ಮ ತಮ್ಮ ಮಾತೃ ಭೂಮಿಯಿಗೆ ತುಂಬಾ ನಿಷ್ಠೆಯಿಂದ ಇದ್ದು ಅದರ ಪ್ರಗತಿಗಾಗಿ ಕರ್ತವ್ಯ ನಿರತರಾಗಿರುತ್ತಾರೆ. ಭಾರತದಲ್ಲಿ ಇವಕ್ಕೆ ವ್ಯತಿರಿಕ್ತ ಪರಿಸ್ಥಿತಿ ಇದ್ದು, ಭಾಷೆ, ರಾಜ್ಯ, ಧರ್ಮಗಳೇ ಮೊನಲಾದ ಸಂಕುಚಿತತೆಗೆ ಪ್ರಾಮುಖ್ಯತೆ ನೀಡಿ ರಾಷ್ಟ್ರವಿಹಿತವನ್ನು ಕಡೆಗಣಿಸಲಾಗುತ್ತಿದೆ ಎಂದು ಹೇಳಿದರು. ಮುಂದುವರಿಯುತ್ತಾ ಅವರು ಇತ್ತೀಚೆಗೆ ಅಸಾಧ್ಯ ಸಾಧನೆಗಳನ್ನು ಗಳಿಸಿರುವ ರಶ್ಯಾ, ಹಿಂದೊಮ್ಮೆ ಭಾರತದಂತೆಯೇ ಬಡತನ, ರೋಗ ರುಜಿನ, ಅರ್ಥಿಕ ಅಸಮಾನತೆ ಇತ್ಯಾದಿ ಸಮಸ್ಯೆಗಳನ್ನು ಎದುರಿಸ ಬೇಕಾಗಿತ್ತು. ಆದರೆ ಛಲ, ಸಾಧನೆಯ ಬಗ್ಗೆ ಏಕತೆ, ಕಷ್ಟಪಟ್ಟು ದುಡಿಯುವ ಸಂಬಲ ಆ ಸಮಸ್ಯೆಗಳನ್ನು ಬಿಡಿಸಲು ಸಹಾಯಕವಾದುವು, ಎಂದು ನುಡಿದರು.

ಆರಂಭದಲ್ಲಿ ಶ್ರೀ ಟಿ. ರಮೇಶ ಪೈಗಳು ಶ್ರೀ ಶೆಟ್ಟರ ಪರಿಚಯ ಮಾಡಿಕೊಟ್ಟರು. ಶ್ರೀ ಕೆ. ಕೆ. ಪೈಗಳು ಅಂಕಿದಲ್ಲಿ ಸಂದನೆ ಸಲ್ಲಿಸಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಪೈಯವರು ವಹಿಸಿದ್ದರು.

ಶ್ರೀ ಕೆ. ಕೆ. ಶೆಟ್ಟಿ, ಎಂ.ಎಲ್.ಸಿ. ಯವರ ನವಕಾಲಕ್ಕೊಪ್ಪುವ ಪುಸ್ತಕಗಳು

ದೇಶ ಭಕ್ತ	1	25
ಪ್ರೇಮ ವಿಜಯ	1	00
ಮುಂದಿನ ದೇವರು	0	25
ವೈಭವಾಣಿ ತಾವಾಸಿ	1	00
ಹೆಂಡ್ತಿ ಗಂಡನ್ನ ಬರೆ?	0	25
ಪುರುಷ ವಧು	0	25
ಸನ್ಯಾಸಿಯ ಸೋಗಿನಲ್ಲಿ	0	75
ಸಂಶಯ ಪಿಶಾಚಿ	0	75
ಉಶಾ ಲವ	0	50
ಚೆತಕ್ಕಾಂಗದೆ	0	60

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಂಶೋಧನೆ

ಲೇ: ಶ್ರೀಪತಿ ಚಂಪ, ಹೆಜ್ಜಾಡಿ

ಆರ್ಕಿಯೊಲಾಜಿಕಲ್ ಇಲಾಖೆಗೆ ಸೇರಿ ಐದಾರು ತಿಂಗಳೇ ಕಳೆದಿದ್ದುವು. ಈ ಅಂತರದಲ್ಲಿ ರೂಪುದೇ ಗಮನಾರ್ಹ ಸಾಧನೆಯನ್ನು ಮಾಡದಿದ್ದುದು ನಿಜಕ್ಕೂ ನಾಚಿಕೆ ತರಿಸಿತ್ತು. ಒಂದು ವಾರದ ರಜೆಪಡೆದು ಊರಿಗೆ ಬಂದೆ. ನಮ್ಮೂರಿನ ಬಸ್ತಿಪಡ್ಪು ಎಂಬ ಪ್ರದೇಶ ಐತಿಹಾಸ ಪ್ರಸಿದ್ಧ. ಹಿಂದಕ್ಕೆ ಜೈನರ ಆಲ್ಪಿಕೆಯಲ್ಲಿದ್ದ ಈ ಸ್ಥಳ ಜೈನ ಬಸದಿಗಳು ಇಲ್ಲಿದ್ದುದರಿಂದ ಆ ಹೆಸರು ಬಂದಿರಬೇಕೆಂದು ಒಬ್ಬಿಯರು ಹೇಳುವುದನ್ನು ಕೇಳಿದ್ದೆ. ನಜಕ್ಕೂರಿನ ಯುಕ್ತಗಾನ ವಿಲಾಪಿದರು ಬಸ್ತಿಪಡ್ಪು ಪ್ರದೇಶದ ಬಗ್ಗೆ ಒಂದು ಯುಕ್ತಗಾನ ಪ್ರಸಂಗವನ್ನು ರಚಿಸಿ, ಅಡಿದ್ದೂ ಇದೆ. ಗತಕಾಲದ ವೈಭವವನ್ನು ಕೂಚಿಸಲು ಈಗ ಅಲ್ಲೇನು ಉಳಿದಿದೆ. ನೋಡ್ಡ ಕಾಡಿದ್ದ ಪ್ರದೇಶ ಈಚೆ ವಿದ್ಯಾರ್ಥಿಗಳ ಆಟದ ಜಯ ಲಾಗಿದೆ. ವೈಜ್ಞಾನದ ಮಧ್ಯದಲ್ಲಿನಿಂದು ಗರಡಿಮನೆ ಕಟ್ಟಿ ವುಸ್ತು ಆಗಿದೆ.

ಬಸ್ತಿಪಡ್ಪಿನಲ್ಲಿ ಆಗೆದರೆ ಈಗಲೂ ಏನಿ ಸಿಗುತ್ತದೆ ಎಂಬ ಪ್ರತೀತಿಯಿದೆ. ಹಿಂದೆ ಜೈನರ ಅರಮನೆ ಇದ್ದ ಸ್ಥಳವಾದ ದಾಂದ ಆಗಿರಲೂ ಬಹುದು ಎಂದುಕೊಂಡೆ. ಅದರೆ ಸಿಕ್ಕೆ ಸಿಕ್ಕಿದಲ್ಲಿ ಆಗೆಯಲು ಸಾಧ್ಯವಿದೆಯೇ? ಇಷ್ಟೆಲ್ಲಾ ಇರುವಾಗ ನನ್ನ ಸಂಶೋಧನೆಗೆ ಏಳೆ ಸಿಕ್ಕೀತೆಂದು ವಿಷಯಿಂದ ನೇರವಾಗಿ ಬಸ್ತಿಪಡ್ಪಿಗೆ ಧಡೆದೆ. ಚಿಕ್ಕಂದಿನಲ್ಲಿ ಬೆಳಗ್ಗಿನಿಂದ ಸಂಜೆಯ ವರೆಗೆ ಆಡಿದ ಕೇಂದ್ರ ಸ್ಥಳವದು. ಅಂದು ಸಂಶೋಧನಾ ದೃಷ್ಟಿ ಇದ್ದಿರಲಿಲ್ಲ. ಆಟದೆಗೆ ಒಂದು ಸುತ್ತು ಬಂದೆ. ಪ್ರತಿಯೆಂದು ಕಲ್ಲು, ಕಂಬ ಕಟ್ಟೆಡಗರನ್ನೂ ಪರೀಕ್ಷಿಸಿದೆ. ಹೊತ್ತು ಮುಳುಗುವ ವರೆಗೆ ಹುಡುಕಾಡಿದರೂ ಏನೂ ಸಿಗಲಿಲ್ಲ. ಫಿರಾಶನಾಗದೆ ನಾಳೆ ಪುನಃ ಬರಬೇಕು ಎಂದು ಕೊಂಡು ಹೊರಟೆ.

ವರುದಿಸವೂ ಹಿಂದಿನ ದಿನದಂತೆ ಪರೀಕ್ಷೆಗೆ ತೊಡಗಿದೆ. ನಾನು ಹಿಂಗೆ ಸುತ್ತು ಸುತ್ತು ಬರುವುದನ್ನು ನೋಡಿದ ಗೆಳೆಯ (ಖಾಲ್ಯನ) ರಘು ಬಂದ.

'ಏನ್ನೆಯಿಂದ ಸುತ್ತ ಬರುತ್ತಾ ಇದ್ದೀಯಲ್ಲ. ಎಂದಿನಿಂದ ಆರಂಭವಾದುದು ಈ ದೈವಭಕ್ತಿ?"

"ಹಾಗಲ್ಲ, ನಾನು ಈ ಪ್ರೇತ್ರದ ಬಗ್ಗೆ ತಿಳಿದುಕೊಳ್ಳಲು ಏನಾದರೂ ಚಾರಿತ್ರಿಕ ಹಿನ್ನೆಲೆಗಳಿವೆಯೇ, ಇದನ್ನು ಕಟ್ಟಿಸಿದವರಾರು? ಎಷ್ಟನೇ ಶತಮಾನದ್ದು, ಮೊದಲಾದ ಸಂಶೋಧನೆಗೆ ಅಂಶಿದ್ದೇನೆ" ಎಂದೆ.

ನನ್ನ ಮಾತು ಕೇಳಿ ಅವನು ಫಕ್ಕುಬಿಟ್ಟ. "ಅಯ್ಯೋ ಪುಣ್ಯಾತ್ಮ, ಎಲ್ಲ ಮುಗಿದ ನಂತರ ನೀನು ಬಂದಿದ್ದೀಯೊ. ಮೊನ್ನೆ ಅಂದರೆ ಒಂದು ವಾರದ ಹಿಂದೆ ಉಡುಪಿಯ ಯೂರೋ ಭಟ್ಟರು ಬಂದಿದ್ದರು. ಇಲ್ಲಿದ್ದ ತಾಮ್ರದ ಶಾಸನಗಳು, ಮತ್ತು ಅಲ್ಲಿ ಕಾಣುತ್ತಿದ್ದಲ್ಲ ನಾಗಬನ, ಅಲ್ಲೆಲ್ಲಾಂದು ಕಲ್ಲು ಸಿಕ್ಕಿತ್ತು. ಅದರಲ್ಲೂ ಏನೇನೋ ಬರಹಗಳಿತ್ತು. ಎರಡನ್ನೂ ಕೊಂಡುಹೋಗಿದ್ದರು."

"ಯಾರು ಗುರುರಾಜ ಭಟ್ಟರೇ?"

"ಸರಿಯಾಗಿ ಗೊತ್ತಿಲ್ಲ. ಅವರೇ ಇರಬೇಕು. ಇದು ಎಷ್ಟನೇ ಶತಮಾನದ್ದೆಂದು ಗೊತ್ತೋ, ಹದಿನೈದನೇ ಶತಮಾನದ್ದಂತೆ ಅದ ಈ ಊರನ್ನು ಮುಸ್ಲಿಂ ತುಂಡ ರಸಸೊಬ್ಬ ಆಳುತ್ತಿದ್ದವಂತೆ (ಹೆಸರು ತಿಳಿದಿಲ್ಲ) ಅದ್ದರಿಂದಲೇ ಈ ಜಾಗಕ್ಕೆ ಅಲಡಿ (ಅಲ್ಲಾ) ಅಂದರೆ ಅಲ್ಲಾನ ಕೃಪೆಯಿಂದ ನೊರೆತದ ಸ್ಥಳ ಎಂದು ಹೆಸರಿಟ್ಟನಂತೆ". ಇಷ್ಟಾಂದ ಬಗ್ಗೆ ಏಕೂ ತಿಳಿಸುದ ನಾನು ಇರಬಹುದು ಎಂದುಕೊಂಡೆ

ಅದರೆ ಶ್ವಲ್ಪ ಸಮಾಧಾನದಲ್ಲಿಯೇ ಹಿಂದೂ ರಾಜನೊಬ್ಬ ಇಷ್ಟಿಗೆ ಧಾಳಿ ನಡೆಸಿ, ಅರಮನೆಯನ್ನು ಕಟ್ಟಿ ಹಾಕಿದಪಂತೆ ಇದೇ ಬಸ್ತಿಪಡ್ಪು ಕಾಡಿನಲ್ಲಿ ಅವಿತು ಕೊಂಡಿದ್ದು, ರಾತ್ರಿಯಾದ ಕೂಡಲೇ ಒಬ್ಬೊಬ್ಬರೇ ಅರಮನೆಯನ್ನು ಮುತ್ತಿಗೆ ಹಾಕಿ ಉಟ್ಟು ಹಾಕಿದರಂತೆ, ಆರವ ನಿಬೆಂಕಿಗಾಹುತಿಯಾದ ನಂತರ ಹಿಂದೂ ಅರಸ ಇನೇ ಜಾಗದಲ್ಲಿ ಅಲಡಿ ಕಟ್ಟಿಸಿದನಂತೆ. ಎಂದು ಆ ಸಂಶೋಧನಕಾರರು ಹೇಳಿದ್ದರಂತೆ. ನನಗೆ ಕಟ್ಟಿಷ್ಟವರು ಹೇಳಿದುದು. ಹೆಚ್ಚಿನ ಮಾಹಿತಿ ಬೇಕಿದ್ದರೆ ಅವರನ್ನೇ ಕೇಳುವುದೊಳ್ಳೆಯದು. ಇವತ್ತು ಅವರು ಮಂಗ್ಳೂರಿಗೆ ಹೋಗಿದ್ದಾರೆ. ಬರುವಾಗ ರಾತ್ರಿಯಾದೀತು. ಅವಿದ್ದೀ. ನೀನೆಷ್ಟು ದಿನ ಊರಲ್ಲಿದ್ದಿ? ನಾನು ನಾಳೆ ಬೆಳಿಗ್ಗೆ ಬೊಂಬಯಿಗೆ ಹೋಗುತ್ತೇನೆ. ಹೆಚ್ಚು ದಿನ ಜೆ ಇರಲಿಲ್ಲ. ಬರುವ ನೋಮವಾರ ಕೆಲ್ಸಕ್ಕೆ ಜಾಯಿನ್ ಆಗಬೇಕು. ಆ ಚ್ಚಾ ನಾನಿನ್ನು ಬರ್ತೇನೆ ಎಂದು ಕೈಕುಲುಕಿ ಹೊರಟು ಹೋದ. ಆಗಲೇ ಕತ್ತಲಾಗತ್ತ ಬಂದಿತ್ತು. ಮಳೆ ಬರುವ ಸೂಚನೆಯಿದ್ದುದರಿಂದ ಬೇಗ ಮನೆ ಸೇರುವುದು ಒಳ್ಳೆಯದೆಂದು ಮನೆಗೆ ನಡೆದೆ.

ಮರುದಿನ ಕಟ್ಟಷ್ಟಾನವರ ಮನೆಗೆ ಹೋದಾಗ ಅವರು ಅಂಗಳದಲ್ಲೇ ನಿಂತಿದ್ದರು. ನಮಸ್ಕರಿಸಿದೆ. ಒಳಗೆ ಕುಳಿತು ಕೊಳ್ಳಲು ಅವರು ನೀಡಿದರು.

"ನಿನ್ನೆ ನೀವು ಮಂಗ್ಳೂರಿನಿಂದ ಬಂದಾಗ ತಂಬಾ ಹೊತ್ತಾಗಿತ್ತೇನೆ?"

ಅವರು ಮಿಕಿ ಮಿಕಿ ನೋಡಿದರು.

"ಏನ್ನೆ ನಾನು ಎಲ್ಲಿಗೂ ಹೋಗಿಲ್ಲ. ಮನೆಯಲ್ಲೇ ಇದ್ದೆ ಶ್ವಲ್ಪ ಕಲೆಸೋಯು ತ್ತಿತ್ತು. ನಿನಗಾರು ಹೇಳಿದ್ದು?"

"ಯೂರೋ ಹೇಳಿದರು. ನಿವ ಗೆ ಬಸ್ತಿಪಡ್ಪಿನ ಐತಿಹಾಸ ಸಂಶೋಧಕರ ಪಜೆಯವಿದೆಯಂತಲ್ಲ."

"ಯೂವ ಸಂಶೋಧಕರು, ಅವರು ಯಾವಾಗ ಬಂದಿದ್ದ?" ಎಂದಾಗ ಪೆಚ್ಚಾದೆ. "ನಾನಿನ್ನ ಬರ್ತೇನೆ" ಎಂದು ಅವರು ನಡೆಯುತ್ತಿದ್ದಂತೆಯೇ ಬೀಳುಗಾಲು ಹಾಕುತ್ತಾ ರಭಸವಿಲ್ಲ ಶಪಿಸುತ್ತಾ ಮನೆ ನೋಡಿದೆ. ಮರ ದಿನ ಬೆಳಿಗ್ಗೆ ಎದ್ದವನೇ ಬಸ್ ಹತ್ತಿದೆ.

ಸಮುದ್ರ ಸ್ನಾನ

[ಎರಡನೇ ಪುಟದಿಂದ]

"ಶಾಂತಂ ಪಾಪಂ" ಎಂದೆ ನಾನು ನಗುತ್ತಾ.

"ಹೂಂ. ಶಾಂತಮ್ಮ, ಪಾಪಮ್ಮ ಇನ್ನೂ ಎಂತೆಂಥದೋ ಅಮ್ಮಂಗಳೆಲ್ಲಾ ಇದ್ದಾರೆ. ನೋಡು, ನೋಡು ಕಣ್ಣುಂಬ ನೋಡು ಹುಷ್ಟುಷ್ಟೀ—" ಗೋವಿಂದ ನಕ್ಕ. ನಾವೂ ನಗಲೇ ಬೇಕಾಯ್ತು.

ವಡಭಾಂಡೇಶ್ವರದ ಕೆರೆಯಲ್ಲಿ ಮಿಂಯುಗಿ ಸಮುದ್ರಕ್ಕೆ ಹೋಗುವುದೆಂದು ತೀರ್ಮಾನಿಸಿದೆವು.

ನಮ್ಮ ಬಟ್ಟೆಗಳನ್ನು ನೋಡಿಕೊಳ್ಳುವುದು ಯಾರು?—ಪ್ರಶ್ನೆಯೊಂದು ಉದ್ಭವಿಸಿತ.

"ನೋಡಿಕೆಳ್ಳುವುದೇನು? ಮುಮ್ಮನೆ ಒಂದು ಮೂಲೆಯಲ್ಲಿ ಬಿಸಾಡಿದರೆ ಆಯ್ತು. ಬಿಸಾಡಿದ್ದು ಬಿದ್ದಿರುತ್ತೆ, ಬಚ್ಚಿಟ್ಟದ್ದು ಕಳವಾಗುತ್ತೆ. ನಿಸ್ಹೇಳ್ತಿರಿ?—" ಅನಂತ ಹುಬ್ಬು ಏರಿಸಿ ನುಡಿದ.

ಮಾತನಾಡಿ ಬಟ್ಟೆ ಕಳಚಿ ಕೆರೆಗೆ ಹಾರಿದರು. ನಾನೂ ಮೆಲ್ಲನೆ ಇಳಿದು ಕೆರೆಯ ಫೀಲ್ಲಿ ಮುಳುಗಿದೆ

ನಾವು ನೀರಿನಿಂದ ಮೇಲೆ ಬಂದು ಕಲೆ, ಬೈ ಒರಸಿಕೊಂಡರೂ ಗೋವಿಂದ ನೀರಿನಲ್ಲಿ ನಿಂತು ವಾಗು ಹಿಡಿದು ಧ್ಯಾನವಾಡುತ್ತಿದ್ದ. "ಸಾಕೋ ಗೋವಿಂದ ಸಮುದ್ರಕ್ಕೆ ಹೋಗುವಾ" ಎಂದು ಅಚ್ಚುತ ಹೇಳಿದಾಗ ಗೋವಿಂದ ಕಣ್ಣುಬಿಟ್ಟು ಮೇಲೆ ಬಂದ.

ಜಫರ ನೂರು ಮುಗ್ಗಲು ತುಂಬ ಜೋರಾಗಿತ್ತು. ನಡೆಯಲಾಗದ ಮಟ್ಟಿನ ಮಟ್ಟಿನ ಕಿಯರು, ಕೂಡದವರು. ಅಳುವ ಮಕ್ಕಳು, ಬೊಬ್ಬೆ ಹೊಡೆಯುವ ರುಬಳಕರು, ನಾಚಿಕೆ ಯಃವತಿಯರು, ಕೆಂಚಾಡುವ ವ್ಯಾಪಾರಿಗಳು, ತಿಂಡಿ ತಿನ್ನುತ್ತಾ ನಿಂತವರು, ಮುಳಿಗು ಯಾಳುವ ಭಕ್ತರು, ಹಣ್ಣು ಕಾಯಿ ಹಿಡಿದು ದೇವಸ್ಥಾನದೆಳಗೆ ಹೋಗುವ ಆಸ್ತಿಕರು—ಇವೆಲ್ಲವನ್ನೂ ನೋಡಿ ಬಹುಶಃ ದೇವರು ಕೆಡ್ಡಸನಾಗಿ ಮೂಕನಾಗಿ ಲಂಗದಿಕಲನಾಗಿ ಗುಡಿಯೊಳಗೆ ಪವಡಿಸಿದ್ದಿರಬಹುದೋ ಏನೋ! ಆ ತಪನ್ನು ಎಚ್ಚರಿಸಲು ನಾವು ಹೋಗಲಿಲ್ಲ. ದೇವಸ್ಥಾನದಿಂದ ರಸ್ತೆಯ ಮಗ್ಗಲಾಗಿ ಸಮುದ್ರದತ್ತ ತೆರಳಿದೆವು. ರಸ್ತೆಯ ಇಕ್ಕೆಲದಲ್ಲೂ ಭಿಕ್ಷುಕರ ಕಂಡ ನೆರೆದಿತ್ತು. ಆಹ್ವ ಫೋಟೊ ಕೊಡುವ ಕೈಗಳಿರುವ ವರೆಗೂ ಕೊಳ್ಳುವ ಈ ಕೈ ಚಾಯಿಗಳು ಇದ್ದೇ ಇರುತ್ತವೆಯೋ ಏನೋ! ಸಂತ ಪಣಿಗೆ ಬ್ರಾಹ್ಮಣರು ನೆರೆಯುವಂತೆ ಜಾತ್ರೆಗೆ ಈ ಭಿಕ್ಷುಕರು ನೆರೆಯುವುದು ಸಹಜವೇ! ಊರು ಪರವೂರಿನ ಭಿಕ್ಷುಕರು ತಮ್ಮ ಮುಂದೊಂದು ಕೊಳಕು ಬಟ್ಟೆ ಹಾಸಿ, ತಾವು ಕೂಡಾ ಅದಷ್ಟು ಕೊಳಕಾಗಿ ಕಂಡು, ನಾನಾ ರೋಗಿಗಳ ನೇಜ ಹಾಕಿಕೊಂಡು ಅಳುತ್ತ ಕೀಚಿಯುಲ್ಲಿ ಕರಿಚಾಡುತ್ತಾ ಅಸ್ಥಿಕ ಮಹಾಶಯರುಗಳಂದ ನಯೇಪೈಸೆಗಳ ಸಂಪಾದನೆ ಮಾಡುತ್ತಿದ್ದರು.

"ಗೋವಿಂದಾ, ನೀತೂರಿನ ತಿಮ್ಮಪ್ಪಿ ಇಲ್ಲೇ ಎಲ್ಲೋ ಇರಬೇಕು ನೋಡು" ಅಚ್ಯುತ ಹೇಳಿದ.

"ಹಾದು ಹೌದು ನೋಡು. ಮರಳ ರಾಶಿಯಲ್ಲಿ ಹೊಮದ ಹೊಗೆ ಎಬ್ಬಿಸಿ ಸಂಕಲ್ಪ ಮಾಡಿಸಲು ಕೂತಿರಬಹುದು—" ಅನಂತನೆಂದ.

"ಆವ ಬುದ್ಧಿವಂತ. ನವ್ಯ ದಾಗಲ್ಲ. ಸವಮದ್ರ ಸ್ನಾನವೂ ಆಯ್ತು. ಸಂಕಲ್ಪವೂ ಮಾಡಿಸಿ ಸಂಪಾದನೆಯೂ ಆಯಿತು ಅಂತ ಬಂದಿದ್ದಾನೆ. ಕೂಪ ಅಂಶ್ಚಿಯಪಡ್ತು ರೂಪ್ಯಾಯಾದ್ರೂ ಗಿಟ್ಟಿಬಹುದಲ್ಲ ಇವತ್ತು—" ಎಂದ ಗೋವಿಂದ.

ಮರಳ ರಾಶಿಯ ಮೇಲೆ ಅಳ್ಳಲ್ಲಿ ಹೊಗೆ ಏಳುತ್ತಿತ್ತು. ವಡಭಾಂಡೇಶ್ವರದ ಕೆರೆಯಲ್ಲಿ ಸ್ನಾನ ಮಾಡಿ ಬಂದವರ ಈ ಪುರೋಹಿತರ ಮುಂದೆ ಹೋಮದ ಹೊಗೆಯ ಮುಂದೆ ಕುಳಿತು ವಿಸೋ ಸಂಕಲ್ಪ ನೂಡಿಸಿ ಸಮುದ್ರಕ್ಕೆ ಹೋಗಿ ತೆರೆಗಳಿಗೆ ಕಲೆಯೊಡ್ಡುತ್ತಿದ್ದರು. ನಂಬಿಕೆಯ ಕೊಂಡಿಗೆ ಬಲವಾಗಿ ಅಂಟಿಕೊಂಡು ಸಾಂಪ್ರದಾಯಿಕ ಕಟ್ಟು ಕಟ್ಟಳೆಗಳ ಮರೆ ಹೊಕ್ಕ ಇಹಲೋಕದ ಕರ್ಮಗಳನ್ನು ಶರಿಹರಿಸಿ ಪರಲೋಕದ ಪುಣ್ಯ ಕಟ್ಟಿಕೊಳ್ಳಬೇಕೆಂಬ ಆಸೆಯಿಂದ, ಹಂಬಲದಿಂದ ಪೂರ್ವಿಕರ ಮಾಡಿಟ್ಟ ಈ ಕರ್ಮಗಳನ್ನು ಯಂತ್ರಿಕವಾಗಿ ಧಡು ಧಕ್ಕೆಗಳಿಂದ ಮಾಡಿ ಹೋಗುತ್ತಿದ್ದ ಈ ಜನಸ್ತೋಮ ವರ್ಷೇ ವರ್ಷೇ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ಸಂಪ್ರದಾಯ ನಮ್ಮ ರಕ್ತದಲ್ಲಿ ಸೇರಿಕೊಂಡಿದೆ. ವೈಜ್ಞಾನಿಕ ಇವುಗಳಲ್ಲಿ ನಂಬಿಕೆ ಇಲ್ಲವೆಂದ ಖಡಾಖಂಡಿತ ಹೊಟ್ಟಿಕೊಂಡರೂ ಆಂತರಿಕವಾಗಿ ಈ ಸಂಪ್ರದಾಯಗಳಿಗೆ ತಲೆ ಬಗ್ಗಿಸಿ ಸಮರ್ಥನ ಪಟ್ಟಕೊಳ್ಳುತ್ತಿದ್ದೇನೆ.

ವಿಸ್ತೀರ್ಣವಾದ, ಶಂಖನಾದವಾದ, ಅಗಾಧವಾದ, ಗಂಭೀರವಾದ ಸಮುದ್ರದ ತೆರೆಗಳಿಗೆ ತಲೆಯೊಡ್ಡಿ, ತೆರೆಗಳೊಡನೆ ಚೆಲ್ಲಾಟವಾಡಿ, ಮುಳುಗಿ ಎದ್ದ ನೈಮಿಷ ದೆಗಳನ್ನು ಒರಸಿಕೊಂಡು ದೆಳಗಿನ ಬಿಸಿಲಿಗೆ ಮೈಯೊಡ್ಡಿ ತುಸು ನಿಂತೆವು. ಸಮುದ್ರದ ಬಳಿ ನೆರೆದಿದ್ದ ಜನರ ಕೂಟ ಆ ಸವಮದ್ರದ ಮುಂದೆ ಹೂವ ಲೆಕ್ಕಕ್ಕೂ ಇಲ್ಲದಂತೆಯೇ ಇತ್ತು. ಸಾಗರದ ಮುಂದೆಯೇ ನಿಂತು ಸೃಷ್ಟಿ ವೈಚಿತ್ರ್ಯವನ್ನು ಮೆಲುಕು ಹಾಕುತ್ತ ತನ್ಮಯನಾಗಿದ್ದಾಗ ಅಚ್ಯುತ ಎಚ್ಚರಿಸಿದ— "ಹೊಟ್ಟೆ ಖಾಲಿಯಾಗಿದೆ. ಇನ್ನು ಜೋರೋಣ"—ಎಂದ.

ಸಮುದ್ರ ಸ್ನಾನದಿಂದ ಏನೋ ಒಂದು ಆಧ್ಯಕ್ಷ ಆನಂದ ಜೊರಕಿತ್ತು ನನ್ನ ಮನಸ್ಸಿಗೆ. ಎಲ್ಲರೂ ಸೃಷ್ಟಿಯಂತೆ ವಿವಾಗಿ ಹೊರಟೆವು.

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ರಿಮಿಟೆಡ್,
ಮುಂಬಾಯಿ-4

NAVAYUGA 11—12—1969
Registered with the Registrar
of News Papers for India
under No. R. N. 3546/'57

REGD: No: B. G/ 176
LICENCE No. 33
Licensed to Post without Prepayment

ಹಾವಿನಲ್ಲಿ ಸುರಿದ ಹೂಮಾಲೆ

(ಬಂದನೆ ಪುಟದಿಂದ)

ರಾಯಭಾರಿ ಪದವನ್ನು ತೆರವುಮಾಡುವುದು ಅಸಾಧ್ಯವಲ್ಲ.

ಕೃಷ್ಣಿರಾಜನನ್ನು ಕೊಲ್ಲಿಸಿದ ಜಯಚಾಮರಸನ್ನು ಫೌರಿಮಹಮ್ಮದ ಉಳಿಸಲಿಲ್ಲ. ರಾಜ್ಯಕೀಯ ಮಹತ್ವಾಕಾಂಕ್ಷೆಯಿಂದ ತುಂಬಿದವರಿಗೆ ತಮ್ಮ ದಾರಿಯನ್ನು ಹಳಸುಮಾಡುವುದಷ್ಟೇ ಗುರಿಯಲ್ಲ. ದ್ವೇಷ ಇನ್ನಿ ಅಡ್ಡ ಬರುವವರು ತಮ್ಮವರು—ಹೆರವರು ಎಂದು ತಿಳಿಯುವಷ್ಟು ವಿವೇಕವೂ ಇರುವುದಿಲ್ಲ. 'ಸುತ್ತಲೂ ಲತ್ತೆ ಕೊಡುವ ಕತ್ತೆ'ಯಂತೆ ಇಂದಿರಾ ಗಾಂಧಿ ರವರಿಗೆ ಬೇಕಾದಾಗ ಯೂರಪ್ಪನ್ನು ದಗೂ ತಲೆ ಮೇಲೆ ಹೊತ್ತು ಕೊಳ್ಳುತ್ತಾರೆ; ಪ್ರಧಾನಿಯಾಗಿದ್ದಾಗಿನಿಂದಲೂ ಮೇಲೆ ಒಬ್ಬ ಸಲಹುತ್ತಾರೆ ಶ್ರೀ ನಿಜಲಿಂಗಪ್ಪನವರನ್ನೂ ಅವರು ಮೂಡಿಸಿದ್ದು ಹೀಗೇ ತಾನೆ?

ಶ್ರೀ ನಿಜಲಿಂಗಪ್ಪ

ಸಿಂಡಿಕೇಟ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಸದ್ಯದ ಗ್ರಹಗತಿ ಚೆನ್ನಾಗಿಲ್ಲ. ಅದುದರಿಂದಲೇ ಪ್ರಧಾನಿಯ ನಿವಾಸನಲ್ಲಿ ಭೋಜನದ ಕೂಟದಲ್ಲಿ ಕೈಗೆ ಒಂದ ಪುಸ್ತ ಬಾಯಿಗೆ ಬೀಳಲಿಲ್ಲ. ಆದರೆ, ಇವರಿಗೆ ಮೂಸ್ತ ತಮ್ಮ ಮೇಲೆ ಮಿತಿ ವಿಂರಿದ ವಿಶ್ವಾಸ. ತಮ್ಮ ಅಹಮ್ಮಿನ ದಾಬಾದಲ್ಲಿ ಗಾಂಧೀವಿರೋಧಿ ಅಧಿವೇಶನದಲ್ಲಿ ತಮ್ಮ ಉದ್ದೇಶ ನಿರೀಕ್ಷೆಗೂ ಮಿಗಿಲಾಗಿ ಸಫಲವಾಗುವುದೆಂಬುದು ಅವರ ಆಶಯ. ಇದಕ್ಕೆ ತಕ್ಕ ವಾತಾವರಣ ಮೂಡಿಸಲು ಅವರೂ ಅವರ ಸಮರ್ಥಕರೂ ಪ್ರಯತ್ನ ನಡೆಸಿದ್ದಾರೆ.

ಪ್ರಧಾನಿಯ ಹುಟ್ಟುರಾಜ್ಯ ಉತ್ತರ ಪ್ರದೇಶದಲ್ಲೇ ಆಕೆಗೆ ಬೆಂಬಲ ಇಲ್ಲ. ಅಲ್ಲಿರುವ ಗುಪ್ತ ಸರಕಾರವನ್ನು ಉರುಳಿಸಿ, ತ್ರಿಪಾಠಿ ಸರಕಾರ ರಚನೆ ಮಾಡುವುದು ಆಕೆಯ ಇರಾದೆ. ಇಂತಹ ಸಂಕಟದ ಪರಿಸ್ಥಿತಿಯಲ್ಲೂ ಸಿಂಡಿಕೇಟ್ ಕಾಂಗ್ರೆಸ್ಸು ಕಾಂಗ್ರೆಸ್ ನೀತಿಯನ್ನು ವಿರೋಧಿಸುವ ಜನಸಂಘ ಮತ್ತು ಸ್ವತಂತ್ರ ಪಕ್ಷಗಳಿಂದ ಸಶರ್ತ ಬೆಂಬಲ ಪಡೆಯಬಾರದು ಎಂದು ಗುಪ್ತರಿಗೆ ಅದೇಶ ನೀಡಿದ್ದಾರೆ. ತನ್ನ ಕಾಂಸ್ ಪಕ್ಷವು ಪಕ್ಷದ ನೀತಿ—ನಿಬಂಧನೆಗಳಿಗೆ ವಿರುದ್ಧ ಆಂಟಿ ಕೊಂಡಿದೆಯೆಂದು ಹೊರಬಸಿಕೊಳ್ಳುವುದೇ ಅವರ ಧ್ಯೇಯ. ಜತೆಗೆ ಜನಸಂಘ ಮತ್ತು ಸ್ವತಂತ್ರ ಪಕ್ಷಗಳ ನೆರವಿನಿಂದ ಸ್ಪರ್ಧಾಳು ಇಂದಿರಾ ಗಾಂಧಿ ಎನ್ನು ಗದ್ದುಗೆಯಿಳಿಸುವ ಸಂಚು ಹೂಡಿದರೆಂದು ತನ್ನ ಮೇಲೆಸೆದ ಕೆಲವನ್ನೂ (ಹಿಂದಿನಿಂದ ಹಿಂತೆಗೆದುಕೊಂಡ) ಪರಿಪೂರ್ಣ ಜೋಳ್ಳೆ ಮಾಡುವುದು ಇನ್ನೊಂದು ಉದ್ದೇಶ. ಇಂದಿರಾ ಗಾಂಧಿಯವರ ಒಂದೊಂದು ಆರೋಪವೂ ಸ್ವಕಪೋಲ ಕಲ್ಪಿತವೆಂಬುದನ್ನು ಅವರ ಜಗಜ್ಜಾಹೀರು ಮಾಡಿಸುತ್ತಿದ್ದಾರೆ.

ಶ್ರೀ ಕೃಪಲಾನಿ

ಮಹಾತ್ಮಾ ಗಾಂಧಿಯವರ ಪ್ರತಿಮೆಯೊಂದನ್ನು ಇಂಡಿಯಾ ಗೇಟಿನ ಬಳಿಯ ವಿವೇಕ್ಷದಲ್ಲಿ ಸ್ಥಾಪಿಸುವ ಕೇಂದ್ರ ಸರಕಾರದ ನಿರ್ಧಾರ ಬದಲಾಯಿಸಬೇಕೆಂದು ಚರ್ಚೆ. ಪಕ್ಷೇತರ ಸದಸ್ಯರಾದ ಶ್ರೀ ಜೆ. ಬಿ. ಕೃಪಲಾನಿಯವರಿಗೆ ಬಹಳ ದುಃಖ. ಮೂಕಿ ಹೊರಡದಂತಹ ಪ್ರಯೋಗ. ನಿವೇಶನ ಬದಲಾಗುತ್ತಿರುವ ಬಗ್ಗೆ ಕೆಲವರು ಕಳವಳ ವ್ಯಕ್ತಪಡಿಸಿದರು. ಆದರೆ, ಕೃಪಲಾನಿ ಹೇಳುತ್ತಾರೆ—ಮಹಾತ್ಮರು ತಮ್ಮ ಮೂರ್ತಿಯನ್ನು ಸ್ಥಾಪಿಸ ಬಯಸುವುದಿಲ್ಲ ತನಗೆ ಹೂಮಾಲೆ ಹಾಕಿ ಪೂಜಿಸಬೇಕೆಂದು ಇಚ್ಛಿಸುವುದಿಲ್ಲ. ಅವರಿಗೆ ಇಂತಹ ಯಾವ ಆಡಂಬರವೂ ಬೇಕಾಗಿಲ್ಲ. ಗಾಂಧೀ ತತ್ವಗಳ ಅನುಷ್ಠಾನ ಮುಖ್ಯ.

ಗಾಂಧಿ ಬದ ಶೆದ್ದಾಗ, ಯಾರೂ ಗಾಂಧಿ ಮೂತನ್ನು ಕೇಳಲಿಲ್ಲ. ಕೇಳಿಸ್ದೆ ಇದ್ದರೆ, ಅದು ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲ; ಅದೂ ರಾಜ್ಯಕೀಯ ಪ್ರಜ್ಞೆಯು ಜನತೆಯಲ್ಲಿ ಸುಪ್ತವಾಗಿದ್ದಾಗಲೇ. ಈ ಪ್ರಜ್ಞೆಯು ಜಾಗೃತವಾಗುತ್ತ ಬಂದಂತೆ ಗಾಂಧಿ ನಾಯಕತ್ವಕ್ಕೂ ಅಹ್ವಾನ ಬಂದಿದ್ದಿಲ್ಲವೆ? ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನಾವು ನಡೆದು ಬಂದ ದಾರಿ ಗಾಂಧಿ ತತ್ವಗಳಿಗೆಲ್ಲ ವಿರುದ್ಧವಾದದ್ದೇ. ತತ್ವ ಉಳಿದೇಶಕ್ಕೆ ಮೂಕ್ಯ. ಅವನ್ನು ವ್ಯವಹಾರದಲ್ಲಿ ತರುವುದು ನುನ್ನ ಮೂತ್ಯನಿಂದ ಅಸಾಧ್ಯ. ಹುದ್ದೆಯಲ್ಲಿ ಮಿಡಿದ ಬಳಿಕ ಸಿಪಹಸಾಲಾರರ ನೆನಪಿಗೆಂದು ಒಂದೊಂದು ಕಲ್ಲು ಕೆತ್ತಿ ಅದರಿಂದ ಗೇಟ್ ವೇ ಆಫ್ ಇಂಡಿಯೂ ನಿರ್ಮಾಣವಾಯ್ತು. ಹಾಗಿರುವಾಗ ಸ್ವಾತಂತ್ರ್ಯ ಸಮರ ನಾಯಕನ ಮೂರ್ತಿ ಮಾಡಿ ಫಿಲ್ಲಿಸಿದರೆ ಅನ್ಯಾಯವೇನು? "ಭಾವೋ ವಿದ್ಯತೇ ದೇವ" ಎನ್ನುವಂತೆ ಗಾಂಧಿಯನ್ನೂ ಹೂಜಿಸಬಾರದೇಕೆ?

ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಕಾಂಗ್ರೆಸ್ಸನ್ನು ವಿಸರ್ಜಿಸ ಬೇಕೆಂದು ಮಹಾತ್ಮಾ ಗಾಂಧಿ ಹೇಳಿದರು. ಆಗ ಅವರ ರಾಜ್ಯಕೀಯ ಶಿಷ್ಯ ಜವಾಹರಲಾಲರೇ ಒಪ್ಪಲಿಲ್ಲ. ಅಪ್ಪನು ಅಂದು ಮೂಡಿದ್ದ ತಪ್ಪನ್ನು ಮಗಳು ಇಂದಿರಾ ಗಾಂಧಿ ನೆಪ್ಪು ಮಾಡಲು ಹೊರಟಿದ್ದಾರೆ. ಕಾಂಗ್ರೆಸ್‌ನ ಧ್ವಜ ಮತ್ತು ಚುನಾವಣಾ ಚಿಹ್ನೆಗಳು ತಪ್ಪಗೇ ಬೇಕೆನ್ನುವ ಛಲವನ್ನೂ ಅವರು ತ್ಯಜಿಸಿದರೆ, ಆ ಗಾಂಧಿ ಬಯಕೆಯನ್ನು ಆ ತನ ಶಕಾಬ್ದಿಯಲ್ಲಿ ಈ ಗಾಂಧಿ ಈಡೇರಿಸಿದ ಪುಣ್ಯ ಬರುತ್ತದೆ. ಆದರೆ, ಅಪ್ಪನಿಗೆ ತೃಪ್ತಿಯೂಯಿತೆ? ತಾನೀಗ ಯಾರನ್ನು ತೃಪ್ತಿ ಪಡಿಸ ಬೇಕೆಂದು ಆಕೆ ಕೃಪಲಾನಿ ಸಲಹೆ ಕೇಳುತ್ತಾರೆಯೇ?

ಶ್ರೀ ಸಿಂಘ್ವಿ

ಭವಿಷ್ಯವನ್ನು ನಂಬುವುದಿಲ್ಲವೆಂದು ಹೇಳುವವರೇ ಹೆಚ್ಚು; ಆದರೆ, ಅದನ್ನು ನಂಬದಿರುವವರು ಯಾರೂ ಇಲ್ಲ. ಜಾಳಿನ ಸಂಖದ ಅಶಯೇ ಇಂದಿನ ಖದುಕಿನ ಜೀವಾಳ. ಬ್ರಿಟಿಷ ರಾಜರ ಮಡ ಎಂಟನೆ ಎಡ್ವರ್ಡರು ಸಿಂಹಾಸನ ತ್ಯಾಗ ಮಾಡುವರು ಎಂದೊಬ್ಬರು ಭವಿಷ್ಯ ನುಡಿದಾಗ, ಈ ಕಲಿಕಾಲದಲ್ಲಿ ಅದೂ ವಿಷಯ ಸುಖಕ್ಕೆ ತವರೂರಲ್ಲಿ ಸಾಧ್ಯವೆ? ಶದ್ಧ ಸುಳ್ಳು ಎಂದು ಹೇಳಿದರು. ಆದರೆ, ಎಂಟನೆ ಎಡ್ವರ್ಡ್ ದೊರೆ ವಿಷಯ ಸಖ್ಯವೇ ಕ್ಷೆಯಿಂದಲೇ ಸಿಂಹಾಸನ ತ್ಯಾಗ ಮಾಡಿದಾಗ, ಭವಿಷ್ಯ ಸತ್ಯವಾಯಿತು. ಎರಡನೆ ಮಹಾಯುದ್ಧ ಆರಂಭವಾಗುವುದು ಎಂದು ಭವಿಷ್ಯವಾದಿ ಹೇಳಿದರು. ಇದು ಕಂಡಿತಕ್ಕೂ ಅಸಾಧ್ಯ. ಯುದ್ಧ ಜ್ವಾಲೆಯಿಂದ ಬೆಂದವರು ಜನಸಾಂಘ ಸಂಘಟನ್ನ ಕಟ್ಟಿದ್ದು ಅಕಾಂತಿಗೇನ? ಎಂದರು

ಖಾನ್ ಅಬ್ದುಲ್ ಗಫರ್‌ಖಾನರು ಗಾಂಧಿ ಶತಮಾನಿಗೆ ಪುಷ್ಪಗುಚ್ಛ ವನ್ನರ್ಪಿಸಿ ಗೌರವಿಸುವುದು. ಚಿತ್ರದಲ್ಲಿ ಶ್ರೀ ಗಫರ್‌ಖಾನ್, ಶ್ರೀ ವಿ. ವಿ. ಗಿರಿ, ಶ್ರೀಮತಿ ಇಂದಿರಾ ಗಾಂಧಿ, ಶ್ರೀ ಜೆ. ಎಸ್. ಖಾರಕ್ ಮತ್ತು ಇನ್ನಿತರ ಅಧ್ಯ ಮಹನೀಯರುಗಳನ್ನು ಕಾಣಬಹುದು.

ಕೆಲವರು. ಭವಿಷ್ಯವಾದಿಯು ಬ್ರಿಟಿಷ್ ಸೇನೆಯ ಸೆರೆಮನೆಯನ್ನೂ ಕೆಲದಿನ ಕಾಣ ಬೇಕಾಯ್ತು.

ಇದೀಗ ಮತ್ತೊಂದು ಭವಿಷ್ಯವಾಣಿ ಬಹಿರಂಗವಾಗಿದೆ-ಭಾರತದ ಕಾಂಗ್ರೆಸ್ಸಿನ ಸಿಂಡಿಕೇಟ್-ಇಂಡಿಕೇಟ್ ಜಗಳದ ಸಂಬಂಧದ್ದು. ಈ ಭವಿಷ್ಯವಾದಿ ಹೇಳುವಂತೆ "ಜಯದ ಮೇಲೆ ಜಯವನ್ನು ಹೊಂದುತ್ತ ಅಗ್ರಗಾಮಿಯಾಗುತ್ತಿರುವ ಪ್ರಧಾನಿ ಇಂದಿರಾ ಗಾಂಧಿ ಮುಂದಿನ ಮಾರ್ಚಿ ತಿಂಗಳ ಪೂರ್ವಾರ್ಧದಲ್ಲಿಯೇ ಸಿಂಡಿಕೇಟಿನಿಂದ ರಾಜ್ಯಕೀಯವಾಗಿ ಆದಸಾನ ಹೊಂದುತ್ತಾರೆ." ಮೂಗು ಭವಿಷ್ಯಗಳನ್ನು ಹೇಳಿದವರು ಸಿಂಹಳದ ಶ್ರೀ ಸಿ.ಇ.ಸಿ. ಜುಲಾಕ್ ಸಿಂಘ್ವಿಲಾ.

ಪರೀಕ್ಷಿತ ಮಹಾರಾಜನಿಗೆ ಸರ್ಪ ಕಚ್ಚಿ ಸಾಯುವಂತೆ ತಾಸ್ತ ಇದು ತಿಳಿದ ರಾಜ ಕಕೀಯವರಿಗೆ ನಡುವೆ ಗಾಜಿನರಮನೆ ಕಟ್ಟಿಸಿ ಆನಂದದಿಂದಿದ್ದ. ಆದರೂ ತಾಸ ಹುಸಿಯಾಗಲಿಲ್ಲ. ಇದು ಪುರಾಣದ ಗೊಡ್ಡು ಕತೆ, ತನ್ನ ಕಾಲೆ ನಂಬದ ಭವಿಷ್ಯವನ್ನು ಇಂದಿರಾ ಗಾಂಧಿ ಫಲಬದಿರಬಹುದು. ಪರಂತು, ತನ್ನ ಎದುಬುಲ್ಲಾಗುತ್ತಿರುವ ಎಂಟು ಜನಕೆಗಳ ಬಡಿದಾಟ ಆಕೆಗೆ ಕೇಳಿಸದೆ ಇನ್ನೀತೆ? ಪುಸ್ಕಟೆ ಹೇಳುವ ಈ ಭವಿಷ್ಯವಾದಿಗಳನ್ನು ಏನು ಮಾಡಬೇಕು? ಪ್ರಬಲ ಪ್ರತಿಭಟನೆ ಮಾಡ್ಲಿ ಸಲ್ಲಿಸಿ ಇತರ ದೇಶಗಳ ಆಂತರಿಕ ವ್ಯವಹಾರಗಳ ಬಗ್ಗೆ ಬಾಯಿ ಹಾಕಬಾರದೆಂದು ಕೇಳಿಕೊಂಡರೆ ಹೇಗೆ?

ಸಂಗ್ರಾಹ್ಯ ಸಂಕಲನಗಳು		ಪುಡಿಮುತ್ತುಗಳು	1—50
ಶಿಲ್ಪಿ	1—50	ಕುಂಚಗಜ್ಜಾಯ	2—00
ಪ್ರತಿಜ್ಞಾ ಪೂರ್ತಿ	1—00	ಪುಷ್ಪವನ	2—00
ನೀತಿ ವಿನೋದ ಶತಕಗಳು	1—00	ಮುತ್ತಿನ ಮಾಲೆ	1—80
ಕಥಾವಳಿ	2—00	ಹೂ ಗೊಂಚಲು	1—70
ಪರಾಜಯ ಪ್ರಬಂಧಗಳು	1—00	ಏಕಾಂಕಿ ನಾಟಕಗಳು	1—00
ನಾಟಕ ಪ್ರಪಂಚ	1—50	ಭಾರತದ ನಾಲ್ಕುಮುಖಗಳು	1—00
ಜೀವನಕಲೆ	1—00	ದೇಶವಿದೇಶದ ಮಹಾ ಜೀವಿಗಳು	1—80
ಅನುವಾದಿತ ಕತೆಗಳು	1—20		
ಕುಂಚ ಸುಮನ	1—20	ನವಭಾರತ ಪುಸ್ತಕ ಭಂಡಾರ, ಉಡುಪಿ.	
ಹೆಂಗುಸರ ಕತೆಗಳು	2—00		

ಮಿತ ಕುಟುಂಬ ಯೋಜನೆಗೆ ಅತ್ಯಂತ ಸಹಕಾರಿಯಾದ ಪುಸ್ತಕ

ಮಿತ ಸಂತತಿ

ಬೆಲೆ 0-75 ಪೈಸೆ ಮಾತ್ರ.

ನವಭಾರತ ಪುಸ್ತಕ ಭಂಡಾರ.
ಕಾಲುಕೋಟೆ, ಉಡುಪಿ ದ. ಕ.

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 18—12—1969 ಸಂಪುಟ 49 ಸಂಚಿಕೆ 16

ನಿರ್ವಿಕಾರ ದೃಷ್ಟಿಗೆ ವಿರಾಟ್‌ದರ್ಶನ

ಮಳೆಗಾಲ, ತಂಗಾಳಿ ಬೀಸತೊಡಗಿದೆ. ಮೋಡಗಳಿಂದ ನೀರಬಿಂದುಸೆನಿಸಿ ಪರಮಾತ್ಮನು ಭೂಮಿಯಲ್ಲಿ ಅವತರಿಸಿದ್ದಾನೆ. ಎಲ್ಲೆಲ್ಲಿ ನೋಡಿದರೂ ಹಸುರೇ ಹಸುರು, ಮಳೆ ಶುರಿಯತೊಡಗಿ ಹತ್ತು ದಿನಗಳಾಗಿಲ್ಲ, ನೆಲನೇಲದಲ್ಲಿ ಹೆಚ್ಚಿನೆಯು ಹಲ್ಲು ಮೊಳೆತಿದೆ. ನೆಲದ ವೈಲಿಯವ ಜೀವಜಂತುಗಳಿಗೆಂದು ಭಗವಂತನು ಹಸಿರು ಹಾಸಿಗೆಯ ನ್ನು ಹಾಸಿಟ್ಟಂತೆ ಗೋಚರವಾಗುತ್ತಿದೆ

ರೈತರು ಭತ್ತ ನಾಟುವುದಕ್ಕಾಗಿ ತಂತಮ್ಮ ಗದ್ದೆಗಳತ್ತ ತೆರಳಿದ್ದಾರೆ. ಅಗೆಯನ್ನು ನಾಟುವುದರಲ್ಲಿ ನಿರತರಾಗಿದ್ದಾರೆ ಒಂದೊಂದು ಬೀಜದಿಂದ ಒಂದೊಂದು ಸಸಿ ಮೂಡಿದೆ ಈ ಒಂದೊಂದು ಸಸಿಯಿಂದ ಒಂದೊಂದು ತೆನೆಯೆ ಳಕುತ್ತದೆ. ಒಂದೊಂದು ತೆನೆಯಲ್ಲಿ ನೂರಾರು ಕಾಳುಗಳು ಕೂಡಿರುತ್ತವೆ. "ಏಕೋಹಂ ಬಹುಸ್ಯಾಂ" ಎಂಬಂತೆ ಭಗವಂತನು ಈ ಧಾನ್ಯಗಳ ರೂಪದಲ್ಲಿ ಪ್ರಕಟವಾಗುತ್ತಾನೆ.

ಬೆಟ್ಟ ಗುಡ್ಡಗಳೆಲ್ಲೂ ಹಸುರು ಹಾಸಿದೆ. ದೇವರು ಕಣಕಣದಲ್ಲೂ ಕೂಡಿದ್ದಾನೆಂಬುದಕ್ಕೆ ಅದು ಎತ್ತಿತೋರಿಸುತ್ತದೆ. ದೇವರ ಅಸ್ತಿತ್ವ ಅಲ್ಲೆಲ್ಲದಿರುತಿದ್ದರೆ, ಈ ಬಗೆಯ ಸೊಬಗೆಲ್ಲಿಂದ ಬರಬೇಕು? ಈ ಹಸಿರು ಮಾನವನಿರ್ಮಿತವಲ್ಲ; ಮಳೆಗಾಲದಲ್ಲಿ ತಾನಾಗಿಯೇ ಭೂಮಿಯಲ್ಲಿ ಪ್ರಕಟವಾದುದು. ದೇವರು ಸರ್ವವ್ಯಾಪಿಯೆನ್ನುವುದಕ್ಕೆ ಇದಕ್ಕಿಂತ ಹೆಚ್ಚಿನ ಪ್ರಮಾಣ ಅವಶ್ಯಕ. ಎರಡು ಬೆಟ್ಟಗಳ ನಡುವೆ ತಣ್ಣನೆ ತಂಗಾಳಿ ಜೋರಾಗಿ ಬೀಸುತ್ತಿದೆ; ಕೆಲವೊಮ್ಮೆ ಈ ಗಾಳಿಯು ನೀರಿನಿಂದ ಅದ್ದಿಹೋಗುವಷ್ಟೂ ಉಂಟು. ಅಂತಹ ಗಾಳಿಯು ಸ್ಪರ್ಶ ನಮಗಾದಾಗ ನಾವು ಬೆಚ್ಚಬೀಳುತ್ತೇವೆ; ಪಡಗಡನೆ ನಡುಗುತ್ತೇವೆ. ಆದರೆ, ಆ ಸಾಕ್ಷಾತ್ ಪರಮೇಶ್ವರನೇ ನಮ್ಮ ಒಳಹೊರಟಾನೆ, ನಮ್ಮ ಗಲ್ಲಕ್ಕೆ ಮುತ್ತು ಕೊಟ್ಟು, ದೇಹವನ್ನು ಸವರಿ ಹೋಗುತ್ತಾನೆಂಬುದನ್ನು ಮರೆತು ಬಿಡುತ್ತೇವೆ. ಗಾಳಿಯನ್ನುರುವ ಅಮ್ಲಜನಕವು ನಾಸಿಕದ್ವಾರದ ಮೂಲಕ ಶ್ವಾಸಕೋಶಗಳಿಗೆ ಹಾಯ್ದಾಗ, ರಕ್ತವು ಪರಿಶುದ್ಧವಾಗುವುದೆಂದು ಎಲ್ಲರಿಗೂ ಗೊತ್ತು. ಇಲ್ಲವಾದರೆ, ರಕ್ತ ಅಶುದ್ಧವಾಗಿ ಪ್ರಾಣವೆಂದೋ ಹಾರಿಹೋಗುತಿತ್ತು. ದೇವರು ಪ್ರಾಣವಾಯುವಿನ ರೂಪ ತಳೆದು, ನಮ್ಮ ಶ್ವಾಸಕೋಶವನ್ನು ಸೇರಿ, ಅಲ್ಲಿ ಅಶುದ್ಧ ರಕ್ತವನ್ನು ಶುದ್ಧವಾಡಿ ತ್ತಾನೆ; ನಮ್ಮ ಪ್ರಾಣವನ್ನುಳಿಸುತ್ತಾನೆ.

ಮರದೆಲೆಗಳು, ಟೊಂಗೆಗಳು ಕಾಡಿಗೆ ಚಿಗುರಾಡುತ್ತಿವೆ. ಇವುಗಳಲ್ಲಿ ಈಶ್ವರನೇ ಅನುದಿನೋತ್ಸಾಹದಿಂದ ನರ್ತಿಸುತ್ತಿರುತ್ತಾನೆ. ವೃಕ್ಷಗಳು ಹೂಬಿಟ್ಟಿವೆ. ಇಡಿಯ ಭೂಮಂಡಲ ರಮಣೀಯವಾಗಿ ಶೃಂಗರಿಸಲ್ಪಟ್ಟಿದೆ; ಮನಸ್ಸನ್ನು ಆಕರ್ಷಿಸುತ್ತದೆ; ದೇವರೇ ಹೂಗಳ ರೂಪದಲ್ಲಿ ಪ್ರಕಟವಾಗಿದ್ದಾನೆಯೆ, ಆತನೇ ಮಕರಂದವಾಗಿ ಅವುಗಳಲ್ಲಿ ಅವಾಸವಾಗಿದ್ದಾನೆ, ವಾಯುವಿನಲ್ಲಿ ಸೇರಿ ದೂರ ದೂರಕ್ಕೂ ಹರಡಿ ತನ್ನ ಅನಂತತೆಯನ್ನು ತೋರಿಸುತಿದ್ದಾನೆ. ಪರಮಾತ್ಮನ ವೈಭವಲತೆಯೇ ಹೂಗಳಿಗೂ ಬಂದಿದೆ. ಕಣಕಣದಲ್ಲಿ, ಹೂ—ಎಲೆಗಳಲ್ಲಿ, ಮರಗಿಡಗಳಲ್ಲಿ ಹುಲ್ಲು ಕಡ್ಡಿಗಳಲ್ಲಿ, ಬೀಸುವ ಗಾಳಿಯಲ್ಲಿ ದೇವರ ವಿರಾಟ್ ದರ್ಶನ ನವನವಾಗುತ್ತಿದೆ; ಆದರೆ, ಕಣ್ಣು ಮಬ್ಬಿಗೊಂಡಿರುವ ನಮಗೆ ಅವು ಗೋಚರಿಸದಿದ್ದರೆ, ತಪ್ಪು ಯಾರದು?

ಭಾತಿಕ ವಿಚಾರಗಳಲ್ಲಿ ತನ್ಮಶನವನ್ನೇ ಕಳೆದು ಕೊಂಡ ಮನುಷ್ಯ ಪರಮಾತ್ಮನ ಈ ವಿಶ್ವರೂಪವನ್ನು ಎಂದಿಗೂ ಕಾಣಲಾರನು. ಸ್ವಪ್ರಪಂಚ—ಸ್ವಸ್ಥತೆಯಲ್ಲೇ ನೆಲೆ ಮರೆಯುವ ಮಾನವನಿಗೆ ಅನ್ಯತ್ರ ಗಮನ ಹರಿಸಲು ಬಿಡವಾದರೂ ಎಲ್ಲಿಂದ? ಅಂತರಿಕ ವಿಚಾರಧಾರೆ, ಭೂತಕಾಲದ ಕೃತ್ಯಗಳು ವರ್ತಮಾನ, ಭವಿಷ್ಯತ್ತಾಲದ ಚಿಂತೆಗಳು ಮಾನವನನ್ನು ವರ್ತಮಾನಕಾಲದಲ್ಲಿ ನೆಮ್ಮದಿಯಿಂದಿರಲು ಬಿಡುವುದಿಲ್ಲ. ಗತಕಾಲದ ಚಿಂತೆಯೊಗಲೀ, ಭವಿಷ್ಯದ ಯೋಚನೆಗಳಾಲೀ ಇಲ್ಲದೆ ವರ್ತಮಾನಕಾಲದಲ್ಲಿ ನಿಶ್ಚಿಂತನಾಗಿರುವವನು ಮಾತ್ರವೇ ಭಗವಂತನ ವಿಶ್ವರೂಪವನ್ನು ಕಾಣಬಲ್ಲ. ಇಂತಹರು ಕಂಡ್ಯೇ ಸತ್ಯ. ಅವರು ನೋಡುತ್ತಾರೆ; ಆದರೆ, ಅದಕ್ಕೆ ತಮ್ಮ ಸಂಸ್ಕಾರವನ್ನು ಕೊಡುವುದಿಲ್ಲ, ಆದ್ದರಿಂದ ಅದು ಶುದ್ಧ, ತಂತಮ್ಮ ಸಂಸ್ಕಾರವನ್ನೂ ದೃಷ್ಟಿಗೆ ಕೂಡಿಸಿ ನೋಡಿದರೆ, ಆ ವಿರಾಟ್ ರೂಪ ವಿಕೃತವಾಗುತ್ತದೆ. ನಾವೊಂದು ಹೂವನ್ನು ನೋಡುತ್ತಿದ್ದೇವೆ. ನಾವು ಅದನ್ನು ಬರಿದೆ ನೋಡುತ್ತಲೇ ಇದ್ದೇವೆ. ನೋಡುವಾಗ, ನಮ್ಮ ಮನಸ್ಸಿನಲ್ಲಿ ಯಾವ ವಿಧದ ವಿಚಾರವೂ ಇರುವುದಿಲ್ಲ. ಸಮಗ್ರ ಧ್ಯಾನದಿಂದ ನೋಡುವಾಗ, ನಶ್ವರ ಪೋಟವು ಮನಸ್ಸನ್ನು ನಿರ್ವಿಕಾರಗೊಳಿಸುವ ಒಂದು ಸಾಧನವೆನಿಸುತ್ತದೆ. ಇದು ತೀರ ಸಾಧಾರಣವಾಗೇ ಇರುತ್ತದೆ; ಆದರೆ, ಮನುಷ್ಯ ಜೀವಪದಲ್ಲಿ ಇದಕ್ಕೆ ಮಹತ್ವ ಹೆಚ್ಚು. ನಾವು ಸುಂದರ ಪುಷ್ಪವನ್ನು ವೀಕ್ಷಿಸುವಾಗ, ನಮ್ಮ ಮನಸ್ಸಿನಲ್ಲಿ ಹಲವು ಬಗೆಯ ವಿಚಾರತರಂಗಗಳು ವಿಜೃಂಭಿಸಿ ಹೂವಿನ ಮೂಲ ಸೌಂದರ್ಯವನ್ನೇ ಮರೆಸಿಬಿಡಬಹುದು. ಹೂವಿನ ಸೌಂದರ್ಯವನ್ನು ಕಂಡಾಗ, ಅದನ್ನು ಕೊಳ್ಳೋಣವೆ? ತೋಟಗಾರ ನೋಡಿದನೆಂದರೆ, ಇಲ್ಲಿಂದ ಒಯ್ದು ಹೂರಕಳ್ಳನು, ಹೂ ಕೊಯ್ದು ವಾಸಿಗಿಟ್ಟು ಪರಿಮಳ ವಾಸಬಾರದೇಕೆ? ಇತ್ಯಾದಿ. ಹೂವಿನ ರೂಪ, ಕೋಮಲತೆ ಮೊದಲಾದುವುಗಳನ್ನು ನಾವು ಅನುಭವಿಸುವುದಕ್ಕೆ ಮೊದಲೇ ಮನಸ್ಸಿನೊಳಗೆ ವಿಕಾರವೇಳಲು ಆರಂಭವಾಗುತ್ತದೆ; ಎಷ್ಟಾದರೂ ಆ ಹೂವನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕೆಂಬ ಹೆಬ್ಬಯಕೆ ಮಾಡಿ ಬಿಡುತ್ತದೆ. ಇದನ್ನು ನುನುಷ್ಯನ ಪಶುಪ್ರವೃತ್ತಿಯೆನ್ನಬಹುದು.

ವಸ್ತುವಿನ ಸಂಬಂಧ ಯಾವ ರೀತಿಯಲ್ಲಾದರೂ ಅದು ಪಾಪವೆನ್ನು ದೃಷ್ಟಿಸಾದುದರಿಂದ ಪರಿಪೂರ್ಣತೆಯಾಗಿ ರೂಪಾಂತರಗೊಳ್ಳುತ್ತದೆ. ಅದು ಸಮಗ್ರರೂಪ ಕಳೆಯುವುದಿಲ್ಲ. ನಾವು ನಾಮರೂಪವನ್ನೇ ನೋಡುತ್ತೇವೆ, ನೋಟದಲ್ಲಿ ನಮ್ಮ ಸಂಸ್ಕಾರಗಳನ್ನು ಜೋಡಿಸುತ್ತೇವೆ. ಎಲ್ಲಾ ಮಾಂಸಾವಿಗಳಿಂದ ಅದು ನಮಗೆ ಪಸರಾದಾಗಿ ಕಾಣುತ್ತದೆ; ಪ್ರಿಯವೆನಿಸುತ್ತದೆ. ಆದರೆ, ಈ ಸತ್ಯದತ್ತ ಗಮನ ಹರಿಸಲು ನಾವು ಸಿದ್ಧರಿಲ್ಲವಾದ್ದರಿಂದ ಹೂಸ್ವಾರ್ಥ ಸಿದ್ಧಿಗೆ ಕಾರಣವಾಗುತ್ತದೆ. ಎಲ್ಲ ಹೂಗಳೂ ಈಶ್ವರ ಸೃಷ್ಟಿಗೆ ಶೃಂಗಾರ, ಇವೆಲ್ಲವೂ ಅತನದೇ ಬೇರೆ ಬೇರೆ ರೂಪಗಳು ಎಂಬ ಅನುಭವ ನಮಗಾಗುವುದಿಲ್ಲ.

ಬಳ್ಳಿಗಳು ಬೆಳೆಯುತ್ತವೆ. ತನುಗೆ ತಾವೇ ಆಶ್ರಯ ಹುಡುಕಿಕೊಂಡು ಅವು ಮುಂದುವರಿಯುತ್ತವೆ. ತನ್ಮ ದಾರಿ ತಪ್ಪಿ ಅವು ಚರಿಸುವುದಿಲ್ಲ ಮಾನವನಿಗೆ ದೇವರೇ ಆಧಾರ. ಈ ಆಧಾರವನ್ನೇ ನಾವು ಹುಡುಕಿ ಪಡೆದು ಆಧರಿಸಿದರೆ, ನಮ್ಮ ಜೀವನ ಉನ್ನತವಾಗುವುದು. ನಮ್ಮ ಗಲ್ಲವನ್ನು ತಣ್ಣನೆ ತಂಗಾಳಿ ಮುಟ್ಟಿದಾಗ, ಗಾಳಿಯು ಮೂಲಕ ಅದರ ಕೋಮಲ ಆಧರಸ್ಪರ್ಶ ನಮಗಾಗುವುದು. ಆಗ ನಮ್ಮ ನೆನಪು ಪ್ರಫುಲ್ಲವಾಗುತ್ತೇವೆ! ಹೆಜ್ಜೆಹೆಜ್ಜೆಗೂ ಭಗವದ್ ಕೃಪೆ ಲಭ್ಯವಾಗುವುದು; ಏಕೆಂದರೆ, ಎಲ್ಲ ವಿಧಾನದಲ್ಲಿಂದಲೂ ಈ ಪ್ರಕೃತಿಯಲ್ಲಿ ಭಗವದ್ ಕೃಪೆಯೇ ತುಂಬಿದೆ. ಪ್ರಕೃತಿ—ಭಗವಂತನಿಂದ ಭಿನ್ನವಲ್ಲ. ಅವೆರಡೂ ಅಭಿನ್ನ. ಭಗವಂತನೇ ಪ್ರಕೃತಿಯ ರೂಪದಲ್ಲಿ ಸೃಷ್ಟಿಯಲ್ಲಿ ವ್ಯಕ್ತನಾಗಿದ್ದಾನೆ. ಇದನ್ನು ನಾವು ತಿಳಿದುಕೊಂಡೆವೆಂದರೆ, ದೇವರು ಸರ್ವವ್ಯಾಪ್ತನು, ಸರ್ವನು ಎಂಬುದನ್ನು ಮನಸಾರೆ ಮೂಡಿಕೊಳ್ಳಲು ಕಷ್ಟವಿಲ್ಲ. ಮರ—ಗಿಡಗಳಲ್ಲಿ, ಎಲೆ—ಹೂಗಳಲ್ಲಿ, ನುಣ್ಣಿನ ಕಣಕಣದಲ್ಲೂ ಈಶ್ವರನ ಅಭಿವ್ಯಕ್ತಿಗೆ ಗೋಚರವಾಗೇ ಇರುವುದು.

ದೇವರು ಅಖಿಲಾಪ್ತನು. ದೇವತೆಗೆ ಕಣ್ಣಿರೆಪ್ಪೆಗಳಿಲ್ಲವಾದ್ದರಿಂದ ಅವನು ನೋಡತ್ತಲೇ ಇರುತ್ತಾನೆ. ಯಾರನ್ನ? ತನ್ನ ಭಕ್ತರನ್ನು. ಭಕ್ತನನ್ನತ್ತ ನೋಡಬೇಕೆಂದ, ಈಶ್ವರ ಆತನನ್ನೇ ಕ್ಷಣಕ್ಷಣವೂ ನೋಡುತ್ತಿರುತ್ತಾನೆ. ಆದರೆ, ಭಕ್ತನ ಕಣ್ಣಿಕ್ಕಿದಷ್ಟೂ ಭಾತಿಕವಾದದಲ್ಲಿ ತನ್ನ ತಾನೇ ಮರೆತಿದ್ದಾನೆ. ಜೀವನ ಈಶ್ವರನ ನೋಡಲಿಲ್ಲವಾದರೆ, ಈಶ್ವರನುಗೋಚರಿಸುವುದಾದರೂ ಹೇಗೆ? ಸಾಲಲ್ಲಿ ನಿಂತಿರುವ ಹತ್ತು ಜನರಲ್ಲಿ ಒಬ್ಬನು ನಮ್ಮವನೆಸ್ಸಿದರೆ, ನಮಗೆ ಉಳಿದ ಒಂಭತ್ತು ಜನರು ಹೇಗೆ ಗೋಚರಿಸುತ್ತಾರೆ? ಅವರು ನಮ್ಮ ಮುಂದೆ ವಾಕ್ಯವಿಕಾರಾಗಿ ನಿಂತಿದ್ದರೂ ಅವರು ನಮ್ಮನ್ನು ನೋಡುತ್ತಿದ್ದರೂ ನಮ್ಮ ಗಮನ ಇತರತ್ರವಿರುವುದರಿಂದ ಅವರು ಅದೃಶ್ಯರೇ ಸರಿ; ಗೋಚರಿಸರೇ ಸರಿ ಅದರೆ, ಇದಕ್ಕೆ ನಮ್ಮ ದೃಷ್ಟಿವಿಕಾರವೇ ಕಾರಣ. ಅದು ಸತ್ಯವಸ್ತು ಶುದ್ಧವಲ್ಲ.

(ಮಿಕ್ಕದ್ದು ನೋಡಿರಿ)

ಸತ್ಯವೇ ದೇವರೆನ್ನುವ ಜಪಜಿ

ಲೇಖಕರು : ಶ್ರೀ ಕೆ. ಎಸ್. ದುಗ್ಗಲ್

"ಜಪಜಿ" ಸಾಹಿತ್ಯ ಪ್ರಪಂಚದ ಮೇರು ಕೃತಿಗಳಲ್ಲಿ ಒಂದು. ಇದರ ಕರ್ತೃ ಗುರು ನಾನಕರು. ಸ್ವಯಂ ಶ್ರೇಷ್ಠ ಸಂತರು. ಎಲ್ಲ ಸಧು ಸಂತರಂತೆ ಕಂಠನಾನಕರು ಪವನ್ನು ಉಪದೇಶಗಳನ್ನು ಜನರಿಗೆ ಸಾರೂಪ್ಯದಕ್ಕಾಗಿ ಅಂದಿನ ಜನ ಸಾಮಾನ್ಯರ ಭಾಷೆಯನ್ನೇ ಬಳಸಿದರು; ಪಂಜಾಬಿ ಭಾಷೆ ಅಂದಿನ ದಿನಗಳಲ್ಲಿ ಅಷ್ಟಾಗಿ ಅಭಿವೃದ್ಧಿ ಹೊಂದಿರಲಿಲ್ಲ ಇದರಿಂದಾಗಿ ನಾನಕರು ಪಂಜಾಬಿನ ಮೂಲೆ ಮೂಲೆಗಳಿಗೆ ಸಂಚರಿಸಿ ಭಾಷೆಯ ಸಿರಿಯನ್ನು ಹೆಚ್ಚಿಸಿದರು. ಆಗಾಗ್ಗೆ ನಾನಕರ ದೇಶದ ಬೇರೆಬೇರೆ ಕಡೆಗಳಿಗೆ ಮುಖ್ಯವಾಗಿ ಹಿಮಾಚಲ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಸಾಧು ಸಂತರೊಡನೆ ಧಾರ್ಮಿಕ ವಿಷಯ ಚರ್ಚೆ ಜರ್ಚೆ ನಡೆಸುತ್ತಿದ್ದರು. ಇವುಗಳಲ್ಲಿ ಅವರು ಎಂದಾ ಭಾಷಾ ಸಮಸ್ಯೆಗೆ ಸಿಕ್ಕಲಿಲ್ಲ.

ಜಪಜಿಯನ್ನು ನಾನಕರು ಕರ್ತಾರ ಪುರದಲ್ಲಿ ಬಂದು ನೆಲಸಿದ ನಂತರ ರಚಿಸಲಾಯಿತೆಂಬ ದಕ್ಕೆ ಕೆಲವು ಧಿಡರ್ಶನಗಳಿವೆ. ಮೆಕಂಬಾಫ್, ನಾನಕರ ಮೂಲ ರು ಜೀವನ ಚರಿತ್ರೆಕಾರರಲ್ಲಿ ಒಬ್ಬರು. ದೇವರೊಡನೆ ನಾನಕರ ಸಾಕ್ಷಾತ್ಕಾರ ವನ್ನು ಪಡೆದ ನಂತರ ಜಪಜಿಯನ್ನು ನುಡಿದರೆಂದು ಮೆಹರ್‌ಬಾನ್ ಪೇಳಿದ್ದಾರೆ.

ನಾನಕರ ಶೈಲಿಯಲ್ಲಿ ಹಳೆಯ ಶೈಲಿಯೇ ಹೆಚ್ಚಾಗಿ ಕಂಡು ಬರುತ್ತದೆ. ಕೃತಿಯ ಮೊದಲಲ್ಲಿ ದೇವರ ಪ್ರಾರ್ಥನೆ. ಕೊನೆಯಲ್ಲಿ ಹನ್ನೆರಡಿ ಇವುಗಳಿವುದು ಕೃತಿಯ ವೈಶಿಷ್ಟ್ಯ ದೇವರ ಪ್ರಾರ್ಥನೆ ಮೊದಲು ಬರೆದಿರುವ ಗೀತೆಯಲ್ಲಿ ನಾನಕರು, ದೇವರೊಬ್ಬನೆ; ಅವನೇ ಪರಮ ಸತ್ಯ; ಅತ್ಯಂತ ಸೃಷ್ಟಿಕರ್ತ; ಅವನಿಗೆ ಕಾಲ್ಪರವಂಬುದಾಗಲೀ, ಭಯವೆಂಬುದಾಗಲೀ ಇಲ್ಲ; ಅವನು ಎಂದೂ ಎಲ್ಲೆಡೆಯಲ್ಲೂ ಇರುತ್ತಾನೆ; ಅವನಿಗೆ ಹುಟ್ಟು ಸಾವುಗಳಿಲ್ಲ; ಅವನಿಗೆ ಪುನರ್‌ಜನ್ಮವಿಲ್ಲ; ಅವನ ಕೃಪೆಯಿಂದಲೇ ಈ ಅವನನ್ನು ಪೂಜಿಸು, ಎಂಬುದಾಗಿ - ಸ್ಪಷ್ಟವಾಗಿ ಪ್ರಾರಂಭದಲ್ಲಿ ಪ್ರಾರ್ಥಿಸಿದ್ದಾರೆ. ನಾನಕರು ಸತ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದರು, ಎಂದೆಂದಿಗೂ ಸತ್ಯವೇ ನಿತ್ಯ ಎಂದರು.

ಜಪಜಿಯಲ್ಲಿ ದೇವರ ಪ್ರಾರ್ಥನೆ ಮತ್ತು ಹನ್ನೆರಡಿಯ ಪದ್ಯಗಳನ್ನು ಬಿಟ್ಟು ಒಟ್ಟು ಮೂವತ್ತೆಂಟು ಸ್ತೋತ್ರಗಳಿವೆ. ಜಪಜಿಯು ಮೊದಲನೇ ಏಳು ಸ್ತೋತ್ರಗಳಲ್ಲಿ ದೇವರ ಇಚ್ಛೆಯಂತೆ ನಡೆದುಕೊಂಡಾಗ ಮಾತ್ರ ದೇವರು ಜಾಗೂ ಅವನ ಫಲ್ಕರ ನಡುವಣವಾಯಿರುವಂದು ಕಾರಣದಿಂದ ಇರುವ ಅಂತರವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ, ಎಂದು ಹೇಳಿರುವಿದ್ದಾರೆ. ದೇವರ ಅಜ್ಞೆಯಂತೆ ಜೀವನವನ್ನು ರೂಪಿಸಿಕೊಂಡ ಬಳಿಕ ಅವನ ಧಾಮವನ್ನು ಸ್ತುತಿಸಬೇಕೆಂದಿದ್ದಾರೆ.

ಮುಂದಿನ ನಾಲ್ಕು ಸ್ತೋತ್ರಗಳು ದೇವರ ವಾಣಿಯನ್ನು ಅನುಸರಿಸುವುದರಿಂದಾಗುವ ಪ್ರಯೋಜನಗಳನ್ನು ಹೇಳುತ್ತದೆ. ದೇವರ ವಾಣಿ ನನ್ನು ಜೀವನದಲ್ಲಿ ಆಚರಿಸುವುದರಿಂದ ಮಾನವ ಜ್ಞಾನಿಯಾಗುತ್ತಾನೆ, ಸಾಧುವಾಗಿ ಕಾತ್ತಾನೆ, ಧೈರ್ಯವಂತನಾಗುತ್ತಾನೆ, ಹಾಗೂ ಜೀವನದಲ್ಲಿ ಸೃಷ್ಟಿಯನ್ನು ಕಾಣುತ್ತಾನೆ. ಇಷ್ಟೇ ಅಲ್ಲದೆ ಮಾನವ ಸತ್ಯವನ್ನು ತಿಳಿಯುತ್ತಾನೆ, ಅವನ ಮನ ಶಾಸ್ತ್ರಿನ ಶಕ್ತಿ ಪಡೆಯುತ್ತದೆ. ಹೀಗಾದರೆ ತೀರ್ಥಯಾತ್ರೆಗಳನ್ನು ಮಾಡಬೇಕಿಲ್ಲ ಎಂಬುದಾಗಿ ತಿಳಿಸಿದ್ದಾರೆ.

ಇನ್ನು ಮುಂದಿನ ನಾಲ್ಕು ಸ್ತೋತ್ರಗಳಲ್ಲಿ ದೇವರಲ್ಲಿ ನಂಬಿಕೆ ಇಟ್ಟವನಿಗೆ ಆ ಪೂರ್ವ ಅನಂಥ ಸಿಗುತ್ತದೆ; ಎಲ್ಲ ರೀತಿ ಜ್ಞಾನವನ್ನು ಪಡೆಯುತ್ತಾನೆ; ದೇವರ ವಿವಿಧ ರೂಪಗಳನ್ನು ಅರ್ಥ ಮಾಡಿಕೊಳ್ಳಲು ಅವನಿಂದ ಸಾಧ್ಯವಾಗುತ್ತದೆ. ತನ್ನ ಆತ್ಮ ರಕ್ಷಣೆಯನ್ನು ಜಾಗೂ ತನ್ನ ಬಂಧುಗಳನ್ನು ರಕ್ಷಿಸಲೂ ಸಾಧ್ಯವಾಗುತ್ತದೆ, ಎಂಬುದಾಗಿ ತಿಳಿಸಿದ್ದಾರೆ.

ದೇವರನ್ನು ನಂಬಿದವನು ಪೂರ್ಣವರ ನಾಯಕನಾಗುತ್ತಾನೆ. ದೇವರಲ್ಲಿ ನಂಬಿಕೆ ಹೆಚ್ಚಿದಂತೆ ಅವನ ದೈವಿಕ ಶಕ್ತಿ ಹೆಚ್ಚು ಬಲಗೊಳ್ಳುತ್ತದೆ. ಪ್ರಪಂಚದಲ್ಲಿ ದೇವರನ್ನು ಸ್ಮರಿಸಿ ಅವನನ್ನು ಅರಾಧಿಸುವಂತೆಯೇ, ದೃಷ್ಟರು ತಿರಿಗೇಡಿಗಳು ಬಹಳಮಂದಿ ಇದ್ದಾರೆ ಎಂಬುದಾಗಿ ನಂತರದ ನಾಲ್ಕು ಪದ್ಯಗಳಲ್ಲಿ ಹೇಳಿದೆ. ಮುಂದಿನ ಎಂಟು ಪದ್ಯಗಳಲ್ಲಿ ನಾನಕರು ಈ ರೀತಿ ಹೇಳಿದ್ದಾರೆ: ನಾವು ಧರಿಸುವ ಒಟ್ಟೆಗಳು ಕೊಳಕಾಗಿರುವಾಗ ಅದನ್ನು ಸಾಬೂನಿನಿಂದ ತೊಳೆಯುವಂತೆಯೇ ತಪ್ಪುಗಳೆಂಬ ಕಲ್ಮಶದಿಂದ ಬೆರೆತಿರುವ ನಮ್ಮ ಅತ್ಮವನ್ನು ಪ್ರಾರ್ಥನೆಯೆಂಬ ಸಾಬೂನಿನಿಂದ ತೊಳೆಯಬೇಕು.

ಇದೇ ಮಾತನ್ನಾದ ಪದ್ಯದಿಂದಲೇ ನಾವು ಸಾಧ್ಯಗಳಾಗಲಿ ಅಥವಾ ತಪ್ಪಿತಸ್ಥರಾಗಲೀ ಆಗುವುದಿಲ್ಲ.

ದೇವರನ್ನು ನಂಬಿ ಅವನ ವಾಣಿಯಂತೆ ನಡೆದರೆ ತೀರ್ಥಯಾತ್ರೆ, ಪಶ್ಚಾತ್ತಾಪ ಜೀವನದಲ್ಲಿ ಅವಶ್ಯವಾದ ಕಟ್ಟು ಪಟ್ಟುಗಳು, ದಯೆ ಇವು ತಾವಾಗಿಯೆ ಬೀಜದಂತೆ ನಮಗೆ ಗೋಚರವಾಗುವುದು.

ಪ್ರಪಂಚ ಎಂದು ಸೃಷ್ಟಿಯಾಯಿತೆಂಬುದನ್ನು ಪಂಡಿತರಾಗಲೀ, ಯೋಗಿಯಾಗಲೀ ತಿಳಿಸಲಾರ. ಸೃಷ್ಟಿಕರ್ತ ಅಥವೋ ಬ್ರಹ್ಮನೇ (ದೇವರೆ) ಮಾತ್ರ ಇದನ್ನು ಹೇಳಬಲ್ಲ.

ದೇವರ ಹಿರಿಯತನವನ್ನು ತಿಳಿಯುವುದು ಆತನಿಂದ ಮಾತ್ರ ಸಾಧ್ಯ. ಆತನ ವಿಶ್ವದ ಮೇಲಿನ ಅಧಿಕಾರ.

ಮುಂದಿನ ಮೂರು ಪದ್ಯಗಳಲ್ಲಿ ದೇವರು ಸತ್ಯ, ಸತ್ಯವೇ ದೇವರು ಎಂಬ ಬಗ್ಗೆ ನಾನಕರು ತಿಳಿಸಿದ್ದಾರೆ.

ಕಡೆಯ ಹಾಲ್ಕು ಪದ್ಯಗಳಲ್ಲಿ ದೇವರೊಡನೆ ಸಾಕ್ಷಾತ್ಕಾರ ಪಡೆಯುವ ಮುನ್ನ ಮಾನವ ಕಾಣ ಬೇರೆ ಬೇರೆ ಘಟ್ಟಗಳ ಬಗ್ಗೆ ತಿಳಿಸಲಾಗಿದೆ. ಮೊದಲು ಭಕ್ತನು ಸತ್ಯದಿಂದ ಜೀವನ ನಡೆಸುತ್ತಾನೆ. ಒಳ್ಳೆಯ ನಡೆನ ಡಿ ಬಲಿಯುತ್ತಾನೆ; ಅನಂತರ ಒಳ್ಳೆಯ ಜ್ಞಾನವನ್ನು ಅವನು ಪಡೆದುಕೊಳ್ಳುತ್ತಾನೆ ಎಂಬ ದಾಗಿ ನಾನಕ್ ಹೇಳಿದ್ದಾರೆ.

"ಬ್ಯಾಂಕುಗಳ ಬೆಳವಣಿಗೆಗಾಗಿ ರಾಷ್ಟ್ರೀಕರಣ ಅನಿವಾರ್ಯವಾಗಿತ್ತು"

—ಶ್ರೀ ಟಿ. ಎ. ಪೈ

"ಭಾರತೀಯ ಬ್ಯಾಂಕುಗಳು ಬೆಳೆದು ಬಂದ ರೀತಿ ನೀತಿಗಳಿಂದಾಗಿಯೇ ರಾಷ್ಟ್ರೀಕರಣವು ಅನಿವಾರ್ಯವಾಗಿ ಅವುಗಳ ಗೊಂದು ಉದ್ದೇಶ ಪೂರ್ಣ ದಿಧ್ದರ್ಶನ ಕೊಡುವ ಸ್ಪರ್ಧೆಯು ಒದಗಿತು.

ಈ ಅಭಿಪ್ರಾಯವನ್ನು ಸೂಚಿಸಿದವರು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಟಿ. ಎ. ಪೈ ಅವರು. ಇತ್ತೀಚೆ ಅವರು ಹೈದರಾಬಾದಿನಲ್ಲಿ ಆಂಧ್ರಪ್ರದೇಶದ ವಾಣಿಜ್ಯ ಜೇಂಬರನು ಉದ್ದೇಶಿಸಿ ಮಾತನಾಡುತ್ತಿದ್ದರು.

"ಭಾರತೀಯ ಬ್ಯಾಂಕುಗಳ ಪರಸ್ಪರ ಸ್ಪರ್ಧೆಯಲ್ಲಿ ತೊಡಗುವುದು ಹಿತಕರವೆಂದ ತಿಳಿಯಲ್ಪಟ್ಟಿಲ್ಲ, ಅವುಗಳು ಮಾತ್ರ ಡಿವೋಜಿಟ್ ವತ್ತು ಸಾಲಗಳ ಬಗ್ಗೆ ಬಡ್ಡಿದರದ ವಿಧ್ಯಾರಕ್ಕೆ ತಮ್ಮತಮ್ಮೊಳಗ ಒಂದು ಒಡಂಬಡಿಕೆಗೆ ಬರುವಿರುವುದರಿಂದ ವಿಕಸನಾತ್ಮಕತ್ವದ ಪರಿಧಿಯಲ್ಲಿಯಂಟಾಗಿ ಬ್ಯಾಂಕಿಂಗ್ ಬೆಳವಣಿಗೆಗೆ ಅಡ್ಡಿಯುಂಟಾಯಿತು".

ಆಂಧ್ರಪ್ರದೇಶದಲ್ಲಿನ ಬ್ಯಾಂಕಿಂಗ್ ಬೆಳವಣಿಗೆಯು ಅಸಂಬದ್ಧವಾಪ, ಕೆಲವೇ ಪ್ರದೇಶಗಳಿಗೆ ಹೊಂದಿಕೊಂಡಿರುವಂತಾಗಿ ಬ್ಯಾಂಕಿಂಗ್ ಬೆಳವಣಿಗೆಗೆ ಒಂದು ದೃಷ್ಟಾಂತವಾಗಿದೆಯೆಂದ. ಶ್ರೀ ಪೈಯವರೇ ಹೇಳಿದರು. ಈ ರಾಜ್ಯದಲ್ಲಿ ಬ್ಯಾಂಕಿಂಗ್ ಸಾಲಭ್ಯಗಳು ಸಂಪೂರ್ಣವಾಗಿ ಕುಂಚಿಕೊಂಡಿಲ್ಲ. ದೊಡ್ಡ ಪಟ್ಟಣಗಳನ್ನೆ ಬ್ಯಾಂಕುಗಳ ಸೇವೆ ಪಡೆಯುತ್ತಲಿವೆ. ರಾಜ್ಯದ 110 ಕೋಟಿ ರೂಪಾಯಿ ಠೇವಣಿಗಳ ಪೈಕಿ ಆರ್ಧಾಂಶಕ್ಕಿಂತಲೂ ಹೆಚ್ಚು ಹೈದರಾಬಾದು ಮತ್ತು ಸೆಕಂದರಾಬಾದ್ ಪಟ್ಟಣಗಳಿಂದ ಬಂದಿರಿತ್ತದೆ. ಗುಂಟೂರು ಜಿಲ್ಲೆಯ ಅಭಾವು 113 ಕೋಟಿಯಿದ್ದರೂ ಅದರ ಪೈಕಿ ಬ್ಯಾಂಕು ಠೇವಣಿಗಳು ಕೇವಲ 11ಕೋಟಿ. ವತ್ತಿಂದೆಡೆ 300 ಕೋಟಿ ರೂಪಾಯಿಯಿವ ಕೃಷ್ಣ ಗೋದಾವರಿ ಜಿಲ್ಲೆಗಳಲ್ಲಿನ ಬ್ಯಾಂಕಿಂ. ಠೇವಣಿ ಮೊತ್ತ ಬರೆಬರೆ 20 ಕೋಟಿ ರೂಪಾಯಿ.

ಬ್ಯಾಂಕುಗಳು ತಮ್ಮ ಕಾರ್ಯಕ್ಷೇತ್ರವನ್ನು ಮೂಲೆ ಮೂಲೆಗಳಲ್ಲಿ ವಿಸ್ತರಿಸಿದಾಗಲೇ ಬ್ಯಾಂಕು ಖಾತೆಗಳ ಸಂಖ್ಯೆ ಹೆಚ್ಚಾಗಲಿವು. ಈ ಇನ್ನೆ ಪಣ್ಣ ಮೊತ್ತದ ಠೇವಣಿಗಳನ್ನು ಆಕರ್ಷಿಸುವ ತಲುವಾಗಿ ಬ್ಯಾಂಕುಗಳು ಅಸಕ್ತಿ ವಹಿಸಬೇಕು.

ಇದನ್ನೆ ಅವಾಗ ಸಕ್ಷಿಪ್ತ ಅನ್ನಪೂರ್ಣ ಜಿಲ್ಲೆಯ ಉದಾಹರಣೆಯನ್ನು ಕೊಟ್ಟರು. ಇಲ್ಲಿ ತೀವ್ರತರ ಬ್ಯಾಂಕಿಂಗ್ ಅಭಿವೃದ್ಧಿಯಿಂದಾಗಿ 50 000 ಬ್ಯಾಂಕು ಖಾತೆಗಳನ್ನು, 82 ಕೋಟಿ ರೂಪಾಯಿಷ್ಟು ಡಿಪಾಜಿಟ್ಟುಗಳನ್ನು ಬೆಳೆದು ಬರಲು ಸಾಧ್ಯವಾಗಿದೆ. ಸಣ್ಣ ಸಣ್ಣ ಮೊತ್ತಗಳನ್ನು ರೂಪಾಯಿ, ಅಣತೆಯನ್ನು ಕೂಡಾ ಠೇವಣಿಯಾಗಿಡಲು ಬ್ಯಾಂಕುಗಳು ಅನುಕೂಲ ಮಾಡಿಕೊಟ್ಟಲ್ಲಿ ಉಳಿತಾಯದ ಅಭ್ಯಾಸ ಜನರಲ್ಲಿ ಬೆಳೆಯುವುದು.

ಮಂದುವರಿಯುತ್ತ ಶ್ರೀ ಪೈಯವರ, ರಾಷ್ಟ್ರೀಕೃತ ಬ್ಯಾಂಕುಗಳ ಒಟ್ಟು ಠೇವಣಿಗಳು ಕಳೆದ 2-3 ವರ್ಷಗಳಲ್ಲಿ 4700 ಕೋಟಿಗಿಂತ 7400 ಕೋಟಿಗಳಿಗೆ ತಲುಪುವ ಆಶಯ ವ್ಯಕ್ತಪಡಿಸಿದರು. ಇದಕ್ಕೆ ದೇಶಾದ್ಯಂತ ಪೂರ್ಣ ಯೋಜಿತ ಬ್ಯಾಂಕಿಂಗ್ ವ್ಯವಸ್ಥೆ ಹಾಗೂ ಬ್ಯಾಂಕುಗಳ ಭೌಗೋಲಿಕ ವಿಸ್ತರಣೆ. ಅವೇ ರೀತಿಯಾ ಮುಂತಾದ ದೇಶಗಳಲ್ಲಿ ತೀವ್ರ ಧೈರ್ಯದ ಮೂಲಕ ಬ್ಯಾಂಕುಗಳು ಸಾಧಿಸಿದ ಸಾಧನೆಯನ್ನು ನೀಗಲಾಡಿಸಿದೆ, ನಮ್ಮ ದೇಶದಲ್ಲಿ ಹೆಚ್ಚಾಗಿರುವ ವಿದೇಶಿ ವಿನಿಮಯ ಇವನ್ನು ಸಾಧಿಸಬೇಕಾಗಿದೆ. ಇಷ್ಟರ ಒಳಿಗೆ ಬಾಧಿಸಲಿಕೆಯ ಉದ್ದೇಶದಿಂದ ಬ್ಯಾಂಕುಗಳು ಎಚ್ಚರಿಕೆಯಿಂದ ಸಾಗುತ್ತಿದ್ದುದರಿಂದ ವ್ಯವಹಾರದಲ್ಲಿ ತೀವ್ರಗತಿಯಿಂದ ಸಾಗಲು ಅವಕಾಶವಿರಲಿಲ್ಲ. ಸಾಮಾನ್ಯ ಜನರ ನಿಷ್ಠೆ ಮತ್ತು ಶೀಲಗಳಲ್ಲಿ ಬ್ಯಾಂಕುಗಳು ತಮ್ಮ ವಿಶ್ವಾಸವನ್ನು ವೃದ್ಧಿಪಡಿಸಬೇಕೆಂದು ಶ್ರೀ ಪೈಯವರು ಸೂಚಿಸಿದರು. ಸಿಂಡಿಕೇಟ್ ಬ್ಯಾಂಕಿನಲ್ಲಿ

(ಉಳಿದ ಪುಟ ನೋಡಿರಿ)

ಸುವ್ಯವಸ್ಥಿತ ರಾಗೂ ಉತ್ತಮವಾದ ಎಲ್ಲಾ ತರಹ ಬ್ಯಾಂಕಿಂಗ್ ವ್ಯವಹಾರಗಳಿಗೆ
113 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.
ಠೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ವೈಶಿಷ್ಟ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ಹಿಚ್ಚು ಉಳಿತಾಯವನ್ನು ವಿನಿಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
ಆಡಳಿತ ಕಛೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಫೋನ್ : 526 1921 ಸ್ಥಾಪನೆ

ಸಂಪುಟ ೪೯
ಸಂಚಿಕೆ ೧೬
VOL. 49
No. 16

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೧೪—೧೨—೧೯೬೯

ಸ್ಥಾಪಕರು:
ದಿ| ವಿ. ಬಿ. ಶಿಬ್ಯ.
ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಒನಕೆಗಳ ಬಡಿದಾಟ

ಅಹಮ್ಮದಾಬಾದಿನ ಬಳಿ ಸಿಂಡಿಕೇಟ್, ಮುಂಬಯಿಯಲ್ಲಿ ಇಂಡಿಕೇಟ್ ಕಾಂಗ್ರೆಸ್ಸಿನ ಸೂರ್ಯಾಧಿವೇಶನಗಳ ಸಿದ್ಧತೆ ಭರದಿಂದ ಸಾಗುತ್ತಲಿವೆ. ಶ್ರೀ ನಿಜಲಿಂಗಪ್ಪನವರು ಅಧಿಕಾರದಾಸೆ ತಮಗಿಲ್ಲ, ಪಕ್ಷದ ಏಕತೆ-ಸಿಸುಮಗಳಿಗೆ ತಾನು ಭದ್ರವಾಗಿ ಅಂಟಿಕೊಳ್ಳುವ ಇರಾದೆಯನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ. ಎರಡೂ ತಂಡಗಳು ಸಂತಮ್ಮನ್ನು ತಾವು ತಾವೇ ಅಸಲಿ ಕಾಂಗ್ರೆಸ್ಸೆಂದು ಹೇಳಿಕೊಂಡು ತಮ್ಮ ಅಧಿವೇಶನವೇ ದಾಸ್ತವಿಕ ಅಧಿವೇಶನವೆಂದು ಉದ್ಘೋಷಿಸಿ, ತಮಗೇ ಅತ್ಯಧಿಕ ಬಲವಿರುವುದೆಂದು ಹೆಮ್ಮಳಿಕೆ ಕೊಚ್ಚಿಕೊಳ್ಳುತ್ತಿವೆ. ಅಧಿವೇಶನ ಮುಗಿದು ತನಕ ಕಾಬ್ಬಣಗಳೂ ಇರಬೇಕೇ.

ಈ ಕಡುವೆ ಇಕ್ಕಡೆಯವರಿಂದಲೂ ವಿಲಕ್ಷಣ ಹೇಳಿಕೆಗಳೂ ಬರತೊಡಗಿವೆ. ಕಾಂಗ್ರೆಸ್ ಒಡಕಿಗೆ ಅಧಿಕಾರದ ಲಾಲಸೆ, ಸರ್ವಾಧಿಕಾರದ ಹಂಬಲ, ಪಕ್ಷದ ಏಕತೆ-ನಡಾವಳಿಗಳ ತೀವ್ರ ಉಲ್ಲಂಘನೆ ಕಾರಣವೆಂದೂ ಕಾಂಗ್ರೆಸ್ ತಳಹದಿಯಲ್ಲವೆಂದೂ ಎಸ್ಸೆನ್ ಮತ್ತಿನ ಅನುಯಾಯಿಗಳು ಹೇಳುತ್ತಾರೆ. ತನ್ನ ಪಕ್ಷ ದ್ರೋಹಕಾರ್ಯವನ್ನು ಸಮರ್ಥಿಸುವ ಬಗ್ಗೆ ಶ್ರೀಮತಿ ಗಾಂಧಿಯವರು ಪಕ್ಷತ್ಯಾಗ ನೃತ್ಯ ಪಡಿಸಿದರೆ, ರಾಜಿ ಆಪಲಾ ಖಾದ್ಯ ಎನ್ನುತ್ತಾರೆ ಅನುಯಾಯಿಯವರೂ ತಮ್ಮ ಅನುಯಾಯಿಬಳಗ, ಹಂಗಾಮಿ ಅಧ್ಯಕ್ಷ ಸುಬ್ರಹ್ಮಣ್ಯಂ ಬಿಟ್ಟು, ಸಂಧಾನದ ಬಾಗಿಲು ಈಗಲೂ ತೆರೆದಿದೆ ಎಂದು ಹೇಳುತ್ತಲೇ ಇದ್ದಾರೆ. ಶ್ರೀಮತಿ ಗಾಂಧಿಯವರು ಕಾಂಗ್ರೆಸ್ ಅಭ್ಯರ್ಥಿ ಶ್ರೀ ವೀ. ವಿ. ಗಿರಿ ವಿರುದ್ಧ ನಿಂತುದಕ್ಕೆ ಪೂಜೆ ಮಾಡಿದಾಮಂತ್ರಿ ಶ್ರೀ ಮುಜ್ಜೀಲಾಲ ನಂದಾರವ್ಯಾಖ್ಯಾನದ ಪರಿಣತಿಯದಲಾಗಿದೆ. ಶ್ರೀ ರೆಡ್ಡಿಯವರ ಅಭ್ಯರ್ಥಿತನವನ್ನು ಪ್ರಧಾನಿ ಒಪ್ಪಿದ್ದಾರೆಂದೂ ಅದರೆ, ಸಿಂಡಿಕೇಟ್ ಮತ್ತು ಜನಸಂಘದ ಜತೆ ಸೌಹಾರ್ದತೆ ಉಂಟಾದುದರಿಂದ ಅವರು ತಮ್ಮ ಧೋರಣೆಯನ್ನು ಬದಲಾಯಿಸಿದರೆಂದೂ ಅವರೆನ್ನುತ್ತಾರೆ. ಜನಸಂಘದೊಡನೆ ಶ್ರೀ ಎಸ್ಸೆನ್ ಮಾಡಿಕೊಂಡಿದ್ದ ಸೌಹಾರ್ದತೆಯು ಅರೆಸೇವನ್ನು ಕಾರ್ಯಕಾರಿಣಿಯು ತನ್ನ "ಏಕ್ಯ ನಿರ್ಣಯ"ದಲ್ಲಿ ಹಿಂತೆಗೆದು ಕೊಂಡುದನ್ನು ಶ್ರೀ ನಂದಾರು ಇಷ್ಟು ಬೇಗವೇ ಮರೆತು ಬಿಟ್ಟರು. ಸಮಾಜವಾದವನ್ನು ಕ್ಷಿಪ್ರ ಗತಿಯಲ್ಲಿ ತರುವುದಕ್ಕೆ ಸಿಂಡಿಕೇಟ್ ತಡೆಯೊಡ್ಡುತ್ತಿದ್ದನ್ನು ಪ್ರಧಾನಿಯವರೂ ಈಗ "ಇದಕ್ಕೆ ಕೂಡಲೇ ತರುವುದು ಸಾಧ್ಯವಿಲ್ಲ" ಎನ್ನತೊಡಗಿದ್ದಾರೆ. ಕಾಂಗ್ರೆಸಿನ ಯುವಜನರು ತಮ್ಮ ಉತ್ಸಾಹಕ್ಕೆ ಶ್ರೀಮತಿಜಿಯವರು ನೇರವಾದಾರೆಂದು ನಂಬಿ ಅವರಿಗೆ ಬೆಂಬಲ ನೀಡಿದ್ದಾರೆ. ಆದರೆ, ವಿಶ್ವ ಅರ್ಥವ್ಯವಸ್ಥೆ, ರಾಜಧನ ರದ್ದತಿಯ ಪ್ರಶ್ನೆ, ಸಮಾಜವಾದ ಸ್ಥಾಪನೆ ಇತ್ಯಾದಿಗಳ ಬಗ್ಗೆ ಇಂದಿರಾ ಯೋಜನೆಗಳು ಅವರಿಗೂ ಕೈಪ್ತಿಯನ್ನು ತಂದುಕೊಟ್ಟಿಲ್ಲ. ಮುಂಬಯಿ ಅಧಿವೇಶನದ ಬಳಿಕ ಇಂಡಿಕೇಟಿನ ಭವಿಷ್ಯ ಬಗುಲಾಗುವುದು.

ಇಂಡಿಕೇಟ್ ಕಾಂಗ್ರೆಸಿನ ಹಂಗಾಮಿ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂ ಸಾಲಿಗೆ ಗುನ್ನು ಹೇಗೆ ಹಿರಿಯಬಿಟ್ಟರೂ ಸಲ್ಲುತ್ತದೆ. ಶ್ರೀ ಜಗಜ್ಜೀವನರಾಮರಿಗೆ "ಅಧಿಕಾರ" ಹಸ್ತಾಂತರ ಮಾಡಲಿಕ್ಕುಮುದರಿಂದ ಅವರು ಭಾರೀ ವಿನೋದವಾಡುತ್ತಾರೆ. ಮುಂಬಯಿಯ ಅಧಿವೇಶನದಲ್ಲಿ 'ದಾರಿದ್ರ್ಯವೇ ತೊಲಗು' ಎಂಬ ಹೊಸ ಘೋಷಣೆಯನ್ನು ಅವರು ನೂಡುತ್ತಾರೆ. "ಕ್ವಿಟ್ ಪವರ್ಟಿ" ಅಂದರೆ, "ದಾರಿದ್ರ್ಯವನ್ನು ತೊಲಗಿಸಿರಿ" ಎಂದೂ ಅರ್ಥಮಾಡಬಹುದು. ಆದರೆ, ಎರಡೂವಿಧ-ನಗರಲ್ಲೂ ದಾರಿದ್ರ್ಯ ಬಿಡಿಸು ಘೋಷಣೆಗಳಿಂದ ತೊಲಗುವವ ಮೊರಿಯಲ್ಲ. ಬಡತನದ ವಿರುದ್ಧ ಹೋರಾಟ, ಆರ್ಥಿಕ ಸ್ವಾತಂತ್ರ್ಯ ಎಂದು ಮುಂತಾದ ಧ್ಯೇಯಗಳನ್ನೇ ಇಟ್ಟುಕೊಂಡು ದೇಶದಲ್ಲಿ ಅಡಳಿತ ಇದುವರೆಗೂ ನಡೆದು ಬಂದಿದೆ. ಶ್ರೀ ಸುಬ್ರಹ್ಮಣ್ಯಂರಂಥವರು ಮತ್ತು ಕೇಂದ್ರವಲ್ಲಿ ಮಂತ್ರಿಯಾಗಿದ್ದರು. ಮಂತ್ರಿಪದ ದೊರೆಯದಂತಾದಾಗ ಅವರಿಗೆ ಜನತೆಯು ದಾರಿದ್ರ್ಯದ ನೈಜ ಸ್ಥಿತಿ ಮನವರಿಕೆಯಾಯಿ ತಂತೆ ಆದ್ದರಿಂದಲೇ ಈ ಹೊಸ 'ಘೋಷಣೆ'ದನಕರುಬಳನ್ನ ಕಬಳಿಸಿ ಬರುವ ಹುಲಿ-ಚಿರತೆಗಳನ್ನ ಊರು ಬಿಟ್ಟೋಡಿಸಲು ಜನರೆಲ್ಲರೂ ಒಂದಾಗಿ ಕತ್ತಿ—ಕೋಲು—ದೀಪ—ಕೋವಿ ಹಿಡಿದು ರಾತ್ರಿ ಹೊತ್ತು ಆರ್ಭಟಿಸುತ್ತ ಗುಡ್ಡಗಾಡುಗಳಲ್ಲಿ ತಿರುಗಾಡುವುದಂಟಲ್ಲ. ಇಂಡಿಕೇಟ್ ಕಾಂಗ್ರೆಸ್ಸಿಗರು ಸಿ. ಸು. ತಾಯಮತ್ತದಲ್ಲಿ ಅಧಿಕಾರ ಬಿಟ್ಟು ದೇಶವ್ಯಾಪಿ ಪಾದಯಾತ್ರೆ ಮಾಡಿ ದಾರಿದ್ರ್ಯವನ್ನು ಹೊಡೆದೋಡಿಸುತ್ತಾರೆಯೆ?

ಅದರೆ, ಪ್ರಧಾನಿ ಇಂದಿರಾ ಗಾಂಧಿಗೆ ಅಧಿಕಾರ ಬಿಟ್ಟುಕೊಡಲು ಎಳ್ಳಷ್ಟೂ ಮನಸ್ಸಿಲ್ಲ. ಇರುವುದಾದರೆ, ಕಾಂಗ್ರೆಸ್ಸಿನ ವಿರೋಧಿ ಬಣ ಉದ್ಭವವಾದೊಡನೆಯೇ ರಾಜಿನಾಮೆ ಕೊಡಬೇಕಾಗಿತ್ತು. ಶ್ರೀ ಸಿ. ಸು.ವನೇ ಹೇಳಲಿ, ಶ್ರೀಮತಿ ಗಾಂಧಿ ಅದನ್ನು ಒಪ್ಪುವುದಿಲ್ಲ; ಶ್ರೀಮತಿ ಹೇಳಿದಂತೆ ಬದ್ದಕೊಳ್ಳದಿದ್ದರೆ ಶ್ರೀ ಸಿ. ಸು. ಪೊಕ್ರತಿಗಾಮಿಯಾಗುವರು. ಅವರಿದೆಯಲ್ಲಾ ಎಂಟೊನೆಕೆಗಳ ಬಡಿದಾಟ. ಮುಂಬಯಿಯ ಅಧಿವೇಶನ ಏರಿಯುವ ದಾಖಲೆಯನ್ನು ಅವರು ಸರಿಗಟ್ಟಿಸುವುದಿಲ್ಲ. ಆದರೆ, ಅದರಿಂದ ಮುಂಡೆ ತನ್ನ ಅಧಿಕಾರಕ್ಕೆ ಸಂಚಕಾರ ಬಿಡ್ಡರೆ? ತಮ್ಮ 'ರಹಸ್ಯ' ವಿಷಹೋಲಂತೆ ಹೆಚ್ಚು ಹೆಚ್ಚು ಬಯಲಾಗುತ್ತ ಬರುತ್ತಿದೆ. ಕಾಂಗ್ರೆಸ್ಸಿಗರೂ ಜಗತ್ತಿಯೂ ಇದನ್ನು ತಿಳಿಯಲಾರದಷ್ಟು ದೆದ್ದ ಗುಂಡಾಗಿರಲ್ಲ. ಸ್ವಯಂ ಜಗಜ್ಜೀವನರಾಮರೇ ರಾಜ್ಯಕೀಯ ಸಂಸ್ಥಾಸ್ಥಿತಿ ಕರಾಬಾಗಿರಬೇಕಾಗಿ ಬಂದುದಕ್ಕೆ ಅವಕಾಶವುಂಟು.

ವಿಶ್ವ ಹಿಂದೂ ಪರಿಷತ್ತು

ವಿಶ್ವ ಹಿಂದೂ ಪರಿಷತ್ತಿನ ಕರ್ನಾಟಕ ಪ್ರಾಂತೀಯ ಸಮ್ಮೇಳನವು ತಾ. 13 ಮತ್ತು 14ರಂದು ಉಡುಪಿಯಲ್ಲಿ ಪರ್ಯಾಯವಾದ 'ಧರ್ಮನಗರ'ದಲ್ಲಿ ನೆರವೇರಿತು. ಉಡುಪಿಯ ಚರಿತ್ರೆಯಲ್ಲಿ ಅಭೂತಪೂರ್ವ ಕ್ಕೆಂದು ವಿಶಿಷ್ಟ ಸ್ಥಾನವಿದೆ. ಇಲ್ಲಿ ಅತ್ಯಂತ ವೈಭವದ ಸಭಾಮಂಟಪವನ್ನು ನಿರ್ಮಿಸಲಾಗಿತ್ತು. ವೇದಘೋಷ ಮತ್ತು ಮಂತ್ರೋಚ್ಚಾರಣೆ ನಡೆಯುತ್ತಿದ್ದಂತೆಯೇ ಸಮ್ಮೇಳನದ ಆರಂಭವಾಯಿತು. ದೇವತೆಯ ಹಿನ್ನೆಲೆಯಲ್ಲಿ ಉಡುಪಿಯ ಶ್ರೀಕೃಷ್ಣ, ಶ್ರೀಚಂದ್ರಮೌಳೀಶ್ವರ, ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಮೇಲಾಲಯ ಮತ್ತು ಗೋಮಟೇಶ್ವರನ ಚಿತ್ರಗಳಿದ್ದುವು. ಗಣ್ಯರ ಸಾಲು ವೇದಿಕೆಯಲ್ಲಿ ಆಸೀನವಾಯಿತು. ಸಮ್ಮೇಳನದ ಅಧ್ಯಕ್ಷರಾಗಿ ವಿಶ್ವ ಹಿಂದೂ ಪರಿಷತ್ತಿನ ಕೇಂದ್ರಾಧ್ಯಕ್ಷ ಉದಯಪುರದ ಮಹಾರಾಣಾ ಭಗವತ್ ಸಿಂಹಜಿ ಬಂದಿದ್ದರು. ನಿವೃತ್ತ ಮಹಾ ದಂಡನಾಯಕ ಜನರಲ್ ಕೆ.ಎಂ. ಕಾರ್ಯಪ್ಪನವರು ಸಮ್ಮೇಳನದ ಉದ್ಘಾಟಕರಾಗಿದ್ದರು. ಗ್ವಾಲಿಯರ್‌ನ ರಾಜಮನೆತನದ ವಿಜಯರಾಜೇ ಸಿಂಧ್ಯ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶ್ರೀ ಎಂ ಎಸ್. ಗೋಲ್ವಾಲ್ಕರ್, ಶ್ರೀಮತಿ ಜಾಜಿ ದೇವಿ ತಾಯಿ ಲಿಗಾಡೆ, ಡಾ| ಟಿ. ಪೂರ್ಣಪ್ಪ ಮೈ, ಮತ್ತು ರಾಷ್ಟ್ರದ ವಿವಿಧ ಪ್ರಾಂತಗಳಿಂದ ಸಮ್ಮೇಳನದ ವೇದಿಕೆಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ವೀರೇಂದ್ರ ಹೆಗ್ಗಡೆಯವರು ವಿಶ್ವದ ಸುಖಶಾಂತಿಗಾಗಿ ಹಿಂದೂ ಧರ್ಮ ಸಂಸ್ಥೆಗಳ ರಕ್ಷಣೆ ಅಭಿವೃದ್ಧಿಯೆಂದು ಹೇಳಿ ಸ್ವಾಗತ ಭಾಷಣ ಮಾಡಿದರು. ಉಡುಪಿ ನಗರ ಸಭಾಧ್ಯಕ್ಷ ಡಾ| ವಿ. ಎಸ್. ಆಚಾರ್ಯರು ಸ್ವಾಗತಿಸಿ ಶುಭಾಶಂಸನೆ ಮಾಡಿದರು. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ವೆಂಕಟಪ್ಪನವರು, ಶೆಟ್ಟಿ ಅವರು ಸಂದೇಶಗಳನ್ನು ಓದಿದರು. ಪೂಜ್ಯ ಪೇಜಾವರ ವೆಂಕಟಪ್ಪನವರು ಪ್ರಾಸ್ತಾವಿಕ ನವನ್ನು ಉದ್ಘಾಟಿಸಿದರು. ಡಾ| ಟಿ. ಪೂರ್ಣಪ್ಪ ಅವರು ಸಮ್ಮೇಳನದ ಕೃತಿ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಸರ್ವಾ

(ಅದೇ ಪುಟ ನೋಡಿರಿ)

In the court of the Principal Munsif of Puttur.

O. S. No. 415/1968

Between —

Sarake Krishnappa... Plff.

Bhagi Hengsu and others...

defts.

To the 7th defendant—Dinesha Kumara, son of Lalitha, residing at Kadanjiguthu of Kudmaru Village, Puttur taluk.

Please take notice that the above suit has been filed against you also for the recovery of the Mortgage amount due to the plaianuff is posted to 23-12-1969 for your appearance and if you fail to appear on the said date at 11 A. M. before the above court, you will be set exparte and the suit will be decided in your absence.

[By order of the court]

sd/- N. Subramanyam
Advocate for plff.

ಪುತ್ತೂರು ಲೇಂಡ್ ಟ್ರೈಬ್ಯುನಲ್

R. R. C. 57/69.

ಪದ್ಮನಾಭ ಯೆಡಪಾಡಿತ್ತಾಯ — ಅರ್ಜಿದಾರ.

ಚಿನ್ನಮ್ಮ ಕೊಡಾ —ಎದ್ರಿರು.
ಎದ್ರಿರು

8. ದುಗ್ಗಗೌತ್ತ, 4. ನಾಗಪ್ಪಗೌತ್ತ — ಅಮ್ಮುಗೌಡರ ಮಕ್ಕಳು.

ನೋಟೀಸಿಟ್ಟು ಗ್ರಾಮಸ್ಥರು. ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ :—

ತಾ. 31.8.68ಕ್ಕೆ ಪಿರ್ಯಾದಿ ಅರ್ಜಿದಾರರಿಗೆ ಬರತಕ್ಕ ಗೇಣಿ ಬಾಕಿಗೆ ಅರ್ಜಿದಾರನು ಮಾಡಿದ ಈ ಅರ್ಜಿಯನ್ನು ನಿಮ್ಮ ನೋಟೀಸಿಗೆ ತಾ. 29-12-69ಕ್ಕೆ ಇಟ್ಟಿರುವ ಕ್ರಮದ ದಿನ ನೀವು ಈ ಕೋರ್ಟಿನ ಮುಂದೆ ಹಾಜರಾಗಿ ಉದ್ದರಿಸಕ್ಕೆಯ ತಪ್ಪದಲ್ಲಿ ನಿಮ್ಮನ್ನು ಶಿಕ್ಷೆಗೆ ಒಳಪಡಿಸಿ ಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao
Advocate for Petitioner

ತಾ. 8-12-1969.

ಗೇಹರಾಜ್ಯದಲ್ಲಿ

ಸುದ್ದಿ ಸಮಾಚಾರ - ಮೀಮಾಂಸೆ

"ಏ, ತುಸ ಇತ್ತ ಬಾಂದ್ರೆ....'

'ಆಯ್ತಪ್ಪ, ಏನು ಸಮಾಚಾರ?"

"ಸಮಾಚಾರ ಆನೆ ಮೇಗೆನಿದೆ? ಎಲ್ಲಾ ಭಾರೀ ಸುದ್ದಿ ಮಾತ್ರ...."

"ಅಲ್ರಿ, ಸಮಚಾರ ಮತ್ತು ಸುದ್ದಿಗ ಳೆರಡೂ ಪರ್ಯಾಯ ಶಬ್ದಗಳು ತಾಫೆ?"

'ಹೌದು, ಒಂದು ಕಾಲದಲ್ಲಿ ಈಗಿನ ರಾಜ್ಯಕೀಯ ಪ್ರಭಾವಿತ ಸನ್ನಿವೇಶದಲ್ಲಿ ತಾತ್ವಿಕವಾಗಿ ಮಾತ್ರ ಪರ್ಯಾಯ...."

"ಓ, ಹಾಗೆ...'

"ನೋಡಿ, ಮೊಗಸುದ್ದಿಗೆ ಮಾತ್ರ ಇಂದು ಸಮಾಚಾರ ಅನ್ನಬೇಕು. ದೇಸಿ ಸುದ್ದಿಯೇ ಸುದ್ದಿ....'

'ಅಲ್ರಿ, ಇದೇನ್ಸಂತೂತ?"

'ಏನು?'

'ಮೊಗದೇಸಿ ಎಲ್ಲ ಅಲಂಕಾರ ಶಾಸ್ತ್ರ ಕ್ಕೆ ವಿಷಯವಾಗಿದ್ದ ಶಬ್ದಗಳಾಗಿದ್ದುವು. ಈಗ ಅದು ನಿಜಜೀವನಕ್ಕೂ...."

"ಹ್ಞೂಂ.... ಅದ್ರಲ್ಲೂ ರಾಜ್ಯಕೀಯ ಪುಂಸ್ತ್ರೀಯರಿಗೆ ಇದು ಅತ್ಯಗತ್ಯ."

'ಅಹ, ಏನಿದು? ಪುಂಸ್ತ್ರೀ ಅಂದ್ರೆ?'

"ಪುಂ ಅಂದ್ರೆ ಪುರುಷ, ಸ್ತ್ರೀ ಅಂದ್ರೆ ಸ್ತ್ರೀ...."

'ಅದು ಶೊಶ್ತೂರೀ, ಮತ್ತೆ ಪುಂ ಸ್ತ್ರೀ ಅಂಬ್ರೇನೂಂತ?'

'ಇಲ್ಲ ಕಣೆ, ಸತ್ಯಕ್ಕೂ ಇಲ್ಲಿ ದ್ವಂದ್ವ ಸಮಾಸವೃತ್ತಿ ಮಾತ್ರ, ಮತ್ತಾವುದೂ ಇಲ್ಲ... ಅಲ್ಲ....'

'ನಾಕು ಬಿಡ್ರೀಂದ್ರೆ... ಅಲ್ಲ ಏಕೆ? ಸತ್ಯಹೇಳೋದಾದ್ರೆ ರಾಜ್ಯಕೀಯದಲ್ಲಿರೋ ಎಲ್ಲಾ ಪುಂ ಸ್ತ್ರೀಗಳೇ...'

'ಅಂದ್ರೆ?'

'ಪುರುಷರೂ ಸ್ತ್ರೀಯರೂ...'

'ಮತ್ತೆ ನಪುಂಸಕರಿದ್ದಾರೇನು?'

'ಇಲ್ಲದೆ ಮತ್ತೆ?'

'ಅಂದ್ರೇನು? ತಿನ್ನೋ ಪುಂಸ್ತ್ರೀಯ ವ್ಯಾಖ್ಯಾನ?'

'ಅದೇ ಅಂದದ್ದಲ್ಲಾ? ಪುರುಷರಾಗಿದ್ದೂ ಸ್ತ್ರೀಯರಂತಿರೋರು; ಸ್ತ್ರೀಯರಿದ್ದೂ ಪುರುಷರಂತೆ ಕಾರುಬಾರು ಮಾಡೋರು...ಒಟ್ಟಾರೆ ಪೂರ್ತ ಫಪಂಚಕರು, ಹೇಡಿಗಳು, ಒಂದನ್ನಾಡಹೋಗಿ ಹುತ್ತೊಂದ ಮಾಡುವವರು...."

"ಏನೇ, ಇವತ್ತು ಭಾರೀ ಸ್ಪಿರಿಟ್ ಇದ್ದಂತೆ ಇದೆ?"

"ಸ್ಪೀಟ್ ಯಾಕೆ? ಅಂಗ್ಳೆ ನೋಡಲು ಕನ್ನಡಿ ಯಾಕೆ? ನೋಡಿ, ಸಹಕಾರದ ಸಹಕ್ಕಾರಾತ್ಮಾ ಸ್ಫೂರ್ತ್ಯಮಾಡುತ್ತಲೇ ಕಾಂಗ್ರೆಸ್ಸನ್ನು ಒಡೆದರು...."

'ಯಾರು?"

'ಮ.ತ್ಮಾರು? ಇಂದಿರಾಗಾಂಧಿ...."

"ಭಲೇ...."

"ಅಲ್ರಿ, ಇದ್ದದ್ದನ್ನ ಮಚ್ಚುಮರೆ ಯಾಕೆ ಮಾಡಬೇಕು?"

'ಅದು ಸರೀನ್ನ. ಅವ್ರ ಮಟ್ಟಿಗೆ ಅತ್ಮಸಾಕ್ಷಿಯೇ ಮುಖ್ಯ...."

'ಇರಬಹುದೂನ್ನಿ. ಅದ್ರೆ, ತನ್ನ ಅತ್ಮ ಸಾಕ್ಷಿಯೇ ಸರಿ, ಇತರರದ್ದು ಅತ್ಮಸಾಕ್ಷಿ ಅಲ್ಲ ಅಂತ ಅವರ್ಯಾಕೆ ತೀರ್ಮಾನಿಸಬೇಕು?'

"ಯಾಕೆ ಹಾಗಂತೀಯಾ?"

"ನೋಡಿ ಪುರುಷಾದ ಸ್ವಾಮಿ ಮತ್ತಿ ತರರನ್ನು ಎರಡು ತಿಂಗಳ ಹಿಂದೆ ಸಮಾಜವಾದದ ಹೆಸರಲ್ಲಿ ಸಂಪುಟದಿಂದ ಕಿತ್ತು ಹಾಕಿದ ಇಂದಿರಮ್ಮ ಸಮಾಜವಾದವನ್ನು ಏನು ಮಾಡಿದರು? ಎಲ್ಲಿ ತಂದರು?'

"ಆಯ್ಯೋ ಅದಕ್ಕೆ ನೋಡೂ ಅವೇಗ ರಾಗ ಇದಲಾಯಿಸಿದ್ದಾರೆ."

"ಅಂಬಲ್ಲಿ?"

"ಸಿಂಡಿಕೇಟ್—ಇಂಡಿಕೇಟ್ ಹೋರಾಟ ಏಕೋಪಕ್ಕೆ ಹೋದಾಗ ಅವರು ಹಾಡಿದ್ದು ಸಮಾಜವಾದ ರಭರಾಗವಾದರೆ, ಈಗ ಹಾಡುತ್ತಿರುವುದು ಸಮಾಜವಾದ ನಿಧಾನರಾಗ..."

"ಅಂದ್ರೆ ಸಮಾಜವಾದವನ್ನು ನಿಧಾನವಾಗಿ ತರಬೇಕೂಂತ...."

"ಇದು ತೀರ ಹಳೆಯ ಸಿಂಡಿಕೇಟಿನ ರಾಗವಾಯ್ತಲ್ಲ?"

'ಮತ್ತಿನ್ನೇಂಥದು? ಅಲ್ಲಾ, ನೀತಿ-ಫಿಲಾಸೆಯೊಂದೇ, ಪಕ್ಷ ಒಡೆಯಬೇಕಾದರೆ..."

"ಏನಂತೀಯ? ಅದರ ಕಾರಣವನ್ನು ಇಂದಿರಮ್ಮನೇ ನೊಸ್ಲೆ ಹುರಿಂಗಗೊಳಿಸಿದರಲ್ಲಾ?"

"ಏನಂತೆ?"

"ತನ್ನನ್ನು ಪ್ರಧಾನಿ ಪದದಿಂದ ಇಳಿಸಲು ಸಿಂಡಿಕೇಟ್ ಸಂಚು ಹೂಡಿತ್ತು; ಆದ್ದರಿಂದ...."

"ಓಹೋ, ತನ್ನಪಟ್ಟ ಭದ್ರವಾಗಿಡೋಕೆ ಹೋರಾಟಕ್ಕೆ ಇಳಿದರೆನ್ನಿ...."

"ಸ್ವಯಂ ಇಂದಿರಾಗಾಂಧಿಗೆ ಅಧಿಕಾರ ಬೇಕಾಗಿಲ್ಲ. ಮೂರುವರೆ ಡಜನ್ ದೇಶ ಸೇವಕರು ಕಟ್ಟುಂಬದ ಕುವರಿಯೊಕ್ಕೆ, ಅದರೆ, ಭಗವಂತನು ಶ್ರೀಸಾಮಾನ್ಯನ ಉದ್ಧಾರಕ್ಕೆಂದು, ಸಮಾಜವಾದದ ವರ ಪ್ರಸಾದವನ್ನು ಭಾರತ ಪ್ರಜೆಪ್ರಜೆಗೂ ಹಂಚಲೆಂದು ಆಕೆಯನ್ನು ಕಳಿಸಿದ್ದಾನೆ. ಕರ್ತವ್ಯಪಾಲನೆಯನ್ನು ಮಾಡದೆ ಮೂಕ ಪ್ರೇಕ್ಷಕರಾಗಿ ನಿಂತರೆ, ಸಿಂಡಿಕೇಟಾರರನ್ನು ಶ್ರೀ ಭಾರತೀಯನನ್ನು ಧ್ವಂಸ ಮಾಡಿ ಬಿಡ್ತಾನೆ."

'ಅಯ್ಯೋ ನಾಕು ಬಿಡೀಂದ್ರೆ.... ಅಂತೂ ನನಗೆ ವರೋಪಚಾರ ಬೇಕಾಗಿಲ್ಲ, ಆದ್ರೆ, ಮನೆಯ ಹಿರಿಯರು ಅದಿಲ್ಲದೆ ಮದ ವೆಯಲ್ಲಾಂತ ನಿರಶನ ವ್ರತ ಕ್ಕು ತಿದ್ದಾರೆ. ಆದ್ದರಿಂದ ಐವತ್ತು ಸಾವಿರ ಕಳಿಸಿಬಿಡಿ ಅಂತನ್ನುವ ವರನಂತೆ...!

"ಏ, ನಾನೇನೂ ಹಾಗಂದಿಲ್ಲ..."

"ಅಯ್ಯೋ ಫೀನ್ಯಾಕೆ ಹಾಗಂದೀರಾ?'

"ಯಾಕೆ?"

"ಅಲ್ಲ, ಹುಡುಕಿ ಹುಡುಕಿ ಸಿಗದಾಗ ನಾನೊಬ್ಬಳು ಸಿಕ್ಕಿಬಿಟ್ಟೆ...."

"ನಾಕುಕಣೇ, ನಿನ್ನ ಪರಿಹಾಸ...., ಸಿಕ್ಕಿಬಿಡೋಕೆ ನೀನೇನು ಬಿಸಾಡಿ ಹೋಗಿದ್ದರೆಯೇನು?"

"ನೀನೇ ಬಿಸಾಡಿಬಿಟ್ಟಿದ್ದೀರಂತಲ್ಲ?'

'ಏ, ಆ ಗಾಳಿ ಸುದ್ದೀನೆಲ್ಲ ನೀನು ಸಂಬ್ರೀಯೇನು?'

"ಅಂದ್ರೆ, ಅದು ಸಮಾಚಾರ ಅಲ್ಲ ಅನ್ನೋದು ತಾನೆ?"

"ನೋಡಿ, ಸಮಾಚಾರ ಅಂದ್ರೆ ರೇಡಿಯೋದಲ್ಲಿ ಓದುವ ವಾರ್ತೆಗಳು ಮಾತ್ರ....."

'ಅಲ್ರಿ, ಅದೂ ಪಕ್ಷಪಾತವಿಂದ ಕೂಡಿದೆ ಅನ್ನಕ್ಕಾರಲ್ಲಾ?'

'ಅನ್ನೋರು ಅಂದುಕೊಳ್ಳಲಿ ಇಂಡಿಕೇಟ್ ಅದುವೇ ಸಮಚಾರ, ಉಳಿದ ದ್ದೆಲ್ಲಾ ಸುದ್ದಿ ಅಂತದೆ...."

"ನೋಡಿ, ಅಧಿಕಾರ ಗುಳಿ ಏನೇನೆಲ್ಲಾ ಮಾಡೀಸ! ತನ್ನ ಸ್ಥಾಪ ಭದ್ರ ಪಡಿಸೋಕೆಂದೇ ಇಂದಿರಮ್ಮ ಯೂರ್ಕಾರ ನೆಸ್ಲೇ ಸುಂದೆ ಭೂ ಬಿಟ್ಟೆಲು, ಮುಂದೆ ಹೋದವರು ಮುಂದೆಯೇ ಹೋದರು...."

'ಪಾಪ, ಜಗಜ್ಜೀವನರಾಮುರಿಗೆ ಇಂದಿರಮ್ಮ ನಿವೃತ್ತಿ ವೇತನ ಕೊಡಿಸಿದರು.'

"ಅಂದ್ರೆ?"

"ತನ್ನ ಕಾಂಗ್ರೆಸ್ಸಿನ ಅಧ್ಯಕ್ಷಗಿರಿ...."

'ತದ್ಗಣ ತೋಂ ಅಯ್ತು. ಫಿಟಲಿಂ ಗಪ್ಪನವರೊಡನೆ ಹೋರಾಡಿದ ಜಗಜ್ಜೀವನ ರಾಮುರಿಗೇ ಆ ಪಟ್ಟ ಸಿಗಬೇಕೆ? ಮೂಡಿದ್ದನ್ನೋ ಮೂರಾಯು ಅಂದಂಗಾಯ್ತು.'

'ಇನ್ನು ಫಲ್ಗುದ್ದೀನ್ ಮಾತ್ರ ಬಾಕಿ."

"ಅಯ್ಯೋ ನುತ್ತೆ ಜವನರು...."

'ಅದು ಭಾರೀ ಸವಂಷೆ...'

"ಏನು?"

"ಮುಂಬಯಿಯಲ್ಲಿ ಜವನರ ಪ್ರಭಾವ ಸಗ್ಗಿಸಿ ತನ್ನವರ ಪ್ರಭಾವ ಮೂಡಿಸಲೆಂದೇ ಇಂದಿರಮ್ಮ ಮುಂಬಯಿಯಲ್ಲಿ ತನ್ನ ಅಧಿವೇಶನ ಕರೆದನ್ನು..'

"ಅಂದ್ರೆ, ಜವನರನ್ನು ಅವರು ನಂಬುವುದಿಲ್ಲ?'

"ಎಲ್ಲೇ? ಜವನರಿಗೆ ಬಾಯಿಗೆ ಬೀದ ಮುದ್ರೆ ಯಾಕೆ ಕೂತಿದ್ದಾರೆ. ಇಂದಿರಮ್ಮನೇ ಎಲ್ಲಾ ಮಂತ್ರಿಗಳ ನೇಲೆ ಸವಾರಿ ಮಾಡುತಿದ್ದಾರೆ ಜವನರಿಗೆ ಭಾರೀ ಬೇಸರ. ಅವರು ಪ್ರಧಾನಿಪಾ ಪ್ರತಿಪರ್ಧಿಯೆಂದು ಇಂದಿರಮ್ಮನಿಗೆ ಗೊತ್ತು. ಕಾಲಿಗೆ ತಗಲಿ ಮುಳ್ಳನ್ನು ತೆಗೆಯಲು ಮುಳ್ಳನ್ನೇ ಬಳಸಿ ಮತ್ತದನ್ನು ಮಣ್ಣಿನ ಡಿ ಹೂತಿಡುವ ಕಲೆ ಇಂದಿರಮ್ಮನಿಗೆ ಕರಿಯೂ ಗೊತ್ತು...."

'ಓ ಅಂತ್ತೆ ಈಗವರನ್ನೆಲ್ಲಾ...."

"ಗದ್ದುಗೆ ಇಳಿಸಿ ತಮ್ಮನಿಷ್ಟರನ್ನು ಅಸ್ಸಿಕೊಳ್ಳುವ ಹೆಬ್ಬಯಕೆ...."

'ಹ್ಞೂಂ ಇನೂ ಸುದ್ದೀನೆ?"

"ಇಂದಿರಮ್ಮ ಉವಾಚ ಮಾತ್ರ ಸಮಾಚಾರವಾದ್ದರಿಂದ ಇಲು ಹಾಗೇನೇ ಅನ್ನು ಸದ್ಯ...'

'ಇನ್ನಿ ನಮಗೇನಂತೆ?'

'ಏನೂ ಇಷ್ಟಲ್ಲ.ಬಿ '

'ಏನ್ರಾ ಇನ್ನಿ?'

'ಇದೆಯವ್ವ ಇದೆ.. ಕಂಡಿತಕ್ಕೂ ಇದೆ...' — ಗೋರಾ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 28337
2 29887

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.



ಡೊಂಬರಾಟದಲ್ಲಿ ಕುಶಲಹಸ್ತರು

ವಿಜಲಿಂಗಪ್ಪ

ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರಿಗೆ ಅರುವತ್ತೇಳು ತುಂಬಿತು. ಅವರು ತಮ್ಮ ಜನ್ಮದಿವಸವನ್ನು ದೆಹಲಿಯಲ್ಲಿ ಆಚರಿಸಲಿಲ್ಲ. ಆದಕ್ಕಾಗಿಯೋ ಅಥವಾ ಇತರ ರಾಜ್ಯಕಾರಣದ ದಾಂಧಲೆಗಳಿಂದ ತುಸು ನೆಮ್ಮದಿ ಪಡೆಯುವುದಕ್ಕಾಗಿಯೆ ಅವರು ದೆಂಗಳೂರಿಗೆ ಬಂದರು. ಹುಟ್ಟುಹಬ್ಬದ ಅಭಿನಂದನೆಗಳನ್ನು ಅವರು ಬೇಡಾದಷ್ಟು ಪಡೆದರು. ಆವರನ್ನು ಕಾಂಗ್ರೆಸ್ ಅಧ್ಯಕ್ಷ ಗದ್ದುಗೆಗೇರಿಸಿದ್ದ ಪ್ರಧಾನಿ ಶ್ರೀಮತಿ ಗಾಂಧಿಯವರು ತಮ್ಮ ಕೋರಿಕೆಯ ದೆಹಲಿ ಅಧಿವೇಶನದಲ್ಲಿ ಅವೇ ಗದ್ದುಗೆಯಿಂದ ಇಳಿಸಿನ್ನೇನೆಯೆ ಘೋಷಿಸಿದ್ದರಿಂದ ಅವರ ಶುಭಾಶಯಗಳು ಬಂದಿರಲಿಲ್ಲ.

"ಶ್ರೀಮತಿ ಗಾಂಧಿಯವರಿಗೆ ಹಿಂದೆ ಇಬ್ಬರು ಪ್ರಧಾನಿಗಳಾಗಿದ್ದು ಅವರು ಪ್ರಜಾಪ್ರಭುತ್ವಕ್ಕಾಗಿ ಉಳಿವಿನಾಗಿ ಯತ್ನಿಸಿದರು. ಶ್ರೀಮತಿಯವರು ತಮ್ಮಿಂದ ವಾಸ್ತವ ರಾಷ್ಟ್ರದ ಪ್ರಗತಿ ಸಾಧ್ಯವೆಂಬ ಚಿತ್ರವನ್ನು ಜನತೆ ಎದುರಿಟ್ಟಿದ್ದಾರೆ, ಇವರ ಕ್ಕಾಗಿ ಕಾಂಗ್ರೆಸ್ಸನ್ನು ತಮ್ಮೆಗಳಲ್ಲಿ ಇಡಬೇಕು ಯತ್ನಿಸಿದ್ದಾರೆ" ಎಂದ ಎಸ್ಸೆಸ್ ಕಾಂಗ್ರೆಸ್ ಪಕ್ಷಕ್ಕೆ ಮತ್ತು ಕಕ್ಷಗಳಿಗೆ ನಿಷ್ಠೆಯಿಂದಿರಬೇಕೆಂ. ಪರಸ್ಪರ ಭಿನ್ನಾಭಿಪ್ರಾಯಗಳಿದ್ದರೂ ನಾವೆಲ್ಲರೂ ಏಕೈಕ ದೇಶದ ಪ್ರಜೆಗಳು ಎಂಬುದನ್ನು ಮರೆಯಬಾರದು" ಎಂದು ಕಾಂಗ್ರೆಸಿಗರಿಗೆ ಸಂದೇಶ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಕಕ್ಷಗಳಾಗಿ ಹೋರಾಡುವ ದೃಢ ನಿಲುಮೆ ತೊಟ್ಟ ಎಸ್ಸೆಸ್ ಇಂದಿನ ಈ ಹೋರಾಟ ನಿಸ್ವಾರ್ಥ ಸೇವಕರು ಮತ್ತು ಅಧಿಕಾರ ಪ್ರಿಯಾದ ವ್ಯಕ್ತಿಗಳ ಹೋರಾಟವೆಂದೂ ವರ್ಣಿಸಿದರು, ಅದು ಸತ್ಯಕ್ಕೆ ದೂರವಲ್ಲ.

ಕಾಮರಾಜ

ಕಾಂಗ್ರೆಸ್ಸಿನ ಹಿಂದಿನ ಅಧ್ಯಕ್ಷ ಕಾಮರಾಜರಾಗಲಿ ಮದ್ರಾಸಿದಲ್ಲಿ ಸಂಚಾರ ಮಾಡುತ್ತ "ಬೊಂಬಾಯಿ ರೈಲು ಹತ್ತಬೇಡಿ, ಅಹಮ್ಮದಾಬಾದ ರೈಲು ಹತ್ತಿ" ಎಂದು ಕಾಂಗ್ರೆಸಿಗರಿಗೆ ಹೇಳಿರಬಹುದಿದ್ದಾರೆ. ಕಾಂಗ್ರೆಸ್ಸಿನ ಇಂದಿನ ಕೆತ್ತಾಟಕ್ಕೆ ಇವರೂ ಶ್ರೀಮತಿ ಗಾಂಧಿ ಮತ್ತವರ ಸರ್ವಾಧಿಕಾರ ಲಾಲಸೆಯನ್ನೇ ಬೊಟ್ಟುಮಾಡಿ ತೋರಿಸಿರುತ್ತಾರೆ. ಶ್ರೀ ಕಾಮರಾಜರಿಗೆ ತನ್ನವೇ ಆದ ದುಃಖಗಳಿವೆ. ಸಂಸತ್ ನೆಹರು ಮತ್ತು ಲಾಲಬಹದ್ದೂರ್ ಯವರು ದಿವಂಗತರಾದಾಗ, ಪ್ರಧಾನಿಯಾಗುವ ಭಾಗ್ಯವನ್ನು ಹಿಂದೆತಳ್ಳಿ ಶ್ರೀಮತಿ ಗಾಂಧಿಯವರನ್ನು ಎತ್ತಿಹಿಡಿದವರೇ ಇವರು. ಅವರೇ ಕಾಮರಾಜರು. ಈಗ ಶ್ರೀಮತಿ ಗಾಂಧಿಯವರ ಮನೋನೈತ್ರಿಯನ್ನು ಒಪ್ಪದಿರಬೇಕಾದರೆ, ಶ್ರೀವ ತಿಯವರಲ್ಲಿ ದೋಷವಿರಲೇ ಬೇಕು.

ಚಾಣಾಕ್ಷ ರಾಜ್ಯಕಾರಣಿ ೧೧ ವರ್ಷ ತುಂಬಿದರಾಜಕಿಯವರೂ ಕಾಮರಾಜರ ಸ್ಥಾನವನ್ನು, ಚರಿತ್ರೆಗಳ ಬಗ್ಗೆ ಪ್ರಶಸ್ತಿ ನೀಡುತ್ತಾರೆ. ಕಾಂಗ್ರೆಸ್ಸಿನ ಭದ್ರತಾಕ್ಷಕ್ಕೆ ಶ್ರೀ ಸಿ. ಸುಬ್ರಹ್ಮಣ್ಯಂ ಕೂಡ ಇದನ್ನು ಒಪ್ಪುತ್ತಾರೆ; ಆದರೆ, ಪದ್ಯ ಪದ್ಧತಿಯಂದ ಅವರು ತಪ್ಪು ರೈಲು ಹತ್ತಿದ್ದಾರೆ. ಅವರೂ ತಪ್ಪನ್ನು ತಿಳಿದು ತಮ್ಮ ರೇಲು ಹತ್ತಿಯೇ ಹತ್ತು, ತ್ತಾರೆಂಬ ಅಚಲ ವಿಶ್ವಾಸ ವ್ಯಕ್ತ ಪಡಿಸಿದ್ದಾರೆ.

ಶ್ರೀ ಕಾಮರಾಜರು ಅಧಿಕಾರಲಾಲಸೆಯಿಂದ ದೂರರು. ಉಪ ಪ್ರಧಾನಿಯ ಪಟ್ಟ ತನಗೆ ಬರಲಿಬೆಯೆಂದಾಗ ಅದನ್ನು ಸ್ಪಷ್ಟವಾಗಿ ನಿರಾಕರಿಸಿದ ತ್ಯಾಗಿಗಳು. ಆದುದರಿಂದಲೇ ಅವರ ಮಾತಿಗೆ ಹಿಂದೆಯೂ ಬೆಲೆಯಿತ್ತು; ಇಂದೂ ಇದೆ, ಮುಂದೆಯೂ ಇರುತ್ತದೆ. ಅವರು ಈಗಲೂ ಹೇಳ್ತಾರೆ: "ಶ್ರೀಮತಿ ಗಾಂಧಿಯವರು ರಾಷ್ಟ್ರಪತಿ ಚುನಾವಣೆಯ ಬೇಳೆ ಕಾಂಗ್ರೆಸ್ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ. ಈ ತಪ್ಪನ್ನವರು ಒಪ್ಪಿಕೊಳ್ಳುವುದಾದರೆ, ಈಗಲೂ ರಾಜಿ ಸಾಧ್ಯ." ಆದರೆ, ಗಾಂಧಿಯಲ್ಲಿ ಜಾಗ್ರತವಾದ ಅಹ್ಯಸ್ಥಾಸ್ಥಿ ಪಕ್ಷನಿಷ್ಠೆಯನ್ನು ನೆಟ್ಟನಿಂತಿದೆ.

ಗೋವಿಂದ ಮೆನನ್

ಪ್ರಧಾನಿಯ ಪ್ರಬಲ ಸಮರ್ಥಕರಲ್ಲಿ ಒಬ್ಬರಾದ ಕೇರಳದ ಪಾನಂಕುಳ್ಳಿ ಗೋವಿಂದ ಮೆನನ್ನರು ಕಾನೂನು ಖಾತೆಯೊಡನೆ ರೈಲು ಖಾತೆಯನ್ನೂ ವಹಿಸಿಕೊಂಡಿದ್ದಾರೆ. ಮೊನ್ನೆಮೊನ್ನೆಯ ವರೆಗೆ ಮೂರು ಮಾತಿಗೂ ಕಾನೂನು ವಾತ್ರ ಅಡುತಿದ್ದ ಮೂಸ್ಯ ಮಂತ್ರಿ ಮೆನನ್ನರು ಈಗ ಸಲೀಸಾಗಿ ರೈಲನ್ನೂ ಬೆರಸಿತ್ತಾರೆ. ವಿವಿಧ ಪಕ್ಷಗಳ ಪ್ರಾಬಲ್ಯವಿರುವ ಶ್ರೀಮತಿ ಗಾಂಧಿಯವರು ಸಂಪುಟ್ಟಿನ ಪ್ರಸಕ್ಕ ಅಧಿವೇಶನ ಮುಕ್ತಾಯಗೊಂಡ ವೇಲೆ ಅಗಸ್ಟಿನ ವಿಸ್ತರಣೆ ತ್ತಾರೆಂದು ಹೇಳಿದರೂ ಭವಿಷ್ಯವಾದಿಗಳೂ ಅದೇ ಮಾತನ್ನು ಉದ್ಘಡಿಸಿದರೂ ಶ್ರೀ ಮೆನನ್ನರ ಅವೆಲ್ಲ ಗಟ್ಟುಗತಿ ಹೊಂದು ಚಣಾಡಂಗುರ ಸಾರಿದ್ದಾರೆ. ೨೬ ಜನವರಿಂದ ಪರಿಶಿಷ್ಟ ವರ್ಗ ಮತ್ತು ಜಾತಿಯವರಿಗೆ ಮತ್ತೆ ಹತ್ತು ವರ್ಷ ವಿಶೇಷ ಸವಲತ್ತು ಘೋಷಿಸುವ ಸಂವಿಧಾನ ತಿದ್ದುಪಡಿ ಸೇ. ೫೦ ರಷ್ಟು ರಾಜ್ಯ ಶಾಸನಾಂಗದಲ್ಲಿಂದ ಮಂಜೂರಾಗದೆ ಹೋದರೂ ಜ್ಯಾರಿಗೆ ಬರುತ್ತದೆ ಎಂಬ ಅಂಶವನ್ನು ಕೆತ್ತುಹಾಕಲು ಅವರು ಒಪ್ಪಿದ್ದೂ ಇದೇ ಡಂಗುರದ ಒಂದುಪಟ್ಟು.

ಬೊಂಬಾಯಿಯಿಂದ ಮಂಗಳೂರಿನ ತಕ್ಷಕ ಪಶ್ಚಿಮ ಕರಾವಳಿಯ ಉದ್ದಕ್ಕೆ ರೈಲುದಾರಿ ಹಾಳುವ ಬಗ್ಗೆ ತೀವ್ರ ಪರಿಶೀಲನೆ ನಡೆಯುವ ರೇಲನ್ನು ಶ್ರೀ ಮೆನನ್ನರು ಹೊಸತಾಗಿ ಬಿಟ್ಟಿದ್ದಾರೆ. ಮಹಾರಾಷ್ಟ್ರದ ಜಕಿರನ್ನು ಸಮಾಧಾನ ವಿರಿಸಿ, ವಂಗಾಬಯಿ ಅಧಿವೇಶನದಲ್ಲಿ ತಮ್ಮ ಜಯಭೇರಿ ಬಾರಿಸುವ ವರೆಗೆ ರೈಲೂ ಬಿಡುತ್ತಾರೆ, ನ್ಯಾಯವನ್ನೂ ಹೇಳುತ್ತಾರೆ. ಪಟ್ಟಿಯಿಲ್ಲದ ರೈಲು ಓಡಿಸುವುದೂ ನ್ಯಾಯವಿಲ್ಲದ ನ್ಯಾಯದ ಬಗ್ಗೆ ಘೋಷಣೆ ಮಾಡುವುದೂ ಶ್ರೀ ಗೋವಿಂದ ಮೆನನ್ನರಿಗೆ ಸರಿಹೊಂದಿ ಗೊತ್ತು. ಕಾನೂನು ತಪ್ಪಿದವರಿಗೆ ಶಿಕ್ಷೆ ವಿಧಿಸಲಾಗದವರು ಬೊಗಳಿಯೇ ಸೈಸ್ತರಾಗಬೇಕು.

ದಿನೇಶ ಸಿಂಗ್

ವಿದೇಶ ವ್ಯವಹಾರ ಶಾಖೆಯ ಕ್ಯಾಬಿನೆಟ್ ರಚಿತ ಶ್ರೀ ದಿನೇಶ ಸಿಂಗರು ಪಾಪ, ಭಾರೀ ಪೇಚಾಟಕ್ಕೆ ಸಿಕ್ಕಿಬಿದ್ದಿದ್ದಾರೆ. ರಾಬರ್ ಮುಸ್ಲಿಂ ಶೃಂಗ ಸಮ್ಮೇಳನದಲ್ಲಿ ಭಾಗವಹಿಸುವಂತೆ ಫಕ್ರುದ್ದೀನ್ ಅಲಿಯವರಿಗೆ ಅವರು ಹೇಳಿದ್ದಾರೋ ಪ್ರಧಾನಿ ಗಾಂಧಿಯವರೇ ಅಪ್ಪಣೆ ಕೊಟ್ಟರೇ ಸರಿಯಾಗಿ ಗೊತ್ತಾಗಿಲ್ಲ. ಆದರೆ, ರಾಬಾತ್‌ನಲ್ಲಿ ವಿಮಾನಕ್ಕೆ ಕರಿ ಹಚ್ಚಿಸಿಕೊಂಡು ಬಂದ ಅಲಿ, ತಮ್ಮ ವಿದೇಶ ನೀತಿಯಲ್ಲಿ ಅವೂಲ ಪರಿವರ್ತನೆ ಬೇಕೇಬೇಕು ಅಂದರು. ಕೆಲವೇ ದಿನಗಳಲ್ಲಿ ಅತಿಥಿ ಮಹಾಪಥಗು ನಮ್ಮ ನಿರ್ದಿಷ್ಟ ನೀತಿಯನ್ನು ತ್ಯಜಿಸುವ ಪ್ರಮೇಯವಿಲ್ಲ ವೆಂದರು. ರಾಬಾತ್‌ನಲ್ಲಿ ನಡೆದುದೇನೆಂದು ಈ ವಿಷಯ ಹೇಳಿಕೆಗಳೇ ಹೇಳುತ್ತವೆ.

ಕಮ್ಯೂನಿಸ್ಟರು ಚೀನ, ಡಿಎಂಕೆಗಳ ಊರುಗೋಲುಗಳಿಂದ ಶ್ರೀಮತಿ ಗಾಂಧಿಯವರು ಗೋಡೆಗೆ ದಿಕ್ಕೆಹೊಡೆದು ತಮ್ಮ ಮೂಗು ಹಜ್ಜಿಕೊಳ್ಳುವ ಪ್ರಮೇಯದಿಂದ ಬಚ ಕಿಸಿಂಗರು. ಊರುಗೋಲೇನು ಸ್ಥಿರವಲ್ಲವೆಂಬುದು ಅಕೆಗೂ ಗೊತ್ತು. ಕಾಪ್ಯೆಂಟ್ ಒಪ್ಪಂದವನ್ನು ಸ್ವೀಕರಿಸಲೇ ಯವಾಗಿದ್ದರೂ ಅದನ್ನು ಪಾಕಿಸ್ತಾನ ಉಲ್ಲಂಘಿಸುತ್ತ ಬಂದಿರುವಾಗ, ನಾವ್ಯಾಕೆ ಮನ್ನಿಸಬೇಕು? ಒಪ್ಪಂದಕ್ಕೆಯ ನೇತಾರರಾಷ್ಟ್ರ ಸೋವಿಯತ್ತೇ ಪಾಕಿಗಳಿಗೆ ವಿಮಾನ ಪ್ರಯಾಣದಲ್ಲಿ ಶಸ್ತ್ರಾಸ್ತ್ರ ಸರಬರಾಯಿ ಮಾಡುತಿರುವ ವಿರುದ್ಧ ಏನು ಕ್ರಮ ಕೈಕೊಂಡಿತು? ಕಂಠ ಚೀನಾ, ನೇಪಾಲ,ಹನಾಯ್‌ಗಳೊಡನೆ ಸಂಬಂಧ ವೇನು? ಇತ್ಯಾದಿ ಪ್ರಶ್ನೆಗಳಿಂದ ಸಿಂಗ್ ಜಾರಿಕೊಳ್ಳಲು ಜಾಗವೆಲ್ಲಿ ಉತ್ತರಗಳನ್ನೇ ಕೊಡಬೇಕಾದೀತೆ.

ಸಿ. ಬಿ ಗುಪ್ತ

ಉತ್ತರ ಪ್ರದೇಶದಲ್ಲಿ ಇಂಡಿಕೇಟ್ ಕಾಂಗ್ರೆಸ್ಸಿನ ನಾಯಕರಾಗಿರುವ ತಿವಾರಿಯವರು ಶ್ರೀ ಚರಣ ಸಿಂಗ್ ಬಿ. ಕೆ. ಡಿ.ಯಂ ಬೆಂಬಲ ಗಡೆಯ ರಾಜಕೀಯ ಸ್ಥಿತಿಯನ್ನು ವಿವರಿಸುತ್ತಿದ್ದಾರೆ. ವಿಧಾನಸಭೆಯ ಜಾತ್ಯಬಲ ಗಳಿಭೆಗೆ ಬಿ. ಕೆ. ಡಿ.ಕಾರಣ ವಷ್ಟೆನೆಂದು ಸಂಸತಿಸ್ಥ ಇಂಡಿಕೇಟ್ ಸರಕಾರ ಹೇಳಿಕೆ ನೀಡಿ ತ್ತಿದೂ ಈ ಪ್ರಯತ್ನದ ಇನ್ನೊಂದು ಮಜಲು.

ಮುಖ್ಯಮಂತ್ರಿ ಶ್ರೀ ಚಂದ್ರಭಾನು ಗುಪ್ತರಿಗೂ ತಿವಾರಿಯವರಿಗೂ ನೈಮನಸ್ಸು ಇಂದು ನಿನ್ನೆಯದಲ್ಲ. ಕಾಂಗ್ರೆಸ್ ವಿಭಜನೆ ಇಂದಿಗೆ ಹುಟ್ಟಿವಿಟ್ಟಿದ್ದು. ಶ್ರೀ ಗುಪ್ತರು ತಕ್ಷಣ ಪಕ್ಷಗಳಿಗೆ ಸೇರಿಹೋಗಿ ಸಿಂಡಿಕೇಟಿನ ಪಕ್ಷ ವಹಿಸಿದರು. ಆದರೆ ಅನಿವಾರ್ಯವಾಗಿ ತಿವಾರಿ ಇಂದಿಕೇಟಿಗೆ ಸೇರಬೇಕಾಯ್ತು. ಶ್ರೀ ಗುಪ್ತರ ಸರಕಾರವಿದ್ದ ಅಸ್ತಿತ್ವಕ್ಕಾಗಿತಕ್ಕಾಡಿದೆ. ಬಹುತ ಪ್ರಯತ್ನದಿಂದ ಸಂಖ್ಯಾ ಬಲವಿಸಿಕೊಂಡಿರುವ ಕಾಂಗ್ರೆಸ್ಸ ವಿಭಜನೆ ಎ ನಂತರ ಗೆಲ್ಲಿಗಟ್ಟುಕೊಳ್ಳುವುದು ಸಹಜ. ಇದನ್ನು ಶ್ರೀ ಗುಪ್ತ ಹೀಗೆ ಹೇಳುತ್ತಾರೆ: ನಾನು ಇಂಡಿಕೇಟ್.. ಬೆಂಬಲ ನೀಡುತ್ತಿದ್ದರೆ, ಸರಕಾರಕ್ಕೆ ಗಂಡಾಂತರವಿರುತ್ತಿರಲಿಲ್ಲ. ಆದರೆ, ಅಧಿಕಾರಕ್ಕಿಂತ ಪಕ್ಷನಿಷ್ಠೆ ಆಗಕ್ಕ.

ಆಗ, ಶ್ರೀ ತಿವಾರಿ ಇವರು ಸಿಂಡಿಕೇಟ್ ಪದಸ್ಥರಾಗುತ್ತಿದ್ದರೆಂದು. ಗುಪ್ತರಿಗೆ ಕೆಳಿಯದಿಲ್ಲ: ತ್ರಿವಳಿ ಬೆಂಬಲಿಗರ ಸಂಖ್ಯೆ ಆತ್ಯಶ್ಯವೆಂದೇ ಇವರ್ಷ ನಿರ್ಧರಿಸಿದ್ದರು.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು ಪಾತ್ರೆಯಂಚಿನ ಉಪಾಹಾರಕ್ಕೆ ಅನ್ಯ ಸ್ಥಾನ ಹಡಿದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯಂತ ಸರಳವಾಗಿಯಾದ ಪುಸ್ತಕ

ಮಿತ ಸಂತತಿ

ಬೆಲೆ 0-75 ಪೈಸೆ ಪಾತ್ರ.
ನವಭಾರತ ಪುಸ್ತಕ ಭಂಡಾರ.
ಕಾಲುಕೋಟೆ, ಉಡುಪಿ, ದ. ಕ.

ವಿಶ್ವ ಹಿಂದೂ ಪರಿಷತ್ತು

(ಮೂರನೇ ಪುಟದಿಂದ)

ಶ್ರೀ ನೇಜಾವರ ಮತ್ತು ಸಿದ್ಧಗಂಗಾ ಮಠದ ಶ್ರೀಶ್ರೀಗಳವರು ಹಿಂದೂ ಧರ್ಮ ಪ್ರಚಾರ-ಪ್ರಸಾರಗಳ ಅಭಿಮಾನದ ಅನುಷ್ಠಾನಕ್ಕೆ ಅಗತ್ಯ ಕ್ರಮಕೈಕೊಳ್ಳಲು ಸಲಹೆ ನೀಡಿದರು. ಶ್ರೀ ಕೆ. ಎಸ್. ಧರ ಮೇಂದ್ರಜ್ಞಾನವರು ವಂದನಾರ್ಪಣೆ ಮಾಡಿದರು.

ಪ್ರಾಧ್ಯಾಪಕ ದಂಡನಾಯಕ ಶ್ರೀ ಕಾರ್ಯಸ್ವನವರು ತಮ್ಮ ಉದ್ಘಾಟನಾ ಭಾಷಣ ನೀಡುತ್ತ ಶಾಲೆ-ಕಾಲೇಜುಗಳಲ್ಲಿ ನಮ್ಮ ಪ್ರಾಕ್ಯಳಿಗೆ ಹಿಂದೂ ಧರ್ಮದ ಬಗ್ಗೆ ಶಿಕ್ಷಣ ಕೊಡಲು ಅಂಜಬಾರದೆಂದು ಕರೆ ನೀಡಿದರು. ದೇಶದಲ್ಲಿನ ಧಾರ್ಮಿಕ ನಾಯಕರು ಹಿಂದೂ ಧರ್ಮವು ಎತ್ತಿ ಹಿಡಿದ ಸಹನೆ, ಸಹಬಾಳ್ವೆ, ಐಕ್ಯ ಮೊದಲಾದ ತತ್ವಗಳನ್ನು ರಾಜ್ಯಕಾರಣಿ, ಕಾರ್ಮಿಕ, ಕೃಷಿಕ ಮೊದಲಾದೆಲ್ಲರಿಗೂ ತಿಳಿಸಿ, ಹಿಂದೂ ಧರ್ಮವಲ್ಲಿ ಅನೈಕ್ಯವನ್ನೂ ಛಿದ್ರತೆಯನ್ನೂ ಜೋಡಿಸುವುದಿಲ್ಲ, ಶಾಂತಿ-ಸಹಬಾಳ್ವೆಗಳ ಈ ಧರ್ಮ ವಿಶ್ವ ಸಹೋದರತೆಯನ್ನೇ ಉದ್ಘೋಷಿಸುವುದೆಂದು ತಿಳಿಸಿ ಹೇಳಬೇಕೆಂದರು.

"ಧರ್ಮವು ನಾಶವಾಗುತ್ತಿರೆ; ತೊಂದರೆ ಬಿದ್ದಿದೆ ಎಂಬ ಮಾತು ಸುಳ್ಳು. ವಿಶ್ವತಿ, ಜಾಗೃತಿ ಮತ್ತು ಸಡಬಾಳ್ವೆಗಳ ಮಹತ್ವ ವಂಚು ನಾವಿಲ್ಲಿ ಸೇರಿದ್ದೇವೆ. ಸಂಕುಚಿತ ಮನಸ್ಸನ್ನು ಹಿಂದೂ ಧರ್ಮ ಪೋರಿಗೂ ಎಂದೂ ಕಲಿಸಿಲ್ಲ. ಧರ್ಮವನ್ನು ಅಲ್ಪ ಸ್ವೀಕಾರದು. ಧರ್ಮವೆಂಬುದು ಮೂರುಳಟ್ಟೆಯು ವಸ್ತುವಲ್ಲ. ನಾವು ಪರಧರ್ಮಗಳನ್ನು ಅಲ್ಲಗಳೆಯುವುದಿಲ್ಲ. ಹಾಗೆಯೇ ಉಳಿದ ಧರ್ಮಗಳೂ ನಮ್ಮ ಧರ್ಮವನ್ನು ಮನ್ನಿಸಬೇಕು. ಸಹಬಾಳ್ವೆ ಸಾಮಿ-ಶಾಂತಿಯಿಂದಿರಬೇಕು" ಎಂದು ಮಹಾರಾಜಾ ಅಭಿಪ್ರಾಯಪಟ್ಟರು.

ಸಮ್ಮೇಳನದಲ್ಲಿ ನಿರೀಕ್ಷೆಗೂ ಮೀರಿ ಪ್ರತಿನಿಧಿಗಳು ಧಾರವಹಿಸಿದ್ದರು. (೧೨೦೦ ರಷ್ಟು ಸಾಮಿಲ್) ಇತರೆಲ್ಲರ ಪಕ್ಷ ಮತ್ತು ಊಟಗಳಿಗೆ ನಗರದ ಬೇರೆ ಬೇರೆ ಶಾಲೆ-ಕಾಲೇಜು ಮೊದಲಾದೆಡೆ ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿತ್ತು.

ಕುಂದಾಪುರ ಪಂಚಾಯತಿನ ಅಧ್ಯಕ್ಷೆ ಶ್ರೀಮತಿ ವಿನ್ನಿ ಫೆರ್ನಾಂಡಿಸ್

ಮೈಸೂರು ವಿಧಾನ ಸಭಾ ಸದಸ್ಯೆ ಶ್ರೀಮತಿ ವಿನ್ನಿ ಫೆರ್ನಾಂಡಿಸ್ ಇವರು ಹೊಸದಾಗಿ ಕುಂದಾಪುರ ಟೌನ್ ಪಂಚಾಯತಿನ ಅಧ್ಯಕ್ಷೆಯಾಗಿ ಇತ್ತೀಚೆಗೆ ಸರ್ವಾನುಮತದಿಂದ ಆಯ್ಕೆಗೊಂಡಿರುವರು. ಶ್ರೀ ಅಬ್ರಹಾಂ ಕರ್ಕಡರು ಅವಿರೋಧವಾಗಿ ಉಪಾಧ್ಯಕ್ಷೆ ಸ್ಥಾನಕ್ಕೆ ಆಯ್ಕೆಗೊಂಡಿರುವರು.

ಕುಂದಾಪುರ ಟೌನ್ ಪಂಚಾಯತಿನ 18 ಸ್ಥಾನಗಳಲ್ಲಿ 14 ಸ್ಥಾನಗಳನ್ನು ಶ್ರೀಮತಿಯವರ ಪತಿ ಬೆಂಬಲ ಪಡೆದ ಪಿ. ಎಸ್. ಪಿ ಪಕ್ಷವು ಪೂರ್ಣಪ್ರಮಾಣದಲ್ಲಿ ಗೆಲ್ಲಿದರೂ ಆಡಳಿತ ಪಕ್ಷಗಳ ಅಭ್ಯರ್ಥಿಗಳು ಸೋತಿರುವರು. ಅವರ ಪಕ್ಷಗಳನ್ನು ವಿರೋಧಿಸಿದ ಜನಸಂಘ, ಸ್ವತಂತ್ರ ಪಕ್ಷ ಮತ್ತು ಕಾಂಗ್ರೆಸ್ ಪಕ್ಷ ಸ್ಥಾನಗಳನ್ನೂ ಪಕ್ಷಾತೀತ ಸದಸ್ಯರು ಒಂದು ಸ್ಥಾನವನ್ನು ಪೂರ್ತ ಗೆದ್ದಿದ್ದರು. ಈ ಚುನಾವಣೆ ಆದರು ೬ ವರ್ಷಗಳಿಂದ ಕುಂದಾಪುರ ಪಂಚಾಯತಿಗೆ ಸಲ್ಲಿಸಿದ್ದ ಸೇವಾ ದಾಖಲೆಯ ದ್ಯೋತಕವೆನ್ನಲಾಗಿದೆ.

1968ರಲ್ಲಿ ನಡೆದ ಪಂಚ್ಚಾತ್ ಚುನಾವಣೆಯಲ್ಲಿ ಸ್ತ್ರೀಯರಿಗೆ ಕಾದಿಟ್ಟ ಸ್ಥಾನಕ್ಕೆ ಇವರು ಮೊದಲ ಸಾರಿ ಸ್ಪರ್ಧಿಸಿ ಬಹುಮತದಿಂದ ಆರಿಸಿ ಬಂದರು. 1964ನೇ ಇಸವಿ ಸಪ್ಟಂಬರಿನಲ್ಲಿ ನಡೆದ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಪಂಚಾಯತಿನ ಪ್ರತಿಪಕ್ಷದ ಸ್ತ್ರೀ ಅಧ್ಯಕ್ಷೆಯಾಗಿ ಆಯ್ಕೆಗೊಂಡರು. 1967ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಯನ್ನು ಸೋಲಿಸಿ ಮೈಸೂರು ವಿಧಾನ ಸಭೆಯ ಸದಸ್ಯೆಯಾದರು. ಒಬ್ಬ ದಕ್ಷ ತೆಯಿಂದ ಕನ್ನ ಕರ್ತವ್ಯವನ್ನು ನಿರ್ವಹಿಸಿ ಜನಪ್ರಿಯತೆಯನ್ನು ಗಳಿಸಿದ್ದಾರೆ. ಇವರು ವಿಧಾನ ಸಭೆಯ ಹೌಸ್ ಕಮಿಟಿಯ ಸದಸ್ಯೆಯಾಗಿ ದ್ದಲ್ಲದೆ ಈಗ ಮೈಸೂರು ಸ್ಟೇಟ್ ಇಲೆಕ್ಟ್ರಿಸಿಟಿ ಬೋರ್ಡಿನ ಸಲಹಾ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸುತ್ತಿರುವರು.

ವಾರ್ಷಿಕೋತ್ಸವ

ಶಿವಳ್ಳಿ ಹಿಂದೂ ಹಾಯರ್ ಸೆಕೆಂಡರಿ ಶಾಲಾ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇತ್ತೀಚೆಗೆ, ಕುಂದಾಪುರ ಕಾಲೇಜು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಬಿ. ವೀರ ರಾಜೇಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಶ್ರೀ ಬಿ ಜಯರಾಮ ಶೆಟ್ಟಿ ಸ್ವಾಗತ ಭಾಷಣವನ್ನೂ, ಕಾರ್ಯದರ್ಶಿ ಶ್ರೀ ಪಿ. ಸುಬ್ಬಯ್ಯ ಹೆಗ್ಡೆಯವರು ವರದಿ ವಾಚನವನ್ನು ಮಂಡಿಸಿದರು. ಬಹುಮಾನ ವಿತರಣೆ ಮಾಡಿ, ಅಧ್ಯಕ್ಷರು ಕಾಲೇಜಿನ ಭಾವಿ ಯೋಜನೆಗಳನ್ನು ವಿವರಿಸಿದರು. ಶ್ರೀ ಎಸ್. ಸಚ್ಚಿದಾನಂದ ಆಚಾರ್ಯರವರು ಧನ್ಯವಾದಪತ್ರವನ್ನು ಸಮರ್ಪಿಸಿದರು. ಶಶಿಕಾಂತ ಆಚಾರ್ಯರವರು ಪ್ರಾರ್ಥನೆಯನ್ನು ಹಾಡಿದರು.

ಪುತ್ತೂರು ಲೇಂಡ್ ಟ್ರಿಬ್ಯೂನಲ್

R. R. C. 548/69.

ಕೃಷ್ಣ ಬಾಳಿಲ್ಲಾಯ —ಅರ್ಜಿದಾರರ,
ಬೀಪಾತುಮ್ಮ ಕೊಡಾ —ಎದ್ರಿರು,
ಎದ್ರಿರು—1. ಮಹಮ್ಮದ್, 2. ಸಾರಮ್ಮ, ಇಬ್ರಾಯಿ ಬ್ಯಾರಿ ಮಕ್ಕಳು,
ಇಬ್ಬರೂ ನೆಲ್ಯಾಡಿ ಗ್ರಾಮಸ್ಥರು, ಪುತ್ತೂರು ತಾಲೂಕು.

ಇವರಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾರೀಕು 31-3-68ಕ್ಕೆ ಪೂರ್ವದಲ್ಲಿ ಕೊಡಾ ಅರ್ಜಿದಾರರಿಗೆ ಬರಕ್ಕೆ ಗೇಣಿ ಬಾಕಿಗೆ ಅರ್ಜಿದಾರನು ಸೂಡಿದ ಈ ಅರ್ಜಿಯನ್ನು ಪೂರ್ವ ನೋಟೀಸಿಗೆ ತಾ 8-1-1970ಕ್ಕೆ ಇಟ್ಟುಕೊಳ್ಳಬೇಕೆ. ಸದ್ರಿ ದಿವಸ ನೀವು ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷೆ ಮಾಡಿ ಯುಕ್ತ ಕಾಂದಾಜಿ ತೀರ್ಮಾನಿಸಲಾಗುವುದು.

Sd/- M. Rammohan Rao,
Advocate for Petitioner
ತಾ. 10-12-69.

ಪುತ್ತೂರು ಲೇಂಡ್ ಟ್ರಿಬ್ಯೂನಲ್ ನೆಲ್ಲಿ

Rent Petition 461/1967

ಉಪ್ಪಿನಂಗಡಿ ಲಕ್ಷ್ಮೀವೆಂಕಟ್ರಮಣ ದೇವಸ್ಥಾನ —ಅರ್ಜಿದಾರೆ,
ಬೀಪಾತುಮ್ಮ ಕೊಡಾ —ಎದ್ರಿರು,
ಎದ್ರಿರು—1. ಬೀಪಾತುಮ್ಮ, ಖುದ್ದೆಟ್ಟ ಕಾದ್ರಿ ಬ್ಯಾರಿಯ ವಿಧವೆ, ಸಜಿಪ ಮೂಡ ಗ್ರಾಮ, ಮಂಗಳೂರು ತಾಲ್ಲೂ.
2. ಮೈನರ್ ಅಬ್ದುಸ್, 3 ಮೈನರ್ ಅಬ್ಬಬಕ್ಕರ್, 4. ಮೈನರ್ ಹಮೀದ್, 5. ಮೈನರ್ ಅಬ್ದುಲ ಹಮೀದ್, 6. ಮೈನರ್ ಕತೀಜಮ್ಮ — ಸದ್ರಿ 1ನೇ ಬೀಪಾತುಮ್ಮನ ಮೈನರ್ ಮಕ್ಕಳು, ಗಾರ್ಡಿಯನ್ ತಾಯಿ ಸದ್ರಿ 1ನೇ ಎದ್ರಿ ಸದ್ರಿಸಜಿಪ ಮೂಡಗ್ರಾಮಸ್ಥರು, ಮಂಗಳೂರು ತಾಲೂಕು.

ಇವರಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ತಾರೀಕು 31-3-1967ಕ್ಕೆ ಪೂರ್ವದಲ್ಲಿ ಕೊಡಾ ಅರ್ಜಿದಾರರಿಗೆ ಬರಕ್ಕೆ ಗೇಣಿ ಬಾಕಿಗೆ ಅರ್ಜಿದಾರನು ಸೂಡಿದ ಈ ಅರ್ಜಿಯನ್ನು ಪೂರ್ವ ನೋಟೀಸಿಗೆ ತಾರೀಕು 8-1-1970ಕ್ಕೆ ಇಟ್ಟುಕೊಳ್ಳಬೇಕೆ. ಸದ್ರಿ ದಿವಸ ನೀವು ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷೆ ಮಾಡಿ ಯುಕ್ತ ಕಾಂದಾಜಿ ತೀರ್ಮಾನಿಸಲಾಗುವುದು.

S/d. M. Rammohan Rao,
Advocate for Petitioner.
ತಾ. 9.12.69.

ಹಲವು ನಾಲ್ಕು ವರ್ಷಗಳಲ್ಲಿ 3ರಿ ಲಕ್ಷಾಂತರ ಹೆಣ್ಣು ಮಹಿಳೆಯರು ಲೂಪ್ (ಲಚ್ಚಿ) ಧಾರಣೆ ಮಾಡಿ ಕೊಂಡಿದ್ದಾರೆ ಲೂಪ್ ಎಂದರೇನು ಎಂದರೆ ಪ್ಲಾಸ್ಟಿಕ್‌ನಿಂದ ಮಾಡಿದ ಸಣ್ಣ ಆಕೃತಿ
ಪ್ರಾಣಾಪಾಯವಿಲ್ಲ—ಅಲರ್ಜಿ ಅಥವಾ ಪರಿಣಾಮಕಾರಿಯಾದ ಸಂತತಿ ನಿರೋಧ ಸಾಧನಗಳಲ್ಲಿ ಒಂದು
ಸರಳ—ಕೆಲವೇ ನಿಮಿಷಗಳಲ್ಲಿ ಅದನ್ನು ಡಾಕ್ಟರು ಸಲಿ ಕೊಡುತ್ತಾರೆ
ತೆಗೆಯಹುದು—ಗಂಡ್ಲೊಂದು ಮಗುವಾಗುವ ತನಕ. ನಿಮಗೆ ಅನ್ನಿಸಿದಾಗ ಲೂಪ್‌ನ್ನು ಸುಲಭದಲ್ಲಿ ತೆಗೆ ಬಿಡಬಹುದು
ಆಗಾಗ—ಒಂದೆರಡಾಗಿ ಮಾಡಿದ ಪರಿಶೀಲನೆಯಲ್ಲಿ ಕುಟುಂಬ ಯೋಜನೆಗೆ ಬೇರೆ ಯಾವ ವಿಧಾನದಲ್ಲೂ ಅಸಾಧಾರಣವಾಗಿಲ್ಲ ಶಾಂತಿಕ್ಕ ಸುಖಕ್ಕೆ ಒಂದಿಷ್ಟು ಯಾವ ಅಡ್ಡಿಯೂ ಆಗದು
ಇದು ಯಾರಿಗೆ—ಒಂದಾನೊಂದು ಯಾವ ರೋಗವೂ ಬಾರದು ಅಲ್ಪ ಸ್ವಲ್ಪ ತೊಂದರೆಗಳಾದರೂ ಇದರಿಂದ ಸುಲಭದಲ್ಲಿ ಅವುಗಳನ್ನು ಗುಣಪಡಿಸಬಹುದು ಮಾ. ಮೆಟ್ರಿಕ್ ಪರಿಶೀಲನೆಯಲ್ಲಿ ಲೂಪ್ ಅತ್ಯಂತ ಜನಪ್ರಿಯವಾದ ವಿಧಾನವೆಂದು ಡಾಕ್ಟರು ಗಳು ವಿದೇಶ ಅನುಭವ ಸಹಿತ ಇತ್ತೀಚಿನ ಅಭಿಪ್ರಾಯ ಪಟ್ಟಿದ್ದಾರೆ ಲೂಪ್ ಒಮ್ಮೆ ಧಾರಣೆಯಾದರೆ ಕನಿಷ್ಠ ಎರಡು ವರ್ಷಗಳ ತನಕ ಅದರ ಬಗ್ಗೆ ಯಾವ ಚಿಂತೆಯೂ ಇಲ್ಲ
ಲೂಪ್ ಧಾರಣೆ ಮಾಡಿಸಿಕೊಳ್ಳಲು ಇಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಕುಟುಂಬ ಯೋಜನಾ ಕೇಂದ್ರ
ಮಿಲ್ಲರ್ ರಸ್ತೆ, ಬೆಂಗಳೂರು-1
ಫೋನ್ 3
ನಿಮ್ಮ ಹೆಂಡತಿ
ನಿಮ್ಮ ಡಾಕ್ಟರನ್ನು ಸಂಪರ್ಕಿಸಿ

ಸಾಹಿತ್ಯಮಾರ್ಗವು ತಾರಕಶಕ್ತಿಯಾಗಲಿ

ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಕರೆ

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಸಾಹಿತ್ಯ ಸಮ್ಮೇಳನದ ಒಬ್ಬನೆಂದು ಅಧಿವೇಶನ ತಾ. ಅಂದು ನೆರವೇರಿತು. ರಾಜ್ಯದ ಕಂದಾಯ ಸಚಿವರಿಂದ ಉದ್ಘಾಟಿಸಲ್ಪಟ್ಟ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಆಚಾರ್ಯ ಡೀ. ಜವರೇ ಗೌಡರು ನಿರ್ವಹಿಸಿದ್ದರು.

ಶ್ರೀ ಬಿ. ಎಸ್ ರಾಮಾಜೋಯರು ವೇದಘೋಷಪೂರ್ವಕ ಪ್ರಾರ್ಥನೆ ನಡೆಸಿಕೊಟ್ಟರು. ಸಂಘಟಕ ಕಾರ್ಯಕರ್ತರುಗಳಿಗೆ ಶ್ರೀಗಂಧಲೇಪ ಮಾಡಿದರು. ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು. "ವೇಗವಾಗಿ ಚಲಿಸುತ್ತಿರುವ ಜಗತ್ತಿನಲ್ಲಿ ಕಾಲಕ್ಕೆ ಹೊಂದಿಕೊಳ್ಳುವ ಸಾಹಿತ್ಯ ನಿರ್ಮಾಣವಾಗಬೇಕೆಂದು ಹೇಳಿದ ಶ್ರೀ ಹೆಗ್ಗಡೆಯವರು "ನಾವೆಲ್ಲ ಒಂದು ಎಂಬ ಭಾವನೆ ಮೂಡಿಸುವ ಕೆಲಸ ಸಾಹಿತಿಗಳದ್ದು" ಎಂದು ಎಚ್ಚರಿಸಿದರು. ಯುವಕರಿಗೆ ಸಾಹಿತ್ಯದಲ್ಲಿ ಸಾಮ್ಯ ಪ್ರೋತ್ಸಾಹಕ ಬೇಕೆಂದ ಅವರು "ಇದಕ್ಕೆ ತಕ್ಕುದಾದ ಸಾನುಭೂತಿಯನ್ನು ಹೊದಲು ಗಳಿಸಿಕೊಳ್ಳಿರಿ" ಎಂದು ಯುವಕರಿಗೆ ಕರೆ ಕೊಟ್ಟರು.

ಉದ್ಘಾಟಕ ಶ್ರೀ ಕೌಜಲಗಿಯವರು ಮಾತನಾಡುತ್ತ "ಭಾಷೆಯು ಸಾರ್ವಜನಿಕ ಜೀವನದ ತಳಹದಿ. ಧರ್ಮವು ಅದರ ಮೇಲೆ ನಿರ್ಮಿತವಾದ ಕಟ್ಟಡ. ಧರ್ಮ ಮತ್ತು ಸಾಹಿತ್ಯದ ಪರಸ್ಪರ ಸಹಕಾರ ಜನತೆಯಲ್ಲಿ ಏಕತೆಯನ್ನು ಮೂಡಿಸಬಲ್ಲುದು. ಸಾಂಸ್ಕೃತಿಕ ಜಾಗೃತಿಗೆ ಮುಖ್ಯವಾದ ಭಾಷೆ ಮತ್ತು ಧರ್ಮಗಳನ್ನು ಸ್ವಾರ್ಥಸಾಧನೆಗೆ ಬಳಸಿಕೊಳ್ಳಬಾರದು. ರಾಷ್ಟ್ರೀಯತಾ ಭಾವನೆ ಮೂಡಿಸುವಲ್ಲಿ ಸಾಹಿತ್ಯದ ಸ್ಥಾನ ಮಹತ್ವವಾದದ್ದು. ಸಾಹಿತ್ಯವು ಈ ಹೊಣೆಗಾರಿಕೆಯಿಂದ ಎಂದಿಗೂ ತಪ್ಪಿಸಿಕೊಳ್ಳಬಾರದು" ಎಂದು ನುಡಿದು ಸಾಹಿತಿಗಳು ಈ ದಿಸೆಯಲ್ಲಿ ಮುಂದುವರಿಯಬೇಕೆಂದು ಅಭಿಪ್ರಾಯಪಟ್ಟರು.

ಉಪಕುಲಪತಿ ಜವರೇ ಗೌಡರು ತಮ್ಮ ಭಾಷಣವನ್ನಾರಂಭಿಸುತ್ತ "ಬೇಸರ ಕಳೆಗಿಳಿಯನ್ನು ವ್ಯಕ್ತಿಗತ ಆನಂದ ಕೊಡುವ ಸಾಹಿತ್ಯ ಸಮಗಿಂದು ಬೇಕಾಗಿದೆ. ಜನತೆಯನ್ನು ಉದ್ಧರಿಸಬಲ್ಲ ಸಾಹಿತ್ಯವು ಮಗಿಂದು ಅತ್ಯಗತ್ಯ. ದೇಶದ ಜನರನ್ನು ಒಂದುಗೂಡಿಸುವ ಸಾಹಿತ್ಯ ಸೃಷ್ಟಿಯಾಗಬೇಕು. ಈ ಮಹತ್ಕಾರ್ಯದಲ್ಲಿ ಎಲ್ಲ ಸಾಹಿತಿಗಳೂ ಒಮ್ಮನಸ್ಸಿನಿಂದ ದುಡಿಯಬೇಕು. ಲೇಖಕನು ಸಾಹಿತ್ಯದ ಒಂದು ಅಂಗವಾದರೆ, ಸಹೃದಯನು ಇನ್ನೊಂದು ಅಂಗ. ಇತರ ಕಲೆಗಳಂತೆಯೇ ಸಾಹಿತ್ಯವೂ ತನ್ನ ಸುಖವನ್ನು ಸಾಧಿಸುವುದಕ್ಕೆ, ಸಾಹಿತ್ಯ ಮಾರ್ಗವು ತಾರಕ ಶಕ್ತಿಯಾಗಬೇಕು. ಆದಿಂದೂ ಮಾರ್ಗ ತಪಿಸಿಕೊಳ್ಳಬಾರದು. ಸಮಾಜದ ಮೇಲೆ ಮಹತ್ವವು ಪರಿಣಾಮ ಬೀರುವಂತೆ ಲೇಖಕನು ಸದಾ ಜಾಗೃತನಾಗಬೇಕು" ಎಂದು ಹೇಳಿದರು.

"ಆ ಮೇಲೆ, ಸರ್ವ ಶ್ರೀ ಕಲ್ಲೆ ಶಿವೋತ್ತಮರಾವ್, ಎಚ್. ಗಂಗಾಧರಸ್ವಾಮಿ, ಹೆ. ಶ್ರೀಹಟ್ಟಿ, ಜೆ. ಆರ್. ನಂಜುಂಡಗೌಡ, ಪ್ರಾಚಾರ್ಯ ಎಸ್. ನಿ. ಪರಮೇಶ್ವರ ಭಟ್ಟ, ಬಿ. ಎಂ. ಇದಿನಬ್ಬ, ಕವಯತ್ರಿ ಅಂ. ಶ. ನಾಗರತ್ನಮ್ಮ ಎಸ್. ವ

NAVAYUGA 18—12—1969
Registered with the Registrar
of News Papers for India
under No. R. N. 3546/'57

REGD: No: B. G. 176
LICENCE No. 33
Licensed to Post without Prepayment

ಬಿಕ್ಕಟ್ಟಿನ ಹಿನ್ನೆಲೆ

ರಾಷ್ಟ್ರಾಧ್ಯಕ್ಷರ ಚುನಾವಣೆ
ಆಡಳಿತಾಂಗದ ಚಿತಾವಣೆ

ಕಾಂಗ್ರೆಸ್ ಸಂಸ್ಥೆಯು ಕಳೆದ 20 ವರುಷಗಳಿಂದಲೂ ದೇಶದ ಅಹೂ ಕಾಲದ ಪರಿಸ್ಥಿತಿ, ಪ್ರಗತಿ, ಅಶೋತ್ತರಗಳು ಇವಾಗೂ ವಾತಾವರಣಗಳಿಗೆ ಅನುಗುಣವಾಗಿ ಗುನ್ನಡೆಯುತ್ತಾ ಬಂದಿದೆ.

ಆಯಾ ಕಾಲದ ವಸ್ತು ಪರಿಸ್ಥಿತಿಯನು ಪರಿಷ್ಕರಿಸಿದೆ. ಹೊಸ ನೆಪ್ಪರಿನ ಉತ್ಸಾಹಿಗಳು ಸಂಸ್ಥೆಯಲ್ಲಿ ಇವಾಗೂ ಶಾಸಕಾಂಗದಲ್ಲಿ ಸೇರಿಕೊಳ್ಳುತ್ತ ಬಂದಿದ್ದಾರೆ. ಇದರ ಪರಿಣಾಮವಾಗಿ ಅವಡಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸಂಸ್ಥೆಯು ಸಮಾಜವಾದೀ ಪ್ರಜಾಸತ್ತೆಯೇ ಗುರಿಯೆಂದು ಘೋಷಿಸಿತು. ಬಹುಜನ ಹಿತವೇ ದೇಶದ ಹಿತವೆಂಬ ನಾರಿತು. ಜನ ಸಾಮಾನ್ಯರ ಏಳಿಗೆಗಾಗಿ, ಕೃಷಿ, ಕೈಗಾರಿಕ, ಬಡವ ಮಧ್ಯಾಜನತೆಯ ಉತ್ಕರ್ಷಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸತೊಡಗಿತು.

ಈ ಗುರಿ ಸಾಧನೆಯಲ್ಲಿ ಕಾಂಗ್ರೆಸ್ ಎಂದೂ ವಿಚಲಿತವಾಗಿಲ್ಲಲ್ಲ: ಅದರ ಹೊರೆ ಜೋಡ್ಡದು. ಅದು ದೇಶದ ಸ್ವಾತಂತ್ರ್ಯ ಸಾಧನಿ, ಪ್ರಜಾಸತ್ತೆ ರೂಪಿಸಿ ಎಲ್ಲ ಜನ್ನ ಪ್ರತಿನಿಧಿಸುವ ಸಂಸ್ಥೆ ಉಳ್ಳವರನ್ನು ಇಲ್ಲದವರನ್ನು ಅದು ಹೊಂದಿಕೊಂಡು ನಿಂದಿನ್ನಿ, ಸೌಹಾರ್ದತೆ ಮೂಡಿಸಿ ಮುನ್ನಡೆಸಬೇಕಾಗಿದೆ. ಎಂತಲೇ ಹಿಂಸೆ, ಬಿಕ್ಕಟ್ಟು ಘರ್ಷಣೆಗಳಿಗೆ ಎಡೆ ಕೊಡದ, ಇದು ಗಟಿಸಂಧಾನಕ್ಕಾಗಿ ಶ್ರಮಿಸಬೇಕಾಗಿದೆ. ಮಂದಗಾಮಿಗಳನ್ನು ಮುನ್ನಡೆಸಿ, ತೀವ್ರಗಾಮಿಗಳನ್ನು ತಡೆಹಿಡಿದು ಇಬ್ಬರನ್ನೂ ಜತೆಗೂಡಿಸಿಕೊಂಡು ಸಾಗಬೇಕಾಗಿದೆ. ಇಂತಹ ಹೊಣೆಯ ಹೊರಿ ಹೊತ್ತವರಿಗೇ ಅಂವಾದೀತೆಂ.

ಮುಂದೆ ಭುವನೇಶ್ವರದಲ್ಲಿ ನಡೆದ ಅಧಿವೇಶನದಲ್ಲಿ ನಡೆದ ಕಾಂಗ್ರೆಸ್ ಸಂಸ್ಥೆ ಇನ್ನು ಒಂದು ಹೆಜ್ಜೆ ಮುನ್ನಡೆಯಿತು. ಸಮಾಜವಾದೀ ಸಮಾಜ ಸ್ಥಾಪನೆಯ ತನ್ನ ಗುರಿಯತ್ತ ಇನ್ನೂ ಶೀಘ್ರವಾಗಿ ನಡೆಯಲು ನಿರ್ಧರಿಸಿತು. 1967ರ ಜೂನ್‌ಫಲ್ಲಿ ದೆಹಲಿ ಎ. ಐ. ಸಿ. ಸಿ. ಸಭೆಯಲ್ಲಿ ಹತ್ತು ಅಂಶಗಳ ಕಾರ್ಯಕ್ರಮ ಪಕಸನು ರೂಪಿಸಿ, ಅವುಗಳನ್ನು ಕಾರ್ಯರೂಪಕ್ಕೆ ಮೂಡುವಂತೆ ಶಾಸನಾಂಗಕ್ಕೆ ಸೂಚಿಸಿತು. ಶಾಸನಾಂಗವೂ ಈ ಬಗೆಗೆ ಸೂಕ್ತಕ್ರಮ ಕೈಕೊಳ್ಳಲು ಮುಂದಾದರೂ, ಏ ನಡೆ ನಿಧಾನವಾಯಿತು ಎಂಬುದು ನಿಜ. ಆದರೆ, ಅಂತಹ ನಿಧಾನತೆಗೆ ಆಡಳಿತ ವರ್ಗವಹಿಸಿ ನಡೆಸುತ್ತಿರುವ ಶಾಸಕಾಂಗವೇ ಕಾರಣವಲ್ಲದೆ, ಕಾಂಗ್ರೆಸ್ ಸಂಸ್ಥೆಯಾಗಲೀ, ಸಂಸ್ಥೆಯ ನಾಯಕರಿಂದಲೀ ಕಾರಣವಲ್ಲ. ಸಂಸ್ಥೆಯು ಸದೇ ಸದೇ ಈ ಬಗೆಗೆ ಒತ್ತಾಯ ಮಾಡುತ್ತ ಇಂದಿದೆ.

ಅಖಿಲಭಾರತ ಕಾಂಗ್ರೆಸ್ ಹಾಗೂ ವಿವಿಧ ಪ್ರದೇಶ ಕಾಂಗ್ರೆಸ್ ಸಂಸ್ಥೆಗಳೂ, ಲಕ್ಷಾಂತರ ಕಾಂಗ್ರೆಸ್ ಕಾರ್ಯಕರ್ತರೂ, ಹತ್ತೂ ಅಂಶಗಳ ಕಾರ್ಯಕ್ರಮಗಳನ್ನು ಕಾರ್ಯಗತಗೆ ಮಾಡುವಂತೆ ಒತ್ತಾಯಿಸುತ್ತಲೇ ಇದ್ದಾರೆ. ಆದರೆ ಅಧಿಕಾರ ದೊರೆತೊಡನೆ ಶಾಸಕಾಂಗ ಈ ಕಡೆಗೆ ಕೊಡಬೇಕಾಗಿದ್ದಷ್ಟು ಗಮನ ಕೊಡಲಿಲ್ಲವಾಗಿ, ಕಾಂಗ್ರೆಸ್ ಕಾರ್ಯಕರ್ತರೂ ಜನತೆಯು ಬಹುವಿಧ ಟೀಕೆಗಳನ್ನು ಇದಿರಿಸಬೇಕಾಯಿತು.

ಅವಡಿ ಅಧಿವೇಶನದಿಂದ ತೊಡಗಿ ಫರಿದಾಬಾದ್ ಅಧಿವೇಶನದವರೆಗೂ ಕಾಂಗ್ರೆಸ್ ನಾಯಕರು ಸಮೂಹವಾದಿ ಪ್ರಜಾಸತ್ತಾತ್ಮಕ ಸಮಾಜ ಸಾಧನೆಯ ಹಾದಿಯಲ್ಲಿ ಮುನ್ನಡೆಯಲು ಆಡಳಿತಾಂಗಕ್ಕೆ ಕರೆ ನೀಡಿದ್ದಾರೆ, ಎಚ್ಚರಿಕೆ ಇತ್ತಿದ್ದಾರೆ.

ಈ ಒತ್ತಾಯದ ಪರಿಣಾಮವಾಗಿ ಖಾಸಗಿ ವಾಣಿಜ್ಯ ಬ್ಯಾಂಕುಗಳ ಮೇಲೆ ಸಮಾಜದ ಹತೋಟಿ ರೂಪಿಸಲಾಯಿತು. ಬ್ಯಾಂಕುಗಳು ಬಹುಜನ ಸಮುದಾಯಕ್ಕೆ ನೇರ ಸಲ್ಲಿಸುವಂತೆ ಒತ್ತಾಯ ಪಡಿಸಲಾಯಿತು. ರಾಜಧನ ರದ್ದುಗೊಳಿಸುವಲ್ಲಿ ಪ್ರಯತ್ನ ನಡೆಯಿತು. ಭೂಸುಧಾರಣೆಯ ಶಾಸನಗಳು ಬಂದವು. ಆದರೂ, ಈ ನಡೆ ತೀರಾ ನಿಧಾನವಾಗಿತ್ತು, ಅಪೂರ್ಣ ಮನಸ್ಸಿನದಾಗಿತ್ತ್, ಅಷ್ಟಾಸಕ್ತಿಯದಾಗಿತ್ತು.

ಜನತೆ ಕಾಂಗ್ರೆಸ್ ಆಡಳಿತೆಗಳ ಬಗೆಗೆ ಅತೃಪ್ತರಾದರು. ಈ ಅತೃಪ್ತಿಯು ಪರಿಣಾಮ ಕಾಂಗ್ರೆಸ್ ಸಂಸ್ಥೆಯು ಸೋಲೂ ಆಯಿತು. ಆದರೆ, ಇಷ್ಟರೆ ಆಡಳಿತಾಂಗದ ಮೇಲೆ ತೋರುತ್ತಿರುವ ಅತೃಪ್ತಿಗೆ ಕಾರಣವಾದ ಪ್ರಶ್ನೆಗಳನ್ನು ಬಗೆಹರಿಸಲು ಆಡಳಿತಾಂಗ ಮುಂದಾಗುವ ಬದಲು ಅಡ್ಡ ಹಾದಿ ಹಿಡಿಯಿತು.

ಒಂದೆಡೆ— ಸಮೂಹವಾದೀ ಸಮೂಹ ರಚನೆಯ ಹಾದಿಯಲ್ಲಿ ಮುನ್ನಡೆಯುವಂತೆ ಪ್ರೇರೇಪಿಸುತ್ತಿರುವ ಜನತೆ, ಒತ್ತಾಯಿಸುತ್ತಿರುವ ಶಾಸಕಾಂಗದಲ್ಲಿನ ಪ್ರಗತಿಗಾಮಿಗಳು, ಮುನ್ನಡೆಯಲು ಎಚ್ಚರಿಸುತ್ತಿರುವ ಕಾಂಗ್ರೆಸ್ ಸಂಸ್ಥೆ ಹಾಗೂ ಕಾಂಗ್ರೆಸ್ಸಿಗರು, ಇನ್ನೊಂದೆಡೆಯಿಂದ ಮುನ್ನಡೆಯದಂತೆ ತಡೆಯುವ ಪಟ್ಟಭದ್ರರು, ಸ್ವಹಿತಸಾಧಕರು, ಬೆಂಬಲಿಗರು ಹಾಗೂ ಆಡಳಿತಶಾಹಿ, ಈ ನಡುವೆ ನಿಲ್ಕೆಕೊಂಡ ಪ್ರಧಾನಿಯೂ, ಕೆಲವು ರಾಜ್ಯಗಳ ಮುಖ್ಯಮಂತ್ರಿಗಳೂ ತಮ್ಮ ಸೀಲಿನ ಒತ್ತಡವನ್ನು ಕಾಂಗ್ರೆಸ್ ಸಂಸ್ಥೆಯ ಮೇಲೆ ತರುಗಿಸಲು ಯತ್ನಿಸಿದರು.

ಇದರ ಪರಿಣಾಮವೇ ಶಾಸಕಾಂಗ ಮತ್ತು ಪಕ್ಷಗಳೊಳಗಣ ಘರ್ಷಣೆ. ಪ್ರಧಾನಿ ಮತ್ತು ಕೆಲವು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ ಸಂಸ್ಥೆಯ ನಡುವಿನ ನಾಯಕರೊಳಗಿನ ಭಿನ್ನಾಭಿಪ್ರಾಯ.

ಈ ಕಾರಣದಿಂದ ತನ್ನ ಮಂತ್ರಿಮಂಡಲದಲ್ಲಿ ಚರ್ಚಿಸಿ ನಿರ್ಧರಿಸಬೇಕಾಗಿದ್ದ ಆರ್ಥಿಕ ಕಾರ್ಯಕ್ರಮಗಳನ್ನು ಪ್ರಧಾನಿ ಇಂದಿರಾಗಾಂಧಿ ಬೆಂಗಳೂರು ಎ. ಐ. ಸಿ. ಸಿ. ಅಧಿವೇಶನದ ಮುಂದೆ ತಂದರು. ತಾವು ಘೋಷಿಸಬೇಕಾಗಿದ್ದ ಹೊಣೆಗಾರಿಕೆಯನ್ನು ಸಂಸ್ಥೆಯ ಬೆಲೆ ಹೊರಿಸಿದರು. ತನ್ನ ತಪ್ಪನ್ನು ಸಂಸ್ಥೆಯ ನಾಯಕರ ಮೇಲೆ ಹೇರಿಸಿದರು.

ಕಾಂಗ್ರೆಸ್ ಮಹಾ ನಾಯಕರು ಈ ಆರ್ಥಿಕ ಕಾರ್ಯಕ್ರಮಗಳ ಬಗೆಗೆ ಪರಿಶೀಲಿಸಿ ಅದನ್ನು ಕಾರ್ಯಗತ ಮಾಡುವ ಅಧಿಕಾರವನ್ನು ಪ್ರಧಾನಿಗೆ ಮತ್ತೊಮ್ಮೆ ಒಪ್ಪಿಸಿದರು.

ಆದರೆ, ಸಂಸ್ಥೆಯ ನಾಯಕರೇ ತನ್ನ ಮುನ್ನಡೆಗೆ, ಪ್ರಗತಿಕರ ಧೋರಣೆಗೆ ಅಡ್ಡಿಯಾಗಿದ್ದಾರೆ ಎಂದು ತೋರಿಸುವ ಪ್ರಧಾನಿಯ ಪ್ರಯತ್ನ ಸಫಲವಾಗಲಿಲ್ಲ. ಆದುದರಿಂದ ಅವರು ಹೊಸ ಉಪಾಯ ಹುಡುಕಬೇಕಾಯಿತ.

ಎಂತಲೇ ಒಂದರ ಹಿಂದೊಂದು ಅಹಿತಕರ ಘಟನೆಗಳು ಆರಂಭವಾದವು.

ತಾವು ಒಪ್ಪಿ, ಬೆಂಬಲ ನೀಡಿದ ಶ್ರೀ ಫಕ್ರುದ್ದೀನ್ ಅಲಿ ಅಹಮ್ಮದ್ ಮತ್ತು ಶ್ರೀ ಜಗಜೀವನರಾಮ್ ಇವರನ್ನು ಕಟ್ಟೆದರು, ಇವರಿಂದ ಕಾಂಗ್ರೆಸ್ ಸಂಸ್ಥೆಯಲ್ಲಿನ ಹಲವರು ಮತ್ತು ಮುಸ್ಲಿಮರ ಮತವನ್ನು ಶ್ರೀ ಗಿರಿಯವರಿಗೆ ಕೊಡಿಸುವ ತಂತ್ರ ಹೆಡೆಯಿತು, ಈ ಕತೆಯನ್ನೇ ಪ್ರಧಾನಿಯೂ ಹೇಳಿದರು.

"ಮನಸ್ಸಾಕ್ಷಿ"ಗೆ ತಕ್ಕಂತೆ ಮತ ನೀಡುವ ಹಕ್ಕು ಸದಸ್ಯರಿಗಿನೆ ಎಂಬ ವಾದ ಹೂಡಿ, "ಮನಸ್ಸಾಕ್ಷಿ"ಯ ಸೋಗಿನಲ್ಲಿ ಸ್ವೇಚ್ಛಾ ಪ್ರವೃತ್ತಿ ಬೆಳೆದು ಸದಸ್ಯರು ಶಿಸ್ತುಮೀರಿ ವರ್ತಿಸಲು ಪ್ರಧಾನಿ ಕಾರಣರಾದರು. ಕಾಂಗ್ರೆಸ್ ಮಹಾ ಸಂಸ್ಥೆಯ ತಪ್ಪ ಹಾಗೂ ಕೀರ್ತಿಯನ್ನು ಧಿಕ್ಕರಿಸಿದರು.

ಪ್ರಧಾನಿಯಾಗಿ ಕಾಂಗ್ರೆಸ್‌ನ ಲಂಸತ್ ಸದಸ್ಯರಿಗೂ ವಿಧಾನ ಸಭಾ ಸದಸ್ಯರಿಗೂ ಆದೇಶ ಕಳುಹಿಸಿದರು. ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಗೇ ಅವರು ಮತ ನೀಡುವಂತೆ ಪಕ್ಷಾದೇಶಕ್ಕೆ ಎಂಬ ಕಾಂಗ್ರೆಸ್ ಅಧ್ಯಕ್ಷರ ಮನವಿಯನ್ನು ಪ್ರಧಾನಿ ಧಿಕ್ಕರಿಸಿ, ತನ್ನ ಪಾಲಿನ ಕರ್ತವ್ಯ ನಿರ್ವಹಿಸಲು ನಿರಾಕರಿಸಿದರು. ಈ ಮೂಲಕ ತಾನೇ ಕಾಂಗ್ರೆಸ್ ವಿರೋಧಿ ಎಂಬುದನ್ನು ತೋರಿಸಿಕೊಟ್ಟರು.

ಪರಿಣಾಮವಾಗಿ ದೇಶದಾದ್ಯಂತ ಕಾಂಗ್ರೆಸ್‌ನಲ್ಲಿ ಬಿರುಕು ಉಂಟಾಯಿತು. ಕಾಂಗ್ರೆಸಿಗರೇ ಕಮ್ಯುನಿಸ್ಟ್ ಅಭ್ಯರ್ಥಿಗೆ ಮತಹಾಕಿದರು. ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯನ್ನು ಕಾಂಗ್ರೆಸಿಗರೇ ಸೋಲಿಸಿದರು. —ವಾರ್ತೆ

Edited, Printed & Published by K. H. Shetty at the Navayuga Press, Udipi, S. India.

ನವಯುಗ

NAVAYUGA 25—12—1969 ಸಂಪುಟ 49 ಸಂಚಿಕೆ 17

ಆನಂದ ಭವನದ ಜೀವನ ದುರಂತ

ಸಂಗ್ರಾಹಕ ಪಂಡಿತ್ ಬಿ. ಲಕ್ಷ್ಮಣದೇವ ವಿದ್ಯಾರ್ಥಿ, ಶ್ರೀನಿವಾಸನಗರ.

ಪ್ರಯಾಗ ಅಲ್ಲಾಬಾದಿನಲ್ಲಿ ಕೋಧಾರ್ಮಾವಗಿ ಕಂಗೊಳಿಸುತ್ತಿರುವ "ಆನಂದ ಭವನ" ನೆಹರು ಪರಿವಾರದ ಅತಿ ದೊಡ್ಡ ಸಂದತ್ತು. ಇದರ ಒಂದು ವಿಭಾಗವನ್ನು ದಿವಂಗತ ಪಂಡಿತ ಮೋತಿಲಾಲ್ ನೆಹರೂರವರ ಜೀವಿತ ಕಾಲದಲ್ಲಿಯೇ ರಾಷ್ಟ್ರಕ್ಕೆ ಸಮರ್ಪಿಸಲ್ಪಟ್ಟು ಅದು "ಸ್ವರಾಜ್ಯ ಭವನ"ವಾಗಿ ಪ್ರಸಿದ್ಧಿ ಪಡೆದಿದೆ. ಉಳಿದ ಭಾಗ "ಆನಂದ ಭವನ" ರೂಪದಲ್ಲಿ ಈಗ "ರಾಷ್ಟ್ರೀಯ ಸಂಪತ್ತು" ಎಂದು ನೆಹರೂ ಪುತ್ರಿಯಂತೆ ಸಮರ್ಪಣೆಯಾಯಿತು. ಪಂಡಿತ ಜವಾಹರಲಾಲ್ ನೆಹರೂರವರು ಹುಟ್ಟು ವರ್ಷದ ಬಾಲಕರಾಗಿದ್ದಾಗ ಮೋತಿಲಾಲರು ಆನಂದ ಭವನವನ್ನು "ರಾಯ್ ಸೈಯ್ಯದ್" ಅಹಮದ್ ಎಂಬವರಿಂದ ಪ್ರಥಮ ಪಡೆಕೊಂಡಿದ್ದ ಸಮಯ (ಬ್ರಿಟಿಷರ ಶಾಸನ ಭಾರತದಲ್ಲಿ ಬಲವಾಗಿ ಬೇರು ಬಿಟ್ಟುಕೊಂಡಿದ್ದ ಸೈಯ್ಯದ್ ಅಹಮದ್‌ರವರು ನಿರಂತರ ಪರಿಶ್ರಮದಿಂದ ಬ್ರಿಟಿಷ್ ಸರ್ಕಾರದ ವಿಶ್ವಾಸಪಾತ್ರರಾಗಿ ಈ ಕಟ್ಟಡವನ್ನು ಪ್ರಯಾಗದ ವಿಶಾಲ ಪ್ರದೇಶ ಬ್ರಿಟಿಷರಿಂದ ಉಚಿತವಾಗಿ ಕೊಡಲ್ಪಟ್ಟಿದ್ದು ಎಂಬ ಪ್ರತಿಯಾಗಿ ಕಂಡು ಬಂದಿದೆ)

ಪ್ರಯಾಗದ ಆನಂದ ಭವನ ಕಟ್ಟಿರುವ ಸ್ಥಳ ಬಹಳ ಪವಿತ್ರವಾದದು ಶ್ರೀರಾಮಚಂದ್ರನು ಹದಿನಾಲ್ಕು ವರ್ಷ ವನವಾಸ ಮುಗಿಸಿ ಅಂದಿರುಗಿ ಬಂದಾಗ ತನ್ನ ಪ್ರಿಯ ಸಹೋದರ ಭರತನಿಗೆ ಇದೇ ಸ್ಥಳದಲ್ಲಿ ಪ್ರಥಮ ಸಂದರ್ಶನ ನೀಡಿದ್ದನೆಂಬ ಐತಿಹ್ಯವಿದೆ. ಇದಕ್ಕೆ ಸಮರ್ಥನೆಯಾಗಿ ಭಾರದ್ವಾಜ ಆಶ್ರಮವೂ ಇದೆ. ಭಾರದ್ವಾಜ ಮಹರ್ಷಿಯು ಕಾಲದಲ್ಲಿ ಇಲ್ಲಿ ಒಂದು ದೊಡ್ಡ ಗುರುಕುಲ ವಿಶ್ವವಿದ್ಯಾಲಯವಿತ್ತು ಇಂದಿಗೂ ಅದು ಒಂದು ತೀರ್ಥಸ್ಥಾನವಾಗಿ ರೂಪಾಂತರಗೊಂಡಿದೆ. ಈಗ "ಆನಂದ ಭವನ" ಮತ್ತು ಇದರ ಮಗ್ಗುಲಲ್ಲಿರುವ "ಸ್ವರಾಜ್ಯ ಭವನ" ನ್ನು ರಾಷ್ಟ್ರೀಯ ತೀರ್ಥಸ್ಥಾನಗಳಾಗಿವೆ. ಪ್ರಯಾಗಕ್ಕೆ (ಅಲ್ಲಾಬಾದಿಗೆ) ಹೋಗುವ ಪ್ರವಾಸಿಕರು, ಪ್ರವಾಸಿಕರು ನೆಹರೂ ಪರಿವಾರದ ಮೂಲ ನಿವಾಸಸ್ಥಾನವಾದ ಈ ವಿಶಾಲ ಸ್ಥಳವನ್ನು ಸಂದರ್ಶಿಸದೆ ಹಿಂದಿರುಗುವುದಿಲ್ಲ

ಪಂಡಿತ ಮೋತಿಲಾಲ್ ನೆಹರೂರವರು ಬದುಕಿರುವಾಗಲೆಲ್ಲ ತ್ರಿವೇಣಿ ಸಂಗಮದಲ್ಲಿ ತೀರ್ಥಸ್ನಾನಕ್ಕಾಗಿ ಬರುತ್ತಿದ್ದ ಯಾತ್ರಿಕರು ಗುಂಪು ಗುಂಪಾಗಿ ಈ ವಾಸ್ತುಶಿಲ್ಪವನ್ನು ನೋಡಲಿಕ್ಕೆ ಬಂದಿರುತ್ತಿದ್ದರು, ವಸ್ತು ಇದರ ವಿಶಾಲ ಬಯಲಲ್ಲಿ ಬೀಡುಬಿಡುತ್ತಿದ್ದರು. ನೆಹರೂ ಪಿತಾಪುತ್ರರ ಬಗ್ಗೆ ಲಾಭದಿಂದ ಕೃತಿ ಹೊಂದಿದ್ದರು. ಆನಂದ ಭವನ ಸಾಕಷ್ಟು ಉದ್ದಗಲವುಳ್ಳ ವಿಶಾಲ ಭವನ. ಇದರ ನಾಲ್ಕು ಸುತ್ತಲೂ ವಿಶಾಲವಾದ ಕೋಣೆಗಳಿಗೆ ಎರಡು ಬದಿಗಳಲ್ಲಿ ಭವ್ಯವಾದ ಉದ್ಯಾನ. ಒಂದು ಬದಿಯಲ್ಲಿ ದೊಡ್ಡ ಪ್ರಾಂಗಣ. ಪಿಟಿಯಲ್ಲಿ ಹಣ್ಣು ಪಪಲುಗಳ ತೋಟ. ಅದಕ್ಕೆ ತಾಗಿ ಮತ್ತೊಂದು ಪ್ರಾಂಗಣ ಇದರಲ್ಲಿ ಬೇಸಿಗೆ ಕಾಲಕ್ಕನುಕೂಲವಾದ ಕೊಠಡಿಗಳು ಮತ್ತು ಟೆನ್ನಿಸ್ ಆಟದ ಬಯಲು ಇತ್ತು. ಕಾಲಾನಂತರ ದೊಡ್ಡ ಭವನದ ನಿರ್ಮಾಣಕ್ಕಾಗಿ ಇತ್ತಳಗಳನ್ನು ಕೆತ್ತಿಸಿಗೆ ಎಲೆಯಿಸಲು, ಕಾದಿರಿಸಿದ್ದ ಸಾಮಾಗ್ರಿಗಳನ್ನು ಸಂಗ್ರಹಿಸಿಟ್ಟಿದ್ದ ಮೋತಿಲಾಲರು ಇಲ್ಲಿ ಒಂದು ದೊಡ್ಡ ಕಾದಿರಿಸಿಯವನ್ನೂ ಕಟ್ಟಿಸಿದ್ದಿರು.

ಪಂ ಜವಾಹರಲಾಲರು ತಮ್ಮ ತಂಗಿ ಸ್ವರೂಪ ಕಾಶೂರಿ (ವಿಜಯ ಲಕ್ಷ್ಮಿ), ಕೃಷ್ಣಾ ನೆಹರು, ಇಂದಿರಾ ಇವರೆಲ್ಲರೂ ಇದೇ ಭವನದಲ್ಲಿ ಹುಟ್ಟಿ ಬೆಳೆದು ದೊಡ್ಡವರಾದವರು ನಹರು ಮನೆತನ ಸ್ವಾತಂತ್ರ್ಯ ಸಂಗ್ರಾಮ ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದುದರಿಂದಾಗಿ ಈ ಭವನವು ರಾಷ್ಟ್ರೀಯ ಚಟುವಟಿಕೆಯ ಪ್ರಮುಖ ಕೇಂದ್ರವೆನಿಸಿತು. ಮಹಾತ್ಮಾ ಗಾಂಧಿಯವರು ಇಲ್ಲಿಗೆ ಸದಾ ಭೇಟಿ ಕೊಡುತ್ತಲೇ ಇರುತ್ತಿದ್ದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯಾಲಯವೂ ದೀರ್ಘ ಕಾಲದವರೆಗೆ ಈ ಭವನದಲ್ಲಿತ್ತು. ಪ್ರಥಮ ಸಲ ತಾ 9 ದಶಂಬರ 1921 ರಂದು ಮೋತಿಲಾಲ್ ನೆಹರೂ ಪತ್ನಿ ಮತ್ತು ಅವರ ಸುಪುತ್ರ ಜವಾಹರಲಾಲ್ ನೆಹರೂರವರನ್ನೂ ಒಂಭತ್ತುವುದಕ್ಕೆಗ್ಗಿಸಿ ಹೋಲಿ. ಸುದಲ ಆನಂದ ಭವನದ ಅಂಗಳಕ್ಕೆ ಬಂದಿಳಿದ ಪಂಡಿತ ಜವಾಹರಲಾಲರು ಮತ್ತು ಮಹಾತ್ಮಗಾರ್ಪಣಿ ಸಂ. ಮೋತಿಲಾಲ ನೆಹರೂರವರೆ ಮುಂತಾದ ಈ ಭವನದೊಳಗೆ ಸರಾಗವಾಗಿ ಪ್ರವೇಶಿಸಲಿಕ್ಕೆ ಧೈರ್ಯಗೂ ಧೈರ್ಯ ಒದಗಿರಿಸಿರಲ್ಲಿ. 1921ರಲ್ಲಿ "ಪ್ರಿನ್ಸ್ ಆಫ್ ವೇಲ್ಸ್"ರವರ ಆಗಮನ ನವಾಯಿತ್ತು, ಪೂರ್ವ ನಿರ್ಧಾರಿತ ಕಾರ್ಯಕ್ರಮವದಂತೆ ಅವರು ಅಲಹಾಬಾದಿಗೆ ಬರುವವರಿದ್ದರು ಆಗ ಕಲೆಕ್ಟರು ಜಿಲ್ಲಾ ಮೇಜಿಸ್ಟ್ರೇಟರವರು ಮೋತಿಲಾಲರವರ ಹೆಸರಿಗೆ ಒಂದು ಪತ್ರ ಬರೆದು ಅದರಲ್ಲಿ "ಪ್ರಸ್ತಾವಿತ ಸಮಾರಂಭದ ವರೆಗೆ ಆನಂದ ಭವನದ ಮಹಾದ್ವಾರವನ್ನು ಮುಚ್ಚಿಡಬೇಕು, ಮತ್ತು ಅಲ್ಲಿಗೆ (ಮೋತಿಲಾಲರ ಬಳಿಗೆ) ಬರುವವರು ಹರು ವಿಳಾಸಗಳನ್ನು ಮುಂದಾಗಿ ಕಳುಹಿಸಿ ಕೊಡಬೇಕು" ಎಂಬ ಷರತ್ತಿಗೆ ಒಳಪಡಬೇಕು" ಎಂಬ ವಾಗಿ ಶರತ್ತುಬದ್ಧವಾಗಿ ಕೇಳಿಕೊಂಡಿದ್ದರು. ಈ ಷರತ್ತಿಗೆ ಪ್ರತ್ಯುತ್ತರವಾಗಿ ಮೋತಿಲಾಲರು "ನನ್ನ ಮನೆಯು ವೈಲೆ ಈ ರೀತಿ ಅಧಿಕಾರ ಚಲಾಯಿಸುವ ಯಾವ ಹಕ್ಕು ಕಾನೂನೆ ಕಾಯಿದೆ ಗನುಸಾರವಾಗಿ ಮ್ಯೂನಿಸ್ಪಲ್ಟಿಗೆ ಸ್ವಲ್ಪವೂ ಇಲ್ಲವೆಂದಿಲ್ಲ ನನ್ನ ಅಸ್ತಿತ್ವಂ ಪತ್ರನ್ನ ನನಗೆ ಬೇಕಾದಂತೆ ಉಪಯೋಗಿಸಿಕೊಳ್ಳುವ ಹೂರ್ಣ ಹಕ್ಕು ಬಾಧ್ಯತೆ ನನಗಿದೆ, ಅದರ ಉಪಯೋಗವನ್ನು ನಾನು ಕಾನೂನು ಬದ್ಧವಾಗಿ ಮಾಡಲಿಕ್ಕೆ ಬದ್ಧನಾಗಿರುತ್ತೇನೆ, ಸರಂಶ ಒಬ್ಬ ನ್ಯಾಯ ಬದ್ಧ ಪಾಗೂ ನಿಷ್ಕರ್ಷಂತ ಆ ಸಹಯೋಗಿಯು ತಲೆಕುಳ್ಳಿ ನಾನು ಸರಕಾರಕ್ಕೆ ಇಷ್ಟೊಂದು ಭೂರವಸೆಯನ್ನು ಖಂಡಿತವಾಗಿ ಈ ಮೂಲಕ ಕೊಡುತ್ತೇನೆ, ಪ್ರಿನ್ಸ್‌ಲರ್ ವೇಲ್ಸ್‌ರವರು ಅಲಹಾಬಾದಿನಲ್ಲಿರುವಷ್ಟು ಸಮಯು ಅವರಿಗೆ ಯಾವ ವಿಧದಲ್ಲಿಯೂ ವಿಘ್ನ ಯಾ ಬಾಧಕವಾಗದಂತೆ ಚೆನ್ನಾಗಿ ನೋಡಿಕೊಳ್ಳಲಾಗುವುದು" ಎಂಬುದಾಗಿ ಸ್ಪಷ್ಟವಾಗಿ ಬರೆದ ಪತ್ರ ಹಿಸಿದರು. ಇಷ್ಟೊಂದು ಉದಾರ ಹಾಗೂ ನಿಷ್ಕಾಪಣಾಕರವಾದ ಪತ್ರಕ್ಕೆ ಕಾರಣರಾದ ಪರಮ್ಯರದ ರೂಪದಲ್ಲಿನ ತಿಲಾಲ ನೆಹರೂರವರನ್ನು ದಸ್ತಗಿರಿ ಮಾಡಿತು. ಆನಂದ ಭವನದ ಮಾಲೀಕರೊಳಗೆ ಮೋತಿಲಾಲ್ ಪ್ರವೇಶಿಸಿ ಇದೇ ಘಟನೆ ಪ್ರಥಮ ಸಾರಿ ಪರಿಣಮಿಸಿತು.

ಆನಂದ ಭವನದೊಳಗೆ ಮೋತಿಲಾಲರ ಸ್ವಾಧೀನದಲ್ಲಿ ನೆಹರು ಪರಿವಾರದ ಹಿರಿಯ ಸೊಸೆಯರು ಅತ್ಯಂತ ಕ್ಲೇಶದಿಂದ ಜೀವನ ಸಾಗಿಸಿದರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮೋತಿಲಾಲರ ಒಳಗೆ ಇರಿಸಿದಂತೆ ಅವರ ಸೊಸೆಯಂದಿರು ಹೊರಗೆ ಹೆಜ್ಜೆ ಇಡುವಂತಿರಲಿಲ್ಲ. ಅವರು ಹೊರಗೆ ಹೋಗಬೇಕಾದರೆ ಮೋತಿಲಾಲರ ಅನುಮತಿ ಪಡೆಯಬೇಕಾಗಿತ್ತು. ಅವರ ಸೊಸೆಯಂದಿ

ಭಿಕ್ಷಾಧರ್ಮದ ಸಿದ್ಧಾಂತ

ಲೇಖಕರು : ಶ್ರೀ "ನವಗಿರಿನಂದ"

ಕೊಂಚಣ ದೇವದೊಣಗಿನ ಒಂದು ಹಳ್ಳಿಯಲ್ಲಿ ಒಬ್ಬ ಸಿದ್ಧಾಂತಿಯೆಂಬ ಶ್ರೀಮಂತನು ದಿನಹೋದ ಹಾಗೆ ಬಡವನಾಗುತ್ತಾ ಬಂದನು. ಕಾರಣವೇನೆಂದರೆ ಅವನು ಹುಟ್ಟಾಶ್ರೀಮಂತನಿದ್ದ ಹಾಗೆಯೇ ಹುಟ್ಟಾ ದಾನ ಧರ್ಮ ಸಂಪನ್ನ. ಊರು ಕೇಳಿದರೂ ಇಲ್ಲವೆನ್ನದೆ ಇರುವುದನ್ನು ಕೊಟ್ಟುಬಿಡುತ್ತಿದ್ದನು. ಅದಕ್ಕಾಗಿ ಅವನಿಗೆ ಒಂದಿನವೂ ಚಿಂತೆ ಇರಲಿಲ್ಲ. ಅವನ ಮನೆಮೂರು ಗರ್ವಸ್ವವೂ ದಾನ ಧರ್ಮಗಳಿಗೆ ಬಲಿಯಾಗಿ ಹೋದುವು.

ಅವನ ಹೆಂಡತಿ ಕೂಡ ಅವನ ಗುಣಕ್ಕೆ ವಿರುದ್ಧಳಾಗಿರಲಿಲ್ಲ. ಆದರೆ ಸ್ವಲ್ಪ ಹುಚ್ಚಿನ ಯಂದಾಲೋಚನೆಯವಳಾದುದರಿಂದ, ಗಂಡನ ಗುಣವರಿತ ಅವಳು, ಒಂದು ಚಿನ್ನ ಮನೆಯನ್ನು ಕೊಂಡುಕೊಂಡಿದ್ದಳು. ವಿನೆಯೊಂದಿದ್ದರೆ ದಡಿದು ಬೇಯಿಸಿ ತಿಂದು ಮಲಗಬಹುದೆಂದು ಅವಳ ಯೋಚನೆ.

ಕೊನೆಗೂ ಸಿದ್ಧಾಮನಿಗೆ ಹಾಗೆಯೇ ಆಯಿತು. ಹೆಂಡತಿಯಿಂದಾಗಿ ಮಾಳಿದೋ ಸುರದ ಖಡವನ್ನಾಶ್ರಯಿಸುವುದು ತಪ್ಪಿತು.

ಹೆಂಡತಿಯನ್ನೂ ಎರಡು ಮಕ್ಕಳನ್ನೂ ಪೋಷಿಸುವ ಭಾರ ಅವನಿಗಿತ್ತು. ಆದಕ್ಕಾಗಿ ಸಿದ್ಧಾಮ ಹಡಿದು ಸಂಪಾದಿಸಲು ಸಿದ್ಧನಾದ. ಆದರೆ ಅವನಿಂದ ದುಡಿಸಿಕೊಳ್ಳಲು ಯಾರಿಗೂ ಇಷ್ಟವಿಲ್ಲ. ಅಸಲು ಹುಟ್ಟಾ ಶ್ರೀಮಂತನಾಗಿದ್ದುದರಿಂದ ಯಾವ ಕೆಲಸವೂ ಅವನಿಗೆ ಗೊತ್ತಿರಲಿಲ್ಲ.

ಅವನ ವಿಷಯ ತಿಳಿಯ ಮಾಡಿ ಎಲ್ಲರಿಗೂ ಗೊತ್ತಿತ್ತು. ಎಲ್ಲರೂ ಅವನಿಂದ ಉಪಕಾರ ಪಡೆದವರೇ. ಆದುದರಿಂದ ಅವನು ಕೆಲಸ ಕೇಳಿದರೆ, "ಪಾಪ ಜೀನ್ನಾಗಿ ಬದುಕಿವನು. ಈಗ ಹೀಗಾಯಿತು, ತಕ್ಕೋಪ್ಪ"ಎಂದು ಸುಮ್ಮನೆ ಕಾಸು ಕೊಡುವರು.

"ಸುಮ್ಮನೆ ಬೇಡ ಸ್ವಾಮಿ. ಕೆಲಸ ಮಾಡಿ ಕೂಲಿಯಾಗಿ ತೆಗೆದು ಕೊಳ್ಳುತ್ತೇನೆ" ಎಂದರೆ 'ನೀನು ಸುಮ್ಮನೆ ಎಷ್ಟು ಮಂದಿಗೆ ಕೊಟ್ಟಿಲ್ಲ? ಇರಲಿ ತೆಕ್ಕೋ' ಎನ್ನುವರು.

ಆದರಿಂದ ಸಿದ್ಧಾಮನಿಗೆ ತಾನು ಕೆಲಸಕ್ಕಿಳಿಯುವುದು ವ್ಯರ್ಥವೆನಿಸಿತು. ಕೆಲಸ ಮಾಡದೆ ಪಡೆಯುವ ದಾನವು ಭಿಕ್ಷೆಗೆ ಸಮಾನವೇ. ಹಾಗಾದರೆ ತಾವೀಗ ಭಿಕ್ಷುಕರೆ? ಇನ್ನು ವ್ಯರ್ಥ ಆಭಿಮಾನವೇಕೆ?

ಹೀಗಂದುಕೊಂಡು ಅವನು ಕೆಲಸ ಕೇಳುವುದನ್ನು ಬಿಟ್ಟು 'ಅಯ್ಯೋ, ಧರ್ಮ ಮಾಡಿ' ಎಂದು ಕೈಯೊಡ್ಡ ತೊಡಗಿದನು.

ಇದರಿಂದ ಅವನ ಕೈ ಬೆಗನೇ ತುಂಬಿ ಬಿಡುತ್ತಿತ್ತು. ತನ್ನ ಕಾಟುಂಬದ ಆ ದಿನದ ಕೈ ಎಷ್ಟು ಬೇಕೋ ಅಷ್ಟು ದೊರಕಿದ ಕೂಡಲೇ ತೃಪ್ತಿಯಿಂದ ಮನೆಗೆ ಬರುವನು. "ಇನ್ನೂ ಸ್ವಲ್ಪ ಹೊತ್ತು ತಿರುಗಾಡಿದ್ದರೆ ಇಪ್ಪತ್ತಿಪ್ಪತ್ತು ಸಿಗುತ್ತಿತ್ತು. ಕಾಳಿಗೆ ಸೇರಿಗ ಬಹುದು. ಒಳ್ಳೊಳ್ಳೆಯ ಊಟ ತಿಂಡಿ ಮಾಡಿ ಕೊಳ್ಳಬಹುದು." ಎಂದಳ ಹೆಂಡತಿ.

"ಯಾಗೆ ಮಾಡಿದರೆ ನಾನು ಭಿಕ್ಷುಕನು ಹೇಗಾಗಬೇನು? ಎನ್ನುವಳು ಸಿದ್ಧಾಮ.

ಹೆಂಡತಿಗೂ ಆ ಮಾತು ಫಿಜರೆಫಿಸಿತು. ಸುಮ್ಮನಾದಳು. ಆದರೆ ಅವಳಲ್ಲಿಂದು ಸಂದೇಹ. ದಾನ ಧರ್ಮ ಮಾಡಿದವರಿಗೆ ಒಳ್ಳೆಯ ದಾಗುತ್ತದೆಂದು ಅವಳು ಕೇಳಿದ್ದಳು. ಆದರೆ ತನ್ನ ಗಂಡ ಭಿಕ್ಷುಕನ ಗತಿಗೆ ಇಳಿದಿದ್ದಾನೆ ಹೀಗೇಕೆ?

ಒಂದು ದಿನ ಒಬ್ಬ ಯೋಗಿ ಅವಳ ಮನೆಗೆ ಬಂದಿತು. "ಅಮ್ಮಾ ಹಸಿವೆ. ಏನಾದರೂ ಆಹಾರ ಕೊಡಬಹುದಾ?" ಎಂದು ಕೇಳಿದ. ಅವಳು ಮನೆಯಲ್ಲಿದ್ದ ಸ್ವಲ್ಪ ಗೆಣಸಿನ ಪಲ್ಯವನ್ನೂ ನೀರನ್ನೂ ಅವನ ಮುಂದಿಟ್ಟು "ಸ್ವಾಮಿ ತೆಗೆದುಕೊಳ್ಳಿ, ನಾವೇ ಭಿಕ್ಷುಕರ ಸ್ಥಿತಿಗೆ ಇಳಿದುಬಿಟ್ಟಿದ್ದೇವೆ. ಇದು ನಿಮಗೆ ಭಿಕ್ಷುಬರವಸೆಯ ಭಿಕ್ಷೆ" ಎಂದಳು.

ಆಗಲೇ ಸಿದ್ಧಾಮನೂ ಮನೆಗೆ ಬಂದನು "ಇಕ್ಕೋ, ಇಂದಿನ ಭಿಕ್ಷೇ ಆಸೂ" ಎಂದು ಹೇಳಿ ಹೆಂಡತಿಯು ಕೈಗೆ ದುಡ್ಡಿಗಳನ್ನು ಹಾಕಿದ.

ಹೆಂಡತಿ ಗಂಡನಿಗೂ ಪಲ್ಯ ನೀರು ತಂದಿಟ್ಟಳು.

ಯೋಗಿ ಪಲ್ಯ ತಿಂದ ನೀರು ಕುಡಿದು ತೃಪ್ತಿಯ ತೇದು ಬಿಟ್ಟು, ಸಿದ್ಧಾಮನ ಹೆಂಡತಿಯನ್ನು ನೋಡಿ ಅವಳ ಮನಸ್ಸಿನಲ್ಲಿರುವ ಸಂದೇಹ ತಿಳಿದವನಂತೆ, "ಅಮ್ಮಾ, ದಾನಧರ್ಮದಲನ್ನ ಪಾತ್ರರಿತು ಮಾಡಿದ್ದಿದ್ದರೆ ಬೇಡುವವರಿಗೆ ಯೇ ತಡವಾದರೂ ಬರುತ್ತ. ದಾನ ಪಡೆದವನು ಪೂರ್ಣ ತೃಪ್ತನೂ ಕೃತಜ್ಞನೂ ಆಗಿದ್ದರೆ ಕೊಟ್ಟವನಿಗೆ ಆಕ್ಷಣವಾಗುತ್ತೆ. ಈಗ ಉದ್ಧಾತ್ತನಾದ ನನ್ನನ್ನು ಪೂರ್ಣ ತೃಪ್ತಿಪಡಿಸಿದುದರಿಂದ ನಿಮಗೂ ಅಕ್ಷಯವಾಗಲಿ. ಅದು ಸತ್ಪಾತ್ರ ಧರ್ಮದಿಂದಲೇ ನೆನೆಸಲಿ" ಎಂದು ಹೇಳಿ ಹೊರಟು ಹೋದನು.

ಮರುದಿವಸ ಸಿದ್ಧಾಮನು ಯಾವ ಮನೆಯ ಬಾಗಿಲಿಗೂ ಬರಲಿಲ್ಲ. ಅಂದಿನ ದಿನವು 'ಅಯ್ಯೋ, ಧರ್ಮ' ಎಂದು ಕೈ ಚಾಚಿದನು.

'ಅಂಗಡಿಯವನು ಅವನನ್ನು ನೋಡಿ, "ಏನಾರು? ಸಿದ್ಧಾಮಯ್ಯ! ಏನಪ್ಪಾ ಹೀಗಾಗಿ ಬಿಟ್ಟೆ?" ಎಂದ ಆಶ್ಚರ್ಯದಿಂದ.

"ನೀವಾರೋ ಗೊತ್ತಾಗಲಿಲ್ಲ' ಎಂದ ಸಿದ್ಧಾಮನು ಪಿಳಿಪಿಳಿ ನೋಡ ತ್ತ.

"ನಿನಗೆ ತಿಳಿಯದಿದ್ದರೆ ನಾನು ನಿನ್ನನ್ನು ಮರೆಸುಲು ಸಾಧ್ಯವೆ? ಒಂದು ದಿನ ನಾನು ಈಗ ನೀನಿರುವ ಹಾಗೇ ಇದ್ದೆ. ನಿನ್ನ ತಂದೆ ಕೈಚಾಚಿದೆ. ಒಂದು ಬೆಳ್ಳೀ ನಾಣ್ಯ ನಕ್ಷ ಕೈಗೆ ಹಾಕಿದಿ. ಅಷ್ಟ ನೊಡ್ಡ ಧರ್ಮ ಯಾರೂ ನನಗೆ ಮಾಡಿದ್ದಿಲ್ಲ. ಆ ಬೆಳ್ಳಿ ನಾಣ್ಯವಷ್ಟಕ್ಕೂ ಕಡಲೇ ಬೇಳೆ ಕೊಂಡುಕೊಂಡು ವ್ಯಾಪಾರ ವ್ಯಾರಂಭಿಸಿದೆ. ಲಾಭ ಬಂತು. ಈಗ ಈ ದೊಡ್ಡ ಧಾನ್ಯಗಳ ಅಂಗಡಿಗೇ ಯಜಮಾನನಾದೆ. ನಿಜ ನೋಡಿದರೆ ಇವೆಲ್ಲವೂ ನಿನ್ನದೇ. ಆಗ ನಿನ್ನ ಹೆಸರು ಗೊತ್ತಾಗಿತ್ತೇ ಕೊರತ ನೀನು ಈ ಗತಿಗೆ ಇಳಿದಿರುವ ಸಂಗತಿ ಗೊತ್ತಿರಲಿಲ್ಲ. ದಿನಾ ಬೆಳಗಾಯಿತೆ ನಿನ್ನನ್ನ ನೆನೆಸುತ್ತೇನೆ. ತೆಗೆದುಕೊಳ್ಳಯ್ಯ, ಎಲ್ಲವೂ ನಿನ್ನದೇ" ಎಂದು ಹೇಳಿ ಜಾಡದ ಪೆಟ್ಟಿಗೆಯನ್ನೇ ಅವನ ಮುಂದೆ ತೆರೆದಿಟ್ಟ. ಒಳಗೆ ಹೋಗಿ ಹಣ್ಣು ಹಂಪಲುಗಳನ್ನೆ ತಂದಿಟ್ಟ.

ಸಿದ್ಧಾಮನು ಅವುಗಳನ್ನು ತಿಂದು, 'ನನಗೆ ಈ ಹಣವಾಷ್ಟವೂ ಬೇಡ. ಈ ದಿನ ಕೈ ನಾಲುವಷ್ಟು ಭಿಕ್ಷೆ ಕೊಟ್ಟರೆ ಸಾಕು, ಭಿಕ್ಷುಕ ಅಂದರೆ ಭಿಕ್ಷುಕನಂತೇ ಇರಬೇಕು' ಎಂದ.

ಅಂಗಡಿಯವನು ಒತ್ತಾಯಮಾಡಿದರೂ ಸಿದ್ಧಾಮನು ಹೆಚ್ಚು ತೆಗೆದುಕೊಳ್ಳಲು ಒಪ್ಪಲಿಲ್ಲ 'ನಿಮ್ಮ ಐಶ್ವರ್ಯವು ನಿಮ್ಮಲ್ಲೇ ಹೂರತು ನನ್ನದು ಹೇಗಾದೀತ? ನಿಮ್ಮ ಪ್ರಯತ್ನದಿಂದ ನಿಮ್ಮ ಅದೃಷ್ಟದಿಂದ ನಿಮಗೆ ಐಶ್ವರ್ಯ ಬಂದಿರಬಹುದು. ನಾನು ನಿಮಗೆ ಕೊಟ್ಟದ್ದು ಒಂದೇ ಬೆಳ್ಳಿನಾಣ್ಯ. ಅದರಿಂದ ನೀವು ಲಾಭ ಗಳಿಸಿದರೆ ನನ್ನ ಸಂಬಂಧವೇನಿದೆ? ಒಬ್ಬ ಭಿಕ್ಷುಕನಿಗೆ ಏನು ಕೊಡುವಿರೋ ಅಷ್ಟೇ ಕೊಡಿ, ಸಾಕು' ಎಂದ ಸಿದ್ಧಾಮ.

"ನೀನೇ ತೆಗೆದುಕೊಳ್ಳಿ"

ಸಿದ್ಧಾಮ ಒಂದು ಪಾವಲಿ ತೆಗೆದು ಕೊಂಡನು.

'ನೀನು ಕೊಟ್ಟ ಬೆಳ್ಳಿ ನಾಣ್ಯಕ್ಕಿಂತ ಎರಡು ತೆಗೆದ ಕೊಂಡೆ' ಎನ್ನುತ್ತ ಅಂಗಡಿಯವನ ಒಂದು ಬೆಳ್ಳಿನಾಣ್ಯವನ್ನು ಅವನ ಜೇಬಿಗೆ ಹಾಕಿದನು. ಸಿದ್ಧಾಮನು ಪಾವಲಿಯನ್ನು ಅಂಗಡಿಯವನ ಪೆಟ್ಟಿಗೇ ಯಾಕೆ ಅಲ್ಲಿಂದ ಹೊರಟನು.

"ಇವತ್ತಿನ ಭಿಕ್ಷೆ ಇಡಿಯ ಒಂದು ಬಿಳಿ ವರಾಹ ಒಂದೇ ಕಡೆಯಲ್ಲಿ ಸಿಕ್ಕಿತು. ಎಲ್ಲಾ ಇವತ್ತೇ ಖರ್ಚ ಮಾಡಿಬಿಡು" ಎನ್ನುತ್ತಾ ಜೇಬಿಗೆ ಕೈಹಾಕಿದಾಗ ಜೇಬಿನಲ್ಲಿ ಹೆಚ್ಚು ನಾಣ್ಯಗಳಿರ ವಂತೆ ಗೋಚರಿಸಿ ಎಂದಿತು. ನಾಲ್ಕು ಬೆಳ್ಳಿ ನಾಣ್ಯಗಳು ಅವನ ಕೈಬಿ ಬಂದ್ದು.

"ಇದು ಹೇಗೆ ಬಂತು? ನಾನೇನ್ನು ಕೊಡ್ದೆನೋ? ಅವನು ಹಾಕಿದ್ದು ಒಂದೇ" ಎನ್ನುತ್ತ ಸಿದ್ಧಾಮ ಜೇಬಿಗೆ ಮತ್ತೆ ಕೈ ಹಾಕಿದಾಗ ಮತ್ತೊಂದು ನಾಣ್ಯ ಹಾಗೇ ಜೇಬಿನಲ್ಲಿತ್ತು.

"ನೀವೇಕೆ ಕದಿಯುತೀರಿ? ಹೂರೇ ಹಾಕ್ತಿತ್ತರೆ? ನೋಡಿ, ನನ್ನ ಸೀರೆ ಹರಿದಿದೆ. ಮಕ್ಕಳಿಗೂ ಒಳ್ಳೆಯ ಬಟ್ಟೆ ಇಲ್ಲ. ನಿಮಗೂ ಇಲ್ಲ. ಆದಕ್ಕಾಗಿ ಸ್ವಲ್ಪ ಹೆಚ್ಚು ಬೇಡ ಬೇಕು ಅಂತ ನಿಮ್ಮ ತ್ತರ ಹೇಳಲು ಪೆನಸಿತ್ತಿ ನೀವಾಗೇ ತಂದಿರಿ. ಅಷ್ಟಕ್ಕೆ ಈ ಐದು ವರಹ ಸಾಕು" ಎಂದಳು ಹೆಂಡತಿ.

ಆದರೆ ಜೇಬಿನಿಂದ ಒಂದು ವರಹವೆ ತೆಗೆದರೆ ಜನ್ಮದಿಂದ ವರಾಹ ಸಿದ್ಧವಾಗಿರುತ್ತಿತ್ತು. ಸಿದ್ಧಾಮನಿಗಾದ ಆಶ್ಚರ್ಯಕ್ಕೆ ಕೆಂಡ, ಯೋಗಿ ಜೇಳಿದ ಮಾತನ್ನೂ, ಆಂಗಡಿಯವನ ನಡೆಮುಕೊಂಡ ಬಗೆಯನ್ನೂ ಪೇಳಿಸಿ ಕಮೂಢಾನಿ ಹೇಳಿದಳು. "ಮೊದಲು ಪಾತ್ರಾಪಾತ್ರಗಳ ತಿಳಿಯದೆ ದಾನಮಾಡಿದಿರಿ. ಅಪಾತ್ರ ದಾನಗಳ ಫಲವಾಗಿ ಭಿಕ್ಷೆ ಕನಂಗ ದೇಕಾಯಿತ್ತ. ಅಂಗಡಿಯವನಲಂತಹ ಸತ್ಪಾತ್ರನಿಗೆ ಮಾಡಿದ ದಾನ, ಯೋಗಿ ಕೊಟ್ಟ ವರಹಿಂದಾಗಿ ಈಗ ಆಸ್ಥಾಂವಾಯಿತ. ಇನ್ನು ಮೇಲೆ ಭಿಕ್ಷೆಗೆ ಹೋಗಬೇಡಿ' ಎಂದಳ ಹೆಂಡತಿ.

"ನಿಜ. ಜೇಬಿನಲ್ಲಿ ಬೆಳ್ಳಿ ನಾಣ್ಯವಿರುವಾಗ ಭಿಕ್ಷೆಗೆ ಹೋಗುವುದು ನ್ಯಾಯವೂ ಆಲ್ಲ" ಎಂದ ಸಿದ್ಧಾಮ.

ಅಂದಿನಿಂದ ಅವನು ಭಿಕ್ಷುಕನಲ್ಲ. ಅವನ ಜೇಬಿನಲ್ಲಿ ಯಾವಾಗಲೂ ಒಂದು ಬೆಳ್ಳಿ ನಾಣ್ಯವಿದ್ದೇ ಇರುತ್ತಿತ್ತು. ವೆಂಕಟಲಿನಂತೆ ದಾನ ಧರ್ಮಗಳನ್ನೂ ಮಾಡುತ್ತಿದ್ದ. ಆದರೆ ಅವನಿಂದ ಅಪಾತ್ರ ದಾನವಾಗದಂತೆ ಅವನ ಜೇಬೇ ಜಾಗ್ರತೆ ತೆಗೆದುಕೊಳ್ಳುತ್ತಿತ್ತು. ದಾನ ಕೇಳಿದವರು ಸತ್ಪಾತ್ರದವರಾದರೆ ಮಾತ್ರ ಆ ಜೇಬಿನಲ್ಲಿ ನಾಣ್ಯ ಸಿಗುತ್ತಿತ್ತು. ಅಪಾತ್ರರಾದರೆ ಆ ಜೇಬು ಖಾಲಿಯೇ. 'ಇಲ್ಲ' ಎಂದು ಖಾಲಿಜೇಬು ತೋರಿಸಿ ಕಣ್ಣುಮಿಟಿಕಿಸಿಬಿಡುತ್ತಿದ್ದ.

ಯಾವಾಗಲೂ ಅವನು ಆ ಹಳೆಯ ಅಂಗಿಯನ್ನೇ ಧರಿಸಿಕೊಂಡು ತಿರುಗುತ್ತಿದ್ದ. ಅದು ಹರಿದ್ದೆ ಹೇಹೊಕೆ ಹೊಲಿಯುತ್ತಿದ್ದ. ನೋಡಲು ಅವನ ಭಿಕ್ಷುಕನಂತೆಯೇ ಕಾಣಿಸುತ್ತಿದುದರಿಂದ ಎಲ್ಲರೂ ಅವನನ್ನ 'ಭಿಕ್ಷಾ ಧರ್ಮದ ಸಿದ್ಧಾಮ' ಎನ್ನುತ್ತಿದ್ದರು.

(ಬಳಿಕ ಮುಂ ನೋಡಿರಿ)

ಕುಟುಂಬಸ್ಥಿತ ರಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
113 ಶಾಖೆಗಳಿಂದ ಹಬ್ಬುರುವ "ವಿಜಯಾ ಬ್ಯಾಂಕ್"ನ್ನು
ಸಂಪರ್ಕ ಬೆಳೆಸಿರಿ.
ರೇವಣಾತಿಗಳ ಮೇಲೆ 6½% ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 3½% ಬಡ್ಡಿ.
ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯನ್ನು
ನಿಮ್ಮ ಉಳಿತಾಯಹಣವನ್ನು ವಿವೇಕಯೋಗಿಸಿರಿ.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1931)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು—3.
ಆಡಳಿತ ಕಚೇರಿ: ಭಾರತೀಪುರ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1

ಫೋನ್ : 526

1921 ಸ್ಥಾಪನೆ

ಸಂಪುಟ ೪೯
ಸಂಚಿಕೆ ೧೭
VOL. 49
No. 17

ನವಯುಗ

ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, ಗುರುವಾರ ೨೫—೧೨—೧೯೬೯

ಸ್ಥಾಪಕರು:
ದಿ| ನ. ಬಿ. ಶೆಟ್ಟರು

ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ

ಮೂರಾಬಟ್ಟೆ ಬತ್ತಾಯ

ಬಹಳ ಹಿಂಗೆಯೇ ಎಂದೇಳಿ ನೂಡಿದ್ದು ಆಯಿಗ ಶಕ್ಯವಾಗುತ್ತ ಬಂದಿದೆ. ಮುಂದಿನ ಜಜೆಟ್ ಅಧಿವೇಶನ ಆರಂಭ ವಾಗುವುದಕ್ಕೆ ಮೊದಲು ಪ್ರಧಾನಿ ಇಂದಿರಾ ಗಾಂಧಿ ಶತ್ರಾಂ ಪ್ರಶ್ನೆಗಳಿಗೆ ನೇರ ಉತ್ತರವನ್ನ ಸಿಡಲೇ ಬೇಕಾಗುತ್ತದೆ. ಬಹು ಕಾಲದಿಂದಲೂ ಈ ಪ್ರಶ್ನೆಗಳು ಹಾಗೆಯೇ ಉಳಿದಿದ್ದರೂ, ಇವಕ್ಕು ಉತ್ತರಿಸುವ ನಾನಾರ್ಹವಿಲ್ಲನ ಶ್ರೀಮತಿ ಗಾಂಧಿ ತನ್ನ ಆಶಕ್ತತೆಗೆ ಪಕ್ಷದ ಹಿರಿಯರೇ ಮೂಲ ಕಾರಣರೆಂದು ಬೊಟ್ಟುಮಾಡಿ ತೋರಿ ಬಲ್ಲವರಿದ್ದರು. ಆದರೆ, ಅಂತಹ ಹಿರಿಯರನ್ನು ಬೇರೆಡಿಸಿ ತನ್ನ ಕೈಗೊಂಬೆಗಳನ್ನಲ್ಲೇ ಸರಕಾರದ ಮತ್ತು ತನ್ನ ಪಕ್ಷದ ಅಧಿಕಾರಗಳನ್ನು ಹಂಚಿಕೊಂಡಿರುವ ಇಂದಿರಾಗಾಂಧಿ ಈಗ ತನ್ನ ತ್ರಿವಿಕ್ರಮ ವಕ್ತಾರವನ್ನು ತೋರಿಸುವುದು ಅನಿವಾರ್ಯವಾಗಿತ್ತು. ಇನ್ನೂ ಆಕೆ ಹಿಜಾರಿಸುತ್ತಲೇ ಹೋದರೆ, ಆಳಿಯೂ ಪ್ರತಿಗಾವಿಯೇ ಎನ್ನಲೇ ಬೇಕಾಗುತ್ತದೆ. ಆಗ, ಇಂಡಿಕೇಟ್ ನಾಯಕರದ್ದೇ ವತ್ತೊಂದು ಸಿಂಡಿಕೇಟ್ ಉಸ್ಥಾಪನೆಯಾಗಬಹುದು. ಇಂಡಿಕೇಟಿಗೆ ಆಂಟೆಪಟ್ಟಿ ಧ್ವಂಸ ಮಾಡಬಹುದು. ಯಾವ ಜನತಾಂಗದಲ್ಲಿ ಈಗಾಗಲೇ ಎದ್ದಿರುವ ಅಸಮಾಧಾನವನ್ನು ಹಾಗೆ ಆಗ ಧನಿಲೆಂದು ಊಹಿಸಲಾಗುತ್ತದೆ. ಶ್ರೀಮತಿ ಗಾಂಧಿ ಆಯೋಧ್ಯೆಲ್ಲಿ ಪಕ್ಷಂಗದಂತೆಂದು ಹೇಳಬಹುದು.

ಶ್ರೀ ದರ್ಶನ ಸಿಂಗ ಫೆರುಮಾನರು ಬಲಿದಾನ ನೀಡಿದ ಬ್ರಾಣಕ್ಕೆ ಶ್ರೀಮತಿ ಗಾಂಧಿ ಯಾವ ಬೆಲೆಯನ್ನೂ ನೀಡಲಿಲ್ಲ. ಆಕೆಯು ತಂದೆ ಶ್ರೀ ಪಟ್ಟಾಂ ಶ್ರೀ ರಾಮಲುರವರು ಪ್ರಾಣಕ್ಕಾಗಿ ಆಂಧ್ರರಾಜ್ಯವನ್ನು ನೀಡಿದ್ದು ಮಾತ್ರವಲ್ಲ; ಭಾಷಾವಾರು ರಾಜ್ಯ ವಿಭಜನೆಗೂ ಸನ್ನತಿಸಿದ್ದನ್ನು ನೆನಪಿಸಬೇಕು. ೧೯೬೦ ಜನವರಿ ೫ರಂದೊಳಗೆ ಚಂಡಿಗಡವನ್ನು ಪಂಜಾಬಿಗೆ ಸೇರಿಸದೆ ಹೋದರೆ, ದಕ್ಷಿಣ ಮಾಡಿಕೊಂಡು ಆಕ್ಟಾಪ್ರಜೆ ಮಾಡುತ್ತೇನೆಂದು ಸಂತ ಫತೇ ಸಿಂಗರು ಮತ್ತೊಂದು ಬೆದರಿಕೆ ಹಾಕಿದ್ದರೆ ಚುನಾವಣೆಯ ದೃಷ್ಟಿಯಿಂದ ಉತ್ತರ ಲಭ್ಯವಾಗಿದೆಯೆಂದೂ ಇದನ್ನು ಮುಂದಿನ ಅಧಿವೇಶನಕ್ಕೆ ಮೊದಲು ಅಹಿಂಸಾತ್ಮಕವಾಗಿ ಪರಿಹರಿಸುವುದೆಂದೂ ಕೇಂದ್ರ ಹೇಳುತ್ತಿದ್ದಾಗ, ಅದಕ್ಕೂ ಮೊದಲಾಗಬೇಕೆನ್ನುತ್ತಾರೆ ಪಂಜಾಬಿ ಳು. ಚಂಡಿಗಡದ ಬಗ್ಗೆ ಪಂಜಾಬಿ ಮತ್ತು ಹರ್ಯಾಣಿಗಳು ಜುಟ್ಟಿ ಬಿಡಿದದ್ದು ಶ್ರೀಮತಿ ಗಾಂಧಿಯವರು ಗಡಗಡನೆ ನಡುಗುತ್ತಾರೆ. ಈ ನಡುಕದಿಂದಲೇ ಹುಟ್ಟಿದ ಇಂದಿರಾ ಮ್ಮನ ಕೂಸೇ ಇಂ ಎಂದರೂ ತಪ್ಪಲ್ಲ. ಅದರ ತಾಯಿಯಂಗಿ ನೀವು ನುಂದುವ ದಿರುಬಾರದ; ನಮಗೇ ಒಪ್ಪಿಸಿ ಎಂದಾಗ ಎನು ಮಾಡಬೇಕು? ಒಂದು ಆಳುವ ಧಾನವನ್ನು ಕಳೆಯಲು ಎಂದು ಗೂಡಿದ ತಂತ್ರ ಈಗ ಎರಡೂ ರಾಜ್ಯಗಳ ಸಮಸ್ಯೆಗೆ ಕಾರಣವಾಯಿತು. ಪಂಜಾಬ್—ಹರಿಯಾನಗಳೆರಡೂ ಇಂಡಿಕೇಟ್ ಪರವಾಗಿವೆಯೆಂದರೆ ಹಿನ್ನೆಲೆಯಲ್ಲಿದೇ ಅಲ್ಲವೆ? ಅತ್ಯಾರ್ಪಣೆಯ ನಿರ್ಧಾರವನ್ನು ಅದಲಿಸಬೇಕಂದ ಆಕೆ ಕಾರ್ಯಕಾರಿಣಿಯಿಂದ ಪ್ರಾರ್ಥಿಸಿದರೆ, ಜದನ್ನ ಸಂತ ಸಿಂಗರು ನಿರಾಕರಿಸಿದ್ದಾರೆ. ಪ್ರತ್ಯೇಕ ಪಂಜಾಬ ರಾಜ್ಯದ ಬಗ್ಗೆ ಸಂತ ಸಿಂಗರ ಹೋರಾಟ ಬಗೆಹರಿಸುವಾಗ ಮೂಡಿದ್ದು ಟು. ಈ ಸಲ ಅವರದ್ದು ಉಪವಾಸವಲ್ಲ; ಒಲಿದಾನ. ಇಂದಿರಾ ಗಾಂಧಿ ಅಧಿಕಾರದ ಜೇಕಾದರೆ ಒತ್ತಾಯಕ್ಕೆ ಒಗ್ಗಲೇಬೇಕು; ಆದರೆ, ಹರ್ಯಾನವನ್ನು ಎದುರು ಹಾಕಿಕೊಂಡರೂ ಆಗಿ ನೆವ್ಹಡಿಯಿಲ್ಲ ಅವರಿಂದ ನ್ನು ಬೊಟ್ಟುಮಾಡಿ ತೋರಿಸುವುದೂ ಈಗ ಸಾಧ್ಯವಿಲ್ಲ. ಒಂದು ಮಗುವನ್ನು ಇಬ್ಬರು ಬೇಡುತ್ತಿರುವಾಗ ಅದನ್ನು ಒಬ್ಬನಿಗೇ ನೀಡಿದ ತೊತ್ತಾಟವನ್ನು ಸಮೂಧಾನಪಡಿಸಲೇಬೇಕು. ಚಂಡೀಗಡ ಪಂಜಾಬಿಗೆ ದಕ್ಕಲಿಲ್ಲವಾದರೆ, ಸೇನೆಯಲ್ಲೂ ಗೊಂದಲವಾದೀತೆಂಬ ಬೆದರಿಕೆ ಜೇನಿಯಿದೆ.

ರಾಜಧನವನ್ನು ವಂದಿನ ಜೆಟ್ ಅಧಿವೇಶನಕ್ಕೆ ಮೊದಲೇ ರದ್ದು ಮಾಡಬೇಕೆಂಬ ರಾಜ್ಯಭೆಯ ಸಿರ್ಧಾರವನ್ನೊಂದು ಪ್ರಬಲ ರಾಜ್ಯಭೆಯ ನಿರ್ಧಾರ ಕ್ಕೇ ಪ್ರಾಧಾನ್ಯ ಮಾಡುತ್ತ ನೀಡುವ ಆಗ ತ್ಯವಿಲ್ಲವಾದರೂ ಇದರ ಪ್ರಾಧಾನ್ಯತೆ ಲೋಕಸಭೆಯಲ್ಲೂ ಕೇಳಬಹುದು. ಪ್ರಧಾನ ಪಕ್ಷದ ಈ ಸಂಬಂಧದ ಅನಧಿಕೃತ ನಿರ್ಣಯ ಅಂಗೀಕಾರವಾದ ಬಗೆಯಿಂದ ಈ ದಿಸೆ ಎಲ್ಲಿ ಇಂದಿರಾ ಗಾಂಧಿ ದಾಪುಗಾಲಿಂದಲೇ ಸಾಗಬೇಕಾಗಿದೆ. ಒಂದು ವೇಳೆ ರಕಾರ ಧನ್ನು ಕಾರ್ಯಾಚರಣೆಗೆ ತಾರದೆ ಹೋದರೆ, ಕಾರ್ಯನಿರ್ವಹಣೆಯ ಬೆಂಬಲವು ಶ್ರೀಮತಿ ಗಾಂಧಿಗೆ ಇಲ್ಲವಾಗುತ್ತದೆ. ಇಡಿಕೇಟಿನ ದಾರಿದ್ರ್ಯ ನಿಮೂಲವಾದ ಘೋಷಣೆ ಬರಿಯ ನಾಟಕೀಯವೆಂಬ ಶ್ರೀ ಎ. ಕೆ. ಗೋಪಾಲನ್ನರ ಟೀಕೆ ರಾಜ್ಯಕೀಯವಾಗಿಯೂ ವ್ಯಾವಹಾರಿಕವಾಗಿಯೂ ಸಾಧನೀಯ. ಆದುದರಿಂದ ನುಂಗಲಾರದ ತುತ್ತು ಇಂದಿರಾಗಾಂಧಿ ಮುಂದೆ ಗಂಟಲಲ್ಲಿ ತೊರಿದಂತಾಗಿದೆ.

ಮದಾಂಧಪ್ರಾದೇಶಿಕರಾಗ್ರೆಸ್ಸಿನ ನಾಗಪುರದಲ್ಲಿ ಸಭೆ ಸೇರಿ ಮಹಾರಾಷ್ಟ್ರ-ಕರ್ನಾಟಕಗಳ ನೀರೂ ವಿವಾದವನ್ನು ಜಜೆಟ್ ಅಧಿವೇಶನದೊಳಗೆ ನಿವಾರಿಸ ಬೇಕೆಂದು ಕೇಂದ್ರಕ್ಕೆ ಕರೆ ನೀಡಿವೆ. ಕೇಂದ್ರ ಗೃಹಮಂತ್ರಿ ಶ್ರೀ ಚವನರು ಗೊತ್ತುವಳಿ ಸ್ವೀಕಾರ ಮಾಗ ಮೂಲಕ ನೈಕ್ಷ್ಯಕರಾಗಿ ಕಳಿಸಿದ್ದರಿಂದ ಬರೀ ಬೆಲೆ ತಂದಿದೆ. ಈ ಸಂಬಂಧದಲ್ಲಿ ಮಹಾರಾಷ್ಟ್ರ ಚರದಿಯೇ ಪರಿಹಾರ ಸೂತ್ರವೆಂಬ ಪದನ್ನು ಉಸ್ಮಡಿಗರೆಕ್ಕರಾ ಒಪ್ಪಿಸಿದ್ದಾರೆ. ಇಂಡಿಕೇಟ್ ಪರ ಶ್ರೀ ಕೆಂಗಲ್ ಹನುಮಂತಯ್ಯನವರು ಕರ್ನಾಟಕಕ್ಕೆ ಅನ್ಯಾಯ ವಾಗದು ಎಂದು ಹಾರಯಿಸಿದ್ದಾರೆ. ಆದರೆ, ಮಹಾರಾಷ್ಟ್ರ ನರದಿಗೆ ಬಹ್ವಾತ್ಯಾಪ್ಯ ಕಳೆದರೂ ಶ್ರೀಮತಿ ಗಾಂಧಿಯವರ ನಿಲುವೇನೆಂಬುದಿನ್ನೂ ಗೊತ್ತಿಲ್ಲ. ಒಂದುವೇಳೆ ವರಿಗಳ ಒತ್ತಾಯಕ್ಕೆ ಬಲಿ ಬಿದ್ದು (ಸಂಭವ ಕಡಿಮೆ) ನಾಯಾಧಿಕರಣ ವರದಿಯನ್ನು ಕಡೆಗಣಿಸಿದರೆ, ಕರ್ನಾಟಿಗರೇನು ಮಾಡುತ್ತಾರೆ? ಒಂದಾದ ಕನ್ನಡವನ್ನು ಒಡೆಯುವುದೆನ್ನುವವರೆಲ್ಲಿ ಇಂಡಿಕೇಟ್‌ನ ಬಲಿಷ್ಠಕರಾಗಿರುವಾಗ, ಸಿಂಡಿಕೇಟ್ ಗುಂಪು ಮಾತ್ರ ಅಳಬೇಕಾದೀತು.

ಶ್ರೀಮತಿ ಗಾಂಧಿ ಪ್ರಗತಿಪರ ಮಂಗಡ ಪತ್ರವನ್ನು ಮಂಡಿಸಬೇಕಾಗುತ್ತದೆ. ತನ್ನನ್ನೆ ತಾನೇ ಪ್ರತಿಗಾವಿಯೆಂದು ಕರೆದುಕೊಳ್ಳುತ್ತ ಆಕೆಯೇ ವಿತ್ತಮಂತ್ರಿಯೂ ಆಗಿದ್ದಾರೆ. ಒಟ್ಟನಲ್ಲಿ ಮುಂದಿನ ಜಜೆಟ್ಟು ಇಂದಿರಾ ಗಾಂಧಿಯ ವಿಳು-ಬೀಳುಗಳನ್ನು ಬರೆಯುತ್ತದೆ. ಆದರೂ ಎಲ್ಲರ ನೋಣಕ್ಕೂ ಬೆಲ್ಲ ಸವರಿ ಕನ್ನ ಅಧಿಕಾರ ಪೀಠವನ್ನ ಭದ್ರಪಡಿಸುವುದರಲ್ಲಿ ಕುಶಲ ಪಂತ್ರಿಗೂಡ ಆಕೆ ಪ್ರತಿಗಾಮಿತನವನ್ನೇ ಪ್ರಗತಿಗಾಮಿತನವೆಂದು ಹೆಸರಿಸುವುದಕ್ಕೆ ಹೇಳುವುದಿಲ್ಲ. ಸಾರ್ವಭೌಮತ್ವಸ್ಥಳ ಭಾರತೀಯ ರಾಜ್ಯಕಾರಣದಲ್ಲಿ ಅನಾವಶ್ಯವನ್ನೇ ತಂದ ಹಾಕಿದೆಯಷ್ಟೆ? ಹೇಗಂತೆಯೂರಿದ್ದಾರೆ?

ಇಬ್ಬರೂ ಬಹುಮತೀಯರು

ಅಹಮ್ಮದಾಬಾದಿನ ಸವಿಷಯದ ಗಾಂಧೀ ನಗರದಲ್ಲಿ ಸಿಂಡಿಕೇಟ್ ಗುಂಪಿನ ಎಐಸಿಸಿಯ ಪೂರ್ಣಾಧಿವೇಶನ ನಡೆಯಿತ. ನಿರೀಕ್ಷೆಯಂತೆ ಅದು ತನ್ನ ನಾಯಕರು ಇದುವರೆಗೆ ಕೈಕೊಂಡಿರುವ ಎಲ್ಲ ಕ್ರಮಗಳನ್ನೂ ಚಕಾರವೆತ್ತದೆ ಅಂಗೀಕರಿಸಿತು. ಪಕ್ಷವು ಮುದೀಮ ವರಿಸ್ಥಿತಿಯಲ್ಲೂ ಎಡೆಗೆಡದೆ ನ್ಯಾಯಶಕ್ತರಾದ ಶ್ರೀ ನಿಜಲಿಂಗಪ್ಪ ಅವರನ್ನು ಪಾರ್ಲಿಕವಾಗಿ ಅಭಿನಂದಿಸಿತು. ಪಕ್ಷವು ದಕ್ಷಾಂಶ ಶಕ್ತರಗಳ ಅನುಷ್ಠಾನದಲ್ಲಿ ತನಗಿರುವ ಅಚಲ ವಿಶ್ವಾಸವನ್ನು ಪುನರುಚ್ಚರಿಸಿತು. ಬ್ಯಾಂಕ್ ರಾಷ್ಟ್ರೀಕರಣವನ್ನು ಸ್ವಾಗತಿಸಿ ಎಲ್ಲಾ ಬ್ಯಾಂಕುಗಳ ರಾಷ್ಟ್ರೀಕರಣವನ್ನೂ ಸಾಮಾನ್ಯ ವಿಮೆಯ ರಾಷ್ಟ್ರೀಕರಣವನ್ನೂ ಬಯಸಿತು ಯೂವ ಬಣಕ್ಕೂ ಸೇರದ ವಿದೇಶ ನೀತಿಯು ರಷ್ಯದತ್ತ ಹೆಚ್ಚಿನ ಒಲವನ್ನು ತೋರಿಸುತ್ತಿರುವುದನ್ನು ಅದು ಎತ್ತಿ ತೋರಿಸಿತು. ಅಲಿಪ್ತ ನೀತಿಯು ಕಳೆದಿರುವ ಮೇಲೆದ್ದ ಹಲ್ಲುಕಡ್ಡಿಗಳನ್ನು ಕಿತ್ತುಬಿಡಬೇಕೆಂದಿತು. ಬಹ್ವಾತ್ಯ ನೀತಿಯನ್ನ ರೂಪಿಸಿ ವ್ಯವಹಾರವನ್ನು ಪಕ್ಷದ ಆದೇಶಾನುವರ್ತಿಗಳಾಗಿರುವಂತೆ ಮಾಡಿತೆಂದೂ ಅದು ಬೊಟ್ಟು ಮಾಡಿ ತೋರಿಸಿತು. ಕಾಂಗ್ರೆಸ್ ವಿಭಜನೆಗೆ ಪ್ರಧಾನಿ ಗಾಂಧಿಯವರೇ ಮೂಲಸ್ಫೂರ್ತಿ ಎಂದ ಅದು ಒಕ್ಕೊರಲಿನಿಂದ ಘೋಷಿಸಿತು.

ಅಹಮ್ಮದಾಬಾದಿನ ಈ ಅಧಿವೇಶನದ ಕ್ಷೆ ಹುಬ್ಬರಿದ್ದ ಎಐಸಿಸಿ ಅಧಿಕೃತ ಸಂಖ್ಯೆ ಇಪ್ಪತ್ತರಲ್ಲೇ ಹೊಂಬೇಳುಬಹುದು. ಬಹುಮತ ಕಳ್ಳಾಟ ಇದೆಯೆಂದು ಅವರು ಹೇಳಿಕೊಳ್ಳಬಹುದು. ಮುಂಬಯಿಯ ಅಧಿವೇಶನದ ಕಳೆಗೂ ಇದರ ಇನ್ನೊಂದು ರೂಪವಾಗದೆ ಳಿಗೂದು. ನಿಜವಾಗಿ ಅಧಿಕ ಬಲ ಯಾವುದಕ್ಕೆ ಎಂಬ ಪ್ರಶ್ನೆಯಿಂದಿಗೆ ಚುನಾವಣೆಗೂ ಹೋಳೆಯೇ ಗೊತ್ತಾಗಬೇಕು.

ಭಾವಿ ಪರ್ಯಾಯ ಶ್ರೀಗಳವರಿಗೆ ವಿದ್ಯಾಸಾ ಪೌರಜನರ ಸತ್ಕಾರ

ತಾ 9.12.69ರಂದು ಶ್ರೀ ರಾಜಾಸರ್ ಮುತ್ಯಯ್ಯ ಚೆಟ್ಟಿಯಾರ್‌ರವರ ಅಧ್ಯಕ್ಷತೆಯಲ್ಲಿ ತಾ. 18-1-1970ರಲ್ಲಿ ಉಡುಪಿ ಶ್ರೀಕೃಷ್ಣ ಪರ್ಯಾಯದಲ್ಲಿ ಕೂಡಲಿರುವ ಉಡುಪಿ ಪಲಿಮಾರು ಮಠದ ಭಾವಿ ಧರ್ಮಾಧಿಕಾರಿ ಮಠದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರಿಗೆ ಮಾಧ್ವ ಧರ್ಮಸಂಸ್ಥಾನದಲ್ಲಿ ಸ್ವಾಗತಬಯನ ಏರ್ಪಡಿತು. ಸ್ವಾಗತ ಕಮಿಟಿಯ ಅಧ್ಯಕ್ಷ ಶ್ರೀ ಕೆ ಬಾಲಸ ಪ್ರಸ್ಥಾಣ್ಯ ಆಯ್ಯಂಗರ್ ಸ್ವಾಗತ ಭಾಷಣವನ್ನು ಮಾಡುತ್ತಾ ಶ್ರೀ ಶ್ರೀಗಳವರ ಜನ್ಮಾನದ ಹಿರಿಮೆಯನ್ನು ಕೃತ್ತಿ ಪಡಿಸಿದರು. ಮಹಾರಥಿಯು ಅಧ್ಯಕ್ಷ ಚೆಟ್ಟಿಯಾರ್ ಮಹಾರಾಜರು ತಮ್ಮ ಭಾಷಣದಲ್ಲಿ ಧಾರ್ಮಿಕಸಂಸ್ಥೆಗಳ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಶ್ರೀಗಳವರು ಅನುಗ್ರಹ ಭಾಷಣ ಮಾಡಿದರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಧರ್ಮಭೂಷಣ ಶ್ರೀ ಕೆ ಸೀತಾರಾಮ ರಾಯರ ಮಕ್ಕಳಾದ ಶ್ರೀ ಕೆ. ಬಾಲಕೃಷ್ಣ ರಾಯರು ಧನ್ಯವಾದವಿತ್ತರು. ಶ್ರೀ ಶ್ರೀಗಳ ಪರಿವಾರ ಫಲದಂತಾಕ್ಷತೆ ವಿತರಣೆಯೊಡನೆ ಸಭೆಯು ಮುಕ್ತಾಯವಾಯಿತು.

ಗುರುನಾನಕರು ಸಾರಿದ ವಿಶ್ವಬಂಧುತ್ವ

ಲೇ: ಐ. ಕೆ. ಗುಜರಾಲ್
ಕೇಂದ್ರ ಸರ್ಕಾರದ ವಾರ್ತಾ ಮತ್ತು ಪ್ರಸಾರ ಶಾಖೆಯ ರಾಜ್ಯಸಚಿವರು.

ಮೂನವೀಯ ಮೌಲ್ಯಗಳ ಬಗ್ಗೆ ಶತ ಮಾನಗಳಿಂದಲೂ ನಡೆದ ಹೋರಾಟದಲ್ಲಿ ಅನೇಕ ಸಂತರು ಮತ್ತು ಸೇವಕರು ಉದಯಿಸಿದ್ದಾರೆ. ದೇಶದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳು ತಿಳಿಯಾಗಿ ಹೋಗುತ್ತಿದ್ದ ಕಾಲದಲ್ಲಿ ಗುರು ನಾನಕರು ಜನ್ಮತಾಳಿದರು. ವಿಭಿನ್ನ ಪ್ರಕಾರದ ಶಕ್ತಿಗಳು ಎಬ್ಬಿಸಿದ್ದ ಗದ್ದಲದ ಈ ಸಂದರ್ಭದಲ್ಲಿ ಗುರುನಾನಕರ ವಿವೇಕ ಮತ್ತು ಪರಸ್ಪರ ಮಾನವ ಪ್ರೇಮ ನುತ್ತಿ ಬೆಳೆಯುವುದೇ ಎಂಬ ಕಂಗೀಹ ನೂಡಿತ್ತು. "ಪ್ರತಿಯೊಬ್ಬ ಮನುಷ್ಯನಲ್ಲೂ ದೇವರ ಅಂಶವಿರತಕ್ಕದೆ. ಒಬ್ಬ ಮತ್ತೊಬ್ಬ ನನ್ನು ದ್ವೇಷಿಸುವುದು ಸಲ್ಲಬೇಕ" ಎಂಬುದಾಗಿ ನಾನಕರು ನುಡಿದರು. ಸರ್ವ ಶಕ್ತನೂ ನುತ್ತು ಸರ್ವವ್ಯಾಪಿಯೂ ಆದ ದೇವರಲ್ಲಿ ಎಲ್ಲರೂ ಭಕ್ತಿಯಿಂದ ಐಕ್ಯರಾಗಬೇಕು. ಸತ್ಯವೇ ಪ್ರಧಾನವಾಗಿರುವ "ಶುದ್ಧ ಧರ್ಮವೊಂದು ಜೆಳೆಯಬೇಕು. ಧರ್ಮಾಂಧತೆಗೆ ಅಲ್ಲಿ ಸ್ಥಳವಿಲ್ಲ. ಅನನಿಗೆ ಎಲ್ಲವೂ ಗೋಚರವಾಗುತ್ತಿದೆ" ಎಂಬುದಾಗಿ ನಾನಕರು ತಿಳಿಸಿದರು.

ಬಾಹ್ಯ ಆಡಂಬರಗಳಿಗೆ ಅಂಟಿಕೊಂಡಿರುವದು ನಿರರ್ಥಕ ಎಂಬುದನ್ನು ಎಲ್ಲರೂ ಅರಿಯಬೇಕು. ಸತ್ಯವೇ ಎಲ್ಲಕ್ಕಿಂತಲೂ ದೊಡ್ಡದು. ಅದನ್ನು ತಿಳಿಯಲಿಕ್ಕಾಗಿಯೂ ಯಾರಿಂದಲೂ ಸಾಧ್ಯವಿಲ್ಲ. ವಿಗ್ರಹಾರಾಧನೆಯ ಬಗ್ಗಾಗಲಿ, ಪಣ್ಯಕ್ಷೇತ್ರಗಳಿಗೆ ಭೇಟಿ ಕೊಡುವುದರಿಂದಾಗಲಿ ಒಬ್ಬನೇ ಕಾಡಿನಲ್ಲಿರುವುದರಿಂದಾಗಲೀ ತನ್ನ ಮನಸ್ಸಿನ ಕಲ್ಮಶವನ್ನು ಹೋಗಲಾಡಿಸಲು ಸಾಧ್ಯವಿಲ್ಲ. ಸತ್ಯದರ್ಶನದಲ್ಲಿ ಪಡೆದರೆ ಮಾತ್ರ ಮನಸ್ಸು ಪರಿಶುದ್ಧವಾಗುವದು ಎಂಬುದಾಗಿ ನಾನಕರು ಒಂದು ಸಂದರ್ಭದಲ್ಲಿ ತಿಳಿಸಿದ್ದಾರೆ.

ಗುರುನಾನಕರು ಪ್ರೇಮ ಮತ್ತು ದೈವಭಕ್ತಿಗಳ ಬಗ್ಗೆ ಇಡಿ ಮಾನವ ಜನಾಂಗಕ್ಕೆ ಸಾರಿದ್ದಾರೆ. ಮತಗಳ ಬಗ್ಗೆ ಇದ್ದ ಕುರುಡು ಅಭಿಮಾನವನ್ನು ಹೋಗಲಾಡಿಸಲು ಹಾಗೂ ಧರ್ಮಗ್ರಂಥಗಳನ್ನು ಬಹಳ ಸರಳಗೊಳಿಸಲು ನಾನಕರು ಶ್ರಮಿಸಿದರು. ನಾನಕರ ಪಂಚಶತಾಬ್ದಿಯನ್ನು ನಾವು ಗಾಂಧೀಜಿಯವರ ಜನ್ಮಶತಾಬ್ದಿ ವರ್ಷದಲ್ಲಿಯೇ ಆಚರಿಸುತ್ತಿದ್ದೇವೆ. ಅಹಿಂಸೆಯ ಬಗ್ಗೆ ಗಾಂಧೀಜಿಯವರು ಉಳಿದೆತಿಸಿದಂತೆಯೇ ನಾನಕರು ಭೋಧಿಸಿದರು. ಯಾರಿಗೂ ಕೇಡನ್ನು ಬಯಸಬಾರದು, ಕೆಟ್ಟದ್ದನ್ನು ನಡಿಸಬಾರದು, ಅತ್ತ ಇತರರಿಗೆ ಕೆಟ್ಟದ್ದನ್ನು ಮಾಡಬಾರದು, ಇದ ಅಹಿಂಸೆಯೆಂಬುದಾಗಿ ನಾನಕರು ಹೇಳಿದ್ದಾರೆ ಮನನವ ಎಂದರೇನು ಎಂಬುದನ್ನು ಅವರ ಹೆಚ್ಚಿನ ಅರ್ಥದಲ್ಲಿ ಹೇಳಿಂಕಿ ಮಾನವ ಭಿನ್ನಮಿತ ಜಾತಿ ಧರ್ಮ ವರ್ಣ, ರಾಷ್ಟ್ರೀಯತೆಗಳು ಭೇದಭಾವಗಳನ್ನು ಅವರು ಖಂಡಿಸಿದರು, ನಾನಕರ ಜೀವಂತರಾಗಿರುವಾಗಲೇ ಜನ ಅವರನ್ನು ಪೂಜಿಸಲು ಪ್ರಾರಂಭಿಸಿದಾಗ ತಾನು ಎಲ್ಲರಂತೆ ಒಬ್ಬ ಸಾಮಾನ್ಯ ವ್ಯಕ್ತಿ ಎಂಬುದಾಗಿ ಹೇಳಿದರು. ಬಡವರಿಗೆ ಸಂಪತ್ತನ್ನು ಧಾರೆ ನೀಡುತ್ತಿರೋ ಅವರಿಗೆ ದೈವಬಲ ದೊರೆಯುತ್ತಿದೆ ಎಂದರು. ತಾನು ಸದಾ ಬಡವರ ಸಂಗಡ ಬೇರೆತರು. ಅವರೆಂದಿಗೆ ಹೆಚ್ಚಿನ ಕಾಲ ಕಳೆದರು ನಾನಕರು ಎಂದೂ 'ನಾನಕ ಒಬ್ಬ ಸೇವಕ' "ನಾನಕ ಒಬ್ಬ ಕೀಳು ಜಾತಿಯವನು", "ನಾನಕ ಒಬ್ಬ ದೀನ" ಎಂಬ ದಾಗಿ ಹೇಳಿಕ್ಕಿದ್ದರ.

ಕೀಳ ಜಾತಿಗಳಲ್ಲಿ ನನ್ನ ಜಾತಿ
ತಂಬ ಕೀಳಾಗಿಲಿ
ಕೀಳು ಜನರೆಲ್ಲಿಲ್ಲ ನಾನೇ ಅತಿ
ಕೀಳಾಗಿರಲಿ
ಓ ನಾನಕ್, ನಾನು ಬಲ್ಲ ಜನರೆಲ್ಲಿ
ಅಂತೆಯೇ ಇರಲಿ
ನನಗೇಕೆ ದೊಡ್ಡವರ ಅನುಕರಿಸುವ
ಗೀಳು.

ಎಂಬ ದಾಗಿ ನಾನಕರೇ ಹೇಳಿದ್ದಾರೆ

ದೇವರೊಡನೆ ಸಾಕ್ಷಾತ್ಕಾರವನ್ನು ಪಡೆಯುವುದರ ಒಗ್ಗೆ ಅಂದಿನ ಮತಧರ್ಮಗಳಲ್ಲಿದ್ದ ಕಠಿಣ ಸಿದ್ಧಾಂತಗಳನ್ನಷ್ಟೇಕಿತ್ತು ಬಿಸಲ್ಲ, ಸಮೂಹದಲ್ಲಿ ಸುಧಾರಣೆಗಳನ್ನು ತರಲು ನಾನಕರೂ ಪ್ರಯತ್ನಿಸಿದರು. ಇದಕ್ಕಾಗಿ ಸಾಮೂಹಿಕ ಭೋಜನ ಶಾಲೆಗಳನ್ನು ಸ್ಥಾಪಿಸಿದರು. ತಾವೂ ಇತರರೊಡನೆ ಬೆರೆತು ಊಟಮಾಡಿದರು. ಇದು ಹಿಂದಿನ ಸಂಪ್ರದಾಯ ಸಂಪ್ರದಾಯಗಳಿಗೆ ವಿರೋಧವಾಗಿತ್ತು. ಆದರೂ ನಾನಕರು ಅಚಲರಾಗಿ ನಿಂತರು. ಇದರಲ್ಲಿ ಯಶಸ್ವಿಗಳಿಸಿದರು. ಲಕ್ಷಾಂತರ ಜನತೆಯು ವಿರೋಧಕ್ಕೆ ಕಾರಣರಾದರೂ ವಿರೋಧಿಸಿದವರನ್ನು ಪ್ರೇಮ ಮತ್ತು ವಿನಯ ಇವುಗಳಿಂದ ಗೆದ್ದರು. ತಂದೆ, ತಾಯಿ, ಪತ್ನಿ, ಮಡದಿ, ಮಕ್ಕಳು, ಸೋದರ ಸೋದರಿಯರನ್ನು ಬಿಟ್ಟು ಹೋಗಬೇಕೆಂದು ನಾನಕರು ಎಂದೂ ಹೇಳಿಲ್ಲ. ಸಮಸ್ತ ಮಾನವ ಕುಲವನ್ನು ತೊರೆಯು ಬಾರದೆಂದು ಅವರು ಹೇಳಿದರು. ಅರ್ಥವಿಯುಳ್ಳವನು ಪೂರ್ಣ ಅಧಿಕಾರಿಯಂಗಬೇಕು. ರಾಜನಾಗಲು ಲಕ್ಷಣಗಳಿದ್ದರೆ ಮಾತ್ರ, ಅಂತಹವನು ರಾಜಸಿಂಹಾಸನವನ್ನು ಅಲಂಕರಿಸಬೇಕು ಎಂದರು. ಈ ರೀತಿಯಾದರೆ ಮಹಾತ್ಮ ಗಾಂಧಿಯವರು ನೆನಸಿದ ರಾಮರಾಜ್ಯ ಸ್ಥಾಪಿಸಲು ಸಾಧ್ಯ. ಇದೇ ನಿಜವಾದ ಸ್ವಜಾತ್ಯಭಿಮಾನ ಮಾನವರಲ್ಲಿ ನೈತಿಕ, ಆಧ್ಯಾತ್ಮಿಕ ಶಕ್ತಿಗಳು ಬೆಳೆಯಲು ನೈಜ ಸ್ವಾತಂತ್ರ್ಯ ತುಂಬಾ ಅಗತ್ಯ. ದೇಶದಲ್ಲಿ ಹಿಂಸೆಯನ್ನು ದೂರಮಾಡಬೇಕು. ಬಡಿಕ ತವನ್ನು ನಡೆಸಲು ದುಷ್ಟ ಶಕ್ತಿಗಳನ್ನು ಉಪಯೋಗಿಸಬಾರದು. ಇದಕ್ಕಾಗಿ ಸಾಂಸ್ಕೃತಿಕ ಪರತ್ತು ಧಾರ್ಮಿಕ ಸ್ವಾತಂತ್ರ್ಯ ಬಹಳ ಮುಖ್ಯವಾದವು, ಎಂಬುದು ನಾನಕರ ಅಭಿಪ್ರಾಯವಾಗಿತ್ತು.

ಬೆಳ್ಳಗಂಡಿ ಲೇಂಡ್
ಟ್ರಿಬ್ಯುನಲ್‌ನಲ್ಲಿ
R. R. C. 185/1969

ಕೇಸಂಮ —ಅರ್ಜಿದಾರರು
ಮುಂಜಂಮ ಕೊಡಾ —ಎದ್ರಿರು

ತನೇ ಎದ್ರಿ— ಡೊಂಬ ನ್ಯಾಕೆ, ಅಮ್ಮು ನ್ಯಾಕನ ಮಗ, ಬೆಲ್ಲಂಗಡಿ ತಾಲ್ಲು ಉಜ್ರೆ ಗ್ರಾಮದಲ್ಲಿ.

ಇವರೀಗೆ ಕೋರ್ಟು ಸ್ಟುಂ ಪ್ರಕಾರ ತಿಳಿಸಾವುದೇನೆಂದ್ರೆ—

ಅರ್ಜಿದಾರರು ಪ್ರಸ್ತುತ ಪ್ರಸ್ತೆರಿಯರ ಮೇಲೆ 1967–68ನೇ ವರುಷದ ಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಮಂಡ ವ್ಯವಹರಣೆಯು ಕಾ. 19.1.70ಕ್ಕೆ ಇಟ್ಟಿರುವುದರಿಂದ ಅದ್ದ ನಮ್ಮದೇನಾದರೂ ಅಕ್ಷೇಪಣೆಗಳಿದ್ರೆ ಸದ್ರಿ ದಿನ್ನ ಮೇಲ್ಕಂಡ ಟ್ರಿಬ್ಯುನಲ್ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾರಿಯಂಗಿ ಹಾಜರಾಗಿ ಅದ ಹಂಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಂತರ ಗೈರು ಹಾಜರಿಯಿಂದ ತೀರ್ಪನ್ನಕಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

(Sd.) B. Ishwara Bhat
Advocate for applicant

ಮುಕ್ತಾರು, ತಾ. 21–12–69.

ಗೇಹರಾಜ್ಯದಲ್ಲಿ

ಹಾಡು ಒಂದು, ಧಾಟಿ ಹಲವು

"ಅಲ್ಲಿ, ತಾನು ಇಲ್ಲಿ ಕೇಳೀಂದ್ರೆ...."

'ಏನಪ್ಪ ಅದು?"

"ಅಲ್ಲ, ಇಡೀ ದಿನ ಫಿಮ್ಮು ಮಾತು ಕೇಳೋದೇ ನನ್ನ ಜಾಯಮಾನವಾಯ್ತಲ್ಲ!"

'ಏಕೆ? ಏನಾಯ್ತು? ನಾನೇನು ಅಷ್ಟು ಮಾತಾಡಿದೆ?'

"ಮತ್ತೆ ಗುಮ್ಮನಂತೆ ಕೂತಿದ್ದೀ!"

"ನಾವ್ಯಾಕೆ ಗುಮ್ಮನಂತೆ ಕೂರಬೇಕು?"

"ಅಲ್ವೆ, ಪ್ರಧಾನಮಂತ್ರಿ ಇಂದಿರಾ ಗಾಂಧಿಯ ಬ್ರೈ ಕೆಲವೊಮ್ಮೆ ಕೂತುಕೋಬೇಕಾಗುವುದು...."

"ಯಾಕೇಂತ?"

"ಯಾಕೆ ಅಂದ್ರೆ, ಅವರು ದೇಶದ ಬದಲಾಗುತ್ತಿರುವ ವಾತಾವರಣವನ್ನು ಕಂಗೊಂ ಕಂಡೂ ಮೂಕ ಪ್ರೇಕ್ಷಕರಾಗಿ ಕೂತಿದ್ದಾರೆ..."

"ಛೆ, ಅವ್ರೆಲ್ಲಿ ಹಾಗಾಗಿದ್ದಾರೆ, ಹಾಗೆ ಕೂತಿರೋರಲ್ಲ ಅನಧ್ಯವೆಂದೇ ಅವ್ರು ಇಂದಿರಾ ಕಾಂಗ್ರೆಸ್ ಸ್ಥಾಪನೆ ಮಾಡಿದ್ದಾರೆ...."

"ಅದು ಹಾಡೋ ರಾಗ. ಆ ರಾಗವನ್ನ ನಾನ್ನ ಹಾಡಬೇಕಾದರೆ, ಅವರಿಗೆ ಆವ ಕ್ಯಾನಿಸ್ಟರ ಬೆಂಬಲ ಬೇಕು. ಆದಕ್ಕಾಗಿ ಕಮ್ಯುನಿಸ್ಟರ ದೋಸ್ತಿ ಮಾಡಿ, ಅವರ ಅತ್ಯಾಚಾರಗಳನ್ನೆಲ್ಲಾ ಗುಮ್ಮನಂತೆ ಮೂಕ ಪ್ರೇಕ್ಷಕರಾಗಿಯೇ ನೋಡತಿದ್ದಾರೆ...'

"ಓ, ನೀವೆಷ್ಟಿನವು ಬಂಗಾಳದ ಬಗ್ಗೆ ಟೀಕೆ ಮಾಡತ್ತೀರಿ...."

"ಅಷ್ಟು ದೂರ ಯಾಕೆ ಹೋಗಬೇಕು?"

"ಮತ್ತೆ ಹತ್ತಿರದಲ್ಲಿ .."

"ನೋಡಿ, ನಕ್ಸಲೀಯರು ಕುಟ್ಟಪ್ಪಾಡಿಯಲ್ಲಿ ವಶ್ಕೊಂದ ಆಕ್ರಮಣ ಮಾಡಿದರಂತೆ."

"ಅಂದ್ರೆ ಮೊದಲೊಮ್ಮೆ..."

'ಹ್ಞೂಂ, ಒಂದು ವರ್ಷಕ್ಕೆ ಮೊದಲು ಪುಲ್ಲಿಯಲ್ಲಿ ಒಂದು ಆಕ್ರಮಣ ಮಾಡಿದ್ದರು."

'ಆಗ ಎಡಕವ್ಯುಷ್ಟರೇ ಅಲ್ಲಿ ಅಧಿಕಾರದಲ್ಲಿದ್ದದ್ದು...."

"ಈಗಲೂ ಅವರೇ ಇದ್ದಿದ್ದರೆ, ಏನಾಪತಿತ್ತೋ ಏನೋ! ಸುಣ್ಣಕ್ಕೆ ಬಲ ಸಂಥೀಯರ ನಾಯಕತ್ವ ಇದೆ..."

"ಅಜ್ಯುತ ಮೆನನ್ನರನ್ನು ಅಧಿಕಾರದಿಂದ ಉರುಳಿಸಿದ ಪ್ರತಿಜ್ಞೆ ಮಾಡಿದ ನಂಬೂದರಿ ಬಾರಿ ಉಶ್ಯಾಳದ್ದಿದ್ದಾರೆ.."

"ಸ್ಟ್ರಾಸ್ಟಿ, ಅವರಿಗೆ ಪಶ್ಚಿಮ ಬಂಗಾಳದ ಒತ್ತಾಸೆಯಿದ್ದರೂ ಇರಬಹುದು."

"ಮತ್ತಿನ್ನೆಂಥದ? ಬಂಗಾಳದಲ್ಲಿ ನ್ಯಾಯ-ಧರ್ಮವ್ಯವಸ್ಥೆಗಳು ನಗೆಪಾಟಲಿಗೆ ಗುರಿಯಾಗಿದೆ! ಆಳಿನ ಮುಖ್ಯಮಂತ್ರಿಯವರೇ ಸತ್ಯಾಗ್ರಹ ಮಾಡಿದರು. ಆದರೂ ಜ್ಯೋತಿಬಾಸು ಇಳಿವು ಲಿಲ್ಲ. ಇದನ್ನೆಲ್ಲಾ ಕಂಡೂ ಕಂಡೂ ಮೂಕ ಪ್ರೇಕ್ಷಕರಾಗಿ..."

'ಏನು, ಇಂದಿರಮ್ಮ ಕೂತಿದ್ದಾರೇಂತ ತೀರ್ಮಾನ?'

"ಅಲ್ವೇ ವತ್ತೆ?"

"ಯಾಕೆ ಸಾರ್ಥಂತೀರಿ ಅಕೆ ಕಾದು ಫೋಡುಬಹುದ ತಾಕತ್ತಿನಿಂತನ್ನ ..."

"ಹೌದವ್ಮ, ನಲಿ ಎಲು ಬಾರದವನು ರಂಗಸ್ಥಳ ಓರೆ ಎಂದನಂತೆ ..."

"ಓಹೋ, ಅಂದ್ರೆ ಫಿಮ್ಮು ಟೀಕೆ ಇಂದಿರಮ್ಮನ ಮೇಲೆ..."

'ನೋಡಿ ಆಂಧ್ರ ಪ್ರದೇಶದಲ್ಲೂ ನಕ್ಸಲೀಯರ ಹಾವಳಿಯಿದೆ...'

'ಅಲ್ಲಿ ಇಂದಿರಕೆಟ್ಟಿನ ಪ್ರಬಲ ಸಮರ್ಥಕ ಬ್ರಹ್ಮಾನಂದ ರೆಡ್ಡಿಯಿದ್ದಾರೆ...."

"ಇನ್ನು ಕೇಳಿದ್ದೀಯೊ?"

"ಏನು?"

"ಬಾಲಥಾಕ್ರೆ ಬಳಿ ಪಿಸ್ತೂಲಿದೆಯಂತೆ...."

"ಮಹಾರಾಷ್ಟ್ರದ ನಾಯಕರೂ ಇಂದಿಕೇಟೇ ತಾನೆ?"

"ಇನ್ನು ಒಂದು...ವ ದ್ರಾವಿಡದಲ್ಲಿ ಕಾಯದೆಯೊರಿ ಸ್ಪೇಶಿಲಿದವನಂತೆ...."

"ಸರಿನ್ನಿ, ದ್ರಾವಿಡಳದ ವರಿಷ್ಠ ಇಂದಿ ಮ್ಮನ ತರೇವೆ ಅಲ್ಲಿ..."

"ಇದೇ ಬಗ್ಗೆ ನಮ್ಮಾರ ಅನ್ಯಾಯಗಳ ನಡೆಸುತ್ತಿದ್ದ ಸಾ ಇಂದಿರಮ್ಮನೂ ಮೂಕ ಪ್ರೇಕ್ಷಕರಾಗಿಯೇ...."

'ಛೆ, ಯಾಕೆ ಹಾಗನ್ನುತ್ತೀರಿ'

"ವತ್ತೆ ನೀನನ್ನೇ ಹೇಳು"

"ಮೂಕ ವಿಸ್ಮಿತರಾಗಿ ಅನ್ನಿ...."

"ಅಥವಾ ಯಾಹಾ ಎಕ ಮುಗುರುಗಿ ಅನ್ನಬೇಕೆ?"

"ಇದ ಸಿಂಡಿಕೇಟಿನ ಧಾಟಿಯೂ ಯ್ತು..."

"ಧಾಟಿ ಯಾವುದಾದರೇನು? ಹಾಡು ಒಂದೇ ತಾನೆ?"

"ಸದ್ಯ ಹಾಗೇಂತ ಇದ್ದುಕೊಳೆ ಗೀ ಣಾ..."

'ಹೇಗೇಂತ....?'

"ಹೀಗೇಂತ..." —ಗೋಪಾ

ಪರಮಾಣು ಶಕ್ತಿಯ ಸದುಪಯೋಗ

ವಿಷ್ಯಾದಲ್ಲೇ ಬೃಹತ್ತಾದ ತಾರಾಪುರ ಪರಮಾಣು ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಮುದಾರಾಷ್ಟ್ರ, ಗುಜರಾತ್ ರಾಜ್ಯಗಳಿಗೆ ಪರಮಾಣು ವಿದ್ಯುತ್ ವಿತರಣೆಯು 1969ರ ಇಸವಿ ಏಪ್ರಿಲ್ ಒಂದನೇ ದಿನಾಂಕದಿಂದ ಆರಂಭವಾಯಿತು. 380 ಮೆಗಾವಾಟ್ ವಿದ್ಯುತ್ತನ್ನು ಉತ್ಪಾದಿಸುವ ತಾರಾಪುರ ಪರಮಾಣು ವಿದ್ಯುತ್ ಕೇಂದ್ರವು ಬೊಂಬಾಯಿ ನಗರದ ಉತ್ತರಕ್ಕೆ ನೂರು ಕಿಲೋಮೀಟರ್‌ಗಳ ದೂರದಲ್ಲಿದೆ. ಕೇಂದ್ರದ ಅತ್ಯಾಧುನಿಕ ಉದ್ದೇಶವಾದ ಈ ಕೇಂದ್ರ ಪರಮಾಣು ಶಕ್ತಿಯ ಹೊಸ ಶಕೆಯನ್ನು ಆರಂಭಿಸಿದೆ.

ತಾರಾಪುರ ಪರಮಾಣು ವಿದ್ಯುತ್ ಕೇಂದ್ರವು ಭಾರತೀಯರೊಂದು ದೇಶಾಭಿವೃದ್ಧಿಗೆ ಪರಮಾಣು ಉತ್ಪಾದನೆಯಲ್ಲಿ ದೇಶವು ಹೊಂದಿರುವ ಪರಿಣತಿಯ ಪ್ರತೀಕವಾಗಿದೆ. ಈ ವಿದ್ಯುತ್ ಯಂತ್ರವು ಕಾರ್ಖಾನೆಗಳಿಗೆ, ಗಾಳಿಬೆಳಕಿಗೆ ಸೇರಿದಂತೆ ಸಾರ್ವಜನಿಕ ಉಪಯೋಗಕ್ಕೆ ಬಳಕೆಯಾಗುವ ಶಕ್ತಿಯ ಮೂಲವಾಗಿದೆ. ಪರಮಾಣು ಜನಿತ ವಿದ್ಯುತ್ತಿಗೂ, ಶಾಖೋತ್ಪನ್ನ ವಿದ್ಯುತ್ತಿಗೂ ಸಂಪನ್ಮೂಲ ಹಾಗೂ ಮಿತವ್ಯಯದಲ್ಲಿ ತಂಡ ಬರುವ ವ್ಯತ್ಯಾಸ ಅಜಗಜಾಂತರವಿದೆ ತಾರಾಪುರದಲ್ಲಿ ಉತ್ಪಾದಿಸುವ ವಿದ್ಯುತ್ತಿಗೆ ವರ್ಷಂಪ್ರತಿ ಶಕ್ತೋತ್ಪನ್ನ ವರ್ಗದ ಒಂದು ದಶಲಕ್ಷ ಟನ್ ಕಲ್ಲಿದ್ದಲನ್ನು ಬಳಸಬೇಕಾಗುತ್ತದೆ. ಪರಮಾಣು ವಿದ್ಯುತ್ ಉತ್ಪಾದನೆಗೆ ವರ್ಷಂಪ್ರತಿ 22 ಟನ್ ಯುರೇನಿಯಂ ಸಾಕಾಗುತ್ತದೆ.

ವಿದ್ಯುತ್ ಜಾಲಕ್ಕೆ ಸರಬರಾಜು

ತಾರಾಪುರ ಕೇಂದ್ರದಲ್ಲಿ ಕುದಿಯುವ ನೀರಿನ ಪಾತ್ರೆಯ ವರ್ಗದ ಎರಡು ಪ್ರತಿಕ್ರಿಯಕಾರಗಳಿವೆ. ಇವು ತಲಾ 200 ಮೆಗಾವಾಟ್ ವಿದ್ಯುತ್ತನ್ನು ಉತ್ಪಾದಿಸುತ್ತವೆ. ಯುರೇನಿಯಂ ಪರಮಾಣುಗಳ ವಿಭಜನೆಯಿಂದ ಉತ್ಪತ್ತಿಯಾದ ಶಾಖವು ಪ್ರತಿಕ್ರಿಯಕಾರದ ಒಳಗೆ ದಪ್ಪಗೋಡೆಯ ನೀರನ್ನು ಕುದಿಸುತ್ತದೆ— ಇದರಿಂದ ಹೊರಬ್ಬುವ ಉಬೆಯನ್ನು ಶುಷ್ಕಗೊಳಿಸಿದ ನಂತರ ಒತ್ತಡದಲ್ಲಿ ಉತ್ಪಾದಿಸಯಂತ್ರಕ್ಕೆ ಸೇರಿಸಿ ಅದರ ಚಕ್ರದ ಡೆಗೆ ಬಿಡಲಾಗುತ್ತದೆ. ಇದರಿಂದ ಒಟ್ಟು 400 ಮೆಗಾವಾಟ್ ವಿದ್ಯುತ್ ಉತ್ಪಾದನೆಗೂಡುತ್ತದೆ. ಯೋಜನಾ-ಕೇಂದ್ರದಲ್ಲೇ 40 ಮೆಗಾವಾಟ್ ವಿದ್ಯುತ್ತನ್ನು ಬಳಸಿಕೊಂಡು ಮಿಕ್ಕ 360 ಮೆಗಾವಾಟ್ ವಿದ್ಯುತ್ತನ್ನು ಅಂತರ್ ರಾಜ್ಯ ಜಾಲಕ್ಕೆ ಸರಬರಾಜು ಮಾಡಲಾಗುತ್ತದೆ.

ಆರಂಭದಲ್ಲಿ ಪ್ರತಿಕ್ರಿಯಕಾರಕ ಯಂತ್ರಕ್ಕೂ 40 ಟನ್ ಸಮೃದ್ಧ ಯುರೇನಿಯಂ ಧಾತುವನ್ನು ಉಪಯೋಗಿಸಲಾಯಿತು. ಇದಕ್ಕೆ ಎರಡು ವರ್ಷ ಕಾಲ ಹೊಸ ಇಂಧನದ ಆಗತ್ಯವಿಲ್ಲ ಅನಂತರ ಎರಡೂ ಪ್ರತಿಕ್ರಿಯಾಕಾರಕಗಳಿಗೂ ವರ್ಷಂಪ್ರತಿ ಒಟ್ಟು 32 ಟನ್ ಯುರೇನಿಯಂ ಧಾತು ಬೇಕಾಗುತ್ತದೆ. ಈ ಯಂತ್ರಗಳ ಪ್ರಥಮ ಕಾರ್ಯಾರಂಭಕ್ಕೆ ಬೇಕಾದ ಇಂಧನ ಧಾತುಗಳನ್ನು ಅಮೆರಿಕಾ ಸರಕಾರವು ಒದಗಿಸಿದ್ದರೂ ಭವಿಷ್ಯದಲ್ಲಿ ಅಮೇರಿಕಾದಿಂದ ಅವುಗಳನ್ನು ಪಡೆಯಲು ಸಮೃದ್ಧ ಯುರೇನಿಯಂನಿಂದ ಭಾರವಾದ ನೀರನ್ನೇ ಹಿಡಿದಿಡಲಾಗುತ್ತದೆ.

1969ನೇ ಇಸವಿ ಮೇ ತಿಂಗಳಲ್ಲಿ ಅಮೇರಿಕಾದ ಪರಮಾಣು ಶಕ್ತಿ ಆಯೋಗವು ಮಾಡಿಕೊಂಡ ಒಪ್ಪಂದದ ಪ್ರಕಾರ ಪ್ರತಿಕ್ರಿಯಾಕಾರಕದ ಪ್ರಾರಂಭಿಕ ಕಾರ್ಯಾರಂಭಕ್ಕೆ 10.85 ಕೋಟಿ ರೂಪಾಯಿ ಬೆಲೆಯ ಸಮೃದ್ಧ ಯುರೇನಿಯಂ ಅನ್ನು ಸ್ಪೈಡ್ ಇಂಧನವನ್ನು ಸರಬರಾಜು ಮಾಡಿತು. ತಾರಾಪುರ ಪರಮಾಣು ವಿದ್ಯುತ್ ಕೇಂದ್ರದ ಜೀವಮಾನವಾದ ಸುಮಾರು 25 ವರ್ಷಗಳವರೆಗೆ ದೀರ್ಘಕಾಲೀನ ಪೂರೈಕೆಯ ಸಾಲ ಸೌಲಭ್ಯದ ಮೇಲೆ ಇಂಧನವನ್ನು ಸರಬರಾಜು ಮಾಡುತ್ತಿದೆ.

ಈ ವಿದ್ಯುತ್ ಕೇಂದ್ರ ನಿರ್ಮಾಣಕ್ಕೆ ಭಾರತ ಪರಮಾಣುಶಕ್ತಿ ಆಯೋಗವು ವಿಶ್ವದ್ಯಂತ ಜಾಹಿರಾತು ಕರೆಯಿತು. ಬ್ರಿಟನ್, ಅಮೇರಿಕಾ, ಫ್ರಾನ್ಸ್, ಕೆನಡಾ ಮುಂತಾದ ಏಳು ದೇಶಗಳು ಟೆಂಡರ್‌ಪತ್ರವು ಅಮೆರಿಕದ ಇಂಟರ್‌ನ್ಯಾಷನಲ್ ಜನರಲ್ ಎಲೆಕ್ಟ್ರಿಕ್ ಕಂಪನಿಯ ಈ ಕೇಂದ್ರ ನಿರ್ಮಾಣದ ಹೊಣೆಯಹಿಸಲಾಯಿತು. 1963ನೇ ಡಿಸೆಂಬರ್ ಮಾಸದಲ್ಲಿ ಅವೇ ರೀತಿಯ ಜಾಗತಿಕ ಅಭಿವೃದ್ಧಿ ಸಂಸ್ಥೆಯು ಈ ಯೋಜನೆಗೆ ಅಗತ್ಯವಾಗುವ ಸುಮಾರು 60 ಕೋಟಿ ರೂಪಾಯಿ ವಿದೇಶಿ ವಿನಿಮಯವನ್ನು ಸಾಲವಾಗಿ ನೀಡಿತು. ಯೋಜನೆಯ ಕಾರ್ಯಾರಂಭ 1969ನೇ ಇಸವಿ ಅಕ್ಟೋಬರ್ ಮಾಸದಲ್ಲಾಯಿತು. ಈ ವಿದ್ಯುತ್ ಕೇಂದ್ರ ನಿರ್ಮಾಣ ಕಾರ್ಯ ಉತ್ಕೃಷ್ಟಮಟ್ಟದ್ದಾಗಿದ್ದರಿಂದ ವಾರದ ಏಳು ದಿನವೂ ಒಂದೇ ಸಮನಾದ ಬಿಡುವಿಲ್ಲದೆ 6000 ಕಿಲೋವ್ಯಾಟ್ ಘಂಟೆ ವರೆಗೆ ತಾರಾಪುರದ ಪರಮಾಣು ವಿದ್ಯುತ್ ಕೇಂದ್ರ ಸಂಪೂರ್ಣವಾಗಿ ಕಾರ್ಯಾರಂಭ ನೂಡಿದಾಗ ನಿರ್ಮಾತರ ಕಾರ್ಯವೆಗಳು. ಇದರಲ್ಲಿ 370 ಉದ್ಯೋಗಿಗಳಿರುತ್ತಾರೆ.

ಭಾರತೀಯರ ದುಡಿಮೆ

ಈ ಕೇಂದ್ರ ನಿರ್ಮಾಣ ಕಾರ್ಯದ ಎಲ್ಲ ಕ್ಷೇತ್ರಗಳಲ್ಲೂ ಭಾರತೀಯರು ಹಾಗೂ ಅವರೀಕರಣ ತಂತ್ರಜ್ಞರು ಸಮಭಾಗವಾಗಿ ದುಡಿದಿದ್ದಾರೆ. ಈ ಯೋಜನೆಯು ಸ್ಪಷ್ಟವಾಗಿಯೂ ಭಾರತೀಯರು ಪೂರ್ಣವಾಗಿ ಭಾಗವಹಿಸಿದ್ದಾರೆ ಟ್ರಾಂಬೆಯಲ್ಲಿರುವ ಭಾಭಾ ಪರಮಾಣು ಕೇಂದ್ರವು ತಜ್ಞರ ಸಲಹೆಯನ್ನು ಎಲ್ಲ ಕಾಲದಲ್ಲೂ ನೀಡಿತ.

ಪರಮಾಣು ವಿದ್ಯುತ್ ಕೇಂದ್ರ ನಿರ್ಮಾಣಕ್ಕೆ ತಾರಾಪುರ ಒಂದು ಅತ್ಯುತ್ತಮ ಪ್ರದೇಶವೆಂದು ತಜ್ಞರು ಹೇಳಿದ್ದಾರೆ. ಸಮುದ್ರ ತೀರದಲ್ಲಿರುವ ಈ ಕೇಂದ್ರವು ಸಮುದ್ರದಿಂದ ದಿನಂಪ್ರತಿ 2200 ದಶಲಕ್ಷ ಲೀಟರ್ ನೀರನ್ನು ಶಾಂತ್ರವನ್ನು ತಂಪುಗೊಳಿಸಲು ಬಳಸಬಹುದಾಗಿದೆ. ಅಲ್ಲದೆ ನಿವೇಶನವು ಬಂಡೆಯಿಂದಾವೃತವಾದ ಸದೃಢ ಬುನಾದಿಯ ಮೇಲೆ ರಚಿತವಾಗಿದೆ. ಉತ್ತಮ ಸಂಪರ್ಕವನ್ನು ಹಾಗೂ ಸನ್ನಿವೇಶವೆಂದಿದೆ. ಸುಂದರ ದೃಷ್ಟಿಯಿಂದ ಅತ್ಯಲ್ಪ ಜನಸಾಂದ್ರತೆ ಹೊಂದಿದೆ.

ವಿದ್ಯುತ್ ವಿತರಣಾ ವ್ಯವಸ್ಥೆಯು ಪ್ರಾರಂಭವಾಗಿದಾಗಿನಿಂದ ತಾರಾಪುರದ ವಿದ್ಯುತ್ ಕೇಂದ್ರದಲ್ಲಿ ಅನೇಕ ಸುರಕ್ಷಣಾ ವಿಧಾನಗಳನ್ನು ಅಳವಡಿಸಲಾಗಿದೆ. ಪ್ರತಿಕ್ರಿಯಾಕಾರಕಗಳ ಗೋಡೆಗಳನ್ನು ದಪ್ಪ ಆರ್. ಸಿ. ಸಿ ಯಿಂದ ನಿರ್ಮಿಸಲಾಗಿದೆ. ಇಲ್ಲದೆ ಪ್ರತಿಕ್ರಿಯಾಕಾರಕಗಳನ್ನು ಪ್ರತ್ಯೇಕವಾಗಿ ಉಕ್ಕಿನಕೋಶದಿಂದ ರಕ್ಷಿಸಲಾಗಿದೆ. ಕೋಶಗಳಿಗೆ ಒಟ್ಟಡ ಕಾಂಕ್ರೀಟಿನ ನೀರಿನ ತೊಟ್ಟಿಯಿದೆ. ಇವುಗಳ ದಪ್ಪವೆಷ್ಟರವ ಉಗ್ರಾಣದ ತೊಟ್ಟಿಯಿಂದ ನೀರಿನೊಳಗೆ ಇಂಧನವನ್ನು ಪ್ರತಿಕ್ರಿಯಾಕಾರಕಗಳಿಗೆ ತುಂಬಲಾಗ ತ್ರದೆ ಪರಿಣಾಮ ಹೊರತೆಗೆಯಲಾಗುತ್ತದೆ.

ತಾರಾಪುರ ವಿದ್ಯುತ್ ಕೇಂದ್ರವು ಪ್ರದೇಶದಲ್ಲಿದ್ದ ವಿದ್ಯುತ್ ಕೊರತೆಯನ್ನು ತೆಗೆಯಲು ಸಹಾಯ ಮಾಡಿದೆ. ಬೇಕಾಯಾರಾಗಿಗೆ ವ್ಯಾಪಕವಾಗಿ ಸೌಲಭ್ಯಗಳು ದೊರಕ ತ್ತವೆ. ಗ್ಯಾಸಾಧಾರಿತ ವಿದ್ಯುದೀಕರಣ ಯೋಜನೆಯನ್ನು ವಿಸ್ತರಿಸಲಾಗುತ್ತಿದೆ ಈ ರೀತಿ ನಿರಂತರ ಕಾರ್ಯಕ್ಕಾಗಿ ವಿದ್ಯುತ್‌ಯಂತ್ರಗಳ ಬಳಕೆ ಹೆಚ್ಚಿ ಹೊಸ ಕೈಗಾರಿಕೆಗೆ ಕೈವಾರಿಸಲಾಗಿದೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ—
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ—
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಕುಂದಾಪುರ, ದ. ಕ.

ಶಿವಳ್ಳಿ ಬ್ರಾಹ್ಮಣರ ಶುಚಿ—ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು
ಪಾತ್ರೀಸುರಕ್ಷ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ವಿಶಾಲವಾದ ಹೊಟೆಲ್

Please Visit ಫೋನ್ - 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಭಿಕ್ಷಾಧರ್ಮದ ಸಿದ್ಧಾಂತ

(ಎಂಟನೇ ಪುಟದಿಂದ)

ಹೀಗಿರುವಷ್ಟರಲ್ಲಿ ಅನ್ಯರಾಷ್ಟ್ರದ ಪಾಳೇಗಾರನಾದ ರಾಜನಿಗೆ ಒಂದು ತಿಳಿಯದ ಸ್ಥಿತಿಯುಂಟಾಯಿತು ಅವನ ನಿಜವಾದ ನಗರದ ಚಕ್ರವರ್ತಿಗೆ ಕಪ್ಪ ಕಟ್ಟುವುದು ಬಾಕಿ ಇತ್ತು. ಏನೋ ಸಮಾಧಾನ ಹೇಳಿ ಎರಡು ವರ್ಷ ತಳ್ಳಿದ್ದ ಈ ಸಾರಿ ಎಲ್ಲಾ ಬಾಕಿಗಳನ್ನೂ ಸೇರಿಸಿ ಕಟ್ಟಲೇ ಬೇಕಾಗಿತ್ತು. ಇಲ್ಲದಿದ್ದರೆ ಅರಾಜನು ಸೆರೆಹಿಡಿಯಲ್ಪಟ್ಟು ಶಿಕ್ಷೆಗೊಡಾಗಬಹುದು.

ರಾಜನು ತನ್ನ ಮಂತ್ರಿಗಳೊಂದಿಗೆ ಪ್ರಸ್ತುತ ಸಮಸ್ಯೆಯನ್ನು ಕುರಿತು ಆಲೋಚನೆ ನಡೆಸುತ್ತಿರುವಾಗ, ಸಿದ್ಧಾಪನೆ ಮಾಡಿ ಒಬ್ಬ ಮಂತ್ರಿಯ ಬಾಯಲ್ಲಿ ಬಂದಿತು. ಸಿದ್ಧಾಪನೆ ದಾ ಧರ್ಮಗಳನ್ನು ಕುರಿತು ಅವನ ಕೇಳಿದ್ದ.

"ಅವನಲ್ಲಿ ಯಾವುದೋ ಒಂದು ವೈದಿಕ ಶಕ್ತಿ ಇದೆ. ಕೇಳಿ ನೋಡೋಣ" ಎಂದು ಮಂತ್ರಿಗಳು ನಿರ್ಣಯಿಸಿಕೊಂಡರು.

ರಾಗೆಯೇ ಮಂತ್ರಿಯೊಬ್ಬನು ಸಿದ್ಧಾಪನೆ ಮನೆಗೆ ಬಂದು, ರಾಜನಿಗೆ ಬಂದ ಕಷ್ಟವನ್ನು ಹೇಳಿ ಸಲಹೆಯನ್ನು ಕೇಳಿದನು.

"ನಮ್ಮ ರಾಜನಲ್ಲಿ ಶಾಪಾದಬೇಕಾದುದು ಪ್ರಜೆಗಳಾದ ನಮ್ಮ ಕರ್ತವ್ಯವೇ ಅಲ್ಲವೆ? ನನ್ನ ಜೇಬಿನಲ್ಲಿರುವುದೆಲ್ಲಾ ಬೆಳ್ಳಿ ವರಾಹಗಳು. ಕತ್ತಾಪ್ರತ್ಯೆ ಮಾತ್ರ ಡೊರಕುವಂಥದು. ಫೋಡೋಣ" ಎನ್ನುತ್ತ ಸಿದ್ಧಾಪನೆ ನನ್ನ ಹಳೇ ಅಂಗಿಯ ಜೇಬಿನಿಂದ ಬೆಳ್ಳಿ ನಾಣ್ಯಗಳನ್ನು ಒಂದೊಂದಾಗಿ ತೆಗೆಯತೊಡಗಿದನು. ಎಷ್ಟು ಜೇಬುಗಳಿಂದ ಅಷ್ಟೇ ನಾಣ್ಯಗಳು ಅವನ ಜೇಬಿನಿಂದ ಹೊರಟವು. ಅದನ್ನೆಲ್ಲ ಮೂಟೆ ಕಟ್ಟಿಸಿ ಕೊಂಡುಹೋಗಲು ಮಂತ್ರಿ. ವಿಜಯನಗರದ ಚಕ್ರವರ್ತಿಗೆ ಸಲ್ಲಿಸಬೇಕಾದ ಕಪ್ಪವು ಹೀಗೆ ಸಂದು ರಾಜನಿಗೆ ನೆಮ್ಮದಿಯಾಯಿತು.

ರಾಜನು ಸಿದ್ಧಾಪನನ್ನು ಕರೆಯಿಸಿ ಒಳ್ಳೆ ಯೋಗಿಯನ್ನು ಗೌರವಿಸಿದಂತೆ ಗೌರವಿಸಿದನು.

ಶ್ರೀ ಕೆ. ಕೃಷ್ಣಪ್ಪ, ಎಂ.ಎಲ್.ಸಿ ಯವರ ಸಮಕಾಲಿಕೊಪ್ಪುವ ಪುಸ್ತಕಗಳು

ದೇವ ಭೂಮಿ	1	25
ಪ್ರೇಮ ವಿಜಯ	1	00
ಮಂಡಿನೆ ದೇವರು	0	25
ಮೃಚ್ಛಕಾಟಿ ಯಾರು?	1	00
ಕೆಂಡ್ತಿ ಗಂಡನ ಬಲಿ?	0	25
ಪುರುಷ ವಧು	0	25
ಸನ್ಯಾಸಿಯು ಸೆಳಗಿನವ್ಲಿ	0	75
ಪಂಚೆಯ ಪಿಶಾಚಿ	0	75
ಕುಶ ಲವ	0	50
ಚಿತ್ರಾಂಗದೆ	0	60

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಪುಸ್ತಕ ಭಂಡಾರ, ಹುಬ್ಬಳ್ಳಿ.

NAVAYUGA 25—12—1969
Registered with the Registrar of News Papers for India under No. R. N. 3546/'67

REGD: No: B. G 176
LICENCE No. 33
Licensed to Post without Prepayment

ವಿಶ್ವ ಹಿಂದೂ ಪರಿಷತ್ತು

ಸಮ್ಮೇಳನದ ಎರಡನೆಯ ದಿನ ಬೆಳಿಗ್ಗೆ ಪ್ರತಿನಿಧಿಗಳ ಸಮ್ಮೇಳನ ನಡೆಯಿತು. ಇದರಲ್ಲಿ ಧರ್ಮಗುರುಗಳೂ ಆಚೀಕ ಪ್ರತಿಷ್ಠಿತರೂ ವಂಶವಾಡಿ ಹಿಂದೂ ಧರ್ಮವನ್ನು ತೇಜೋವಂತವನ್ನಾಗಿ ಮಾಡಲು ಸಲಹೆಮಾಡಿದರು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಮೂಜಿ ಗಚಿತ ಶ್ರೀ ಎಚ್. ಕೆ. ವೀರಣ್ಣಗೌಡರು ವಹಿಸಿದರು. ಗೋ ಕರ್ಣ ಪರ್ತಕಾಳಿ, ಖಾಳೆಕುದುರು, ಸುಳ್ಯ ಹೈಣ್ಣು, ಧಾರವಾಡ, ರಾಯಚೂರು, ಉಡ್ಡಿರಿಕಳ ಪೀಠಾರೂಢ ಸಂಪತ್ತ ಮೂರಾಚಾರ್ಯ, ಕಾರಿಂಜಪ್ಪ, ಸಿ. ಎಚ್. ಕೃಷ್ಣರಾವ್, ಡಾ| ಮೋದಿ, ಧರ ಜೇಂದ್ರಯ್ಯ ಮೊದಲಾದವರೂ ಮಾತನಾಡಿದರು. ಅಸ್ಪೃಶ್ಯತೆ, ಪ್ರಾಣಿ ಹತ್ಯೆ, ವಿವಾಹ ವಿಚ್ಛೇದನ ಮೊದಲಾದುವುಗಳ ಬಗ್ಗೆಯೂ ಪ್ರಸ್ತಾಪ ಜಂದಿತು. ಪರಿಷತ್ತಿನ ರಾಜ್ಯ ಶಾಖೆಯ ಕಾರ್ಯದರ್ಶಿ ಶ್ರೀ ವೈ. ಕೆ. ರಾಘವೇಂದ್ರ ರಾಯರು ವರದಿಯನ್ನಿಸುತ್ತ ರಾಜ್ಯದಲ್ಲಿನ ೧೮ ಜಿಲ್ಲಾ ಸಮಿತಿಗಳಲ್ಲಿ ಒಟ್ಟು ೧೫೫೦೦ ಸದಸ್ಯರನ್ನು ಹದಿನಷ್ಟು ಪಡೆದಿದೆಯೆಂದೂ ಹೇಳಿ ಅನ್ಯ ಧರ್ಮಗಳಿಗೆ ಹೋದವರನ್ನು ಮತ್ತೆ ಮತಾಂತರ ಮಾಡುವಲ್ಲಿನ ಪ್ರಗತಿಯ ಫ್ಲೂ ವಿವರಿಸಿದರು.

ಅಪರಾಹ್ನ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರ ಅಧ್ಯಕ್ಷತೆಯಲ್ಲಿ ಮಹಿಳಾ ಅಧಿವೇಶನ ನಡೆಯಿತು. ಗ್ವಾಲಿಯರ್ ರಾಜಮನೆತನದ ಶ್ರೀಮತಿ ವಿಜಯರಾಜೇ ಸಿಂಧ್ಯೆಯವರು ಇದನ್ನು ಉದ್ಘಾಟಿಸಿದರು. ಶ್ರೀಯುತರು ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಗುರುತರ ಸ್ಥಾನದಲ್ಲಿದ್ದಾರೆಂದು ಉದ್ಘಾಟಕರು ಹೇಳಿದರೆ, ನಮ್ಮ ಪರಂಪರೆಯು ಅವರ ಶಕ್ತಿಯನ್ನು ಶ್ರೀಯುರು ಅಧ್ಯಕ್ಷವನ ನೀಡಬೇಕೆಂದು ಅಧ್ಯಕ್ಷರು ಹೇಳಿದರು.

ಸಂಪ್ರದಾಯ, ಸಂಸ್ಕೃತಿಗಳ ರಕ್ಷಣೆಗೆ ಹಿಂದೂ ಮಹಿಳೆಯರು ಪಣತೊಡಬೇಕು, ಮುಂದಿನ ತಲೆಮಾರುಗಳವರ ಶೀಲ-ಸ್ವಭಾವಗಳನ್ನು ಬೆಳೆಸುವಲ್ಲಿ ಗಮನ ಕೇಂದ್ರೀಕರಿಸ ಬೇಕು; ಪ್ರಚಾರ-ಪ್ರಕಟಣೆಗಳಿಗಾಗಿ ಹೆಣ್ಣು ರೂಪವನ್ನು ಚಿತ್ರ ಮುಖೇನ ಬಳಸಿಕೊಳ್ಳದಂತೆ ಇಂಥ ಪ್ರಕಟಣೆ-ಭಿತ್ತಿಪತ್ರಗಳನ್ನು ನಿಷೇಧಿಸಬೇಕು-ಎಂಬ ನಿರ್ಣಯಗಳಾದುವು.

ಅಂದು ಸಂಜೆ ಸಮಾರೋಪ ಸಮಾರಂಭವು ನಡೆಯಿತು. ವಿವಾಧಿಪತಿಗಳೂ ಪ್ರಮುಖರೂ ಇದನ್ನು ಉದ್ದೇಶಿಸಿ ಮಾತನಾಡಿದರು.

ಖ್ಯಾಂತೀಯ ಅಧಿವೇಶನವು ಹಲವಾರು ಗೊತ್ತುವಳಿಗಳನ್ನು ಸ್ವೀಕರಿಸಿತು: ಧರ್ಮದ ಅಡಿಗಲ್ಲಾದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಧರ್ಮದ ರಕ್ಷಣೆ ಹಾಗೂ ಪ್ರಚಾರಕ್ಕೆ ಕ್ರಮಗಳನ್ನು ಕೈಕೊಳ್ಳಬೇಕು. ಈ ಸಂಸ್ಥೆಗಳು ಅಧ್ಯಯನ, ಬೋಧನೆಯ ಕೇಂದ್ರಗಳಾಗಬೇಕು ಮತ್ತವಲ್ಲದೆ ಆಶ್ರಯ ತಪ್ಪದವರ ಕೈಯಲ್ಲಿ —ಮಹಿಳೆಯರ ಸಹಾಯಕ್ಕೆ ಬದ್ಧಕಂಕಣವಾಗಬೇಕು.

ಧಾರ್ಮಿಕ ಸಂಸ್ಥೆಗಳ ದತ್ತಿ—ನಿಧಿಗಳು ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಮಾಜ ಸೇವಾ ಕಾರ್ಯಗಳಿಗೆ ಮಾತ್ರ ಉಪಯೋಗವಾಗುವಂತೆ ಕ್ರಮ ತೆಗೆದುಕೊಳ್ಳಬೇಕು;

ನಗರ ದೇಗುಲಗಳ ಕಾರ್ಯನಿರ್ವಹಣೆಗೆ ಜನತೆ ಪೂರ್ಣ ಸಹಕಾರವನ್ನಿಡಿ ತಮ್ಮ ಆಧ್ಯಾತ್ಮಿಕ ಹಸಿವನ್ನು ಈ ಧಾರ್ಮಿಕ ಕೇಂದ್ರಗಳಲ್ಲಿ ಪರಿಹರಿಸಿಕೊಳ್ಳಬೇಕು.

ಪೂಜಾ-ಮಂದಿರಗಳಲ್ಲಿ ದೈವ ದರ್ಶನಕ್ಕೆ ತೆರಿಗೆ ವಿಧಿಸುವ ಸಂಪ್ರದಾಯ ಬೆಳೆದು, ಇದು ಎಲ್ಲೆಲ್ಲೂ ಕಳವಳಕಾರಕವಾಗಿ ಹರಡುತ್ತಿರುವುದರಿಂದ, ಧರ್ಮ ಮತ್ತು ಸಮಾಜ ಸ್ವಾತಂತ್ರ್ಯದ ದೃಷ್ಟಿಯಿಂದ ಈ ಕ್ರಮವನ್ನು ಕೈಬಿಡಬೇಕು. ಧಾರ್ಮಿಕ ಕ್ಷೇತ್ರಗಳಲ್ಲಿ ಯಾತ್ರಿಕರ ನೇರಳೆಕರ ಹೇರುವುದನ್ನು ಖಿಲ್ಲಿಸಬೇಕು.

ಒತ್ತಾಯ ಅಥವಾ ಪ್ರಲೋಭನೆಯ ಬಲದಿಂದ ಮತಾಂತರ ನಡೆಸುವುದನ್ನು ರಾಜ್ಯ ಸರಕಾರವು ಶಾಸನ ರೀತ್ಯಾ ತಡೆಗಟ್ಟಬೇಕು.

ಹಿಂದೂ ಧರ್ಮದಿಂದ ಇತರ ಮತಗಳಿಗೆ ಮತಾಂತರಗೊಂಡವರಿಗೆ ವಿಶೇಷ ಸೌಲಭ್ಯ—ರಿಯಾಯಿತಿ ಕೊಡವೆ ಅವನ್ನು ಹಿಂದೂ ಜನಾಂಗಗಳಿಗೆ ಮಾತ್ರ ನೀಡಬೇಕು.

ಅನ್ಯ ಧರ್ಮಗಳಿಗೆ ಮತಾಂತರಗೊಂಡವರನ್ನು ಪುನಃ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳುವಲ್ಲಿ ಧರ್ಮಪೀಠಗಳು ನೆರವಾಗಬೇಕು.

ರಾಷ್ಟ್ರಾದ್ಯಂತ ಗೋಹತ್ಯೆ ನಿಷೇಧಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ಕೈಕೊಳ್ಳಬೇಕು.

ಆನಂದ ಭವನದ ಜೀವನ ದುರಂತ

(ಹಿಂದಿನ ಸಂಚಿಕೆಯಿಂದ)

ಆ ಕೊಠಡಿಯೊಳಗೆ ಅವಶ್ಯಕ ವಸ್ತುಗಳಿಗೆ ಕೈಹಾಕಿದಾಗ ಕೈಗೆ ತಗಲಿದರೂ ಕೂಡಾ ಅದು ಯಾವಕಾರದಲ್ಲಿಯೂ ಅತಂಕ ಮಾಡುತ್ತಿರಲಿಲ್ಲವಂತೆ. ಅಪೂರ್ವಕರದ ಅಂತಹ ಸಾಧುಸ್ವಭಾವದಿಂದ ಅದು ಅಲ್ಲಿ ಆಶ್ರಿತ್ವ ಸಂಚರಿಸುತ್ತ ವಾಸಮಾಡಿಕೊಂಡಿತ್ತು. ಎಲ್ಲರು ಈ ನಾಗಬೇವನನ್ನು ಬಹಳ ಪೂಜ್ಯತೆಯಿಂದ ನೋಡಿಕೊಳ್ಳುತ್ತಿದ್ದರು. ಒಂದೊಂದು ವೇಳೆ ಉದ್ಯಾನದಲ್ಲಿ ಮಕ್ಕಳು ಆಡುತ್ತಿರುವಾಗ ಅವರ ಮಧ್ಯದಿಂದ ಅದು ಹೋಗುತಿದ್ದರೂ ಯಾರಿಗೂ ಯಾವ ತರದ ಭಯಕ್ಕೂ ಅದು ಅವ್ಯವ ಕೊಡುತ್ತಿರಲಿಲ್ಲ. "ಈ ಸರ್ಪ ಇರುವವರೆಗೆ ಕಾಲ ನೆಹರು ಮನೆತನದ ರಕ್ಷಣೆಯನ್ನು ಮಾಡುತ್ತಿರುವುದ; ಈ ವನೆತನಕ್ಕೆ ಯಾವ ತರದ ವಿಪತ್ತೂ ಬರಲಾರದ್ದು; ಮತ್ತು ಧನ—ಧಾನ್ಯ—ಸಂಪತ್ತು, ವೈಭವ ಶಾಲಿ ಸ್ಥಿತಿ ಉತ್ತರೋತ್ತರ ಅಭಿವೃದ್ಧಿಯಾಗಿ ತ್ತಾ ಇರುವುದು ಇವೆಲ್ಲವೂ ಆ ಸರ್ಪದ ಮಹತ್ವ ಎಂಬ ಒಂದು ದೊಡ್ಡ ವಿಶ್ವಾಸ ಸವಗ್ರ ನೆಹರೂ ಪರಿವಾರದಲ್ಲಿ ನೆಲೆಗೊಂಡಿತ್ತು.

1920ರಲ್ಲಿ ಮೋತಿಲಾಲ್ ನೆಹರುರವರು ಲಕ್ಷಾಂತರ ರೂಪಾಯಿ ಉತ್ಪತ್ತಿಯ ತನ್ನ ಪ್ರಸಿದ್ಧ ವಕೀಲಾತು ಉದ್ಯೋಗಕ್ಕೆ ತಿಲಾಂಜಲಿ ಕೊಟ್ಟು ಅಸಹಕಾರ ಆಂದೋಲನಕ್ಕೆ ಸೇರಿದರು. ಇದಕ್ಕೆ ಕೆಲ ಘಟಿದಿನಗಳ ಮೊದಲು ನೆಹರು ಸಂವಾರದ ಒಬ್ಬ ಜೊತೆಕೆಲಸದವಳು ಆ ಹಳೆಯ ಮುದಿ ಸರ್ಪವನ್ನು ಅಕಸ್ಮಾತ್ ಕಂಡು ಹೊಡೆದು ಕೊಂದೇ ಬಿಟ್ಟಳು. ಆದರ ಕುರಿತು ಆವನಿಗೆ ಏನೂ ತಿಳಿದಿರಲಿಲ್ಲ. ಈ ದುರ್ಘಟನೆಯ ಎಂದಾಗಿ ಪರಿವಾರದ ಸಮಸ್ತರೂ ದುಃಖಿಸದಿರಲ್ಲದೆ ಮೋತಿಲಾಲರ ಪತ್ನಿ ಸ್ವರೂಪರಾಣಿಯವರ ಮನಸ್ಸಿಗೆ ತಡೆಯಲಾರದ ಆಘಾತವುಂಟಾಯಿತು. ಆದರೆ ಘಟನೆ ಕೈಮೀರಿ ಹೋಗಿತ್ತು.

ಈ ದುರ್ಘಟನೆಯು ನಂತರ ಆನಂದ ಭವನದಲ್ಲಿ ಆತ್ಯಾಶ್ಚರ್ಯಕರವಾದ ಪರಿವರ್ತನೆ ಒಮ್ಮೆಗೇ ಉಂಟಾಯಿತು. ಎಲ್ಲರೂ ಆ ದೊಡ್ಡ ವೈಭವಪೂರಿತ ಭವನವನ್ನು ತ್ಯಜಿಸಿ, ಅದರ ಸವಿಾಪದ ಒಂದು ಸಾಧಾರಣ ತರದ ಮನೆಯಲ್ಲಿ ವಾಸ ಮಾಡಲಾರಂಭಿಸಿದರು. ಪರಿವಾರದ ಪ್ರಮುಖ ವ್ಯಕ್ತಿಗಳಬ್ಬರೂ ಬ್ರಿಟಿಷರ ಕಾರಾಗೃಹದಲ್ಲಿ ಬಂಧಿಯಾಗಿ ವಾಸಮಾಡತೊಡಗಿದರು; ಲಕ್ಷಾಂತರ ರೂಪಾಯಿಯ ಸಂಪಾದನೆಯು ಪ್ರವಾಹ ಕ್ಷೀಣವಾತ್ರದಲ್ಲಿ ಬತ್ತಿಹೋಯಿತು.

ಅದರೆ ಸಕಲೈಶ್ವರ್ಯ ಸಂಪನ್ನತೆಯಿಂದ ಪೆರೆದಿದ್ದುಕೊಂಡಿದ್ದ ಚರಿತ್ರಾರ್ಹ ನೆಹರು ಪರಿವಾರದ ಮಹಾನ್ ತ್ಯಾಗವು ಸಮಗ್ರ ಭರತ ಖಂಡವನ್ನು ಬ್ರಿಟಿಷರ ದಾಸ್ಯ ನೊಗದಿಂದ ಕಿತ್ತೆಸೆದು ಸರ್ವತೋಮುಖವಾದ ಸ್ವಾತಂತ್ರ್ಯವೃದ್ಧಿಯ ಪಥದಲ್ಲಿ ಕೊಂಡೊಯ್ದು ಅಸಾಧಾರಣ ಕೀರ್ತಿಯು ಉತ್ಕುಂದ ಶಿಖರವನ್ನೇರಿತ. ಭಾರತದ ರಾಜಕೀಯ ರಂಗವಂಚನ್ನಲ್ಲಿ ಎಂತೆಂತಹ ಉತ್ಪಾತ 'ಳಾದರೂ ನೆಹರು ಪರಿವಾರಗಳಿಸಿದ ಇತಿಹಾಸ ಪ್ರಸಿದ್ಧ ತ್ಯಾಗದ ಕೀರ್ತಿ ಪತಾಕೆ ಸದಾ ಎಲೆಯಾಡುತ್ತಿರುತ್ತದೆ.

ಐವತ್ತು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಆತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಸರಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿದೆ.
ದಿ ಸದ್ವೈದ್ಯಶಾಲಾ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಸ್ಟೇಟ್)
ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

Edited, Printed & Published by K. H. Shetty at the Navayuga Press, Udipi, S. India.